ವಿಶ್ವವಾಣಿ
ವಿಶ್ವಾಸವೇ ವಿಶ್ವ

ಬಟ್ಲರ್ ಅಮೋಘ ಅರ್ಧಶತಕ ಅಗ್ರಸ್ಥಾನಕ್ಕೇರಿದ ಗುಜರಾತ್

ಜಾಸ್ ಬಟ್ಲರ್ ಅವರ ಅಮೋಘ ಬ್ಯಾಟಿಂಗ್ ಬಲದಿಂದ ಆತಿಥೇಯ ಗುಜರಾತ್ ಟೈಟನ್ಸ್ ತಂಡವು ಡೆಲ್ಲಿ ಕ್ಯಾಪಿಟಲ್ಸ್ ವಿರುದ್ಧದ ಪಂದ್ಯದಲ್ಲಿ 7 ವಿಕೆಟ್ ಅಂತರದ ಜಯ ಸಾಧಿಸಿತು. ಇದರೊಂದಿಗೆ ಪಾಯಿಂಟ್ ಪಟ್ಟಿಯಲ್ಲಿ ಅಗ್ರಸ್ಥಾನಕ್ಕೇರಿತು. ಟಾಸ್ ಸೋತರೂ ಮೊದಲು ಬ್ಯಾಟಿಂಗ್ ಮಾಡುವ ಅವಕಾಶ ಪಡೆದ ಡೆಲ್ಲಿ ತಂಡ ನಿಗದಿತ 20 ಓವರ್‌ಗಳಲ್ಲಿ 8 ವಿಕೆಟ್‌ಗೆ 203 ರನ್ ಕಲೆಹಾಕಿತ್ತು. ಈ ಗುರಿ ಬೆನ್ನತ್ತಿದ ಗುಜರಾತ್ ಪಡೆ ಕೇವಲ 3 ವಿಕೆಟ್ ಕಳೆದುಕೊಂಡು ಇನ್ನೂ 4 ಎಸೆತಗಳು ಬಾಕಿ ಇರುವಂತೆಯೇ ತಲುಪಿತು.

ಸೊಂಪಾದ ಪುಟಗಳು



ಜಪಾನಿನಲ್ಲಿ ಮಂಗಾ ಮುದ್ರಣಕ್ಕೆ ಟಾಯ್ಲೆಟ್ ಪೇಪರ್‌ಗಿಂತ ಹೆಚ್ಚು ಕಾಗದ ಬಳಸುತ್ತಾರೆ!
ಇದೇ ಅಂತರಂಗ ಸುದ್ದಿ ವಿಶ್ವೇಶ್ವರ ಭಟ್ 6



ಸದಾ ವತ್ಸಲೆಯ ಸೇವೆಯಲ್ಲಿ ಸವೆದ ನೂರು ವರ್ಷ
ವಿದ್ಯಮಾನ ವಿನಾಯಕ ವೆಂ.ಭಟ್ಟ, ಅಂಬ್ಲಿಕೊಂಡ 7

ದಾರಿದೀಪೋಕ್ತಿ

ಒಳ್ಳೆಯದು, ಕೆಟ್ಟದ್ದು ಎಂಬುದು ಇಲ್ಲವೇ ಇಲ್ಲ. ಉಗ್ರಗಾಮಿ ಕೈಯಲ್ಲಿನ ಚಾಕು ವ್ಯಕ್ತಿಯನ್ನು ಸಾಯಿಸುತ್ತದೆ. ಅದೇ ಸರ್ಜನ್ ಕೈಯಲ್ಲಿದ್ದರೆ ಅದು ವ್ಯಕ್ತಿಯನ್ನು ಬದುಕಿಸುತ್ತದೆ. ಯಾವುದನ್ನೇ ಆಗಲಿ, ಯಾರು, ಹೇಗೆ ಬಳಸುತ್ತಾರೆ ಎಂಬುದನ್ನು ಅವಲಂಬಿಸಿರುತ್ತದೆ.

ವಕ್ರತುಂಡೋಕ್ತಿ



ಆನ್‌ಲೈನ್‌ನಲ್ಲಿ ಸಾಮಾನು ತರಿಸಿಕೊಳ್ಳುವುದನ್ನು ಎಲ್ಲರೂ ಇಷ್ಟಪಡ್ತಾರೆ. ನಮಗೇ ನಾವು ಗಿಫ್ಟ್ ಕೊಟ್ಟುಕೊಂಡ ಭಾವನೆ ಮೂಡುತ್ತದೆ.

ಮಾತಂದ್ರೆ ಮಾತು

ಮಹಾರಾಣಾ ಪ್ರತಾಪ್ ಮತ್ತು ಛತ್ರಪತಿ ಶಿವಾಜಿ ಮಹಾರಾಜರು ರಾಷ್ಟ್ರೀಯ ವೀರರು, ಮೊಘಲ್ ಚಕ್ರವರ್ತಿ ಔರಂಗಜೇಬ ಧರ್ಮಾಂಧ, ಕ್ರೂರಿ. ಬಾಬರ್, ತೈಮೂರ್, ಔರಂಗಜೇಬ್, ಘೋರಿ, ಘಜನಿಯನ್ನು ವೈಭವೀಕರಿಸುವುದು ಭಾರತದ ಮುಸ್ಲಿಮರನ್ನು ಅವಮಾನಿಸಿದಂತೆ.

- ರಾಜನಾಥ್ ಸಿಂಗ್ ರಕ್ಷಣಾ ಸಚಿವ

ಫನ್‌ತರಂಗ
- ರಘುಪತಿ ಶೃಂಗೇರಿ -



ಸಿಇಟಿ ಪರೀಕ್ಷಾ ಕೇಂದ್ರದಲ್ಲಿ ವಿದ್ಯಾರ್ಥಿಗಳ ಜನಿವಾರ ತೆಗೆಸಿದ್ದಕ್ಕೆ ವ್ಯಾಪಕ ವಿರೋಧ । ರಾಜ್ಯದ ಹಲವೆಡೆ ಬ್ರಾಹ್ಮಣ ಮಹಾಸಭಾ ವತಿಯಿಂದ ಪ್ರತಿಭಟನೆ, ರ್‍ಯಾಲಿ । ಅಧಿಕಾರಿಗಳ ನಡೆಗೆ ವಿವಿಧ ಸಮುದಾಯಗಳ ಮಠಾಧೀಶರು, ಮುಖಂಡರ ಖಂಡನೆ । ಭಾನುವಾರವೂ ಹಲವೆಡೆ ಪ್ರತಿಭಟನೆ ನಡೆಸುವುದಾಗಿ ಎಚ್ಚರಿಕೆ

ಜನಿವಾರ ಜ್ವಾಲೆ

ಬೆಂಗಳೂರು: ರಾಜ್ಯದಲ್ಲಿ ವಿವಾದದ ಬಿರುಗಾಳಿಯನ್ನೇ ಎಬ್ಬಿಸಿರುವ ಸಿಇಟಿ ವಿದ್ಯಾರ್ಥಿಗಳ ಜನಿವಾರ ತೆರವು ಪ್ರಕರಣಕ್ಕೆ ಸಂಬಂಧಿಸಿದಂತೆ ಇಡೀ ಬ್ರಾಹ್ಮಣ ಸಮುದಾಯ ಒಂದಾಗಿದ್ದು, ರಾಜ್ಯದ ಹಲವು ಜಿಲ್ಲೆ, ತಾಲೂಕು ಕೇಂದ್ರಗಳಲ್ಲಿ ಶನಿವಾರ ಪ್ರತಿಭಟನೆ ನಡೆಸಿ, ತಪ್ಪಿತಸ್ಥರ ವಿರುದ್ಧ ಕ್ರಮಕ್ಕೆ ಆಗ್ರಹಿಸಿದೆ. ಬ್ರಾಹ್ಮಣ ಸಮುದಾಯದ ಹಲವು ಮಠಾಧೀಶರು ಮಾತ್ರವಲ್ಲದೇ, ವಿವಿಧ ಸಮುದಾಯದ ಮಠಾಧೀಶರು ಕೂಡ ಅಧಿಕಾರಿಗಳ ನಡೆಯನ್ನು ಖಂಡಿಸಿದ್ದು, ಇಂತಹ ಘಟನೆ ಮರುಕಳಿಸದ ರೀತಿಯಲ್ಲಿ ಕಠಿಣ ಕ್ರಮ ಕೈಗೊಳ್ಳಬೇಕು ಎಂದು ಆಗ್ರಹಿಸಿದ್ದಾರೆ.

ಮೈಸೂರು, ಕಲಬುರಗಿ, ಕನಕಪುರ, ಶಿವಮೊಗ್ಗ, ಬೀದರ್, ದಾವಣಗೆರೆ, ಚಾಮರಾಜನಗರ, ವಿಜಯಪುರ, ಸುರಪುರ, ಶಹಾಪುರ ಸೇರಿದಂತೆ ವಿವಿಧ ಜಿಲ್ಲೆ ಹಾಗೂ ಹಲವು ತಾಲೂಕು ಕೇಂದ್ರಗಳಲ್ಲಿ ಬ್ರಾಹ್ಮಣ ಮಹಾಸಭಾ ಪ್ರತಿಭಟನೆ ನಡೆಸಿದೆ. ಜನಿವಾರ ತೆಗೆಸುವ ಮೂಲಕ ಧಾರ್ಮಿಕ ಭಾವನೆಗೆ ಅಧಿಕಾರಿಗಳು ಧಕ್ಕೆ ತಂದಿದ್ದಾರೆ. ಪರೀಕ್ಷೆಗೆ ಅವಕಾಶ ಕೊಡದೇ ಇರುವುದರಿಂದ ವಿದ್ಯಾರ್ಥಿಯ ಜೀವನದೊಂದಿಗೆ ಚೆಲ್ಲಾಟವಾಡಿದ್ದಾರೆ. ಆದ್ದರಿಂದ ರಾಜ್ಯ ಸರಕಾರ ಕೂಡಲೇ ಕ್ರಮವಹಿಸಬೇಕು ಹಾಗೂ ವಿದ್ಯಾರ್ಥಿಗೆ ನ್ಯಾಯ ಒದಗಿಸಬೇಕು. ಮುಂದಿನ ದಿನಗಳಲ್ಲಿ ಈ ರೀತಿಯಾಗದಂತೆ ಮಾರ್ಗಸೂಚಿ ಹೊರಡಿಸಬೇಕು ಎಂದು ಜಿಲ್ಲಾಧಿಕಾರಿ ಹಾಗೂ ತಹಸೀಲ್ದಾರ್ ಮೂಲಕ ಸರಕಾರಕ್ಕೆ ಮನವಿ ಪತ್ರ ಸಲ್ಲಿಸಿದ್ದಾರೆ. ಭಾನುವಾರವೂ ಹಲವೆಡೆ ಧರಣಿ ನಡೆಸುವುದಾಗಿ ಬ್ರಾಹ್ಮಣ ಸಂಘಟನೆಗಳು ಎಚ್ಚರಿಕೆ ನೀಡಿವೆ.

ಮೈಸೂರು ನಗರದ ಅಗ್ರಹಾರ ವೃತ್ತದ ಕೃಷ್ಣರಾಜ ಪೊಲೀಸ್ ಠಾಣೆ ಮುಂದೆ ಶಾಸಕ ಶ್ರೀವತ್ಸ ನೇತೃತ್ವದಲ್ಲಿ ಜಿಲ್ಲಾ ಬ್ರಾಹ್ಮಣ ವೇದಿಕೆ ವತಿಯಿಂದ ಘಂಟೆ ಬಾರಿಸುವ ಮೂಲಕ ವಿನೂತನ ಪ್ರತಿಭಟನೆ ನಡೆಸಲಾಯಿತು.

ಪಕ್ಷಾತೀತ ಖಂಡನೆ

ಈ ನಡುವೆ ಅಧಿಕಾರಿಗಳ ನಡೆಗೆ ಪಕ್ಷಾತೀತ ಖಂಡನೆ ವ್ಯಕ್ತವಾಗಿದ್ದು, ಪ್ರತಿಪಕ್ಷ ಬಿಜೆಪಿ-ಜೆಡಿಎಸ್ ಮಾತ್ರವಲ್ಲದೇ ಕಾಂಗ್ರೆಸ್ ಸರಕಾರದ ಬಹುತೇಕ ಸಚಿವರು ಖಂಡನೆ ವ್ಯಕ್ತಪಡಿಸಿದ್ದಾರೆ. ಈ ರೀತಿಯ ಘಟನೆ ಮರುಕಳಿಸಬಾರದು ಎಂದು ಆಗ್ರಹಿಸಿದ್ದಾರೆ. ಬಿಜೆಪಿ-ಜೆಡಿಎಸ್ ನಾಯಕರು, ಸ್ಪಷ್ಟ ಮಾರ್ಗಸೂಚಿ ಹೊರಡಿಸಬೇಕು ಎನ್ನುವ ಆಗ್ರಹವನ್ನು ಮಾಡಿದ್ದರೆ, ಕಾಂಗ್ರೆಸ್‌ನ ಬಹುತೇಕರು ಅಧಿಕಾರಿಗಳ ವಿರುದ್ಧ ಕ್ರಮ ವಹಿಸಲಾಗುವುದು ಎನ್ನುವ ಭರವಸೆ ನೀಡಿದ್ದಾರೆ.

ಜನಿವಾರ ಕೇವಲ ಬ್ರಾಹ್ಮಣರು ಮಾತ್ರ ಹಾಕುತ್ತಾರೆಂದು ಸರಕಾರದಲ್ಲಿದ್ದವರು ತಿಳಿದಿದ್ದರೆ ತಪ್ಪು, ಅನೇಕ ಸಮುದಾಯದವರು ಜನಿವಾರ ಹಾಕುತ್ತಾರೆ, ಸರಕಾರ ಸೂಕ್ಷ್ಮತೆಯಿಂದ ವರ್ತಿಸಬೇಕು. ಇದು ಜನರ ನಂಬಿಕೆ ಮೇಲಿನ ಪ್ರಹಾರ. ಈ ಪ್ರಕರಣದಲ್ಲಿ ಹೋಮ್‌ಗಾರ್ಡ್ ಅಮಾನತು ಮಾಡಿದರೆ ಸಾಲದು, ಸರಕಾರ ಸ್ಪಷ್ಟ ಮಾರ್ಗಸೂಚಿಗಳನ್ನು ಹೊರಡಿಸಬೇಕು.

- ಪ್ರಲ್ಹಾದ್ ಜೋಶಿ, ಕೇಂದ್ರ ಸಚಿವ

ಅಧಿಕಾರಿ ಮೇಲೆ ಎಫ್‌ಐಆರ್

ಏಪ್ರಿಲ್ 16ರಂದು ನಡೆದಿದ್ದ ಸಿಇಟಿ ಪರೀಕ್ಷೆಯಲ್ಲಿ ಬೀದರ್ ಮತ್ತು ಶಿವಮೊಗ್ಗದಲ್ಲಿ ಬ್ರಾಹ್ಮಣ ವಿದ್ಯಾರ್ಥಿಗಳ ಜನಿವಾರವನ್ನು ಕತ್ತರಿಸಿದ್ದಾರೆ. ಆದರೆ ಪರೀಕ್ಷಾ ವಿಚಾರದಲ್ಲಿ ಜನಿವಾರ ಕತ್ತರಿಸಬೇಕೆಂಬ ನಿಯಮವಿಲ್ಲ. ಕಾಲೇಜಿನ ಭದ್ರತಾ ಸಿಬ್ಬಂದಿ ಜನಿವಾರ ಕತ್ತರಿಸಿ ಬ್ರಾಹ್ಮಣ ಸಮುದಾಯಕ್ಕೆ ಅಪಮಾನ ಮಾಡಿದ್ದಾರೆ ಎಂದು ಬ್ರಾಹ್ಮಣ ಮಹಾಸಭಾದ ಅಧ್ಯಕ್ಷ ನಟರಾಜ್ ಭಾಗವತ್ ಅವರು ದೊಡ್ಡಪೇಟೆ ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸಿದ್ದಾರೆ. ಈ ಸಂಬಂಧ ಪೊಲೀಸರು ಪ್ರಕರಣ ದಾಖಲಿಸಿಕೊಂಡಿದ್ದಾರೆ.

ಕೆಇಎಗೆ ವರದಿ ಸಲ್ಲಿಕೆ

ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಕರ್ನಾಟಕ ಪರೀಕ್ಷಾ ಪ್ರಾಧಿಕಾರ ಶಿವಮೊಗ್ಗ ಮತ್ತು ಬೀದರ್ ಜಿಲ್ಲಾಧಿಕಾರಿಗಳಿಂದ ಶುಕ್ರವಾರ ವರದಿ ಕೇಳಿತ್ತು. ಬೀದರ್ ಜಿಲ್ಲಾಧಿಕಾರಿ ಶಿಲ್ಪಾ ಶರ್ಮಾ ಅವರು ಕೆಇಎಗೆ ವರದಿ ಸಲ್ಲಿಸಿದ್ದು, ಬೀದರ್‌ನ ಸಾಯಿ ಸ್ಫೂರ್ತಿ ಕಾಲೇಜು ಪರೀಕ್ಷಾ ಕೇಂದ್ರದ ಪ್ರಾಂಶುಪಾಲರೂ ಆದ ಉಪ ಮುಖ್ಯ ಅಧೀಕ್ಷಕ ಚಂದ್ರಶೇಖರ್ ಬಿರಾದಾರ ಮತ್ತು ಕಾಲೇಜಿನ ತಪಾಸಣಾ ಸಿಬ್ಬಂದಿ, ದ್ವಿತೀಯ ದರ್ಜೆ ಸಹಾಯಕ ಸತೀಶ್ ಅವರು ನಿಯಮಾನುಸಾರ ಕರ್ತವ್ಯ ನಿರ್ವಹಿಸದೇ ಲೋಪ ಎಸಗಿರುವುದು ಕಂಡುಬಂದಿದೆ. ಇವರನ್ನು ವಜಾಗೊಳಿಸಿ ಅನುಪಾಲನಾ ವರದಿ ಸಲ್ಲಿಸಲು ಸೂಚಿಸಲಾಗಿದೆ. ಪರೀಕ್ಷಾ ವೀಕ್ಷಕರಾಗಿದ್ದ ಔರಾದ್ ಆರ್‌ಎಫ್‌ಒ ಮೊದ್ದಸಿರ್ ಅವರು ಸರಿಯಾಗಿ ಕರ್ತವ್ಯ ನಿರ್ವಹಿಸದ ಕಾರಣ ಅವರಿಗೆ ಕಾರಣ ಕೇಳಿ ನೋಟಿಸ್ ಜಾರಿ ಮಾಡಲಾಗಿದೆ' ಎಂದು ವರದಿಯಲ್ಲಿ ತಿಳಿಸಿದ್ದಾರೆ.

ಇಬ್ಬರು ಸೆಕ್ಯೂರಿಟಿ ಅಮಾನತು

ಶಿವಮೊಗ್ಗ ಜಿಲ್ಲಾಧಿಕಾರಿ ಗುರುದತ್ತ ಹೆಗಡೆ ಪ್ರತಿಕ್ರಿಯಿಸಿದ್ದು, ವಿದ್ಯಾರ್ಥಿಗಳ ಜನಿವಾರ ತೆಗೆಸಿದ ಪ್ರಕರಣಕ್ಕೆ ಸಂಬಂಧಿಸಿದಂತೆ, ಕರ್ತವ್ಯಲೋಪ ಎಸಗಿದ ಇಬ್ಬರು ಗೃಹ ರಕ್ಷಕ ದಳದ ಸಿಬ್ಬಂದಿಯನ್ನು ಅಮಾನತು ಮಾಡಿರುವುದಾಗಿ ತಿಳಿಸಿದ್ದಾರೆ. ಅಧಿಕಾರಿಗಳ ವಿಚಾರಣೆ ಹಾಗೂ ಸಿಸಿಟಿವಿ ವಿಡಿಯೋವನ್ನು ಸಂಪೂರ್ಣವಾಗಿ ಚೆಕ್ ಮಾಡಲಾಗಿದೆ. ಯಾವುದೇ ವಿದ್ಯಾರ್ಥಿಗೆ ಪರೀಕ್ಷೆ ಬರೆಯಲು ತೊಂದರೆಯಾಗಿಲ್ಲ. ಅವರು ಸರಿಯಾದ ಸಮಯಕ್ಕೆ ಹೋಗಿ ಪರೀಕ್ಷೆ ಬರೆದಿದ್ದಾರೆ. ಆದರೆ, ಖಂಡಿತವಾಗಿಯೂ ಅವರ ಧಾರ್ಮಿಕ ಭಾವನೆಗೆ ಧಕ್ಕೆಯುಂಟಾಗಿದೆ. ಇದೇ ಕಾರಣಕ್ಕೆ ಇಬ್ಬರು ಗೃಹ ರಕ್ಷಕ ದಳದ ಸಿಬ್ಬಂದಿಯನ್ನು ಅಮಾನತು ಮಾಡಲಾಗಿದೆ ಎಂದು ತಿಳಿಸಿದ್ದಾರೆ.

ಒಂದು ಜಾತಿಯನ್ನು ಸಂಪೂರ್ಣ ತುಳಿದು ಬಿಡಬೇಕು ಎನ್ನುವ ಭಾವ ಕಾಣಿಸುತ್ತಿದೆ. ಪರೀಕ್ಷೆಗಳು ಮಕ್ಕಳ ಹಣೆಬರಹ ನಿರ್ಧರಿಸುವಂಥದ್ದು. ವಿದ್ಯಾರ್ಥಿಗಳು ಪರೀಕ್ಷೆಯ ಮಾನಸಿಕ ಒತ್ತಡದಲ್ಲಿರುವಾಗ ಅಧಿಕಾರಿಗಳು ಕ್ರೌರ್ಯ ಮೆರೆದಿರುವುದು ಖಂಡನೀಯ. ಇದು ಬ್ರಾಹ್ಮಣರಿಗಷ್ಟೇ ಸೀಮಿತವಲ್ಲ, ಬೇರೆಯವರೂ ಜನಿವಾರವನ್ನು ಗೌರವದಿಂದ ಧಾರಣೆ ಮಾಡುತ್ತಾರೆ. ಲಿಂಗಾಯಿತರು ಕೂಡ ಲಿಂಗವನ್ನು ಧರಿಸುತ್ತಾರೆ. ಅದನ್ನೂ ಇಂಥದ್ದೇ ಸೂತ್ರದಿಂದ ಧರಿಸಲಾಗುತ್ತಿದೆ. ಇದೇ ಪರಿಸ್ಥಿತಿ ಮುಂದುವರಿದರೆ ಸಮಾಜಕ್ಕೆ ಅಪಾಯ ಕಾದಿದೆ.

- ಶ್ರೀ ರಾಘವೇಶ್ವರ ಭಾರತೀ ಸ್ವಾಮೀಜಿ
ಪೀಠಾಧಿಪತಿ ರಾಮಚಂದ್ರಾಪುರ

ಹಿಂದೂಗಳನ್ನು, ಸನಾತನ ಧರ್ಮದ ಅನುಯಾಯಿಗಳನ್ನು ಕೆಣಕುವ ದುಷ್ಟ ಪ್ರವೃತ್ತಿ ಎಲ್ಲ ಕಡೆ ಕಾಣಸಿಗುತ್ತದೆ. ಸರಕಾರ ಇದನ್ನು ಗಂಭೀರವಾಗಿ ತೆಗೆದುಕೊಳ್ಳಬೇಕು ಮತ್ತು ತಪ್ಪಿತಸ್ಥರ ವಿರುದ್ಧ ಸೂಕ್ತ ಕ್ರಮ ಕೈಗೊಳ್ಳಬೇಕು. ಈ ಘಟನೆ ಮುಂದೆ ಸಂಘರ್ಷಕ್ಕೆ ಕಾರಣವಾಗುವ ಸಾಧ್ಯತೆಯಿದೆ. ಆದ್ದರಿಂದ ಮೂಲದಲ್ಲಿಯೇ ಸರಿ ಮಾಡುವುದು ಜಾಣತನ. ಮುಂದೆ ಇಂತಹ ಘಟನೆ ಮರುಕಳಿಸದಂತೆ ಸರಕಾರ ಎಚ್ಚರ ವಹಿಸಬೇಕು.

- ಸುಗುಣೇಂದ್ರ ತೀರ್ಥ ಸ್ವಾಮೀಜಿ, ಪುತ್ತಿಗೆ ಪೀಠ

ಸಿಇಟಿ ಪರೀಕ್ಷೆಯಲ್ಲಿ ಜನಿವಾರ ತೆಗೆಸಿದ ವಿಷಯ ತಿಳಿದು ಮನಸ್ಸಿಗೆ ತುಂಬಾ ಖೇದವಾಗಿದೆ. ಪರೀಕ್ಷಾ ವ್ಯವಸ್ಥೆಯಲ್ಲಿ ಸೇರಿದ ಅಂಶವಾದರೆ ಎಲ್ಲ ಕಡೆ ಇರಬೇಕಿತ್ತು. ವ್ಯವಸ್ಥೆಯಲ್ಲಿ ಈ ಸಮಾಜವನ್ನು ಅವಮಾನಿಸಬೇಕು ಎಂದು ಮಾಡಿದ್ದಾಗಿದೆ. ಇಂತಹ ಕೃತ್ಯದಿಂದ ಸಮಾಜದಲ್ಲಿ ಕ್ಷೋಭೆ ಉಂಟಾಗುತ್ತದೆ. ಅಂತಹ ಕೆಲಸ ಯಾರೂ ಮಾಡಬಾರದು. ನಾವು ಕಠಿಣವಾಗಿ ಖಂಡಿಸುತ್ತೇವೆ. ಮುಂದೆ ಇಂತಹ ಕೆಲಸ ಎಲ್ಲಿಯೂ ಆಗದಂತೆ ಸರಕಾರ ಎಚ್ಚರ ವಹಿಸಬೇಕು.

- ವಿಶ್ವಪ್ರಸನ್ನ ಶ್ರೀ, ಪೇಜಾವರ ಮಠ

ಸಿಇಟಿ ಪರೀಕ್ಷೆ ವೇಳೆ ಜನಿವಾರ ತೆಗೆಸಿರುವುದು ಬಹಳ ದೊಡ್ಡ ತಪ್ಪು. ನಾನು ಕೂಡ ಅದನ್ನು ಒಪ್ಪುವುದಿಲ್ಲ. ಪರೀಕ್ಷೆ ವೇಳೆ ಕೈಗೊಳ್ಳಬೇಕಾದ ಕೆಲವು ನಿಯಮಗಳ ಬಗ್ಗೆ ಸೂಚನೆಗಳನ್ನು ನೀಡಲಾಗಿರುತ್ತದೆ. ಇದನ್ನೆಲ್ಲ ಹೇಳಿರುವುದಿಲ್ಲ. ಯಾರೋ ಒಬ್ಬ ಮಾಡಿರುವುದು ಇಡೀ ಸಮಾಜಕ್ಕೆ ಸರಿ ಕಾಣುತ್ತಿಲ್ಲ.

- ಡಾ.ಜಿ.ಪರಮೇಶ್ವರ ಗೃಹ ಸಚಿವ

ಎ.ಟಿ.ರಾಮಸ್ವಾಮಿ ರಾಜೀನಾಮೆ

ಬೆಂಗಳೂರು: ಮಾಜಿ ಶಾಸಕ ಎ.ಟಿ. ರಾಮಸ್ವಾಮಿ ಅವರು ಬಿಜೆಪಿ ಪ್ರಾಥಮಿಕ ಸದಸ್ಯತ್ವಕ್ಕೆ ರಾಜೀನಾಮೆ ಸಲ್ಲಿಸಿದ್ದಾರೆ. ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಅವರಿಗೆ ರಾಜೀನಾಮೆ ಪತ್ರ ಕಳುಹಿಸಿರುವ ಅವರು, ಕೃಷಿ ಕಾರ್ಯದ ಜತೆ ಪರಿಸರ ಸಂರಕ್ಷಣೆಯ ಕೆಲಸದಲ್ಲಿ ತೊಡಗಿಸಿಕೊಳ್ಳುತ್ತೇವೆ ಎಂದು ಕಾರಣ ನೀಡಿದ್ದಾರೆ.

9ನೇ ಬಾರಿಗೆ ನವೀನ್ ಪಟ್ನಾಯಕ್ ಅಧ್ಯಕ್ಷ

ಭುವನೇಶ್ವರ: ಒಡಿಶಾ ಮಾಜಿ ಸಿಎಂ ನವೀನ್ ಪಟ್ನಾಯಕ್ ಅವರು ಶನಿವಾರ ಸತತ 9ನೇ ಬಾರಿಗೆ ಬಿಜು ಜನತಾದಳದ (ಬಿಜೆಡಿ) ಅಧ್ಯಕ್ಷರಾಗಿ ಆಯ್ಕೆಯಾಗಿದ್ದಾರೆ. ಪಕ್ಷದ ಸ್ಥಾಪಕಾಧ್ಯಕ್ಷರಾದ ಪಟ್ನಾಯಕ್ ಅವರು ಮಾತ್ರ ಈ ಹುದ್ದೆಗೆ ನಾಮಪತ್ರ ಸಲ್ಲಿಸಿದ್ದರು. ಬಿಜೆಡಿಯ ಸಾಂಸ್ಥಿಕ ಚುನಾವಣಾ ರಿಟರ್ನಿಂಗ್ ಅಧಿಕಾರಿ ಪಿ.ಕೆ.ದೇಬ್ ಅವರು ರಾಜ್ಯ ಪ್ರಧಾನ ಕಚೇರಿ ಶಂಖ ಭವನದಲ್ಲಿ ನಡೆದ ರಾಜ್ಯ ಮಂಡಳಿ ಸಭೆಯಲ್ಲಿ ಪಟ್ನಾಯಕ್ ಅವರನ್ನು ಪಕ್ಷದ ಅಧ್ಯಕ್ಷರನ್ನಾಗಿ ಘೋಷಿಸಿದರು.

ಮುಖ್ಯಮಂತ್ರಿ ಸ್ಥಾನಕ್ಕೆ ಕೈಹಾಕಿದರೆ ಅಹಿಂದ ಮತ ಕಳೆದುಕೊಳ್ಳುವ ಭೀತಿ

ಜಾತಿಗಣತಿ; ಸಿಎಂ ಚೆಕ್‌ಮೇಟ್!

ವಿಶ್ವವಾಣಿ ಸುದ್ದಿಮನೆ

ಬೆಂಗಳೂರು: ರಾಜ್ಯದಲ್ಲಿ ಭಾರಿ ವಿವಾದಕ್ಕೆ ಕಾರಣವಾಗಿರುವ, ಪರ-ವಿರೋಧ ಚರ್ಚೆಗೆ ನಾಂದಿ ಹಾಡಿರುವ ಸಾಮಾಜಿಕ-ಶೈಕ್ಷಣಿಕ ಸಮೀಕ್ಷೆಯಿಂದ ಯಾರಿಗೆ ಲಾಭ, ಯಾರಿಗೆ ನಷ್ಟ ಎನ್ನುವ ಭಾರಿ ಚರ್ಚೆಗಳು ನಡೆಯುತ್ತಿವೆ. ವರದಿ ಮಂಡನೆಯಿಂದ ಕಾಂಗ್ರೆಸ್‌ಗೆ ಎಷ್ಟರ ಮಟ್ಟಿಗೆ ಲಾಭವಾಗುವುದೋ ಬಿಡುವುದೋ ಗೊತ್ತಿಲ್ಲ. ಆದರೆ ಸಮೀಕ್ಷೆಯನ್ನು ಸಂಪುಟದಲ್ಲಿ ಮಂಡಿಸುವ ಮೂಲಕ ಪಕ್ಷದಲ್ಲಿಯೇ ತನ್ನ ವಿರೋಧಿಗಳಿಗೆ ಸಿಎಂ ಸಿದ್ದರಾಮಯ್ಯ ಚೆಕ್‌ಮೆಟ್ ನೀಡಿದ್ದಾರೆ ಎನ್ನುವುದು ಸ್ಪಷ್ಟ.

ಹೌದು, ಜಾತಿಗಣತಿಯನ್ನು ಸಂಪುಟ ಸಭೆಯಲ್ಲಿ ಮಂಡಿಸಿದ ಬಳಿಕ ಸಚಿವ ಸಂಪುಟದಲ್ಲಿಯೇ ತೀವ್ರ ವಿರೋಧಗಳು ಶುರುವಾಗಿವೆ. ಅದರಲ್ಲಿಯೂ ಒಕ್ಕಲಿಗ ಹಾಗೂ ಲಿಂಗಾಯತ ಸಮುದಾಯದ ಸಂಖ್ಯೆಯನ್ನು ಕಡಿಮೆ ತೋರಿಸಲಾಗಿದೆ ಎನ್ನುವ ಆರೋಪವಿರುವುದರಿಂದ ಸಹಜವಾಗಿಯೇ ಡಿಸಿಎಂ ಡಿ.ಕೆ.ಶಿವಕುಮಾರ್ ಒಕ್ಕಲಿಗರ ಪರವಾಗಿ ಬ್ಯಾಟಿಂಗ್ ಮಾಡುತ್ತಿದ್ದಾರೆ. ಇದೇ ರೀತಿ ಲಿಂಗಾಯತ ಸಮುದಾಯದ ಸಚಿವರು ಹೋರಾಡುತ್ತಿದ್ದಾರೆ. ಆದರೆ ಈ ಎಲ್ಲದರ ನಡುವೆ ಹಿಂದುಳಿದ ವರ್ಗದ ಕೆಲ ಸಮುದಾಯಗಳನ್ನು ಹೊರತುಪಡಿಸಿ ಇಡೀ ಅಹಿಂದ ಸಮುದಾಯ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಈ ನಡೆಯನ್ನು ಸ್ವಾಗತಿಸಿದೆ.

→ 5

- ಲಿಂಗಾಯತ, ಒಕ್ಕಲಿಗ ಸಮುದಾಯ ವಿರೋಧ ನಿರೀಕ್ಷಿಸಿದ್ದರೂ ವರದಿ ಮಂಡನೆ
- ತಾನು ಅಹಿಂದ ಪರ ಎಂಬುವುದನ್ನು ಮತ್ತೊಮ್ಮೆ ಸಿದ್ದರಾಮಯ್ಯ ಸಾಬೀತು
- ಡಿಕೆಶಿಗೆ ಮಾತ್ರವಲ್ಲದೆ ಹೈಕಮಾಂಡ್‌ಗೂ ಚೆಕ್‌ಮೇಟ್ ನೀಡಿದ ಮುಖ್ಯಮಂತ್ರಿ

ವರದಿ ಮಂಡಿಸಿ ಕೈಬಿಟ್ಟ ಸಿಎಂ

ಹಾಗೇ ನೋಡಿದರೆ, ಜಾತಿ ಗಣತಿಯನ್ನು ರಾಜಕೀಯ ಲೆಕ್ಕಾಚಾರಗಳನ್ನು ಮೀರಿ ನೋಡಿದರೂ ಒಪ್ಪಿಕೊಳ್ಳಲು ಹಲವು ಕಾನೂನು ತೊಡಕುಗಳು ಎದುರಾಗುವ ಸಾಧ್ಯತೆಯಿದೆ. ಲಿಂಗಾಯತ, ಒಕ್ಕಲಿಗ ಮಾತ್ರವಲ್ಲದೇ ಒಬಿಸಿ ಸಮುದಾಯದ ಹಲವು ಸಮುದಾಯಗಳು ತಮ್ಮ ಜನಸಂಖ್ಯೆ ಸರಿಯಿಲ್ಲ ಎನ್ನುವ ವಾದ ಮಂಡಿಸುತ್ತಿವೆ. ಈ ಎಲ್ಲದರ ಅರಿವು ಮುಖ್ಯಮಂತ್ರಿಗಳಿದ್ದರೂ, ಜಾತಿ ಗಣತಿಯನ್ನು ಮಂಡಿಸುವ ಮೂಲಕ ತಮ್ಮ ಸ್ಥಾನ ಗಟ್ಟಿಪಡಿಸಿಕೊಂಡಿದ್ದಾರೆ. ಸಚಿವ ಸಂಪುಟ ಸದಸ್ಯರ ವಿರೋಧದ ನಡುವೆ ಅನುಮೋದನೆ ಪಡೆಯುವುದು ಕಷ್ಟ, ಇನ್ನು ಈ ವಿಷಯದಲ್ಲಿ ಹೈಕಮಾಂಡ್ ಸಹ ದ್ವಂದ್ವದಲ್ಲಿರುವುರಿಂದ ಪೂರ್ಣ ಪ್ರಮಾಣದಲ್ಲಿ ಜಾರಿಗೊಳಿಸಲು ಕಷ್ಟ ಎನ್ನುವುದು ಗೊತ್ತಿದ್ದರೂ ಮಂಡಿಸಿದ್ದಾರೆ. ಈ ಮೂಲಕ 'ತಮ್ಮ ಕೈಲಾದಷ್ಟು ಸಹಾಯ ಮಾಡಿದ್ದೇನೆ. ಆದರೆ ಕೆಲವರ ವಿರೋಧದಿಂದ ಪೂರ್ಣ ಜಾರಿ ಸಾಧ್ಯವಾಗಲಿಲ್ಲ' ಎನ್ನುವ ಸಂದೇಶ ರವಾನಿಸುವುದು ಅವರ ಲೆಕ್ಕಾಚಾರವಾಗಿತ್ತು ಎನ್ನುವುದು ಸ್ಪಷ್ಟ.

ಜೆಇಇ ಮುಖ್ಯ ಪರೀಕ್ಷೆ ಫಲಿತಾಂಶ ಪ್ರಕಟ

ದೆಹಲಿ: ಎಂಜಿನಿಯರಿಂಗ್ ಕೋರ್ಸ್‌ಗಳ ಪ್ರವೇಶ ಪರೀಕ್ಷೆ ಜೆಇಇ (ಮುಖ್ಯಪರೀಕ್ಷೆ) 2ನೇ ಆವೃತ್ತಿಯ ಫಲಿತಾಂಶ ಶನಿವಾರ ಪ್ರಕಟವಾ ಗಿದ್ದು, ಕರ್ನಾಟಕದ ಒಬ್ಬರು ಸೇರಿ 24 ಪರೀಕ್ಷಾರ್ಥಿಗಳು ಶೇಕಡಾ ನೂರು ಅಂಕ ಗಳಿಸಿದ್ದಾರೆ.

ಶೇಕಡಾ ನೂರು ಅಂಕ ಗಳಿಸಿದವರಲ್ಲಿ ರಾಜಸ್ಥಾನದಿಂದ ಅತಿಹೆಚ್ಚು ಅಂದರೆ 7 ಅಭ್ಯರ್ಥಿಗಳು ಇದ್ದಾರೆ. ನಂತರದ ಸ್ಥಾನಗಳಲ್ಲಿ ಮಹಾರಾಷ್ಟ್ರ ಮತ್ತು ತೆಲಂಗಾಣ (ತಲಾ 4), ಉತ್ತರ ಪ್ರದೇಶ (3), ಪಶ್ಚಿಮ ಬಂಗಾಳ (2) ಹಾಗೂ ಗುಜರಾತ್, ದೆಹಲಿ, ಕರ್ನಾಟಕ ಮತ್ತು ಆಂಧ್ರಪ್ರದೇಶದಿಂದ ತಲಾ ಒಬ್ಬರು ಟಾಪರ್‌ಗಳಾಗಿದ್ದಾರೆ. ಇಬ್ಬರು ಮಹಿಳಾ ಅಭ್ಯರ್ಥಿಗಳು ಟಾಪರ್‌ಗಳ ಪಟ್ಟಿಯಲ್ಲಿ ಸ್ಥಾನ ಪಡೆದಿದ್ದಾರೆ. ನಿರ್ಣಾಯಕ ಎನ್ನಲಾಗಿರುವ ಎರಡನೇ ಆವೃತ್ತಿಯ ಪರೀಕ್ಷೆಗೆ ದೇಶದಾದ್ಯಂತ 10,61,840 ಅಭ್ಯರ್ಥಿಗಳು ಪರೀಕ್ಷೆಗೆ ನೋಂದಾಯಿಸಿಕೊಂಡಿದ್ದು, 9,92,350 ಮಂದಿ ಪರೀಕ್ಷೆಗೆ ಹಾಜರಾಗಿದ್ದರು.

ಮಸ್ಕ್ ಭಾರತಕ್ಕೆ ಭೇಟಿ

ದೆಹಲಿ: 'ಭಾರತದ ಪ್ರಧಾನಿ ಮೋದಿ ಅವರೊಂದಿಗೆ ಮಾತನಾಡುವುದೇ ದೊಡ್ಡ ಗೌರವ. ವರ್ಷಾಂತ್ಯದಲ್ಲಿ ಭಾರತಕ್ಕೆ ಬರಲಿದ್ದೇನೆ. ಅದಕ್ಕಾಗಿಯೇ ಎದುರು ನೋಡುತ್ತಿದ್ದೇನೆ' ಎಂದು ವಿಶ್ವದ ಸಿರಿವಂತ ಉದ್ಯಮಿ, ಟೆಸ್ಲಾ ಮತ್ತು ಸ್ಪೇಸ್‌ಎಕ್ಸ್ ಕಂಪನಿಗಳ ಸಿಇಒ ಎಲಾನ್ ಮಸ್ಕ್ ಸಂದೇಶ ರವಾನಿಸಿದ್ದಾರೆ.

ಮೋದಿ ತ್ರಿರಾಷ್ಟ್ರ ಪ್ರವಾಸ

ದೆಹಲಿ: ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರು ನಡೆಸಿದ 'ಪ್ರತಿಸುಂಕ'ದ ಗದಾ ಪ್ರಹಾರದಿಂದಾಗಿ ವಿಶ್ವದ 60ಕ್ಕೂ ಅಧಿಕ ದೇಶಗಳು ಗೊಂದದಲ್ಲಿವೆ. ಈ ಮಧ್ಯೆ, ಇದಕ್ಕೆ ಪರಿಹಾರ ಕಂಡುಕೊಳ್ಳಲೆಂದೇ ಪ್ರಧಾನಿ ನರೇಂದ್ರ ಮೋದಿ ಅವರು ಮೇ 3ನೇ ವಾರದಲ್ಲಿ ಕ್ರೊವೇಷಿಯಾ, ನಾರ್ವೆ ಮತ್ತು ನೆದರ್‌ಲೆಂಡ್‌ಗೆ ತೆರಳಲಿದ್ದಾರೆ.

ಶೇ.10ರಷ್ಟು ದರ ಏರಿಕೆ ಖಚಿತಪಡಿಸಿದ ಪಠ್ಯಪುಸ್ತಕ ಸಮಿತಿ

ಪಠ್ಯಪುಸ್ತಕದ ದರವೂ ಹೆಚ್ಚಳ

ಬೆಂಗಳೂರು: ನಿತ್ಯ ಬಳಕೆ ವಸ್ತುಗಳ ದರದಲ್ಲಿ ಭಾರಿ ಏರಿಕೆಯಿಂದ ತತ್ತರಿಸಿರುವ ಜನರಿಗೆ ಇದೀಗ ಮಕ್ಕಳ ಪಠ್ಯಪುಸ್ತಕದಲ್ಲಿಯೂ ದರ ಏರಿಕೆಯ ಬಿಸಿ ತಟ್ಟುವುದು ನಿಶ್ಚಿಯವಾಗಿದೆ. ಈಗಾಗಲೇ ಖಾಸಗಿ ಶಾಲಾ ಸಂಸ್ಥೆಗಳು ವಾರ್ಷಿಕ ಶುಲ್ಕ, ಶಾಲಾ ಬಸ್ ವಾಹನ ಶುಲ್ಕವನ್ನು ಏರಿಸಿದ್ದವು. ಇದೀಗ ಪಠ್ಯಪುಸ್ತಕದ ಬೆಲೆಯನ್ನು ಏರಿಸುವ ಮೂಲಕ ಪೋಷಕರ ಜೇಬಿಗೆ ಕತ್ತರಿ ಹಾಕಲಾಗಿದೆ.

ಈ ಬಗ್ಗೆ ಕರ್ನಾಟಕ ಪಠ್ಯಪುಸ್ತಕ ಸಂಘ ದರ ಏರಿಕೆಯ ಬಗ್ಗೆ ಸ್ಪಷ್ಟನೆ ನೀಡಿದೆ. ಪ್ರಸಕ್ತ ಶೈಕ್ಷಣಿಕ ವರ್ಷದಿಂದ ಶೇ.10ರಷ್ಟು ಪಠ್ಯಪುಸ್ತಕದ ಮೇಲಿನ ದರವನ್ನು ಹೆಚ್ಚಿಸಲಾಗಿದೆ. ಖಾಸಗಿ ಶಾಲೆಗಳಿಂದ ಡಿಸೆಂಬರ್ ತಿಂಗಳಲ್ಲಿ ಇಂಡೆಂಟ್ ಪಡೆದಿದ್ದ ಸಂಸ್ಥೆ ಮುಂಗಡ ಶೇ.10ರಷ್ಟು ಹಣವನ್ನು ಆನ್‌ಲೈನ್ ಮೂಲಕ ಪಾವತಿಸಿಕೊಂಡಿತ್ತು. ಖಾಸಗಿ ಶಾಲೆಗೆ ಇಂಡೆಂಟ್ ಪಡೆದಿದ್ದಕ್ಕಿಂತ ಶೇ.10ರಷ್ಟು ದರ ಹೆಚ್ಚಳ ಮಾಡಿರುವುದು ಪೋಷಕರಿಗೆ ಹೊರೆಯಾಗುವುದು ಖಚಿತವಾಗಿದೆ.

ಖಾಸಗಿ ಶಾಲಾ ಮಕ್ಕಳಿಗೆ ಸಮಸ್ಯೆ: ಪಠ್ಯ ಪುಸ್ತಕ ಸಂಘ ಮಾಡಿರುವ ಈ ದರ ಏರಿಕೆ ಸರಕಾರಿ ಶಾಲಾ ಮಕ್ಕಳಿಗೆ ಹೊರೆಯಾಗುವುದಿಲ್ಲ. ಏಕೆಂದರೆ ಸರಕಾರಿ ಶಾಲೆಗಳಲ್ಲಿ ಉಚಿತ ಪಠ್ಯಪುಸ್ತಕದ ವ್ಯವಸ್ಥೆಯಿದೆ. ಆದರೆ ಖಾಸಗಿ ಶಾಲೆಗಳು ಪಠ್ಯಪುಸ್ತಕ ಸಂಘದಿಂದ ಪುಸ್ತಕಗಳನ್ನು ಖರೀದಿಸಬೇಕಿದೆ. ಆದ್ದರಿಂದ ಇದರ ಹೊರೆ ಖಾಸಗಿ ಶಾಲೆಗಳಲ್ಲಿ ಓದುತ್ತಿರುವ ವಿದ್ಯಾರ್ಥಿಗಳ ಪೋಷಕರಿಗೆ ಮಾತ್ರ ಆಗುತ್ತದೆ. ಕೆಲ ಪೋಷಕರ ಮಾತ್ರ, ಸರಕಾರ ಶೇ.10ರಷ್ಟು ದರ ಹೆಚ್ಚಿಸಿದ್ದರೂ ಶಾಲಾ ಆಡಳಿತ ಮಂಡಳಿ ಒಂದಕ್ಕೆ ಎರಡರಷ್ಟು ದರವನ್ನು ನಿಗದಿಪಡಿಸುತ್ತಿವೆ. ಈಗಾಗಲೇ ಶಾಲಾ ಶುಲ್ಕವನ್ನು ಏರಿಸಿರುವ ಶಾಲೆಗಳು, ಇದೀಗ ಪಠ್ಯಪುಸ್ತರದಲ್ಲಿಯೂ ಭಾರಿ ದರ ಏರಿಸುವುದು ನಿಶ್ಚಿತ ಎನ್ನುವ ಆತಂಕವನ್ನು ವ್ಯಕ್ತಪಡಿಸಿದೆ.



- ಬೆಲೆ ಏರಿಕೆಯಿಂದ ತತ್ತರಿಸಿರುವ ಜನರಿಗೆ ಮತ್ತೊಂದು ಬರೆ
- ಈ ವರ್ಷದಿಂದಲೇ ಶೇ.10ರಷ್ಟು ಪಠ್ಯಪುಸ್ತಕದ ದರ ಹೆಚ್ಚಳ
- ಖಾಸಗಿ ಶಾಲೆ ಮಕ್ಕಳ ಪೋಷಕರಿಗೆ ತಟ್ಟಲಿದೆ ಈ ಬೆಲೆ ಏರಿಕೆ

10ನೇ ತರಗತಿಯ ಪರಿಷ್ಕೃತ ಪುಸ್ತಕ ದರಪಟ್ಟಿ

ವಿಷಯ	2024-25	2025-26
ಕನ್ನಡ (ಪ್ರಥಮ ಭಾಷೆ) ಭಾಗ 1	38 ರು.	39 ರು.
ಗಣಿತ (ಕನ್ನಡ ಮಾಧ್ಯಮ)	48 ರು.	63 ರು.
ಸಮಾಜ ವಿಜ್ಞಾನ (ಕನ್ನಡ ಮಾಧ್ಯಮ)	49 ರು.	57 ರು.
ವಿಜ್ಞಾನ (ಇಂಗ್ಲಿಷ್ ಮಾಧ್ಯಮ)	42ರು.	45 ರು.

ಪಠ್ಯಪುಸ್ತಕ ಸಂಘ ದರ ಏರಿಸಿದೆ. ಶೇ.10ಕ್ಕೆ ಸೀಮಿತವಾಗದೇ ಕೆಲ ಪುಸ್ತಕಗಳನ್ನು ದುಪ್ಪಟ್ಟು ದರಕ್ಕೆ ಏರಿಸಲಾಗಿದೆ. ಇದರ ಹೊರೆಯನ್ನು ಖಾಸಗಿ ಶಾಲೆಗಳು ಅನಿವಾರ್ಯವಾಗಿ ಪೋಷಕರ ಮೇಲೆ ಹಾಕಬೇಕಾಗುತ್ತದೆ. ಶಾಲಾ ಶುಲ್ಕದೊಂದಿಗೆ ಈ ದರವನ್ನು ಸೇರಿಸಲಾಗಿದೆ. ಈಗಾಗಲೇ ಎಲ್ಲದರ ಬೆಲೆ ಏರಿಕೆಯಾಗಿರುವುದರಿಂದ ಜನರಿಗೆ ತೊಂದರೆಯಾಗಿದ್ದು, ಪಠ್ಯಪುಸ್ತಕದ ದರ ಏರಿಸದಂತೆ ಮನವಿ ಮಾಡಿದ್ದೇವೆ. ಆದರೆ ಯಾವುದೇ ಪ್ರಯೋಜನವಾಗಿಲ್ಲ. ಹೀಗಾಗಿ ಪಠ್ಯಪುಸ್ತಕ ದರವನ್ನು ಅನಿವಾರ್ಯವಾಗಿ ಏರಿಕೆ ಮಾಡಬೇಕಿದೆ.

- ಶಶಿಕುಮಾರ್, ಕ್ಯಾಮ್ಸ್ ಪ್ರಧಾನ ಕಾರ್ಯದರ್ಶಿ

ಮುತ್ತಪ್ಪ ರೈ ಪುತ್ರನ ಮೇಲೆ ಗುಂಡಿನ ದಾಳಿ

ಶಾರ್ಪ್ ಶೂಟರ್ ಮೂಲಕ ದಾಳಿ ನಡೆಸಿ ಹತ್ಯೆಗೆ ಶಂಕೆ । ಹಲವು ಆಯಾಮಗಳಲ್ಲಿ ಪೊಲೀಸರಿಂದ ತನಿಖೆ

ರಾಮನಗರ: ಭೂಗತ ಲೋಕದ ಮಾಜಿ ಡಾನ್ ಹಾಗೂ ಜಯ ಕರ್ನಾಟಕ ಸಂಘಟನೆ ಸಂಸ್ಥಾಪಕ ಮುತ್ತಪ್ಪ ರೈ ಅವರ ಪುತ್ರ ರಿಕ್ಕಿ ರೈ ಕಾರಿನ ಮೇಲೆ ಬಿಡದಿ ಬಳಿಯ ನಿವಾಸದ ಬಳಿ ರಾತ್ರಿ ಗುಂಡಿನ ದಾಳಿ ನಡೆದಿದೆ. ಘಟನೆಯಲ್ಲಿ ರಿಕ್ಕಿ ಅವರ ಕೈ ಮತ್ತು ಮೂಗಿಗೆ ಗುಂಡೇಟು ತಗುಲಿ ಗಂಭೀರವಾದ ಗಾಯಗಳಾಗಿದ್ದು, ಬೆಂಗಳೂರಿನ ಮಣಿಪಾಲ್ ಆಸ್ಪತ್ರೆಗೆ ದಾಖಲಿಸಲಾಗಿದೆ.

ಬಿಡದಿ ಬಳಿ ಇರುವ ತಮ್ಮ ಮನೆಯಿಂದ ರಾತ್ರಿ 1.30ರ ಸುಮಾರಿಗೆ ರಿಕ್ಕಿ ಅವರು ಗನ್‌ಮ್ಯಾನ್ ಮತ್ತು ಚಾಲಕನೊಂದಿಗೆ ಬೆಂಗಳೂರಿಗೆ ಹೊರಟ್ಟಿದ್ದರು. ಮನೆ ಕಾಂಪೌಂಡ್ ದಾಟಿ ಹೊರಬಂದ ಕಾರಿನ ಮೇಲೆ ದುಷ್ಕರ್ಮಿಗಳು ಏಕಾಏಕಿ ಗುಂಡಿನ ದಾಳಿ ನಡೆಸಿ ಪರಾರಿಯಾಗಿದ್ದಾರೆ. ಗಂಭೀರವಾಗಿ ಗಾಯಗೊಂಡ ಅವರಿಗೆ ಸ್ಥಳೀಯ ಆಸ್ಪತ್ರೆಯಲ್ಲಿ ಚಿಕಿತ್ಸೆ ಕೊಡಿಸಿ, ಹೆಚ್ಚಿನ ಚಿಕಿತ್ಸೆಗಾಗಿ ಬೆಂಗಳೂರಿಗೆ ಸ್ಥಳಾಂತರಿಸಲಾಯಿತು.

ಘಟನೆಯಲ್ಲಿ ರಿಕ್ಕಿ ಜತೆಗಿದ್ದ ಕಾರು ಚಾಲಕ ಮತ್ತು ಗನ್‌ಮ್ಯಾನ್‌ಗೂ ಸಣ್ಣಪುಟ್ಟ ಗಾಯಗಳಾಗಿವೆ. ಇಬ್ಬರಿಗೂ ಸ್ಥಳೀಯವಾಗಿ ಚಿಕಿತ್ಸೆ ಕೊಡಿಸಿ ಘಟನೆ ಕುರಿತು ವಿಚಾರಣೆ ನಡೆಸಲಾಗುತ್ತಿದೆ. ಸ್ಥಳಕ್ಕೆ ಶ್ವಾನದಳ, ವಿಧಿವಿಜ್ಞಾನ ಪ್ರಯೋಗಾಲಯದ ಸಿಬ್ಬಂದಿ ಭೇಟಿ ನೀಡಿ ಪರಿಶೀಲನೆ ನಡೆಸಿದ್ದಾರೆ. ರಿಕ್ಕಿ ಅವರ ಮನೆಯಲ್ಲಿದ್ದ ಭದ್ರತಾ ಸಿಬ್ಬಂದಿ ಹಾಗೂ ಅಡುಗೆ ಸಿಬ್ಬಂದಿಯನ್ನು ಸಹ ವಿಚಾರಣೆಗೆ ಒಳಪಡಿಸಲಾಗಿದೆ. ಸ್ಥಳದಲ್ಲಿ ಮೊಬೈಲ್ ಮತ್ತು ಗುಂಡುಗಳು ಪತ್ತೆಯಾಗಿವೆ ಪೊಲೀಸ್ ಮೂಲಗಳು ತಿಳಿಸಿವೆ.

ಎರಡು ದಿನಗಳ ಹಿಂದೆಯಷ್ಟೇ ರಷ್ಯಾದಿಂದ ಹಿಂದಿರುಗಿದ್ದ ರಿಕ್ಕಿ, ರಿಯಲ್ ಎಸ್ಟೇಟ್ ವ್ಯವಹಾರದಲ್ಲಿ ತೊಡಗಿಕೊಂಡಿದ್ದರು. ತಂದೆ ಮುತ್ತಪ್ಪ ರೈ ಆಸ್ತಿ ವಿಚಾರಕ್ಕೆ ಕೆಲವರ ಜತೆ ಮನಸ್ತಾಪ ಇತ್ತು. ಮುತ್ತಪ್ಪ ರೈ ನಿಧನದ ಬಳಿಕ ಕೆಲವರ ಜತೆ ರಿಕ್ಕಿ ಗಲಾಟೆ ಮಾಡಿಕೊಂಡಿದ್ದರು. ಹಳೆ ದ್ವೇಷದ ಹಿನ್ನೆಲೆಯಲ್ಲಿ ಶಾರ್ಪ್ ಶೂಟರ್ ಮೂಲಕ ದಾಳಿ ನಡೆಸಿ ಹತ್ಯೆಗೆ ಪ್ರಯತ್ನಿಸಿರುವ ಅನುಮಾನವಿದೆ. ಘಟನೆ ಕುರಿತು ತನಿಖೆ ನಡೆಸಲಾಗುತ್ತಿದೆ ಎಂದು ಪೊಲೀಸ್ ಮೂಲಗಳು ಹೇಳಿವೆ.



ನಾಲ್ವರ ವಿರುದ್ಧ ಎಫ್‌ಐಆರ್

ಗುಂಡಿನ ದಾಳಿ ಪ್ರಕರಣಕ್ಕೆ ಸಂಬಂಧಿಸಿದಂತೆ ನಾಲ್ವರ ವಿರುದ್ಧ ಬಿಡದಿ ಪೊಲೀಸ್ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದೆ. ರಾಕೇಶ್ ಮಲ್ಲಿ, ಮುತ್ತಪ್ಪ ರೈ 2ನೇ ಪತ್ನಿ ಅನುರಾಧ, ನಿತೇಶ್ ಶೆಟ್ಟಿ, ವೈದ್ಯನಾಥನ್ ವಿರುದ್ಧ ಭಾರತೀಯ ನಾಗರಿಕ ಸುರಕ್ಷಾ ಸಂಹಿತೆ 173 ಸೆಕ್ಷನ್ ಅಡಿಯಲ್ಲಿ ಪ್ರಕರಣ ದಾಖಲಾಗಿದೆ. ಹೀಗಾಗಿ ವಿವಿಧ ಆಯಾಮಗಳಲ್ಲಿ ಪೊಲೀಸರು ತನಿಖೆ ನಡೆಸುತ್ತಿದ್ದಾರೆ. ರಿಯಲ್ ಎಸ್ಟೇಟ್ ವಿಚಾರವಾಗಿ ಈ ಹಿಂದೆಯೂ ವಿವಾದವಾಗಿತ್ತು. ಈ ಹಿನ್ನೆಲೆಯಲ್ಲಿ ರಿಕ್ಕಿ ರೈ ಮೇಲೆ ಫೈರಿಂಗ್ ಮಾಡಿರುವ ಶಂಕೆ ವ್ಯಕ್ತವಾಗಿದೆ.

ಮುತ್ತಪ್ಪ ರೈ ಪುತ್ರ ರಿಕ್ಕಿ ರೈ ಮೇಲೆ ಗುಂಡಿನ ದಾಳಿ ನಡೆದಿರುವ ವಿಚಾರ ಗೊತ್ತಾಗಿದೆ. ಈ ಬಗ್ಗೆ ಹೆಚ್ಚಿನ ಮಾಹಿತಿ ನೀಡುವಂತೆ ಅಧಿಕಾರಿಗಳನ್ನು ಕೇಳಿದ್ದೇನೆ. ಗಾಯಾಳುವನ್ನು ಮಣಿಪಾಲ್ ಆಸ್ಪತ್ರೆಗೆ ದಾಖಲಿಸಿದ್ದು, ಪ್ರಾಣಾಪಾಯದಿಂದ ಪಾರಾಗಿದ್ದಾರೆ ಎನ್ನಲಾಗಿದೆ. ಪೊಲೀಸರು ತನಿಖೆ ಆರಂಭಿಸಿದ್ದಾರೆ. ತನಿಖೆಯ ಬಳಿಕ ಇನ್ನಷ್ಟು ವಿಷಯ ಬಹಿರಂಗವಾಗಲಿದೆ.

- ಡಾ.ಜಿ. ಪರಮೇಶ್ವರ, ಗೃಹ ಸಚಿವ

ಸಮಾಚಾರ ಸಣ್ಣದಲ್ಲ

ಪುಸ್ತಕ ಪ್ರಶಸ್ತಿಗೆ ಬಯಲ ಬೆಳಕು ಕೃತಿ ಆಯ್ಕೆ

ಗೋಕಾಕ: ಹುಬ್ಬಳ್ಳಿಯ ಉಮಾಶಂಕರ ಪ್ರತಿಷ್ಠಾನದಿಂದ ನೀಡಲಾಗುವ ಅತ್ಯುತ್ತಮ ಪುಸ್ತಕ ಪ್ರಶಸ್ತಿಗೆ ಗೋಕಾಕದ ಲೇಖಕಿ ಶ್ರೀಮತಿ ಪುಷ್ಪಾ ಎಸ್ ಮುರಗೋಡ. ಅವರ ಬಯಲ ಬೆಳಕು ಎಂಬ ಕೃತಿ ಆಯ್ಕೆಯಾಗಿದ್ದು ಹುಬ್ಬಳ್ಳಿಯಲ್ಲಿ ಮೇ 11ರಂದು ನಡೆಯಲಿರುವ ಭಾವ ಸಂಗಮ ಸಮ್ಮೇಳನದಲ್ಲಿ ಪ್ರಶಸ್ತಿ ಪ್ರದಾನ ಮಾಡಲಾಗುವುದು ಎಂದು ಮುರುಗೋಡ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ನಾಳೆ ವಿದ್ಯುತ್ ಪೂರೈಕೆ ವ್ಯತ್ಯಯ

ಹುಕ್ಕೇರಿ: ತಾಲೂಕಿನ ಇಸ್ಲಾಂಪೂರ ವಿದ್ಯುತ್ ಉಪಕೇಂದ್ರದಲ್ಲಿ ನಿರ್ವಹಣೆ ಕಾರ್ಯ ಕೈಗೊಳ್ಳುವುದರಿಂದ ದಿ. 21 ರಂದು ಬೆಳಗ್ಗೆ 7 ರಿಂದ ಸಂಜೆ 5 ಗಂಟೆ ವರೆಗೆ ವಿದ್ಯುತ್ ವ್ಯತ್ಯವಾಗಲಿದೆ. ಇಸಾಂಲ್ಪೂರ ವಿದ್ಯುತ್ ಉಪಕೇಂದ್ರದ ವ್ಯಾಪ್ತಿಯಲ್ಲಿ ಬರುವ ಗ್ರಾಮಗಳಾದ ಬಸ್ಸಾಪೂರ ಹಗೆದಾಳ, ಶಿರೂರ, ಭರಮಾಪೂರ, ಶಹಾಬಂದರ, ಚಿಕ್ಕಲದಿನ್ನಿ, ಹೊಸಗಡ, ಗಜಪತಿ, ರಾಜಕಟ್ಟಿ, ಆರ್. ಯಲ್ಲಾಪೂರ, ಇಸ್ಲಾಂಪೂರ, ಕಲ್ಲಟ್ಟಿ, ಜಾರಕೀಹೊಳಿ, ಹಳೇ ವಂಟಮೂರಿ, ಬೀರನಹೊಳಿ,ಕಾಟಾಬಳಿ ಗ್ರಾಮಗಳಲ್ಲಿ ಸುತ್ತಮುತ್ತಲಿನ ಗ್ರಾಮಗಳಲ್ಲಿ ವಿದ್ಯುತ್ ವ್ಯತ್ಯಯವಾಗಲಿದೆ. ಗ್ರಾಹಕರು ಸಹಕರಿಸಬೇಕೆಂದು ಹುಕ್ಕೇರಿ ಗ್ರಾಮೀಣ ವಿದ್ಯುತ್ ಸಹಕಾರಿ ಸಂಘದ ಅಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಬಡೇಭಾಯಿಗೆ ಸಾಧನಾ ಪ್ರಶಸ್ತಿ

ಯಮಕನಮರಡಿ: ಸರಕಾರಿ ಉರ್ದು ಹಿರಿಯ ಪ್ರಾಥಮಿಕ ಶಾಲೆ ಬಸಾಪೂರ (ತಾ.ಹುಕ್ಕೇರಿ) ಶಾಲೆಯ ಹಿರಿಯ, ಕ್ರಿಯಾಶೀಲ, ಅನುಭವಿ ಶಿಕ್ಷಕ ಹಾಗೂ ''ಆವೋ ಉರ್ದು ಸೀಖೇಂ' ನಲಿಕಲಿ ಪುಸ್ತಕದ ಲೇಖಕ ಶ್ರೀ.ಎಮ್.ಎ.ಬಡೇಭಾಯಿ ಇವರಿಗೆ ''ರಾಷ್ಟ್ರೀಯ ಉರ್ದು ಶಿಕ್ಷಕ ಕರ್ಮಚಾರಿ ಸಂಘ ದೆಹಲಿ'' ಇವರು ಕೊಡಮಾಡುವ ಜೀವಮಾನ ಸಾಧನಾ ಪ್ರಶಸ್ತಿ ಲಭಿಸಿದೆ. 2025ರ ಏ.13ರಂದು ಕವಿ ಗ್ಹಾಲಿಬ್ ಅಕಾಡೆಮಿ ದೆಹಲಿಯ ಸಭಾಂಗಣದಲ್ಲಿ ಈ ಪ್ರಶಸ್ತಿ ನೀಡಲಾಗಿದೆ. ತಮ್ಮ ಶೈಕ್ಷಣಿಕ ಕಾರ್ಯಗಳಿಂದ ರಾಷ್ಟ್ರ ಮಟ್ಟದಲ್ಲಿ ಗುರುತಿಸಿಕೊಂಡಿರುವ ಅನುಭವಿ ಹಾಗೂ ಕ್ರಿಯಾಶೀಲ ಶಿಕ್ಷಕರಾದ ಎಮ್.ಎ.ಬಡೇಭಾಯಿ ಇವರಿಗೆ ಅಧಿಕಾರಿಗಳು ಹಾಗೂ ಶಿಕ್ಷಕರು ಅಭಿನಂದಿಸಿದ್ದಾರೆ.

ಸಾಲಬಾಧೆ : ರೈತ ಆತ್ಮಹತ್ಯೆಗೆ ಶರಣು

ಬೈಲಹೊಂಗಲ: ಸಾಲಭಾದೆಯಿಂದ ರೈತ ನೇಣು ಹಾಕಿಕೊಂಡು ಆತ್ಮಹತ್ಯೆ ಮಾಡಿಕೊಂಡ ಘಟನೆ ತಾಲೂಕಿನ ಹೋಳಿ ಹೊಸೂರ ಗ್ರಾಮದಲ್ಲಿ ಗುರುವಾರ ನಡೆದಿದೆ. ಗ್ರಾಮದ ರುದ್ರಗೌಡ ನಿಂಗನಗೌಡ ಪಾಟೀಲ (60)ಆತ್ಮಹತ್ಯೆ ಮಾಡಿಕೊಂಡ ರೈತ. ಬ್ಯಾಂಕ್ ಹಾಗೂ ಕೈಗಡ ಸಾಲ ಸುಳಿಯಲ್ಲಿ ಸಿಲುಕಿದ್ದ ರೈತ ಮನೆಯ ಅಟ್ಟದ ಮೇಲೆ ನೇಣು ಹಾಕಿಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಸ್ಥಳಕ್ಕೆ ಪಿ ಎಸ್ ಐ ಗುರುರಾಜ ಕಲಬುರ್ಗಿ, ಸಿಬ್ಬಂದಿ ಭೇಟಿ ನೀಡಿ ಪರಿಶೀಲನೆ ನಡೆಸಿದ್ದಾರೆ. ಬೈಲಹೊಂಗಲ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಅಗಲಿದ ಜೀವ

ವೀರನಗೌಡ ಪಾಟೀಲ

ಬೈಲಹೊಂಗಲ: ತಾಲೂಕಿನ ಚಿವಟಗುಂಡಿ ಗ್ರಾಮದ ಗಣ್ಯರಾದ ವೀರನಗೌಡ ಗೌಡಪ್ಪ ಪಾಟೀಲ(78) ಶನಿವಾರ ನಿಧನರಾದರು. ಮೃತರಿಗೆ ಪತ್ನಿ, ಒಬ್ಬ ಪುತ್ರ, ಮೂವರು ಪುತ್ರಿಯರು ಹಾಗೂ ಅಪಾರ ಬಂಧುಬಳಗ ಇದ್ದಾರೆ.

ಗಂಗಾದೇವಿ ಕಬ್ಬೂರ

ಬೈಲಹೊಂಗಲ: ಪಟ್ಟಣದ ಬಾಗವಾನ ಚಾಳ ನಿವಾಸಿ ಗಂಗಾದೇವಿ ಅಡಿವೇಪ್ಪ ಕಬ್ಬೂರ(86) ಬುಧವಾರ ನಿಧನರಾದರು. ಮೃತರಿಗೆ ಮೂವರು ಪುತ್ರರು, ಒಬ್ಬ ಪುತ್ರಿ ಹಾಗೂ ಅಪಾರ ಬಂಧು ಬಳಗ ಇದ್ದಾರೆ.

{ಸಿದ್ದರಾಮಯ್ಯ } ಮುಖ್ಯಮಂತ್ರಿ

ಜಾತಿ ವ್ಯವಸ್ಥೆ ಎಂಬುದು ನಿಂತ ನೀರಿದ್ದಂತೆ, ಅದಕ್ಕೆ ಚಲನೆ ಇಲ್ಲ. ಆರ್ಥಿಕ ಚಟುವಟಿಕೆ ಇದ್ದಾಗ ಮಾತ್ರ ಅದಕ್ಕೆ ಚಲನೆ ಸಿಗುತ್ತದೆ. ಅದು ಬರಬೇಕಾದರೆ ಶಿಕ್ಷಣ ಸಿಗಬೇಕು. ಶಿಕ್ಷಣದಿಂದ ಆರ್ಥಿಕ, ಸಾಮಾಜಿಕ, ಶೈಕ್ಷಣಿಕವಾಗಿ ಶಕ್ತಿ ಬರುತ್ತದೆ. ಇದರಿಂದ ಜಾತ್ಯತೀತ ಸಮಾಜ ನಿರ್ಮಾಣವಾಗಲು ಸಾಧ್ಯ.

ಗನ್‌ಮ್ಯಾನ್ ನೇಮಿಸಿಕೊಂಡು ಕರ್ತವ್ಯ ನಿರ್ವಹಿಸುತ್ತಿರುವ ಅಶೋಕ ಗುಡಿಮನಿ

ಅಥಣಿ ಪುರಸಭೆ ಮುಖ್ಯಾಧಿಕಾರಿಗೆ ಜೀವ ಭಯವೇ..?

ಅಥಣಿ: ಪಟ್ಟಣದ ಪುರಸಭೆಯ ಮುಖ್ಯಾಧಿಕಾರಿ ಅಶೋಕ ಗುಡಿಮನಿ ಅವರು ಕಳೆದ ಹತ್ತು ದಿನಗಳಿಂದ ಗನ್ ಮ್ಯಾನ್ (ಅಂಗರಕ್ಷಕ)ನೊಂದಿಗೆ ಸರಕಾರಿ ವಾಹನದಲ್ಲಿ ಓಡಾಡುತ್ತಿರುವುದು ಅಥಣಿಯ ಸಾರ್ವಜನಿಕದ ವಲಯದಲ್ಲಿ ಕುತೂಹಲ ಮೂಡಿಸಿದೆ. ಸರಕಾರಿ ಸೇವೆಯಲ್ಲಿರುವ ಅಧಿಕಾರಿಯೊಬ್ಬರಿಗೆ ಜೀವ ಬೆದರಿಕೆ ಭಯ ಕಾಡುತ್ತಿದ್ದೀಯಾ ..? ಎನ್ನುವ ಮಾತುಗಳು ಕೇಳಿ ಬರುತ್ತಿವೆ.

ಪ್ರಚೋದನಾಕಾರಿ ಭಾಷಣ ಮಾಡುವ ರಾಜಕಾರಣಿಗಳು, ಖ್ಯಾತ ಸಾಹಿತಿಗಳು, ಸಾಮಾಜಿಕ ಹಾಗೂ ಹೋರಾಟಗಾರರು ತಮ್ಮ ಭದ್ರತೆಗಾಗಿ ಮತ್ತು ಪ್ರಾಣ ಬೆದರಿಕೆ ಇರುವ ಹಿನ್ನೆಲೆಯಲ್ಲಿ ಸರಕಾರದ ಅನುಮತಿ ಪಡೆದು ಗನ್ ಮ್ಯಾನ್ ಇಲ್ಲವೇ ಸೆಕುರಿಟಿ ಏಜೆನ್ಸಿಗಳಿಂದ ಭದ್ರತಾ ಸಿಬ್ಬಂದಿಯನ್ನು ನೇಮಿಸಿಕೊಂಡಿರುವದನ್ನು ನೋಡಿದ್ದೀರಿ. ಇದನ್ನು ಹೊರತು ಪಡಿಸಿದರೆ ಸರಕಾರಿ ಸೇವೆಯಲ್ಲಿರುವ ಐಎಎಸ್ ಮತ್ತು ಐಪಿಎಸ್ ನಂತಹ ಉನ್ನತ ಹುದ್ದೆಯ ಅಧಿಕಾರಿಗಳು ಸರಕಾರದಿಂದಲೇ ಭದ್ರತಾ ಸಿಬ್ಬಂದಿಯನ್ನು ಹೊಂದಿರುತ್ತಾರೆ. ಆದರೆ ಆಥಣಿ ಪಟ್ಟಣದಲ್ಲಿ ಪುರಸಭೆಯ ಮುಖ್ಯಾಧಿಕಾರಿ ಆಶೋಕ ಗುಡಿಮನಿ ಖಾಸಗಿಯಾಗಿ ಅಂಗರಕ್ಷಕನನ್ನು ಹೊಂದಿರುವುದು ಹಲವು ಗುಮಾನಿಗಳು ಸೃಷ್ಟಿಯಾಗಿವೆ. ಪುರಸಭೆ ಕಾರ್ಯಾಲಯದ ಕರ್ತವ್ಯದ ಸುದರ್ಭದಲ್ಲಿ ಮುಖ್ಯಾಧಿಕಾರಿ ಅಶೋಕೆ ಗುಡಿಮನಿ ಅವರು ಕಳೆದ 10 ದಿನ ಗಳಿಂದ ಗನ್ ಮ್ಯಾನ್ ಸಮೇತ ಸರ್ಕಾರಿ ವಾಹನದಲ್ಲಿ ಓಡಾಡುತ್ತಿರುವುದು ಸಾರ್ವಜನಿಕ ವಲಯದಲ್ಲಿ ಚರ್ಚೆಗೆ ಗ್ರಾಸವಾಗಿದ್ದು, ಸರ್ಕಾರಿ ಅಧಿಕಾರಿಯಾಗಿ ಈ ರೀತಿ ಅಂಗರಕ್ಷೆಕನನ್ನು ಹೊಂದುವುದು ಸರಿಯೇ..?, ಈ ರೀತಿ ಖಾಸಗಿಯ ಅಂಗರಕ್ಷಕನನ್ನ ನೇಮಿಸಿಕೊಳ್ಳಲು ಪೌರಾಡಳಿತ ಅನುಮತಿ ನೀಡಿದಿಯೇ..?, ಈ ಅಂಗರಕ್ಷಕನ ವೇತನ ಯಾವ ಮೂಲದಿಂದ ಬರಿಸಲಾಗುತ್ತದೆ..? ಹೀಗೆ ಹತ್ತಾರು ಪ್ರಶ್ನೆಗಳು ಉದ್ಭವಿಸುವುದೆಲ್ಲವೆ, ಸಾರ್ವಜನಿಕ ವಲಯದಲ್ಲಿ ಮತ್ತು ತಾಲೂಕ ಆಡಳಿತ ಒಲಯದಲ್ಲಿ ಬಾರಿ ಚರ್ಚೆಗೆ ಗ್ರಾಸವಾಗಿದೆ.

ಅಶೋಕ ಗುಡಿಮನಿ ಅವರು ಗನ್ ಮ್ಯಾನ್ (ಅಂಗರಕ್ಷಕ)ನೊಂದಿಗೆ ಸರಕಾರಿ ವಾಹನದಲ್ಲಿ ಓಡಾಡುತ್ತಿರುವುದು ಕಂಡು ಬಂದಿದೆ.

ಇದರ ಹಿಂದಿನ ಕಾರಣವೇನು: ಅಥಣಿ ಪುರಸಭೆಯ ಮುಖ್ಯ ಅಧಿಕಾರಿಯಾಗಿ ನೇಮಕಗೊಂಡ ನಂತರ ಅಶೋಕ ಗುಡಿಮನಿ ಅವರು ಸಾರ್ವಜನಿಕ ವಲಯದಲ್ಲಿ ಉತ್ತಮ ಸೇವೆ ಸಲ್ಲಿಸುವುದರ ಜೊತೆಗೆ ಸ್ಥಳೀಯ ಶಾಸಕರಿಂದ ಮತ್ತು ಸಾರ್ವಜನಿಕರಿಂದ ಪ್ರಶಸ್ತಿಗೆ ಪಾತ್ರರಾಗಿದ್ದರು. ಪುರಸಭೆ ವ್ಯಾಪ್ತಿಯಲ್ಲಿನ ಕೆಲವೊಂದು ಜ್ವಲಂತ ಸಮಸ್ಯೆಗಳ ಬಗ್ಗೆ, ಮಾಹಿತಿ ಹಕ್ಕು ಹೋರಾಟಗಾರರಿಗೆ ಸುಯಾದ ಮಾಹಿತಿ ಒದಗಿಸದೆ ಕೆಲವು ಸಾಮಾಜಿಕೆ ಕಾರ್ಯಕರ್ತರ ಕೆಂಗಣ್ಣಿಗೆ ಗುರಿಯಾದರು. ಅಥಣಿ ಪಟ್ಟಣದಲ್ಲಿ ನೂತನವಾಗಿ ನಿರ್ಮಾಣಗೊಂಡ ಸಾರ್ವಜನಿಕ ಶೌಚಾಲಯ ಆರಂಭದ ವಿಚಾರವಾಗಿ, ಸ್ಮಶಾನ ಭೂಮಿ ಹತ್ತಿರ ಅಕ್ರಮವಾಗಿ ನಿರ್ಮಿಸಲಾದ ವಾಣಿಜ್ಯ ಮಳಿಗೆಗಳ ತೆರವು ಕಾರ್ಯಚರಣೆ, ಪುರಸಭೆ ವಾಣಿಜ್ಯ ಮಳಿಗೆಗಳ ಹಂಚಿಕೆ ವಿಚಾರ ಸೇರಿದಂತೆ ಅನೇಕ ಸಂಬಂಧಿಸಿದಂತೆ ಅನೇಕ ಸಮಸ್ಯೆಗಳ ಕುರಿತು ನಡೆದ ಕೆಲವು ಸಾಮಾಜಿಕ ಕಾರ್ಯಕರ್ತರಿಗೆ ಮತ್ತು ಮುಖ್ಯಾಧಿಕಾರಿಗಳ ಮಧ್ಯೆ ವಾದ ವಿವಾದವಾಗಿ ಕೈಮೀರಿ ವಕೀಲರೊಬ್ಬರಿಂದ ಮುಖ್ಯ ಅಧಿಕಾರಿ ಮೇಲೆ ಹಲ್ಲೆಯಾಗಿರುವ ಪ್ರಕರಣ ಕೂಡ ಇತ್ತೀಚಿಗೆ ಜರುಗಿತ್ತು. ಈ ಬಗ್ಗೆ ಆಥಣಿ ಪೊಲೀಸ್ ಠಾಣೆಯಲ್ಲಿ ಪರಸ್ಪರ ದೂರು ದಾಖಲಾಗಿದ್ದವು. ಅಂದಿನಿಂದ ಪುರಸಭೆಯಲ್ಲಿ ಆತಂಕದ ಮಧ್ಯೆ ಕರ್ತವ್ಯ ನಿರ್ವಹಿಸುತ್ತಿರುವ ಮುಖ್ಯಾಧಿಕಾರಿ ಇತ್ತೀಚಿಗೆ ತಾಲೂಕ ಮಟ್ಟದ ಎಸ್ ಸಿ ಎಸ್ ಟಿ ಜನಾಂಗದ ಕುಂದು ಕೊರತೆಗಳ ಸಭೆಗೆ ಗೈರು ಹಾಜರಾಗಿದ್ದರು. ನನಗೆ ಜೀವ ಭಯ ಇರುವುದರಿಂದ ಸಭೆಗೆ ಬರಲು ಆಗುವುದಿಲ್ಲ ಎಂದು ಮುಂಚಿತವಾಗಿ ಲಿಖಿತ ಮನವಿ ಕೊಡ ತಹಸೀಲ್ದಾರ್ ಅವರಿಗೆ ನೀಡಿದ್ದರು ಎನ್ನಲಾಗಿದೆ.

ಕಳೆದ 10 ದಿನದಿಂದ ಪುರಸಭೆಯ ಕರ್ತವ್ಯಕ್ಕೆ ಗುತ್ತಿಗೆ ಪಡೆದಿರುವ ಸರ್ಕಾರಿ ವಾಹನದಲ್ಲಿ ತಮ್ಮ ಖಾಸಗಿ ಅಂಗರಕ್ಷಕನೊಂದಿಗೆ ಮುಖ್ಯಾಧಿಕಾರಿ ಕರ್ತವ್ಯ ನಿರ್ವಹಿಸುತ್ತಿದ್ದಾರೆ. ಇಂತಹ ಬೆಳವಣಿಗೆಯನ್ನು ನೋಡಿ ತಾಲೂಕ ಮಟ್ಟದ ಅಧಿಕಾರಿಗಳು ಕೂಡ ಸಾರ್ವಜನಿಕರ ದಬ್ಬಾಳಿಕೆಯ ಮಧ್ಯೆ ಹೇಗೆ ನೌಕರಿ ಮಾಡುವುದಪ್ಪ.! ಎಂಬ ಆತಂಕ ವ್ಯಕ್ತಪಡಿಸುತ್ತಿದ್ದಾರೆ. ಇನ್ನೊಂದೆಡೆ ಸಾರ್ವಜನಿಕರ ಸಮಸ್ಯೆಗಳಿಗೆ ಸ್ಪಂದಿಸುವ ನಿಟ್ಟಿನಲ್ಲಿ ಜನಸ್ನೇಹಿಯಾಗಿ ಕಾರ್ಯ ನಿರ್ವಹಿಸುವ ಸರಕಾರಿ ಅಧಿಕಾರಿಯೊಬ್ಬರು ಇಂದು ಗನ್ ಮ್ಯಾನ್ ನೇಮಿಸಿಕೊಂಡು ಕರ್ತವ್ಯಕ್ಕೆ ಹಾಜರಾಗುತ್ತಿರುವುದನ್ನು ತಮ್ಮ ಜಲಂತ ಸಮಸ್ಯೆಗಳನ್ನು, ಅಧಿಕಾರಿಗಳ ವಿರುದ್ಧ ಆಕ್ರೋಶ ವ್ಯಕ್ತಪಡಿಸಲು ಸಾರ್ವಜನಿಕರು ಕೂಡ ಆತಂಕ ಪಡುವಂತಾಗಿದೆ. ಒಟ್ಟಾರೆ ಈ ಗನ್ ಮ್ಯಾನ್ ನೇಮಿಸಿಕೊಂಡ ಸುದ್ದಿ ಅಥಣಿ ಪಟ್ಟಣದಲ್ಲಿ ಈಗ ಸದ್ದು ಮಾಡಿದೆ.

> **ನಾನು ಆಥಣಿ ಪುರಸಭೆಯ ಮುಖ್ಯ ಅಧಿಕಾರಿಯಾಗಿ ನೇಮಕಗೊಂಡ ನಂತರ ನಮ್ಮ ಇಲಾಖೆಯ ಇತಿಮಿತಿಯಲ್ಲಿ ಪ್ರಾಮಾಣಿಕ ಸೇವೆ ಸಲ್ಲಿಸುತ್ತಾ ಬಂದಿದ್ದೇನೆ. ಕೆಲವು ಪಟ್ಟಭದ್ರ ಹಿತಾಸಕ್ತಿಗಳು ವಿನಾಕಾರಣ ನನ್ನ ಮೇಲೆ ಆರೋಪ ಮಾಡುತ್ತಾ ನನ್ನ ಹೆಸರಿಗೆ ಕಳಂಕ ತರುವುದು, ತೇಜೋವಧೆ ಮಾಡುತ್ತಿದ್ದಾರೆ. ಈಗಾಗಲೇ ನನ್ನ ಮೇಲೆ ಹಲ್ಲೆ ಆಗಿರುವುದರಿಂದ ಮತ್ತು ನನಗೆ ಪ್ರಾಣ ಬೆದರಿಕೆ ಇರುವುದರಿಂದ ಖಾಸಗಿಯಾಗಿ ಭದ್ರತಾ ಸಿಬ್ಬಂದಿಯನ್ನು ನೇಮಿಸಿಕೊಂಡಿದ್ದೇನೆ.**
> -ಅಶೋಕ ಗುಡಿಮನಿ, ಮುಖ್ಯಾಧಿಕಾರಿ, ಪುರಸಭೆ ಅಥಣಿ

ಸತತ ಓದಿನಿಂದ ಗುರಿ ತಲುಪಲು ಸಾಧ್ಯ

ರಾಮದುರ್ಗ: ವಿದ್ಯಾರ್ಥಿಗಳು ವ್ಯಥಾ ಕಾಲಹರಣ ಮಾಡದೆ ಓದಿನ ಕಡೆಗೆ ಗಮನ ಹರಿಸಿದಲ್ಲಿ ನಿಖರ ಗುರಿ ತಲುಪಲು ಸಾಧ್ಯವಿದೆ. ಆ ದಿಶೆಯಲ್ಲಿ ವಿದ್ಯಾರ್ಥಿಗಳು ಪುಸ್ತಕ ಪ್ರೇಮಿಗಳಾಗಿರಬೇಕೆಂದು ಬ್ಯಾಂಕ್ ಆಫ್ ಬರೋಡಾದ ಸ್ಥಳೀಯ ಶಾಖಾ ವ್ಯವಸ್ಥಾಪಕ ಹನಮಂತ್ರಾಯ ಬಿರಾದಾರ ಕರೆ ನೀಡಿದರು.

ಪಟ್ಟಣದ ಸಿ.ಎಸ್. ಬೆಂಬಳಗಿ ಮಹಾವಿದ್ಯಾಲಯದ ವಾಣಿಜ್ಯ ಸಂಘದ ಹಾಗೂ ಐಕ್ಯೂಎಸಿ ಸಂಯುಕ್ತ ಆಶ್ರಯದಲ್ಲಿ ಶನಿವಾರ ಜರುಗಿದ ವೃತ್ತಿ ಪ್ರೇರಣೆ ಕುರಿತ ಉಪನ್ಯಾಸ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಅವರು ಮಾತನಾಡಿದರು.

ವಿದ್ಯಾರ್ಥಿಗಳು ಮಹಾತ್ಮಾ ಗಾಂಧೀಜಿ, ಡಾ. ಅಂಬೇಡ್ಕರ, ಇಂದಿರಾಗಾಂಧಿ ಅವರ ಆದರ್ಶ ಜೀವನವನ್ನು ಮಾದರಿಯಾಗಿಟ್ಟುಕೊಂಡು ಜೀವನದಲ್ಲಿ ಯಶಸ್ಸು ಸಾಧಿಸಬೇಕು. ಅಲ್ಲದೇ ಉನ್ನತ ವ್ಯಾಸಾಂಗಕ್ಕೆ ಬ್ಯಾಂಕಿನಲ್ಲಿ ಶೈಕ್ಷಣಿಕ ಸಾಲ ಸೌಲಭ್ಯಗಳಿದ್ದು, ವಿದ್ಯಾರ್ಥಿಗಳು ಬ್ಯಾಂಕಿನ ಸಹಕಾರದೊಂದಿಗೆ ಸಾಲ ಪಡೆದು ಉನ್ನತ ಸಾಧನೆ ಮಾಡಿ ಮಹಾವಿದ್ಯಾಲಯದ ಹಾಗೂ ಊರಿನ ಕೀರ್ತಿ ಹೆಚ್ಚಿಸಬೇಕೆಂದು ಕರೆ ನೀಡಿದರು.

ವಿದ್ಯಾರ್ಥಿಗಳು ಬರೆದ ವಿಷನ್ 2024-25 ಕೈಪಿಡಿಯನ್ನು ಗಣ್ಯರು ಬಿಡುಗಡೆಗೊಳಿಸಿದರು.

ಸಮಾರಂಭದ ಅಧ್ಯಕ್ಷತೆ ವಹಿಸಿದ್ದ ವಿದ್ಯಾ ಪ್ರಸಾರಕ ಸಮಿತಿ ಅಧ್ಯಕ್ಷ ಟಿ. ದಾಮೋಧರ ಮಾತನಾಡಿ, ಬಿಕಾಂ ಪದವಿ ನಂತರ ವಿದ್ಯಾರ್ಥಿಗಳು ಉನ್ನತ ಶಿಕ್ಷಣ ಪಡೆದು, ಉನ್ನತ ಮಟ್ಟದ ಸರಕಾರಿ ನೌಕರಿ ಗಿಟ್ಟಿಸಿಕೊಳ್ಳಬೇಕೆಂದು ತಿಳಿಸಿದರು.

ಈ ಸಂದರ್ಭದಲ್ಲಿ ವಿದ್ಯಾರ್ಥಿಗಳು ಬರೆದ ವಿಷನ್ 2024-25 ಕೈಪಿಡಿಯನ್ನು ಗಣ್ಯರು ಬಿಡುಗಡೆಗೊಳಿಸಿದರು. ವಿದ್ಯಾರ್ಥಿನಿಯರಾದ ಶಿವಾನಿ ಲಕ್ಷಟ್ಟಿ, ಸುಷ್ಮಿತಾ ದುಗ್ಗಾನಿ, ಲಕ್ಷ್ಮೀ ರಾಜನಾಳ ತಾವು ರಚಿಸಿದ ಲೇಖನಗಳ ಬಗ್ಗೆ ಅಭಿಪ್ರಾಯ ವ್ಯಕ್ತಪಡಿಸಿದರು.

2023-24ನೇ ಸಾಲಿನಲ್ಲಿ ವಾಣಿಜ್ಯ ವಿಭಾಗದಲ್ಲಿ 100ಕ್ಕೆ 100 ಅಂಕ ಗಳಿಸಿದ ವಿದ್ಯಾರ್ಥಿಗಳನ್ನು ಸತ್ಕರಿಸಿಲಾಯಿತು. ವಾಣಿಜ್ಯ ಸಂಘದ ಕಾರ್ಯಾಧ್ಯಕ್ಷ ಎಂ.ಸಿ. ಹೂಗಾರ, ಐಕ್ಯೂಎಸಿ ಸಂಯೋಜಕ ಎಚ್.ಪಿ. ಹಾಲೊಳ್ಳಿ, ಜಮಖಾನಾ ಉಪಾಧ್ಯಕ್ಷ ಎಸ್.ಐ. ಮಳಗಲಿ, ವಿದ್ಯಾರ್ಥಿ ಪ್ರತಿನಿಧಿ ಕೆ. ಮಲಗನವಿ, ಉಪನ್ಯಾಸಕರಾದ ಎ.ಯು. ಬಸರಗಿ, ಎ.ಜಿ. ಕದಂ, ಎಂ.ಡಿ. ಮೂಡ್ಲವರ ಸೇರಿದಂತೆ ವಿದ್ಯಾರ್ಥಿಗಳು ಉಪಸ್ಥಿತರಿದ್ದರು. ಪ್ರಾಚಾರ್ಯ ಪಿ.ಬಿ. ತೆಗ್ಗಿಹಳ್ಳಿ ಸ್ವಾಗತಿಸಿದರು. ವಾಣಿಜ್ಯ ವಿಭಾಗದ ಮುಖ್ಯಸ್ಥ ಎಂ.ಎನ್. ಭಜಂತ್ರಿ ಪ್ರಾಸ್ತಾವಿಕವಾಗಿ ಮಾತನಾಡಿದರು. ಕು.ಐಶ್ವರ್ಯ ದೊಡ್ಡಮನಿ, ಕೋಮಲ್ ಶಿಂಧೆ ಕಾರ್ಯಕ್ರಮ ನಿರೂಪಿಸಿದರು. ಕು. ಸಾವಿತ್ರಿ ಕಡ್ಡಿ ವಂದಿಸಿದರು.

ಶ್ರೀಮಾರುತಿ ದೇವರ ರಥೋತ್ಸವ

ಬೈಲಹೊಂಗಲ: ತಾಲೂಕಿನ ನಾವಲಗಟ್ಟಿ ಗ್ರಾಮದ ಶ್ರೀ ಮಾರುತಿ ದೇವರ ಜಾತ್ರಾ ಮಹೋತ್ಸವದ ಅಂಗವಾಗಿ ರಥೋತ್ಸವ ಶನಿವಾರ ಶ್ರದ್ಧಾ ಭಕ್ತಿಯಿಂದ ನೆರವೇರಿತು.

ಯರಗೊಪ್ಪದ ಲೀಲಾಮಠದ ಶ್ರೀ ನಿತ್ಯಾನಂದ ಸ್ವಾಮೀಜಿ ಸಾನಿಧ್ಯದಲ್ಲಿ ಜರುಗಿದ ರಥೋತ್ಸವದಲ್ಲಿ ಸಹಸ್ರಾರು ಸಂಖ್ಯೆಯಲ್ಲಿ ಭಕ್ತರು ಪಾಲ್ಗೊಂಡಿದ್ದರು. ಯುವ ಸಮುದಾಯ ಕೇಸರಿ ಬಣ್ಣದಲ್ಲಿ ಮಿಂದೆದ್ದರು. ರಥೋತ್ಸವದ ಮಾರ್ಗದುದ್ದಕ್ಕೂ ಪವನಸುತನ ನಾಮಸ್ಮರಣೆ ಹಾಗೂ ಉದ್ಘೋಷ ಮೊಳಗಿದವು.

ಶ್ರೀ ನಿತ್ಯಾನಂದ ಸ್ವಾಮಿಗಳು ಮಾತನಾಡಿ, ಇಂದಿನ ತಂತ್ರಜ್ಞಾನದ ಸದ್ಬಳಕೆಗಿಂತ ಕೆಲವು ದುರ್ಬಳಕೆ ಮಾಡುತ್ತಿದ್ದಾರೆ. ಇದರಿಂದಾಗಿ ಸಮಾಜದಲ್ಲಿ ಶಾಂತಿ ಸುವ್ಯವಸ್ಥೆ ನೆಲೆಯೂರಲು ಕಷ್ಟವಾಗುತ್ತದೆ. ಆದ್ದರಿಂದ ಯುವ ಸಮುದಾಯ ಧಾರ್ಮಿಕ ಆಚಾರ ವಿಚಾರಗಳನ್ನು ಅಳವಡಿಸಿಕೊಂಡು ಉತ್ತಮ ಸಮಾಜ ನಿರ್ಮಾಣಕ್ಕೆ ಕೈಜೋಡಿಸಬೇಕು ಎಂದರು.

ಶತಮಾನದ ಇತಿಹಾಸಯುಳ್ಳ ಭಾರತೀಯ ಸಂಸ್ಕೃತಿ ಹಾಗೂ ಸಂಪ್ರದಾಯಗಳನ್ನು ಕಡೆಗಣಿ, ಇತ್ತಿಚೆಗೆ ಪಾಶ್ಚಿಮಾತ್ಯ ಸಂಸ್ಕೃತಿಯ ಬೆನ್ನು ಬಿದ್ದಿರುವ ಯುವ ಸಮುದಾಯ ನಮ್ಮತನದ ಜೊತೆಗೆ ನಮ್ಮ ಸಂಪ್ರದಾಯವನ್ನು ಉಳಿಸಿ ಬೆಳೆಸಿಕೊಂಡು ಮುನ್ನಡೆಯಬೇಕು ಎಂದು ತಿಳಿಹೇಳಿದರು.

ಶ್ರೀಮಾರುತಿ ದೇವರ ರಥೋತ್ಸವದಲ್ಲಿ ಯುವ ಸಮುದಾಯ ಕೇಸರಿ ಬಣ್ಣದಲ್ಲಿ ಮಿಂದೆದ್ದರು.

ಕಳ್ಳನ ಬಂಧನ: 4 ಲಕ್ಷ ನಗದು,ಚಿನ್ನಾಭರಣ ವಶ

ಬೈಲಹೊಂಗಲ ಪೊಲೀಸ ಠಾಣಾ ವ್ಯಾಪ್ತಿಯಲ್ಲಿ ಮನೆ ಕಳ್ಳತನ ಮಾಡಿದ ಆರೋಪಿಯನ್ನು ಬಂಧಿಸುವಲ್ಲಿ ಪೊಲೀಸರು ಯಶಸ್ವಿಯಾಗಿದ್ದಾರೆ.

ಬೈಲಹೊಂಗಲ: ಬೈಲಹೊಂಗಲ ಪೊಲೀಸ ಠಾಣಾ ವ್ಯಾಪ್ತಿಯಲ್ಲಿ ಮನೆ ಕಳ್ಳತನ ಮಾಡಿದ ಆರೋಪಿಯನ್ನು ಪೊಲೀಸರು ಬಂಧಿಸಿ ಆತನಿಂದ ರೂ. 4 ಲಕ್ಷ ಮೌಲ್ಯದ ಬಂಗಾರ, ಬೆಳ್ಳಿಯ ಆಭರಣ ಹಾಗೂ ನಗದು ವಶಪಡಿಸಿಕೊಂಡಿದ್ದಾರೆ.

ಸವದತ್ತಿ ತಾಲೂಕಿನ ಗುರ್ಲಹೊಸೂರ ಗ್ರಾಮದ ಅಭಿ ಮಹಾದೇವ ಗೊಂಧಳಿ (20) ಬಂಧಿತ ಆರೋಪಿ. ಪಟ್ಟಣದ ಶಿವಾನಂದ ಭಾರತಿ ನಗರ, ಶಿವಬಸವ ನಗರ ಹಾಗೂ ಬೈಲವಾಡ ಗ್ರಾಮದ ಮೂರು ಮನೆ ಕಳ್ಳತನವಾಗಿತ್ತು. ಈ ಕುರಿತು ದೂರು ದಾಖಲಾಗಿತ್ತು.ಆರೋಪಿತನಿಂದ ರೂ. 4 ಲಕ್ಷ ಮೌಲ್ಯದ ಬಂಗಾರ, ಬೆಳ್ಳಿ ಆಭರಣಗಳು ಹಾಗೂ ನಗದು ವಶಪಡಿಸಿಕೊಂಡಿದ್ದು ಆರೋಪಿತನನ್ನು ನ್ಯಾಯಾಂಗ ಬಂಧನಕ್ಕೆ ಒಳಪಡಿಸಲಾಗಿದೆ. ಆರೋಪಿತನ ಪತ್ತೆ ಮಾಡಲು ಜಿಲ್ಲಾ ಎಸ್ಪಿ ಡಾ ಭೀಮಾಶಂಕರ ಗುಳೇದ, ಹೆಚ್ಚುವರಿ ಎಸ್ಪಿ ಶೃತಿ ಕೆ, ಆರ್ ಬಿ ಬಸರಗಿ, ಡಿ ವೈ ಎಸ್ ಪಿ ರವಿ ನಾಯ್ಕ, ಪಿ ಐ ಪಂಚಾಕ್ಷರಿ ಸಾಲಿಮಠ ಅವರ ಮಾರ್ಗದರ್ಶನದಲ್ಲಿ ಪಿ ಎಸ್ ಐ ಮುರನಾಳ ನೇತೃತ್ವದಲ್ಲಿ ತಂಡ ರಚಿಸಲಾಗಿತ್ತು.ವೈಜ್ಞಾನಿಕ ತನಿಖಾ ವಿಧಾನ ಬಳಸಿಕೊಂಡು ಆರೋಪಿತನನ್ನು ವಶಕ್ಕೆ ಪಡೆದು ನ್ಯಾಯಾಂಗ ಬಂಧನಕ್ಕೆ ಒಳಪಡಿಸಲಾಗಿದೆ.

ಸಿಬ್ಬಂದಿಗಳಾದ ಶಂಕರ ಮೆಣಸಿನಕಾಯಿ, ಜೆ ಆರ್ ಮಳಗಲಿ, ಎಂ ಎಸ್ ದೇಶನೂರ, ಚೇತನ ಬುದ್ನಿ, ಕೆ ಎಫ್ ವಕ್ಕುಂದ, ಸಚಿನ ಪಾಟೀಲ, ವಿನೋದ ಠಕ್ಕನ್ನವರ,ಸೋಮು ಕರವೀರನವರ, ಮಂಜುನಾಥ ಕರಿಗಾರ ಇದ್ದರು. ಪೊಲೀಸರ ಈ ಕಾರ್ಯಕ್ಕೆ ಎಸ್ಪಿ ಶ್ಲಾಘನೆ ವ್ಯಕ್ತಪಡಿಸಿದ್ದಾರೆ.

ಜನಿವಾರ: ಎಸಗಿದವರ ವಿರುದ್ಧ ಕ್ರಮಕ್ಕೆ ಆಗ್ರಹ

ಅಥಣಿ: ಸಿ.ಇ.ಟಿ ಪರೀಕ್ಷೆ ಸಮಯದಲ್ಲಿ ಜನೀವಾರಕ್ಕೆ ಅಪಚಾರ ಎಸಗಿರುವ ಅಧಿಕಾರಿಗಳ ವಿರುದ್ಧ ಕ್ರಮ ಜರುಗಿಸಿ ಶಾಶ್ವತವಾಗಿ ಅಮಾನತುಗೊಳಿಸಬೇಕು ಎಂದು ಆಗ್ರಹಿಸಿ ಅಥಣಿಯ ಜನವಾರಧಾರಿಗಳು ತಹಸೀಲ್ದಾರರ ಮೂಲಕ ಮನವಿ ಸಲ್ಲಿಸಿ ರಾಜ್ಯ ಸರಕಾರವನ್ನು ಆಗ್ರಹಿಸಿದರು.

ಅಖಿಲ ಕರ್ನಾಟಕ ಬ್ರಾಹ್ಮಣ ಸಮಾಜ, ಜೈನ್ ದಿಗಂಬರ ಸಮಾಜ ಸಂಘಟನೆ, ಅಖಿಲ ಕರ್ನಾಟಕ ವಿಶ್ವಕರ್ಮ ಸಮಾಜ ಸಂಘಟನೆ, ಮರಾಠಾ ಕ್ಷತ್ರೀಯ ಸಮಾಜ ಸಂಘಟನೆ, ಗುಜರಾತಿ ಬ್ರಾಹ್ಮಣ ಸಮಾಜ ಸಂಘಟನೆ, ಆರ್ಯ ವೈಶ್ಯ ಸಮಾಜ, ಸವೀತಾ ಸಮಾಜ ಸಂಘಟನೆಯ ನೂರಾರು ಜನ ಬೈಕ್ ರ‍್ಯಾಲಿ ಮೂಲಕ ತೆರಳಿ ತಹಸೀಲ್ದಾರ ಸಿದರಾಯ ಭೋಸಗಿ ಇವರಿಗೆ ಮನವಿ ಸಲ್ಲಿಸಿದರು.

ಈ ಸಂದರ್ಭದಲ್ಲಿ ಬ್ರಾಹ್ಮಣ ಸಮಾಜದ ಹಿರಿಯ ಮುಖಂಡ ಅರವಿಂದರಾವ್ ದೇಶಪಾಂಡೆ ಮಾತನಾಡಿ ಕಳೆದ ಏಪ್ರಿಲ್ 17ರಂದು ಬೀದರ ಮತ್ತು ಶಿವಮೊಗ್ಗ ಜಿಲ್ಲೆಯ ತೀರ್ಥಹಳ್ಳಿಯ ಸಿ.ಇ.ಟಿ ಪರೀಕ್ಷಾ ಕೇಂದ್ರಗಳಲ್ಲಿ ಕೆ.ಇ.ಎ ನಿರ್ದೇಶನ ಇಲ್ಲದಿದ್ದರೂ ಕೂಡ ಅಧಿಕಾರಿಗಳು ದುರುದ್ದೇಶ ಪೂರ್ವಕವಾಗಿ ವಿದ್ಯಾರ್ಥಿಗಳಿಂದ ಜನಿವಾರ ತೆಗೆಸಿದ್ದಾರೆ. ಅಲ್ಲದೆ ಇದಕ್ಕೆ ಒಪ್ಪದ ವಿದ್ಯಾರ್ಥಿಗಳ ಜನಿವಾರವನ್ನು ಕತ್ತರಿಸುವ ಮೂಲಕ ಧಾರ್ಮಿಕ ನಂಬಿಕೆಗೆ ಧಕ್ಕೆ ತಂದಿದ್ದು, ಇಂತಹ ಅಧಿಕಾರಿಗಳ ಮೇಲೆ ಕ್ರಮ ಜರುಗಿಸಬೇಕು ಎಂದು ಎಂದು ಸರ್ಕಾರವನ್ನ ಒತ್ತಾಯಿಸಿದರು. ಹಿರಿಯ ನ್ಯಾಯವಾದಿ ಆರ್ ಎನ್ ಸಿದ್ಧಾಂತಿ, ಜೈನ ಸಮಾಜದ ಮುಖಂಡ ಹಾಗೂ ನಿವೃತ್ತ ಇಂಜಿನಿಯರ್ ಅರುಣ ಯಲಗುದ್ರಿ, ಮಾತನಾಡಿದರು.

ಸ್ಥಳೀಯ ಶ್ರೀ ರಾಘವೇಂದ್ರ ಸ್ವಾಮಿಗಳ ಮಠದಲ್ಲಿ ಸಮಾವೇಶಗೊಂಡು ಅಲ್ಲಿಂದ ಬೈಕ್ ರ‍್ಯಾಲಿ ಮೂಲಕ ಹೊರಟು ಶ್ರೀ ಬಸವೇಶ್ವರ ವೃತ್ತ, ಶಿವಯೋಗಿ ಮತ್ತು ಡಾ.ಅಂಬೇಡ್ಕರ್ ವೃತ್ತದ ಮೂಲಕ ಮಿನಿ ವಿಧಾನ ಸೌಧ ತಲುಪಿ ಪ್ರತಿಭಟನೆ ನಡೆಸಿ ಮನವಿ ಸಲ್ಲಿಸಲಾಯಿತು.

ಈ ಸಂದರ್ಭದಲ್ಲಿ ಬ್ರಾಹ್ಮಣ ಸಮಾಜದ ನ್ಯಾಯವಾದಿ ಆರ್.ಎನ್.ಸಿದ್ಧಾಂತಿ, ಧುರೀಣರಾದ ಉಮೇಶರಾವ ಬಂಟೋಡಕರ, ಅರವಿಂದರಾವ್ ದೇಶಪಾಂಡೆ, ಪಂ.ಬಿಂದು ಮಾಧವ ಜೋಶಿ, ಶ್ರೀನಿವಾಸ ಜೋಶಿ, ಜೈನ್ ಸಮಾಜದ ಅರುಣ ಯಲಗುದ್ರಿ, ವಿಶ್ವಕರ್ಮ ಸಮಾಜದ ಭೀಮರಾವ ಬಡಿಗೇರ, ಮರಾಠಾ ಸಮಾಜದ ರವಿ ದೇಸಾಯಿ, ವೈಶ್ಯ ಸಮಾಜದ ಉದಯ ಗುಂಡಾ, ಗುಜರಾತಿ ಸನಾಜದ ಭರತ ಸೋಮಯ್ಯ, ರಘೋತ್ತಮ ಕಟ್ಟಿ, ಶ್ರೀರಾಮ ಕಟ್ಟಿ, ಅನೀಲ ದೇಶಪಾಂಡೆ (ಹಿಡಕಲ್), ಎನ್.ಕೆ.ಪಾಟೀಲ, ಗುಂಡು ಇಜಾರೆ, ಭರಮು ಬಡಿಗೇರ, ಅವಿನಾಶ ಜಾಧವ, ಸೌರಭ ಮಾಶಾಳ, ರಾಜು ಪಾಟೀಲ, ಭಾವೀನ್ ಸೋಮಯ್ಯ, ಲಕ್ಷ್ಮಣ ರಾಮದಾಸಿ, ವೆಂಕಟೇಶ ದೇಶಪಾಂಡೆ, ಮಾಧವ ಕೌಲಗುಡ್ಡ, ಸುಧೀಂದ್ರ ಬಾದರಾಯಣಿ, ಚೈತನ್ಯ ಮಳಗೀಕರ, ಆದೀಪ ಮಾಶಾಳ, ಸಚೀನ್ ಕುಲಕರ್ಣಿ, ರಾಜು ಕರ್ಪೂರಶೆಟ್ಟಿ ಸೇರಿದಂತೆ ಅನೇಕರು ಪ್ರತಿಭಟನೆಯಲ್ಲಿ ಭಾಗವಹಿಸಿದ್ದರು.

ಜನಿವಾರ ಪ್ರಕರಣಕ್ಕೆ ಸಂಬಂಧಿಸಿದಂತೆ ತಪ್ಪಿತಸ್ಥರ ವಿರುದ್ಧ ಶಿಸ್ತು ಕ್ರಮಕ್ಕೆ ಆಗ್ರಹಿಸಿ ತಹಸೀಲ್ದಾರಗೆ ಮನವಿ ಸಲ್ಲಿಸಿದರು.

ವಚನ ದರ್ಶನ ಗ್ರಂಥ ಬಿಡುಗಡೆ

ಬೆಳಗಾವಿ; ಜಾಗತಿಕ ಲಿಂಗಾಯಿತ ಮಹಾಸಭೆ, ಲಿಂಗಾಯತ ಮಠಾಧಿಪತಿಗಳ ಒಕ್ಕೂಟ, ರಾಷ್ಟ್ರೀಯ ಬಸವದಳ, ಲಿಂಗಾಯತ ಸಂಘಟನೆ ಸೇರಿದಂತೆ ಬಸವಪರ ಸಂಘಟನೆಗಳ ಸಯುಕ್ತ ಆಶ್ರಯದಲ್ಲಿ ಏಪ್ರಿಲ್ 22ರಂದು ಶಿವಬಸವ ನಗರದ ಎಸ್. ಜಿ. ಬಾಳೆಕುಂದ್ರಿ ತಾಂತ್ರಿಕ ಮಹಾವಿದ್ಯಾಲಯದ ಶಿವಕುಮಾರ ಸಂಬರಗಿಮಠ ಸಭಾಭವನದಲ್ಲಿ ವಚನದರ್ಶನ ಮಿಥ್ಯ, ಸತ್ಯ ಗ್ರಂಥ ಲೋಕಾರ್ಪಣೆ ಗೊಳ್ಳಲಿದೆ ಎಂದು ಜಾಗತಿಕ ಲಿಂಗಾಯತ ಮಹಾಸಭೆಯ ಜಿಲ್ಲಾಧ್ಯಕ್ಷ ಬಸವರಾಜ ರೊಟ್ಟಿ ತಿಳಿಸಿದ್ದಾರೆ. ಗದುಗಿನ ಯಡಿಯೂರು ತೋಂಟದಾರ್ಯ ಸಂಸ್ಥಾನ ಮಠದ ಜಗದ್ಗುರು ಡಾ. ತೋಂಟದ ಸಿದ್ದರಾಮ ಮಹಾಸ್ವಾಮಿಗಳು ಸಾನಿದ್ಯ ವಹಿಸಿ ಗ್ರಂಥ ಬಿಡುಗಡೆ ಮಾಡಲಿದ್ದು, ಸಮಾರಂಭದ ಸಮ್ಮುಖವನ್ನು ನಾಗನೂರು ರುದ್ರಾಕ್ಷಿ ಮಠದ ಡಾ. ಅಲ್ಲಮ ಪ್ರಭು ಮಹಾಸ್ವಾಮಿಗಳು ವಹಿಸಲಿದ್ದಾರೆ. ಹಂದಿಗುಂದ ಸಿದ್ದೇಶ್ವರ ಮಠದ ಶಿವಾನಂದ ಮಹಾಸ್ವಾಮಿಗಳು ನೇತೃತ್ವ ವಹಿಸಲಿದ್ದು, ಜಾಗತಿಕ ಲಿಂಗಾಯತ ಮಹಾ ಸಭೆಯ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ, ನಿವೃತ್ತ ಐಎಎಸ್ ಅಧಿಕಾರಿ ಶಿವಾನಂದ ಜಾಮದಾರ್ ಪ್ರಾಸ್ತಾವಿಕ ನುಡಿಗಳನ್ನು ಆಡಲ್ಲಿದ್ದಾರೆ. ನಿವೃತ್ತ ಪ್ರಾಧ್ಯಾಪಕ ಪ್ರೊ. ಕೆ.ಎಸ್. ಕೌಜಲಗಿ ಗ್ರಂಥ ಪರಿಚಯ ಮಾಡಲಿದ್ದು, ರಾಷ್ಟ್ರೀಯ ಬಸವ ದಳದ ಅಧ್ಯಕ್ಷ ಅಶೋಕ ಬೆಂಡಿಗೇರಿ, ಲಿಂಗಾಯತ ಸಂಘಟನೆ ಅಧ್ಯಕ್ಷ ಈರಣ್ಣ ದೇಯಣ್ಣವರ, , ಬಸವ ಅಭಿಮಾನಿಗಳು ಪಾಲ್ಗೊಳ್ಳಲಿದ್ದಾರೆ ಎಂದು ಬಸವರಾಜ ರೊಟ್ಟಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ

ಸಾಮೂಹಿಕ ವಿವಾಹ,ದುಂದು ವೆಚ್ಚಕ್ಕೆ ಬ್ರೇಕ್

ಯರಗಟ್ಟಿ: ನವ ದಂಪತಿ ಆದರ್ಶ ಗುಣಗಳನ್ನು ಅಳವಡಿಸಿಕೊಂಡು ಪರಸ್ಪರ ಹೊಂದಾಣಿಕೆಯಿಂದ ಜೀವನ ನಡೆಸಬೇಕು ಎಂದು ಮುರಗೋಡ ದುರದುಂಡೇಶ್ವರ ಮಠದ ನೀಲಕಂಠ ಸ್ವಾಮೀಜಿ ಹೇಳಿದರು.

ಸಮೀಪದ ಆಲದಕಟ್ಟಿ ಕೆ.ಎಂ ಗ್ರಾಮದಲ್ಲಿ ಬುಧವಾರ ಶಿವಯೋಗೀಶ್ವರ ಜಾತ್ರಾ ಮಹೋತ್ಸವದ ಅಂಗವಾಗಿ ಹಮ್ಮಿಕೊಂಡಿದ್ದ ಸರ್ವಧರ್ಮ ಸಾಮೂಹಿಕ ವಿವಾಹ ಕಾರ್ಯಕ್ರಮದಲ್ಲಿ ವಧು ವರರಿಗೆ ಆಶೀರ್ವದಿಸಿ ಆಶಿರ್ವಚನ ನೀಡಿದ ಅವರು, ಪ್ರತಿಯೊಬ್ಬರು ತಮ್ಮ ಮಕ್ಕಳಿಗೆ ಬಾಲ್ಯದಲ್ಲಿ ನೀಡುವ ಸಂಸ್ಕಾರವು ಅವರ ಬಾಳಿನಲ್ಲಿ ಮಹತ್ತರ ಪಾತ್ರವಹಿಸುತ್ತವೆ. ಪ್ರತಿಯೊಬ್ಬರಿಗೂ ಸಂಸ್ಕಾರ ಬಹಳ ಮುಖ್ಯವಾಗಿರುತ್ತದೆ. ಇಂದು ಮದುವೆಯಾಗುತ್ತಿರುವ ಎಲ್ಲ ನವದಂಪತಿಗಳಿಗೂ ಸಹ ಸಂಸ್ಕಾರವಂತರಾಗಿ ಜೀವನ ನಡೆಸಬೇಕು ಎಂದರು.

ಮುರಗೋಡ ವಲಯ ಅಂಗನವಾಡಿ ಮೇಲ್ವಿಚಾರಕಿ ರಾಜೇಶ್ವರಿ ತೆರಲಿ ಮಾತನಾಡಿ, ಗಂಡಾಗಲಿ, ಹೆಣ್ಣಾಗಲಿ ಶಿಕ್ಷಣಕ್ಕೆ ಆದ್ಯತೆ ನೀಡಬೇಕು 18 ವರ್ಷ ನಂತರವೇ ಹೆಣ್ಣು ಮಕ್ಕಳಿಗೆ ಮದುವೆ ಮಾಡಬೇಕು ಎಂದರು.

ಹಾಲು ಉತ್ಪಾದಕರ ಸಹಕಾರ ಸಂಘದ ಅಧ್ಯಕ್ಷ ಎಸ್.ಎಸ್.ಮುಗಳಿ ಮಾತನಾಡಿ, ಇಂದಿನ ದುಬಾರಿ ದಿನ ಮಾನಗಳಲ್ಲಿ ಬಡವರಿಗೆ, ಕಾರ್ಮಿಕರಿಗೆ ಮದುವೆಯ ಸಾಲದ ಹೊರೆಯನ್ನು ಕಡಿಮೆ ಮಾಡುವ ಜತೆಗೆ ಮದುವೆ ಹೆಸರಿನಲ್ಲಿ ದುಂದುವೆಚ್ಚಕ್ಕೆ ಕಡಿವಾಣ ಹಾಕುವದನ್ನು ನಿಲ್ಲಿಸಿದ್ದಾರೆ. ಇಂತಹ ವಿಹಾಹಗಳಿಗೆ ಎಲ್ಲರೂ ತನು, ಮನ, ಧನದಿಂದ ಸಹಾಯ, ಸಹಕಾರ ನೀಡುವ ಮೂಲಕ ಬೆಂಬಲಿಸಬೇಕು ಎಂದರು.

ಮುನವಳ್ಳಿ ಸೋಮಶೆಖರ ಮಠದ ಮುರುಘೇಂದ್ರ ಸ್ವಾಮೀಜಿ ಸಾನ್ನಿದ್ಯ ವಹಿಸಿದ್ದರು, ವೇದಮೂರ್ತಿ ಚಂದ್ರಯ್ಯ ಹಿರೇಮಠ, ಬಸಲಿಂಗಯ್ಯ ಹಿರೇಮಠ, ವಿಶಾಲ ಹಿರೇಮಠ, ಮಲ್ಲಿಕಾರ್ಜುನ ಹಿರೇಮಠ, ಬಿಜೆಪಿ ಮುಖಂಡ ಮಡಿವಾಳಪ್ಪ ಬಿದರಗಡ್ಡಿ, ನಾಗಪ್ಪ ಚೌಡಪ್ಪನವರ, ಅನೀಲ ವಂಟಮುರಿ, ರಾಜು ಗುರನಗೌಡ್ರ, ರಾಯಪ್ಪ ರಾಯಣ್ಣವರ, ಸಿದ್ದು ಕಡಕೋಳ, ಸೋಮನಿಂಗಪ್ಪ ಚವಡಪ್ಪನವರ, ವಿಠ್ಠಲ ಗುರಣಗೌಡ್ರ, ನಾಗಪ್ಪ ಚವಡಪ್ಪನವರ, ಅಜ್ಜಪ್ಪ ಚಡಪ್ಪನವರ, ಕಿರಣ ಹಿರೇಮಠ, ನಿಂಗನಗೌಡ ಸಣ್ಣಗೌಡ್ರ, ಈರಪ್ಪ ಬೆನಕಟ್ಟಿ ಸೇರಿದಂತೆ ಇತರರು ಇದ್ದರು.

ನಾಳೆ ಧಾರ್ಮಿಕ ಕಾರ್ಯಕ್ರಮ

ಯರಗಟ್ಟಿ: ಸಮೀಪದ ಕೋಟೂರ-ಶಿವಾಪುರ ಗ್ರಾಮದ ಉಜ್ಜಯಿನಿ ಶಾಖಾ ಹಿರೇಮಠದ ಶ್ರೀಚರಂತಯ್ಯ ದೇವರ ಗುರು ಪಟ್ಟಾಧಿಕಾರ ಮಹೋತ್ಸವ ವಿವಿಧ ಧಾರ್ಮಿಕ ಕಾರ್ಯಕ್ರಮಗಳು ಉಜ್ಜಯಿನಿ ಜಗದ್ಗುರು ಸಿದ್ದಲಿಂಗರಾಜ ದೇಶಿಕೇಂದ್ರ ಶಿವಚಾರ ಭಗವತ್ಪಾದರ ಸಾನ್ನಿಧ್ಯದಲ್ಲಿ ಏ.21ರಿಂದ ಮೇ 12ರ ವರೆಗೆ ಜರುಗಲಿವೆ. ಉಜ್ಜಯಿನಿ ಶ್ರೀಗಳ ಅಡ್ಡಪಲ್ಲಕ್ಕಿ ಮಹೋತ್ಸವ ಹಾಗೂ 1008 ಕುಂಭಮೇಳ, ಅಯ್ಯಾಚಾರ, ಪುರಾಣ ಪ್ರವಚನ, ಧರ್ಮ ಸಭೆಗಳು ನಡೆಯಲಿವೆ. ನಿರಂತರ 21 ದಿನಗಳ ಕಾಲ ಪ್ರವಚನ ಕಾರ್ಯಕ್ರಮವನ್ನು ಗದಗ ಜಿಲ್ಲೆ ಅಂತೂರ-ಬೆಂತೂರ ಬೂದಿಸ್ವಾಮಿ ಮಠದ ಶ್ರೀಕುಮಾರ ದೇವರು ನಡೆಸಿಕೊಡಲಿದ್ದಾರೆ. ಕಾರ್ಯಕ್ರಮದ ದಿವ್ಯ ಸಾನಿಧ್ಯ ಹಾಗೂ ಉದ್ಘಾಟಕರಾಗಿ ಹುಬ್ಬಳ್ಳಿ ಮೂರುಸಾವಿರ ಮಠದ ಜಗದ್ಗುರು ಗುರುಸಿದ್ಧ ರಾಜಯೋಗೀಂದ್ರ ಮಹಾಸ್ವಾಮಿಗಳು, ನೇತೃತ್ವವನ್ನು ಮುನವಳಿಯ ಮುರಘಂದ್ರ ಮಹಾಸ್ವಾಮಿಗಳು, ಭಾಗೋಜಿಕೊಪ್ಪದ ಡಾ. ಶಿವಲಿಂಗ ಮುರುಘರಾಜೇಂದ್ರ ಶ್ರೀಗಳು, ರೇಣುಕ ಶಿವಯೋಗಿ ಶಿವಾಚಾರ್ಯ ಶ್ರೀಗಳು, ರೇವಣಸಿದ್ಧ ಶಿವಾಚಾರ್ಯ ಶ್ರೀಗಳು, ಚಂದ್ರಶೇಖರ ಶಿವಾಚಾರ್ಯ ಶ್ರೀಗಳು, ಮಹೇಶ್ವರ ಶಿವಾಚಾರ್ಯ ಶ್ರೀಗಳು, ಉಮೇಶ್ವರ ಶಿವಾಚಾರ್ಯ ಶ್ರೀಗಳು, ಸ್ವಾಮಿಗಳು, ಗಂಗಾದರ ಸ್ವಾಮಿಜಿ ಆಗಮಿಸುವರೆಂದು ಭಾಗೋಜಿಕೊಪ್ಪದ ಡಾ. ಶಿವಲಿಂಗ ಮುರುಘರಾಜೇಂದ್ರ ಸ್ವಾಮೀಜಿ ತಿಳಿಸಿದ್ದಾರೆ.' ಚರಂತಯ್ಯ ದೇವರು, ಬಸಯ್ಯ ಹಿರೇಮಠ, ಮಹಾಂತೇಶ ತೋಟಗಿ, ಶಿಂಗಯ್ಯ ಮಠಪತಿ, ಶಿವಾನಂದ ಕಟ್ಟಿಮನಿ ಇದ್ದರು.

ಸಮಾಚಾರ ಸಣ್ಣದಲ್ಲ

ಕೆರೂರಲ್ಲಿ 3 ದಿನ ನೀರು ಸರಬರಾಜು ಇರಲ್ಲ

ಕೆರೂರ: ಪಟ್ಟಣಕ್ಕೆ ಕುಡಿಯುವ ನೀರು ಸರಬರಾಜು ಮಾಡುವ ಆಲಮಟ್ಟಿ ಜಾಕಾವೆಲ್ ದಲ್ಲಿರುವ ದ್ಯುತ್ ಟ್ರಾನ್ಸಾ ರ್ಮರ್ (ಟಿಸಿ) ಮತ್ತು ಪಂಪ ದುರಸ್ತಿ (ಸುಟ್ಟಿದ್ದು) ಪಟ್ಟಣಕ್ಕೆ 3 ದಿನಗಳ ಕಾಲ ನೀರು ಸರಬರಾಜು ಇರುವುದಿಲ್ಲ,ಪಟ್ಟಣದಲ್ಲಿರುವ ಎಲ್ಲ ಬೋರ್ವೆಲಗಳು ಸುಸ್ಥಿತಿಯಲ್ಲಿದ್ದು ಅವುಗಳ ನೀರು ಬಳಕೆ ಮಾಡಬಹುದಾಗಿದೆ ಸಾರ್ವಜನಿಕರು ಸಹಕರಿಸಲು ಪಪಂ ಮುಖ್ಯಧಿಕಾರಿ ರಮೇಶ ಮಾಡಬಾಳ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಗೀತ ಗಾಯನ ಸ್ಪರ್ಧೆ 24ರಂದು

ಬಾಗಲಕೋಟೆ: ಜಿಲ್ಲಾಡಳಿತ ಹಾಗೂ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ಸಹಯೋಗದಲ್ಲಿ ಏ. 24 ರಂದು ಜರಗುವ ಡಾ. ರಾಜಕುಮಾರ ಅವರ ಜನ್ಮದಿನದ ಅಂಗವಾಗಿ ಡಾ. ರಾಜ್‌ಕುಮಾರ ಅವರ ಚಲನಚಿತ್ರ ಗೀತೆಗಳ ಗಾಯನ ಸ್ಪರ್ಧೆ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ. ಅಂದು ಸಂಜೆ 5 ಗಂಟೆಗೆ ನವನಗರದ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಬಯಲು ರಂಗಮಂದಿರದಲ್ಲಿ ಸ್ಪರ್ಧೆ ನಡೆಯಲಿದ್ದು, ಸ್ಪರ್ಧೆಗೆ ವಯಸ್ಸಿನ ಮಿತಿ ಇರುವುದಿಲ್ಲ. ಸ್ಪರ್ಧೆಯಲ್ಲಿ ಭಾಗವಹಿಸಲು ಇಚ್ಛಿಸುವವರು ಏ.22 ರಂದು ಸಂಜೆ 5ರ ಒಳಗಾಗಿ ಮೊ ನಂ: 94808-41239 ಹಾಗೂ 87222-04023ಗೆ ಕರೆ ಮಾಡಿ ಹೆಸರನ್ನು ನೋಂದಾಯಿಸಿಕೊಳ್ಳಬಹುದಾಗಿದೆ ಎಂದು ಜಿಲ್ಲಾ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ತಿಳಿಸಿದರು.

ಧರ್ಮಸ್ಥಳ ಸಂಘದಿಂದ ಸೌಲಭ್ಯ ವಿತರಣೆ

ಬಾಗಲಕೋಟೆ: ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯಿಂದ ಹುನಗುಂದ ತಾಲೂಕಿನ ಅಮೀನಗಡ ಪಟ್ಟಣದಲ್ಲಿ ಫಲಾನುಭವಿ ಗಳಿಗೆ ನಾನಾ ಸೌಲಭ್ಯಗಳ ವಿತರಣೆ ಕಾರ್ಯಕ್ರಮ ನಡೆಯಿತು. ಯೋಜನೆಯ ಜಿಲ್ಲಾ ನಿರ್ದೇಶಕ ಚನ್ನಕೇ ಶವ, ಸ್ವಸಹಾಯ ಸಂಘದ ಸದಸ್ಯರಿಗೆ ಯೋಜನೆಯ ಸೌಲಭ್ಯಗಳ ಮಂಜೂರಾತಿ ಪತ್ರ ವಿತರಿಸಿ, ಸೌಲಭ್ಯಗಳು ಹಾಗೂ ಯೋಜನೆ ನಡೆದು ಬಂದ ದಾರಿಯ ಬಗ್ಗೆ ವಿವರಿಸಿದರು. ಕೆಎಂಎಫ್ ನಿರ್ದೇಶಕ ಸಂಗಣ್ಣ ಹಂಡಿ, ಜಿಲ್ಲಾ ಜನಜಾಗೃತಿ ಸದಸ್ಯ ಕೆ.ಎಸ್. ರಾಮದುರ್ಗ, ಶಿಕ್ಷಕ ಎಂ.ಎಂ. ಚೌಕಿಮಠ, ನೀರಾವರಿ ಇಲಾಖೆ ನಿವೃತ್ತ ಅಕಾರಿ ಹಣಮಂತ ಹಗೇದಾಳ, ಮಲ್ಲೇಶಪ್ಪ ಹೊದ್ಲೂರ, ಸಂತೋಷ, ಪವಿತ್ರಾ, ವಿಜಯಲಕ್ಷ್ಮಿ ತತ್ರಾಣಿ, ಇಂದಿರಮ್ಮ ದೇಸಾಯಿ, ಸ್ವಸಹಾಯ ಸಂಘದ ಸದಸ್ಯರು, ಸೇವಾ ಪ್ರತಿನಿಧಿಗಳು ಇದ್ದರು.

50 ಸಾವಿರ ಮಾಲೀಕರಿಗೆ ನೀಡಿ ಮಾನವಿಯತೆ ಮೆರೆದ ಗ್ರಾಮಸ್ಥರು

ಜೋಳದ ಚೀಲದಲ್ಲಿ 50 ಸಾವಿರ ನಗದು!

ಬಾದಾಮಿ: ಅಜ್ಜಿಯೊಬ್ಬಳ ಅಂತ್ಯ ಸಂಸ್ಕಾರದ ಸಲುವಾಗಿ ದಾನ ಮಾಡಲು ಜೋಳ ಹಂಚಲು ಖರೀದಿ ಮಾಡಿ ತಂದಿದ್ದ ಜೋಳದ ಚೀಲದಲ್ಲಿ 50 ಸಾವಿರ ಹಣ ಪತ್ತೆಯಾಗಿ ಸಾರ್ವಜನಿಕರ ಅಚ್ಚರಿಗೆ ಕಾರಣವಾದ ಘಟನೆ ನಡೆದಿದೆ.

ಹೌದು ಬಾದಾಮಿ ತಾಲೂಕಿನ ಬಾದಾಮಿ ತಾಲೂಕಿನ ನಂದಿಕೇಶ್ವರ ಗ್ರಾಮದಲ್ಲಿ ಸಾಬವ್ವ ಆದಿಯಪ್ಪ ಮಡ್ಡಿ ಎಂಬ ಶತಾಯುಷಿ ಗುರುವಾರ ನಿಧನ ಹೊಂದಿದ್ದರು ಅವರ ಅಂತ್ಯಕ್ರಿಯೆಗೆ ದಾನ ಮಾಡಲು ಕೆಂದೂರ ಗ್ರಾಮದ ಆನಂದ ಬಡಿಗೇರ್ ಅವರ ಮನೆಯಿಂದ ಒಂದು ಚೀಲ ಜೋಳವನ್ನು ಖರೀದಿ ಮಾಡಿ ತಂದು ಹಂಚುವಾಗ ಆ ಚೀಲದಲ್ಲಿ 50ಸಾವಿರ ನಗದು ಕಂಡು ಬಂದಿದ್ದು ಅಲ್ಲಿದ್ದ ಜನರಿಗೆ ಅಚ್ಚರಿಗೆ ಕಾರಣವಾಗಿತ್ತು.

ಮೃತರ ಸುಪುತ್ರ ದ್ಯಾವಣ್ಣ ಮಡ್ಡಿ ಹಾಗೂ ಗ್ರಾಮದ ಹಿರಿಯರು ಚರ್ಚಿಸಿ 50 ಸಾವಿರ ಹಣವನ್ನು ಜೋಳ ಕರಿದಿ ಮಾಡಿದವರಿಗೆ ಮುಟ್ಟಿಸಲು ಹೇಳಿದರು, ಆ ಹಣವನ್ನು ನಂದಿಕೇಶ್ವರ ಗ್ರಾಮದ ಹಿರಿಯರು, ಯುವಕರು ಕೆಂದೂರ ಗ್ರಾಮದ ಆನಂದ ಬಡಿಗೇರ್ ಅವರಿಗೆ ನೀಡಲಾಯಿತು.

ಈ ಸಂದರ್ಭದಲ್ಲಿ ಗ್ರಾಮದ ಹಿರಿಯರಾದ ಭೀಮಪ್ಪ ಹೊಲ್ಲೂರ, ತಿಪ್ಪಣ್ಣ ಹರದೊಳ್ಳಿ, ಗೌಡಪ್ಪ ಕೇರಿಹೊಲದ, ಜಗದೀಶ್ ಬೂದಿಹಾಳ, ಹನುಮಂತ ಹಂಸನೂರ, ಮಲ್ಲಯ್ಯ ಮುಪ್ಪಿನನನ್ನವರ ಸೇರಿ ಜೋಳದ ಚೀಲದ ಮಾಲಕರಿಗೆ ಅವರಿಗೆ

ತಾಲೂಕಿನ ಬಾದಾಮಿ ತಾಲೂಕಿನ ನಂದಿಕೇಶ್ವರ ಗ್ರಾಮದಲ್ಲಿ ಜೋಳದ ಚೀಲದಲ್ಲಿ ಪತ್ತೆಯಾದ ಹಣವನ್ನು ಚೀಲದ ಮಾಲೀಕರಿಗೆ ನಂದಿಕೇಶ್ವರ ಗ್ರಾಮಸ್ಥರು ನೀಡುತ್ತಿರುವುದು.

50ಸಾವಿರ ಹಣ ಮುಟ್ಟಿಸುವ ಮೂಲಕ ಮಾನವೀಯತರಯನ್ನು ಮರೆದಿದ್ದಾರೆ.

ದ್ವಿಚಕ್ರ ವಾಹನಗಳ ಮೇಲೆ ದಾಳಿ ಮಾಡುವ ನಾಯಿಗಳು | ಏಕಾಏಕಿ ಜನರ ಮೇಲೆ ನುಗ್ಗಿ ಬರುವ ದನಗಳು | ಕಡಿವಾಣಕ್ಕೆ ಜನರ ಆಗ್ರಹ

ಬೀದಿ ನಾಯಿಗಳ ಉಪಟಳ

ಬಾಗಲಕೋಟೆ: ನಗರ ಸೇರಿದಂತೆ ವಿದ್ಯಾಗಿರಿ ಹಾಗೂ ನವನಗರದಲ್ಲಿ ಬೀದಿ ನಾಯಿ ಹಾವಳಿಯಿಂದ ದ್ವಿಚಕ್ರ ವಾಹನ ಸವಾರರು ಕೈಯಲ್ಲಿ ಜೀವ ಹಿಡಿದು ಓಡಾಡುವ ಸ್ಥಿತಿ ನಿರ್ಮಾಣವಾಗಿದೆ.

ವಿದ್ಯಾಗಿರಿ ಹಾಗೂ ನವನಗರದ ವಿವಿಧ ರಸ್ತೆಗಳಲ್ಲಿ 8 ರಿಂದ 1 ನಾಯಿಗಳು ಸೇರಿ ದ್ವಿಚಕ್ರ ವಾಹನಗಳಿಗೆ ಬೆನ್ನು ಹತ್ತುತ್ತಿವೆ. ಇದರಿಂದ ಜನರು ನಾಯಿಗಳು ಇರುವುದನ್ನು ಗೊತ್ತಾದರೆ ರಸ್ತೆ ಬದಲಿಸಿ ಓಡಾಡುವಂತಾಗಿದೆ.

ಇನ್ನೂ ಹಳೇ ಮಾರುಕಟ್ಟೆ ಹತ್ತಿರ ಸಹ ಬೀದಿ ನಾಯಿಗಳ ಗುಂಪು ಹೋಗುವ ಬರುವ ಜನರತ್ತ ಬೊಗಳುವುದರಿಂದ ಇತ್ತ ಹಾಯಲು ಜನರು ಯೋಚಿಸುವಂತಾಗಿದೆ. ನಾಯಿಗಳು ದ್ವಿಚಕ್ರ ವಾಹನ ಸವಾರರು ಅಟ್ಟಿಸಿಕೊಂಡು ಹೋಗಿ ವಾಹನ ಸವಾರ ಆಯ ತಪ್ಪಿ ಬಿದ್ದಿರುವ ಘಟನೆಗಳು ಅನೇಕ.

ವಿದ್ಯಾಗಿರಿಯ ಪ್ರತಿ ಬೀದಿಗಳಲ್ಲೂ ನಾಯಿಗಳ ಹಾವಳಿ ಹೆಚ್ಚಾಗಿದೆ. ಅದರಲ್ಲಿ ರಾತ್ರಿ ಸಮಯದಲ್ಲಿ ಮಾತ್ರ ಬೀದಿ ನಾಯಿಗಳಿರುವ ರಸ್ತೆಗಳಲ್ಲಿ ತೆರಳಲು ಸಾರ್ವಜನಿಕರು ಹಿಂದೇಟು ಹಾಕುತ್ತಿದ್ದಾರೆ. ನಾಯಿಗಳು ಇರದ ರಸ್ತೆಗಳ ಮೂಲಕ ಮನೆಗೆ ತೆರಳಬೇಕಾದ ಸ್ಥಿತಿ ಜನರಿಗೆ ಬಂದಿದೆ.

ಬಾಗಲಕೋಟೆಯ ಹಳೇ ಮಾರುಕಟ್ಟೆ ಪ್ರದೇಶದಲ್ಲಿ ರಸ್ತೆಯಲ್ಲಿ ನಿಂತಿರುವ ಬೀದಿ ನಾಯಿಗಳು.

ಇನ್ನೂ ನವನಗರದ ವಿವಿಧ ಸೆಕ್ಟರ್‌ಗಳಲ್ಲಿ 10 ರಿಂದ 2 ನಾಯಿಗಳ ಅಡ್ಡೆ ಮಾಡಿಕೊಂಡಿವೆ. ನವನಗರದಿಂದ ಬೆಳ್ಳಂ ಬೆಳಗ್ಗೆ ಜಿಮ್, ಟ್ಯೂಷನ್, ಹಾಲು ಮೊಸರು ತರಲು ಓಡಾಡುವ ಜನರತ್ತ ಓಡಿ ಬರುವ ನಾಯಿಗಳಿಂದ ತಪ್ಪಿಸಿಕೊಂಡು ತಮ್ಮ ತಮ್ಮ ಕೆಲಸಕ್ಕೆ ಹೋಗುವುದೇ ದುಸ್ಥರವಾಗಿದೆ.

ಟ್ಯೂಷನ್‌ಗೆ ತೆರಳುವ ಮಕ್ಕಳು ಕೆಲವೊಬ್ಬರು ನಾಯಿಗಳನ್ನು ನೋಡಿ ನಿಂತು ಹೋದರೆ ಕೆಲವೊಬ್ಬ ಮಕ್ಕಳು ಅವುಗಳತ್ತ ಕಲ್ಲು ಎಸೆದು ನಾಯಿಗಳಿಂದ ಕಡಿಸಿಕೊಂಡಿದ್ದಾರೆ. ಬೀದಿ ನಾಯಿಗಳ ಉಪಟಳ ನಗರದಲ್ಲಿ ದಿನದಿಂದ ದಿನಕ್ಕೆ ಹೆಚ್ಚಾಗುತ್ತಿದೆ.

ಬೆಳಗ್ಗೆ ವಾಕಿಂಗ್ ಹೋಗಲು ಬಿಡದ ನಾಯಿಗಳಿಂದ ಸಾಕಾಗಿದೆ. ದಿನದಿಂದ ದಿನಕ್ಕೆ ಬೀದಿ ನಾಯಿಗಳ ಸಂಖ್ಯೆಯಲ್ಲಿ ಏರಿಕೆ ಕಾಣುತ್ತಿದೆ. ಇದರಿಂದ ಪ್ರತಿ ಏರಿಯಾಗಳಲ್ಲೂ ನಾಯಿಗಳ ತೊಂದರೆ ಹೆಚ್ಚಾಗಿದೆ. ನಗರಸಭೆಯ ಅಧಿಕಾರಿಗಳು ನಾಯಿಗಳ ಸಂಖ್ಯೆ ಕಡಿಮೆ ಮಾಡುವ ಜತೆಗೆ ಅವುಗಳಿಗೆ ಸಂತಾನಹರಣ ಚಿಕಿತ್ಸೆ ಮಾಡುವ ಮೂಲಕ ಇವುಗಳ ಸಂಖ್ಯೆ ಹೆಚ್ಚಾಗದಂತೆ ಕ್ರಮವಹಿಸಬೇಕು ಎಂದು ನಿವಾಸಿ ವೆಂಕಟೇಶ ಲಿಂಗಣ್ಣವರ ಒತ್ತಾಯಿಸಿದ್ದಾರೆ.

ಎಲ್ಲೆಂದರೆ ಬಿಡಾಡಿ ದನಗಳ ಉಪಟಳ

ವಿದ್ಯಾಗಿರಿ ಸೇರಿದಂತೆ ಹಳೇ ಮಾರುಕಟ್ಟೆ ಪ್ರದೇಶಲ್ಲಿ ಬಿಡಾಡಿಗಳ ದನಗಳ ಉಪಟಳ ಹೆಚ್ಚಾಗಿದೆ. ವಿದ್ಯಾಗಿರಿಯಲ್ಲಿ ಕಳೆದ ವಾರ ರಸ್ತೆ ಬದಿಯಲ್ಲಿ ನಿಂತಿದ್ದ ಇಬ್ಬರು ದಂಪತಿಗಳ ಏಕಾಏಕಿ ಬಿಡಾಡಿಗಳು ನುಗ್ಗಿ ಬಂದ ಪರಿಣಾಮ ನಾಲ್ವರು ಕೆಳಗೆ ಬಿದ್ದು ಏಟು ಮಾಡಿಕೊಂಡರೇ ಪಕ್ಕದಲ್ಲಿ ನಿಂತಿದ್ದವರ ಮೇಲೂ ಗೂಳಿ ಎರಗಿ ಅವರ ಕೈ ಕಾಲುಗಳಿಂದ ರಕ್ತ ಸುರಿದಿದೆ. ನಗರದಲ್ಲಿ ದಿನದಿಂದ ದಿನಕ್ಕೆ ಬಿಡಾಡಿ ದನಗಳ ಹಾಗೂ ಬೀದಿ ಬದಿ ನಾಯಿಗಳ ಕಾಟ ಹೆಚ್ಚಾಗಿದ್ದು, ಸಂಬಂಧ ಪಟ್ಟ ಅಧಿಕಾರಿಗಳು ಇವುಗಳನ್ನಿ ನಿಯಂತ್ರಿಸಲು ಕ್ರಮ ಕೈಗೊಳ್ಳಬೇಕು ಎಂದು ನವನಗರ ನಿವಾಸಿ ಹನಮಂತ ಪಾಟೀಲ ಆಗ್ರಹಿಸಿದ್ದಾರೆ.

ಶ್ರೀ ಭಗೀರಥ ಮಹರ್ಷಿ ಭಾವಚಿತ್ರ ಮೆರವಣಿಗೆ

ಭಗೀರಥ ಮಹರ್ಷಿ ಜನ್ಮದಿನದ ಅಂಗವಾಗಿ ಗುಳೇದಗುಡ್ಡದಲ್ಲಿ ಶ್ರೀ ಭಗೀರಥ ಮಹರ್ಷಿಯ ಭಾವಚಿತ್ರದ ಮೆರವಣಿಗೆ ನಡೆಯಿತು.

ಗುಳೇದಗುಡ್ಡ: ರಾಜಋಷಿ ಶ್ರೀಭಗೀರಥ ಮಹರ್ಷಿಗಳ ಜಯಂತ್ಯುತ್ಸವದ ಅಂಗವಾಗಿ ಶುಕ್ರವಾರ ಭಗೀರಥ ಮಹರ್ಷಿಗಳ ಭಾವಚಿತ್ರ ಮೆರವಣಿಗೆ ಡೊಳ್ಳುನ ಮೇಳ, ಕುಂಭ ಮೇಳದ ಮೂಲಕ ನಗರದಲ್ಲಿ ಸಂಭ್ರಮದ ನಡೆಯಿತು.

ಸಮೀಪದ ಪರ್ವತಿ ಗ್ರಾಮದಿಂದ ಭಾವಚಿತ್ರ ಮೆರವಣಿಗೆ ಪ್ರಾರಂಭಗೊಂಡು ನಗರದ ಹಾದಿಬಸವೇಶ್ವರ ದೇವಸ್ಥಾನ, ಬನ್ನಿಕಟ್ಟಿ, ಸರಾಪ ಬಜಾರ, ಕಂಠಿಪೇಟೆ, ಗಚ್ಚಿನಕಟ್ಟಿ, ಚೌಬಜಾರ, ಅರಳಿಕಟ್ಟಿ, ಪರಸಭೆ, ಭಾರತ ಮಾರ್ಕೆಟ್ ಮೂಲಕ ಹಾಯ್ದು ಗ್ರಾಮಕ್ಕೆ ತಲುಪಿತು. ಬಳಿಕ ಗ್ರಾಮದಲ್ಲಿ ಅನ್ನ ಸಂತರ್ಪಣೆ ನಡೆಯಿತು.

ಮೆರವಣಿಗೆಯಲ್ಲಿ ಗ್ಯಾನಪ್ಪ ಹಾವಡಿ, ಗಂಗಾಧರ ಆಸಂಗಿ, ಮಳಿಯಪ್ಪ ಹಾವಡಿ, ಮರಿಯಪ್ಪ ತೋಗುಣಸಿ, ಮುದಕಪ್ಪ ನರಿ, ಸತ್ಯಪ್ಪ ಜೋಗಿನ, ಸನ್ನೆಪ್ಪ ಡುಮ್ಮಳ್ಳಿ, ಬಸನಗೌಡ ಗೌಡ್ರ, ಯಮನೂರ ತೋಗುಣಸಿ, ತಿರುಪತಿ ಗಾಜಿ, ಪರಶುರಾಮ ಜೋಗಿನ, ಅರ್ಜುನ ಹೊಸಮನಿ, ಆಸಂಗೆಪ್ಪ ಆಸಂಗಿ, ಮಲ್ಲೇಶ ಜಟ್ರಿ, ನಿಂಗಪ್ಪ ಗಾಜಿ, ಸಕ್ಕುಬಾಯಿ ಜೋಗಿನ, ಭಾಗ್ಯಶ್ರೀ ಹಾವಡಿ, ಮಂಜುಳಾ ಮುಸಿಗೇರಿ, ಬಸವ್ವ ಚಿಲ್ಲಾಪೂರ, ಸಮಾಜದಬಾಂಧವರು ಸೇರಿದಂತೆ ಗ್ರಾಮಸ್ಥರು ಇದ್ದರು.

ರಾಜ್ಯದಲ್ಲಿ ಮುಂದುವರಿದ ಜನಿ 'ವಾರ್' ಜಟಾಪಟಿ

ಜನಿವಾರ ಪ್ರಕರಣ ಖಂಡಿಸಿ ಅಧಿಕಾರಿಗಳ ವಿರುದ್ಧ ಆಕ್ರೋಶ । ಬ್ರಾಹ್ಮಣ ಸಮಾಜದ ಸಂಘಟನೆಗಳಿಂದ ಬೃಹತ್ ಪ್ರತಿಭಟನಾ ರ್ಯಾಲಿ

ಬೆಂಗಳೂರು: ಸಿಇಟಿ ಪರೀಕ್ಷೆ ವೇಳೆ ಜನಿವಾರ ತೆಗೆಸಿರುವ ಹಾಗೂ ತೆಗೆಸಲು ಪ್ರಯತ್ನಿಸಿರುವ ವಿಷಯ ಇದೀಗ ಭಾರಿ ವಿವಾದಕ್ಕೆ ಕಾರಣವಾಗಿದ್ದು, ಕೇವಲ ಬ್ರಾಹ್ಮಣ ಸಮುದಾಯ ಮಾತ್ರವಲ್ಲದೇ ಹಲವು ಸಮುದಾಯದವರು ಅಧಿಕಾರಿಗಳ ನಡೆಯನ್ನು ಖಂಡಿಸಿದ್ದಾರೆ. ಶನಿವಾರ ರಾಜ್ಯದ ವಿವಿಧ ಭಾಗದಲ್ಲಿ ಈ ವಿಷಯಕ್ಕೆ ಸಂಬಂಧಿಸಿದಂತೆ ಪ್ರತಿಭಟನೆ ನಡೆದಿದ್ದರೆ, ಬಿಜೆಪಿ ನಾಯಕರು ಈ ವಿಷಯದಲ್ಲಿ ಸ್ಪಷ್ಟ ಮಾರ್ಗಸೂಚಿ ರೂಪಿಸುವುದು ಸೂಕ್ತ ಎಂದು ಆಗ್ರಹಿಸಿದ್ದಾರೆ. ಇಡೀ ದಿನ ನಡೆದ ಗೊಂದಲದ ಸಮಗ್ರ ಚಿತ್ರಣ ಇಲ್ಲಿದೆ.

ಚಾಮರಾಜನಗರ: ಶಿವಮೊಗ್ಗ, ಬೀದರ್ ಹಾಗೂ ಬೆಂಗಳೂರಿನ ಸಿಇಟಿ ಪರೀಕ್ಷೆ ಕೇಂದ್ರಗಳಲ್ಲಿ ಜನಿವಾರ ತೆಗೆದು ಪರೀಕ್ಷೆಗೆ ಬರುವಂತೆ ವಿದ್ಯಾರ್ಥಿಗಳಿಗೆ ಮಾನಸಿಕ ಕಿರುಕುಳ ನೀಡಿ ಜಾತಿ ನಿಂದನೆ ಮಾಡಿದ ಪರೀಕ್ಷಾ ಕೇಂದ್ರದ ಅಧಿಕಾರಿಗಳಿಗೆ ಉಗ್ರ ಶಿಕ್ಷೆಯಾಗಬೇಕೆಂದು ಒತ್ತಾಯಿಸಿ ನಗರದಲ್ಲಿ ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ, ಜೈನ ಸಮಾಜ, ಜಟ್ಟಿ ಸಮಾಜದ ವತಿಯಿಂದ ಪ್ರತಿಭಟನೆ ನಡೆಸಿ, ಮನವಿ ಸಲ್ಲಿಸಲಾಯಿತು. ಜಿಲ್ಲಾಡಳಿತ ಭವನದ ಮುಂಭಾಗ ಜಿಲ್ಲಾ ಬ್ರಾಹ್ಮಣ ಸಮಾಜದ ಅಧ್ಯಕ್ಷ ಜಿ.ಎಂ. ಹೆಗಡೆ ಹಾಗೂ ಜಿಲ್ಲಾ ಪ್ರತಿನಿಧಿ ಬಾಲಸುಬ್ರಹ್ಮಣ್ಯ ಅವರ ನೇತೃತ್ವದಲ್ಲಿ ಸಮಾವೇಶಗೊಂಡ ಸಮಾಜ ಬಂಧುಗಳು ಕೆಲ ಕಾಲ ಧರಣಿ ನಡೆಸಿದರು.

ಹಿಂದೂ ಧಾರ್ಮಿಕ ಭಾವನೆಗೆ ಧಕ್ಕೆ

ಶಿವಮೊಗ್ಗ: ಸಿಇಟಿ ಪರೀಕ್ಷೆಯಲ್ಲಿ ವಿದ್ಯಾರ್ಥಿಗಳ ಧಾರ್ಮಿಕ ಸಂಕೇತಗಳನ್ನು ಬಲವಂತವಾಗಿ ತೆಗೆಸಿರುವುದನ್ನು ಖಂಡಿಸಿ ರಾಷ್ಟ್ರಭಕ್ತರ ಬಳಗ ಶನಿವಾರ ಕೆ.ಈ.ಕಾಂತೇಶ್ ನೇತೃತ್ವದಲ್ಲಿ ಜಿಲ್ಲಾಧಿಕಾರಿಗಳಿಗೆ ಮನವಿ ಸಲ್ಲಿಸಿದರು. ಇತ್ತೀಚೆಗೆ ನಡೆದ ಸಿಇಟಿ ಪರೀಕ್ಷೆಯ ವೇಳೆ ಶಿವಮೊಗ್ಗದ ಪರೀಕ್ಷಾ ಕೇಂದ್ರಗಳಲ್ಲಿ ಹಾಗೂ ರಾಜ್ಯದ ಕೆಲವು ಕಡೆ ವಿದ್ಯಾರ್ಥಿಗಳ ತಪಾಸಣೆ ವೇಳೆ ಅವರು ಧರಿಸಿದ್ದ ಜನಿವಾರ, ಕಾಶಿದಾರ, ಶಿವದಾರ, ರುದ್ರಾಕ್ಷಿ ಹಾಗೂ ಇನ್ನಿತರ ಧಾರ್ಮಿಕ ಸಂಕೇತವುಳ್ಳ ವಸ್ತುಗಳನ್ನು ಸರಕಾರದಿಂದ ನಿಯೋಜನೆಗೊಂಡ ಅಧಿಕಾರಿಗಳು ತೆಗೆಸಿದ್ದಾರೆ. ಹಿಂದೂಗಳ ಧಾರ್ಮಿಕ ಭಾವನೆ ಹಾಗೂ ನಂಬಿಕೆಗೆ ಧಕ್ಕೆ ಬರುವ ಹಾಗೆ ಕೆಲವು ಅಧಿಕಾರಿಗಳ ನಡೆ ಖಂಡನಾರ್ಹ. ಮುಂದಿನ ದಿನಗಳಲ್ಲಿ ಈ ರೀತಿಯ ಅಚಾತುರ್ಯಗಳು ನಡೆಯದಂತೆ ಕ್ರಮ ವಹಿಸಬೇಕು ಎಂದು ಮನವಿಯಲ್ಲಿ ತಿಳಿಸಲಾಗಿದೆ.

ಜನಿವಾರ ಪ್ರಕರಣ ಸಿಡಿದೆದ್ದ ಬ್ರಾಹ್ಮಣರು

ಕೆಂಭಾವಿ: ರಾಜ್ಯದಲ್ಲಿ ಗುರುವಾರ ನಡೆದ ಸಿಇಟಿ ಪರೀಕ್ಷಾ ವೇಳೆಯಲ್ಲಿ ಬ್ರಾಹ್ಮಣ ವಿದ್ಯಾರ್ಥಿಯ ಜನಿವಾರ ಹರಿದು ಅವಮಾನಗೊಳಿಸಿದ್ದನ್ನು ಖಂಡಿಸಿ ಪಟ್ಟಣದಲ್ಲಿ ಶನಿವಾರ ಜಯಸತ್ಯಪ್ರಮೋದ ಸೇವಾ ಸಂಘದ ನೇತೃತ್ವದಲ್ಲಿ ವಿಪ್ರ ಸಮಾಜ ಹಾಗೂ ವಿಶ್ವಕರ್ಮ ಸಮಾಜದವರು ಬೃಹತ್ ಪ್ರತಿಭಟನೆ ನಡೆಸಿದರು. ಇಲ್ಲಿನ ಉತ್ತರಾಧಿ ಮಠದ ಮುಂದೆ ಒಗ್ಗೂಡಿದ ಸಮಾಜದ ಅನೇಕರು ಕೃತ್ಯವೆಸಗಿದ ಅಧಿಕಾರಿಗಳ ಹಾಗೂ ಸಿಇಟಿ ಪರೀಕ್ಷಾ ಪ್ರಾಧಿಕಾರದ ವಿರುದ್ಧ ಕಿಡಿಕಾರಿದರು.

ವಿಪ್ರ ಸಮಾಜದಿಂದ ಪ್ರತಿಭಟನೆ

ವಿಜಯಪುರ: ಸಿಇಟಿ ಪರೀಕ್ಷೆಯಲ್ಲಿ ವಿಪ್ರ ಸಮಾಜದ ವಿದ್ಯಾರ್ಥಿಗಳಿಗೆ ಪವಿತ್ರ ಜನಿವಾರ ತೆಗೆಸಿರುವ ಕ್ರಮ ಖಂಡಿಸಿ ಹಾಗೂ ತಪ್ಪಿತಸ್ಥರ ಮೇಲೆ ಕ್ರಮಕ್ಕೆ ಒತ್ತಾಯಿಸಿ ಅಖಿಲ ಭಾರತೀಯ ಬ್ರಾಹ್ಮಣ ಮಹಾಸಂಘ- ವಿವಿಧ ಬ್ರಾಹ್ಮಣ ಸಂಘಟನೆಗಳು ಜಂಟಿಯಾಗಿ ಪ್ರತಿಭಟನೆ ನಡೆಸಿದವು. ಅಖಿಲ ಭಾರತೀಯ ಬ್ರಾಹ್ಮಣ ಮಹಾ ಸಂಘದ ರಾಷ್ಟ್ರೀಯ ಘಟಕದ ಅಧ್ಯಕ್ಷ ಗೋವಿಂದ ಕುಲಕರ್ಣಿ ಮಾತನಾಡಿ, ವಿಪ್ರ ಸಮಾಜವು ರಾಷ್ಟ್ರದ ಅಭಿವೃದ್ಧಿಗಾಗಿ ಶ್ರಮಿಸುವ ಸಾತ್ವಿಕ ಸಮುದಾಯವಾಗಿದ್ದು, ಬ್ರಾಹ್ಮಣ ಸಮಾಜದ ಮೇಲೆ ಸಾರ್ವಜನಿಕವಾಗಿ ಅವಹೇಳನಕಾರಿಯಾಗುವಂತ ಅನೇಕ ಘಟನೆಗಳು ಆಗಾಗ ನಡೆಯುತ್ತಿವೆ ಎಂದು ಆಕ್ರೋಶ ಹೊರ ಹಾಕಿದರು.

ಸಿಇಟಿ ಪರೀಕ್ಷೆಯಲ್ಲಿ ನಡೆದ ಜನಿವಾರ ಪ್ರಕರಣ ಖಂಡಿಸಿ ಬೀದರ್‌ನಲ್ಲಿ ಜಿಲ್ಲಾ ಬ್ರಾಹ್ಮಣ ಸಮಾಜದ ಸಂಘಟನೆಗಳಿಂದ ಬೃಹತ್ ಪ್ರತಿಭಟನಾ ರ್ಯಾಲಿ ನಡೆಯಿತು.

ಸಂಘಟಿತ ಪ್ರತಿಭಟನೆ ಅಗತ್ಯ

ಗೋಕರ್ಣ: ಬೀದರ್‌ನಲ್ಲಿ ಜನಿವಾರದ ಕಾರಣಕ್ಕಾಗಿ ವಿದ್ಯಾರ್ಥಿಗೆ ಸಿಇಟಿ ಪರೀಕ್ಷೆ ಬರೆಯಲು ಅವಕಾಶ ನೀಡದ ಘಟನೆ ಮತ್ತು ಶಿವಮೊಗ್ಗದಲ್ಲಿ ಜನಿವಾರ ತುಂಡರಿಸಿದ ಘಟನೆ ತೀರಾ ವಿಷಾದನೀಯ; ಈ ದುರ್ವರ್ತನೆಯನ್ನು ಸಮಸ್ತ ಸಮಾಜ ಪ್ರತಿಭಟಿಸಬೇಕು ಎಂದು ರಾಮಚಂದ್ರಾಪುರ ಮಠದ ಶ್ರೀ ರಾಘವೇಶ್ವರ ಭಾರತೀ ಸ್ವಾಮೀಜಿ ಕರೆ ನೀಡಿದ್ದಾರೆ. ಅಧಿಕಾರಿಗಳ ಈ ವರ್ತನೆಯ ಹಿಂದೆ ದ್ವೇಷ, ಜಾತಿದ್ವೇಷ, ಒಂದು ಜಾತಿಯನ್ನು ಸಂಪೂರ್ಣ ತುಳಿದು ಬಿಡಬೇಕು ಎನ್ನುವ ಭಾವ ಕಾಣಿಸುತ್ತಿದೆ. ಪರೀಕ್ಷೆಗಳು ಮಕ್ಕಳ ಹಣೆಬರಹವನ್ನು ನಿರ್ಧರಿಸುವಂಥದ್ದು. ವಿದ್ಯಾರ್ಥಿಗಳು ಪರೀಕ್ಷೆಯ ಮಾನಸಿಕ ಒತ್ತಡದಲ್ಲಿರುವಾಗ ಅಧಿಕಾರಿಗಳು ಕ್ರೌರ್ಯ ಮೆರೆದಿರುವುದು ದಬ್ಬಾಳಿಕೆ ನಡೆಸಿರುವುದು ಖಂಡನೀಯ ಎಂದು ಅಸಮಾಧಾನವ್ಯಕ್ತಪಡಿಸಿದ್ದಾರೆ. ಜನಿವಾರ ಕೀಳುವಾಗ ಮನಸ್ಸಿಗೆ ಎಂಥ ನೋವಾಗುತ್ತದೆ ಎನ್ನುವುದನ್ನು ಅರ್ಥ ಮಾಡಿಕೊಳ್ಳಬೇಕು. ಬ್ರಾಹ್ಮಣರು ಇದನ್ನು ಸಹಿಸಬಾರದು. ಇದನ್ನು ಇಲ್ಲಿಗೇ ಬಿಟ್ಟರೆ ದೇಶದಲ್ಲಿ ಬದುಕಲೂ ಸಾಧ್ಯವಿಲ್ಲದ ಪರಿಸ್ಥಿತಿ ನಿರ್ಮಾಣವಾಗಬಹುದು. ಈ ಕೃತ್ಯವನ್ನು ಬ್ರಾಹ್ಮಣರು ಸಂಘಟಿತರಾಗಿ ಪ್ರತಿಭಟಿಸುವುದು ಅಗತ್ಯ ಮಾತ್ರವಲ್ಲ; ಅನಿವಾರ್ಯವೂ ಹೌದು. ಇದು ಬ್ರಾಹ್ಮಣರಿಗಷ್ಟೇ ಸೀಮಿತವಲ್ಲ; ಬೇರೆಯವರೂ ಜನಿವಾರವನ್ನು ಗೌರವದಿಂದ ಧಾರಣೆ ಮಾಡುತ್ತಾರೆ. ಲಿಂಗಾಯಿತರು ಕೂಡಾ ಲಿಂಗವನ್ನು ಧರಿಸುತ್ತಾರೆ. ಅದನ್ನೂ ಇಂಥದ್ದೇ ಸೂತ್ರದಿಂದ ಧರಿಸಲಾಗುತ್ತಿದೆ. ಇದೇ ಪರಿಸ್ಥಿತಿ ಮುಂದುವರಿದರೆ ಇಡೀ ಸಮಾಜಕ್ಕೆ ಅಪಾಯ ಕಾದಿದೆ ಎಂದು ಹೇಳಿದ್ದಾರೆ.

ಯಾರು ಮಾಡಿದ್ದಾರೆ ಅವರ ವಿರುದ್ಧ ಕಠಿಣ ಕ್ರಮ ಕೈಗೊಳ್ಳುತ್ತೇವೆ. ಅದು ಅವನ ವೈಯಕ್ತಿಕ ಮನೋಭಾವ. ಒಂದು ಧರ್ಮ, ಜಾತಿ ಭಾವನೆ ಧಕ್ಕೆ ಸರಿಯಲ್ಲ. ವಿದ್ಯಾರ್ಥಿಗೆ ನ್ಯಾಯ ದೊರಕಿಸಲು ಸಿಎಂ, ಶಿಕ್ಷಣ ಸಚಿವರ ಜತೆಗೆ ಮಾತನಾಡುವೆ.

- ಎಂ.ಬಿ.ಪಾಟೀಲ ಸಚಿವ

ಅಧಿಕಾರಿ ಮೇಲೆ ಎಫ್‌ಐಆರ್

ಜನಿವಾರ ಹಾಕಿದ್ದಕ್ಕೆ ಸಿಇಟಿ ಪರೀಕ್ಷೆಗೆ ಕೂರಿಸದ ಪ್ರಕರಣದಲ್ಲಿ ಸಿಇಟಿ ಪರೀಕ್ಷೆಯ ಅಧಿಕಾರಿ ಮೇಲೆ ಶಿವಮೊಗ್ಗ ಜಿಲ್ಲೆಯ ದೊಡ್ಡಪೇಟೆ ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸಿದೆ. ಏಪ್ರಿಲ್ 16 ರಂದು ನಡೆದಿದ್ದ ಸಿಇಟಿ ಪರೀಕ್ಷೆಯಲ್ಲಿ ಬ್ರಾಹ್ಮಣ ವಿದ್ಯಾರ್ಥಿಗಳ ಜನಿವಾರವನ್ನು ಕತ್ತರಿಸಿದ್ದಾರೆ. ಆದರೆ ಪರೀಕ್ಷಾ ವಿಚಾರದಲ್ಲಿ ಜನಿವಾರ ಕತ್ತರಿಸಬೇಕೆಂಬ ನಿಯಮವಿಲ್ಲ. ಕಾಲೇಜಿನ ಭದ್ರತಾ ಸಿಬ್ಬಂದಿ ಜನಿವಾರ ಕತ್ತರಿಸಿ ಬ್ರಾಹ್ಮಣ ಸಮುದಾಯಕ್ಕೆ ಅಪಮಾನ ಮಾಡಿದ್ದಾರೆ ಲ್ಲಾ ಬ್ರಾಹ್ಮಣ ಮಹಾಸಭಾದ ಅಧ್ಯಕ್ಷ ನಟರಾಜ್ ಭಾಗವತ್ ಪೊಲೀಸರಿಗೆ ದೂರು ನೀಡಿದ್ದಾರೆ. ಜನಿವಾರ ತೆಗೆಸಿದ್ದರಿಂದ ಬ್ರಾಹ್ಮಣ ಸಮುದಾಯಕ್ಕೆ ಅಪಮಾನವಾಗಿದೆ. ಇದರಿಂದ ಸಿಇಟಿ ಪರೀಕ್ಷೆಯ ಭದ್ರತೆ ನೋಡಿಕೊಳ್ಳುತ್ತಿರುವ ಅಧಿಕಾರಿ ವಿರುದ್ಧ ಕಠಿಣ ಕ್ರಮ ಜರುಗಿಸಬೇಕೆಂದು ಕಳೆದ ರಾತ್ರಿ ನೀಡಿದ ದೂರಿನಲ್ಲಿ ಉಲ್ಲೇಖಿಸಿದ್ದಾರೆ. ಈ ಸಂಬಂಧ ಪೊಲೀಸರು ಪ್ರಕರಣ ದಾಖಲಿಸಿಕೊಂಡಿದ್ದಾರೆ.

ಜನಿವಾರ ವಿಚಾರ ತಿಳಿದು ಖೇದವಾಯಿತು



ಚಿಕ್ಕಮಗಳೂರು: ಸಿಇಟಿ ಪರೀಕ್ಷೆಯಲ್ಲಿ ಜನಿವಾರ ತೆಗೆಸಿದ ವಿಚಾರಕ್ಕೆ ಪೇಜಾವರ ವಿಶ್ವಪ್ರಸನ್ನ ಶ್ರೀಗಳು ಪ್ರತಿಕ್ರಿಯೆ ನೀಡಿದ್ದು, ವಿಷಯ ತಿಳಿದು ಮನಸ್ಸಿಗೆ ತುಂಬಾ ಖೇದವಾಗಿದೆ ಎಂದಿದ್ದಾರೆ. ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಪರೀಕ್ಷಾ ವ್ಯವಸ್ಥೆಯಲ್ಲಿ ಸೇರಿದ ಅಂಶವಾದರೆ ಎಲ್ಲಾ ಕಡೆ ಇರಬೇಕಿತ್ತು. ವ್ಯವಸ್ಥೆಯಲ್ಲಿ ಈ ಸಮಾಜವನ್ನು ಅವಮಾನಿಸಬೇಕು ಎಂದು ಮಾಡಿದ್ದಾಗಿದೆ. ಇಂತಹ ಕೃತ್ಯದಿಂದ ಸಮಾಜದಲ್ಲಿ ಕ್ಷೋಭೆ ಉಂಟಾಗುತ್ತದೆ. ಅಂತಹ ಕೆಲಸ ಯಾರೂ ಮಾಡಬಾರದು, ನಾವು ಕಠಿಣವಾಗಿ ಖಂಡಿಸುತ್ತೇವೆ. ಮುಂದೆ ಇಂತಹ ಕೆಲಸ ಎಲ್ಲಿಯೂ ಆಗದಂತೆ ಸರಕಾರ ಎಚ್ಚರ ವಹಿಸಬೇಕು, ಆ ಅಧಿಕಾರಿಗಳಿಗೆ ಕಟುವಾದ ಎಚ್ಚರಿಕೆ ನೀಡಬೇಕು. ಅಧಿಕಾರಿ ಮಾಡಿದ ತಪ್ಪಿಗೆ ಶಿಕ್ಷೆ ನೀಡಿದರೆ ಮುಂದೆ ಇಂತಹ ಘಟನೆ ನಡೆಯುವುದಿಲ್ಲ. ಈ ಘಟನೆಯನ್ನು ಕಠಿಣವಾಗಿ ಖಂಡಿಸುತ್ತೇವೆ, ಸರಕಾರ ತಕ್ಷಣ ತೀವ್ರ ಕ್ರಮಕೈಗೊಳ್ಳಬೇಕು ಎಂದು ಒತ್ತಾಯಿಸಿದರು.

ಪ್ರಾಂಶುಪಾಲ, ಸಿಬ್ಬಂದಿಯ ಕರ್ತವ್ಯಲೋಪ: ಜಿಲ್ಲಾಧಿಕಾರಿ

ಬೀದರ್: ಜನಿವಾರ ಧರಿಸಿದ ಕಾರಣಕ್ಕಾಗಿ ವಿದ್ಯಾರ್ಥಿ ಸುಚಿವ್ರತ್ ಕುಲಕರ್ಣಿ ಅವರಿಗೆ ಸಿಇಟಿ ಪರೀಕ್ಷೆ ಬರೆಯಲು ಅವಕಾಶ ಕಲ್ಪಿಸದ ಘಟನೆಯ ಪ್ರಕರಣದ ತನಿಖೆ ಪೂರ್ಣಗೊಂಡಿದ್ದು, ಪರೀಕ್ಷಾ ಕೇಂದ್ರದ ಪ್ರಾಂಶುಪಾಲರು ಹಾಗೂ ಅಲ್ಲಿನ ಸಿಬ್ಬಂದಿ ಲೋಪ ಎಸಗಿರುವುದು ದೃಢಪಟ್ಟಿದೆ. ಬೀದರ್‌ನ ಸಾಯಿ ಸ್ಫೂರ್ತಿ ಕಾಲೇಜು ಪರೀಕ್ಷಾ ಕೇಂದ್ರದ ಪ್ರಾಂಶುಪಾಲರೂ ಆದ ಉಪ ಮುಖ್ಯ ಅಧೀಕ್ಷಕ ಚಂದ್ರಶೇಖರ್ ಬಿರಾದಾರ ಮತ್ತು ಕಾಲೇಜಿನ ತಪಾಸಣಾ ಸಿಬ್ಬಂದಿ, ದ್ವಿತೀಯ ದರ್ಜೆ ಸಹಾಯಕ ಸತೀಶ್ ಅವರು ನಿಯಮಾನುಸಾರ ಕರ್ತವ್ಯ ನಿರ್ವಹಿಸದೇ ಲೋಪ ಎಸಗಿರುವುದು ಕಂಡು ಬಂದಿದೆ. ಇವರನ್ನು ವಜಾಗೊಳಿಸಿ ಅನುಪಾಲನಾ ವರದಿ ಸಲ್ಲಿಸಲು ಸೂಚಿಸಲಾಗಿದೆ. ಪರೀಕ್ಷಾ ವೀಕ್ಷಕರಾಗಿದ್ದ ಔರಾದ್ ಆರ್‌ಎಫ್‌ಒ ಮೊದ್ದಸಿರ್ ಅವರು ಸರಿಯಾಗಿ ಕರ್ತವ್ಯ ನಿರ್ವಹಿಸದ ಕಾರಣ ಅವರಿಗೆ ಕಾರಣ ಕೇಳಿ ನೋಟಿಸ್ ಜಾರಿ ಮಾಡಲಾಗಿದೆ ಎಂದು ಜಿಲ್ಲಾಧಿಕಾರಿ ಶಿಲ್ಪಾ ಶರ್ಮಾ ಅವರು ಕರ್ನಾಟಕ ಪರೀಕ್ಷಾ ಪ್ರಾಧಿಕಾರದ ಕಾರ್ಯನಿರ್ವಾಹಕ ನಿರ್ದೇಶಕರಿಗೆ ಸಲ್ಲಿಸಿರುವ ವರದಿಯಲ್ಲಿ ತಿಳಿಸಿದ್ದಾರೆ.

ವ್ಯವಸ್ಥಿತ ಕುತಂತ್ರ: ಪುತ್ತಿಗೆ ಶ್ರೀ

ಉಡುಪಿ: ಪರೀಕ್ಷಾರ್ಥಿಗಳ ಜನಿವಾರ ತೆಗೆಸಿದ ಘಟನೆ ಬಗ್ಗೆ ತಿಳಿದು ಆಘಾತವಾಗಿದೆ. ಇದು ವ್ಯವಸ್ಥಿತ ಕುತಂತ್ರ ಇರಬಹುದು. ಇಂತಹ ಅನೇಕ ಘಟನೆಗಳು ಸರಣಿಯಾಗಿ ನಡೆಯಲು ಪ್ರಾರಂಭವಾಗಿದೆ ಎಂದು ಪರ್ಯಾಯ ಪುತ್ತಿಗೆ ಮಠಾಧೀಶ ಸುಗುಣೇಂದ್ರ ತೀರ್ಥ ಸ್ವಾಮೀಜಿ ಹೇಳಿದ್ದಾರೆ. ಹಿಂದೂಗಳನ್ನು, ಸನಾತನ ಧರ್ಮದ ಅನುಯಾಯಿಗಳನ್ನು ಕೆಣಕುವ ದುಷ್ಟ ಪ್ರವೃತ್ತಿ ಎಲ್ಲ ಕಡೆ ಕಾಣ ಸಿಗುತ್ತದೆ. ಸರಕಾರ ಇದನ್ನು ಗಂಭೀರವಾಗಿ ತೆಗೆದುಕೊಳ್ಳಬೇಕು ಮತ್ತು ತಪ್ಪಿತಸ್ಥರ ವಿರುದ್ಧ ಸೂಕ್ತ ಕ್ರಮ ಕೈಗೊಳ್ಳಬೇಕು. ಈ ಘಟನೆಯು ಮುಂದೆ ಸಂಘರ್ಷಕ್ಕೆ ಕಾರಣವಾಗುವ ಸಾಧ್ಯತೆ ಇರುವುದರಿಂದ ಇದನ್ನು ಮೂಲದಲ್ಲೇ ಸರಿ ಮಾಡುವುದು ಜಾಣತನ. ಮುಂದೆ ಇಂತಹ ಘಟನೆ ಮರುಕಳಿಸದಂತೆ ಸರಕಾರ ಎಚ್ಚರ ವಹಿಸಬೇಕು ಎಂದು ಹೇಳಿದ್ದಾರೆ.

ಪರೀಕ್ಷೆ ನಿರಾಕರಣೆ ಖಂಡನೀಯ

ಬೆಂಗಳೂರು: ಬೀದರ್‌ನಲ್ಲಿ ಸಿಇಟಿ ಪರೀಕ್ಷೆ ಬರೆಯಲು ಬಂದಿದ್ದ ವಿದ್ಯಾರ್ಥಿ ಜನಿವಾರ ಹಾಕಿರುವ ಕಾರಣಕ್ಕೆ ಪರೀಕ್ಷೆಗೆ ಅವಕಾಶ ನಿರಾಕರಣೆ ಮಾಡಿದ್ದು, ಶಿವಮೊಗ್ಗದಲ್ಲಿ ವಿದ್ಯಾರ್ಥಿ ಹಾಕಿಕೊಂಡಿದ್ದ ಜನಿವಾರ ಕಿತ್ತು ಹಾಕಿರುವುದು ಅತ್ಯಂತ ಹೀನ ಕೃತ್ಯವಾಗಿದ್ದು ಖಂಡನೀಯ ಎಂದು ಮಾಜಿ ಮುಖ್ಯಮಂತ್ರಿ ಹಾಗೂ ಸಂಸದ ಬಸವರಾಜ ಬೊಮ್ಮಾಯಿ ಅಭಿಪ್ರಾಯ ಪಟ್ಟಿದ್ದಾರೆ. ಈ ಕುರಿತು ಟ್ವೀಟ್ ಮಾಡಿರುವ ಅವರು, ನಮ್ಮ ದೇಶದ ಸಂಸ್ಕೃತಿ ಆಚಾರ, ವಿಚಾರ, ನಂಬಿಕೆಗಳ ಬಗ್ಗೆ ಅರಿವಿಲ್ಲದಿರುವ ಕಾಂಗ್ರೆಸ್ ಸರಕಾರ ನಿಯಮಗಳ ಪಾಲನೆಯ ಹೆಸರಿನಲ್ಲಿ ಧರ್ಮ ದ್ರೋಹ ಮಾಡುವುದರ ಜೊತೆಗೆ ವಿದ್ಯಾರ್ಥಿಗಳ ಭವಿಷ್ಯಕ್ಕೆ ಕೊಳ್ಳಿ ಇಡುವ ಕೆಲಸ ಮಾಡುತ್ತಿದೆ ಎಂದು ಆರೋಪಿಸಿದ್ದಾರೆ.

ಡಿಜನಿವಾರ ಕೇವಲ ಬ್ರಾಹ್ಮಣರು ಮಾತ್ರ ಹಾಕ್ತಾರೆ ಅಂತ ಸರಕಾರದಲ್ಲಿದ್ದವರು ತಿಳಿದಿದ್ದರೆ ತಪ್ಪು, ಅನೇಕ ಸಮುದಾಯದವರು ಜನಿವಾರ ಹಾಕುತ್ತಾರೆ, ಸರಕಾರ ಸೂಕ್ಷ್ಮತೆಯಿಂದ ವರ್ತಿಸಬೇಕು. ಇದು ಜನರ ನಂಬಿಕೆ ಮೇಲಿನ ಪ್ರಹಾರ. ಈ ಪ್ರಕರಣದಲ್ಲಿ ಹೋಮ್ ಗಾರ್ಡ್ ಅಮಾನತು ಮಾಡಿದರೆ ಸಾಲದು, ಸರಕಾರ ಸ್ಪಷ್ಟ ಮಾರ್ಗಸೂಚಿಗಳನ್ನು ಹೊರಡಿಸಬೇಕು

-ಪ್ರಲ್ಹಾದ್ ಜೋಶಿ ಕೇಂದ್ರ ಸಚಿವ

ಇಬ್ಬರು ಸೆಕ್ಯೂರಿಟಿ ಅಮಾನತು

ಶಿವಮೊಗ್ಗ: ಆದಿಚುಂಚನಗಿರಿ ಶಾಲೆಯಲ್ಲಿ ಸಿಇಟಿ ಪರೀಕ್ಷೆ ವೇಳೆ ವಿದ್ಯಾರ್ಥಿಗಳು ಧರಿಸಿದ್ದ ಜನಿವಾರವನ್ನು ತೆಗೆಸಿದ ಆರೋಪ ಪ್ರಕರಣಕ್ಕೆ ಸಂಬಂಧಿಸಿದಂತೆ, ಕರ್ತವ್ಯಲೋಪ ಎಸಗಿದ ಇಬ್ಬರು ಗೃಹ ರಕ್ಷಕ ದಳದ ಸಿಬ್ಬಂದಿಯನ್ನು ಅಮಾನತು ಮಾಡಿರುವುದಾಗಿ ಜಿಲ್ಲಾಧಿಕಾರಿ ಗುರುದತ್ತ ಹೆಗಡೆ ತಿಳಿಸಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿ, ಜನಿವಾರ ಪ್ರಕರಣದ ಕುರಿತು ಸಂಬಂಧಪಟ್ಟ ಅಧಿಕಾರಿಗಳ ವಿಚಾರಣೆ ಹಾಗೂ ಸಿಸಿಟಿವಿ ವಿಡಿಯೊವನ್ನು ಸಂಪೂರ್ಣವಾಗಿ ಚೆಕ್ ಮಾಡಲಾಗಿದೆ. ಸಿಸಿಟಿವಿ ವಿಡಿಯೋದಲ್ಲಿ ಇದು ಸ್ಪಷ್ಟವಾಗಿ ಕಾಣುತ್ತೆ. ಒಬ್ಬ ವಿದ್ಯಾರ್ಥಿ ಬರುತ್ತಾನೆ. ಇಬ್ಬರು ಸೆಕ್ಯೂರಿಟಿಗಳಿಗೆ ಆ ವಿದ್ಯಾರ್ಥಿಯೇ ಜನಿವಾರ ತೆಗೆದು ತೋರಿಸುತ್ತಾನೆ. ಇದಕ್ಕೆ ಅನುಮತಿ ಇದೆಯೇ? ಎಂದು ಕೇಳುತ್ತಾನೆ. ಆಗ ಸೆಕ್ಯೂರಿಟಿಯವರು ಇಲ್ಲ ಎಂದಾಗ, ಇವನು ಪಕ್ಕಕ್ಕೆ ಹೋಗಿ ಜನಿವಾರ ತೆಗೆದು ಬರುತ್ತಾನೆ. ಇನ್ನೊಬ್ಬ ವಿದ್ಯಾರ್ಥಿ ಇದೇ ರೀತಿ ಬಂದಾಗ ಸೆಕ್ಯೂರಿಟಿಯವರು ಜನಿವಾರ ಹಾಕಿಕೊಂಡು ಪರೀಕ್ಷಾ ಕೊಠಡಿಗೆ ತೆರಳಲು ಅವಕಾಶ ಇಲ್ಲ ಎನ್ನುತ್ತಾರೆ. ಇದಕ್ಕೆ ವಿದ್ಯಾರ್ಥಿ ಇಲ್ಲ, ನಾನು ಜನಿವಾರ ತೆಗೆಯುವುದಿಲ್ಲ ಎನ್ನುತ್ತಾನೆ. ಆಗ ಸೆಕ್ಯೂರಿಟಿಯವರು ಅಲ್ಲೇ ಐದು ನಿಮಿಷ ಕುಳಿತುಕೊಳ್ಳಿ ಎಂದು ಹೇಳುತ್ತಾರೆ ಎಂದರು.

ಆಗ ಕಾಲೇಜಿನ ಪ್ರಾಂಶುಪಾಲರು ಅಲ್ಲಿ ಬಂದು ವಿದ್ಯಾರ್ಥಿ ಕುಳಿತುಕೊಂಡಿರುವ ಕುರಿತು ವಿಚಾರಿಸಿದಾಗ, ಜನಿವಾರದ ವಿಚಾರವನ್ನು ಸೆಕ್ಯೂರಿಟಿಯವರು ಹೇಳಿದ್ದಾರೆ. ಆಗ ಪ್ರಾಂಶುಪಾಲರು ಸಂಪ್ರದಾಯಕ್ಕೆ ಅಡ್ಡಿಪಡಿಸುವ ಯಾವುದೇ ಕ್ರಮ ಇಲ್ಲ, ವಿದ್ಯಾರ್ಥಿ ಹೋಗಿ ಪರೀಕ್ಷೆ ಬರೆಯಬಹುದು ಎಂದು ಹೇಳಿ ವಿದ್ಯಾರ್ಥಿಯನ್ನು ಪರೀಕ್ಷೆ ಬರೆಯಲು ಒಳಗೆ ಕಳುಹಿಸಿಕೊಡುತ್ತಾರೆ. ಯಾವುದೇ ವಿದ್ಯಾರ್ಥಿಗೆ ಪರೀಕ್ಷೆ ಬರೆಯಲು ತೊಂದರೆಯಾಗಿಲ್ಲ. ಅವರು ಸರಿಯಾದ ಸಮಯಕ್ಕೆ ಹೋಗಿ ಪರೀಕ್ಷೆ ಬರೆದಿದ್ದಾರೆ. ಆದರೆ, ಖಂಡಿತವಾಗಿಯೂ ಅವರ ಧಾರ್ಮಿಕ ಭಾವನೆಗೆ ಧಕ್ಕೆಯುಂಟಾದಂತೆ ಆಗಿದೆ. ಇದೇ ಕಾರಣಕ್ಕೆ ಇಬ್ಬರು ಗೃಹ ರಕ್ಷಕ ದಳದ ಸಿಬ್ಬಂದಿಯನ್ನು ಅಮಾನತು ಮಾಡಲಾಗಿದೆ ಎಂದು ತಿಳಿಸಿದರು.

ಬಿಇಒ ಲೋಕಾ ಬಲೆಗೆ

ಹಾವೇರಿ: ಶಿಕ್ಷಕರೊಬ್ಬರ ಅಮಾನತು ಆದೇಶ ಹಿಂಪಡೆಯಲು 50 ಸಾವಿರ ಲಂಚಕ್ಕೆ ಬೇಡಿಕೆ ಇರಿಸಿದ್ದ ಹಾವೇರಿ ತಾಲೂಕು ಕ್ಷೇತ್ರ ಶಿಕ್ಷಣಾಧಿಕಾರಿ ಮೌನೇಶ್ ಬಡಿಗೇರ ಅವರು ಲೋಕಾಯುಕ್ತ ಪೊಲೀಸರ ಬಲೆಗೆ ಬಿದ್ದಿದ್ದಾರೆ. ನೊಂದ ಶಿಕ್ಷಕ ನೀಡಿದ್ದ ದೂರು ಆಧರಿಸಿ ಶನಿವಾರ ಕಾರ್ಯಾಚರಣೆ ನಡೆಸಿದ್ದ ಹಾವೇರಿ ಜಿಲ್ಲಾ ಲೋಕಾಯುಕ್ತ ಪೊಲೀಸರ ತಂಡ, ಮೌನೇಶ್ ಅವರನ್ನು ಬಲೆಗೆ ಬೀಳಿಸಿದೆ. ಮೌನೇಶ್ ಅವರ ವಿರುದ್ಧ ಎಫ್‌ಐಆರ್ ದಾಖಲಿಸಿಕೊಂಡು, ವಶಕ್ಕೆ ಪಡೆದಿದೆ.

ಆರೋಪಿ ಮೌನೇಶ್, ಕ್ಷೇತ್ರ ಶಿಕ್ಷಣಾಧಿಕಾರಿಯಾಗಿ ಹಲವು ವರ್ಷಗಳಿಂದ ಕೆಲಸ ಮಾಡುತ್ತಿದ್ದರು. ಇತ್ತೀಚೆಗೆ ಶಿಕ್ಷಕರೊಬ್ಬರ ಅಮಾನತು ಆಗಿತ್ತು. ಅಮಾನತು ಆದೇಶ ಹಿಂಪಡೆಯುವಂತೆ ಶಿಕ್ಷಕರು ಮನವಿ ಸಲ್ಲಿಸಿದ್ದರು. ಮನವಿ ಪರಿಗಣಿಸಿದ್ದ ಮೌನೇಶ್, 50 ಸಾವಿರ ಕೊಟ್ಟರೆ ಆದೇಶ ಹಿಂಪಡೆಯುವುದಾಗಿ ಹೇಳಿದ್ದರು' ಎಂದು ಲೋಕಾಯುಕ್ತ ಪೊಲೀಸ್ ಮೂಲಗಳು ಹೇಳಿವೆ. ನೊಂದ ಶಿಕ್ಷಕ ಠಾಣೆಗೆ ಮಾಹಿತಿ ನೀಡಿದ್ದರು. ಅದರಂತೆ ಕಾರ್ಯಾಚರಣೆ ಆರಂಭಿಸಲಾಗಿತ್ತು. ಬಸವೇಶ್ವರನಗರದ 13ನೇ ಕ್ರಾಸ್‌ನಲ್ಲಿರುವ ಮನೆಗೆ ಹೋಗಿದ್ದ ದೂರುದಾರ ಶಿಕ್ಷಕ, ಮುಂಗಡವಾಗಿ 15 ಸಾವಿರ ನೀಡಿದ್ದರು. ಮೌನೇಶ್ ಅವರನ್ನು ಹಣ ಪಡೆಯುತ್ತಿದ್ದಂತೆ ಮನೆಗೆ ಹೋಗಿ ವಶಕ್ಕೆ ಪಡೆಯಲಾಗಿದೆ. ಕಾನೂನು ಪ್ರಕ್ರಿಯೆ ಮುಂದುವರಿಸಲಾಗಿದೆ' ಎಂದು ಮೂಲಗಳು ತಿಳಿಸಿವೆ.

ಅತ್ಯಾಚಾರ ಪ್ರಕರಣ: ತಂಗಿಯ ಸುರಕ್ಷತೆಗೆ ಯಾಚಿಸಿದ್ದ ಅಕ್ಕ

ಉಳ್ಳಾಲ: ಮುನ್ನೂರು ಬಂಗುಲೆ ಸಮೀಪ ಸಾಮೂಹಿಕ ಅತ್ಯಾಚಾರಕ್ಕೀಡಾದ ಪಶ್ಚಿಮ ಬಂಗಾಳದ ಯುವತಿಯ ಅಕ್ಕ, ಆಟೋ ಚಾಲಕನಿಗೆ 2 ಸಾವಿರವನ್ನು ಗೂಗಲ್ ಪೇ' ಮೂಲಕ ಪಾವತಿಸಿ, ತಂಗಿಯನ್ನು ಸುರಕ್ಷಿತವಾಗಿ ರೈಲು ಹತ್ತಿಸುವಂತೆ ಕೇಳಿಕೊಂಡಿದ್ದಳು ಎಂಬುದು ತನಿಖೆ ವೇಳೆ ತಿಳಿದುಬಂದಿದೆ. ಆರೋಪಿಗಳಾದ ಆಟೋ ಚಾಲಕ ಪ್ರಭುರಾಜ್, ಆತನ ಸ್ನೇಹಿತರಾದ ಮಣಿ, ಮಿಥುನ್ ಎಂಬುವರನ್ನು ಘಟನೆ ನಡೆದ 24 ಗಂಟೆಯೊಳಗೆ ಬಂಧಿಸಲಾಗಿತ್ತು.

ಸಂತ್ರಸ್ತೆಯು ಸುಮಾರು 3 ತಿಂಗಳ ಹಿಂದೆ ಪ್ರಿಯತಮನ ಜತೆ ಕೇರಳದ ಕಡೆಗೆ ಕೆಲಸಕ್ಕೆ ಬಂದಿದ್ದಳು. ಏ.16ರಂದು ಇಬ್ಬರ ನಡುವೆ ಜಗಳ ನಡೆದಿದ್ದು, ಪ್ರಿಯತಮ ಜಗಳ ಮಾಡಿ ಮೊಬೈಲ್ ಒಡೆದು ಹಾಕಿ ಮನೆಯಿಂದ ಹೊರಹಾಕಿದ್ದಾನೆ. ಇದರಿಂದ ನೊಂದ ಯುವತಿ ಕೇರಳದಿಂದ ಮಂಗಳೂರಿಗೆ ಬರುವ ರೈಲು ಹತ್ತಿದ್ದಳು. ಮಂಗಳೂರಿನಲ್ಲಿ ಇಳಿದ ಆಕೆ ಊರಿಗೆ ಹೋಗಲು ಹಣವಿಲ್ಲದೆ ಅಸಹಾಯಕಳಾಗಿದ್ದಳು. ಈ ಬಗ್ಗೆ ಪ್ರಭುರಾಜ್ ಜತೆಗೆ ಅಲವತ್ತು ಕೊಂಡಿದ್ದಳು. ಅದನ್ನೇ ದುರ್ಬಳಕೆ ಮಾಡಿಕೊಂಡ ಆತ ಆಕೆಯ ಮೊಬೈಲ್ ರಿಪೇರಿ ಮಾಡಿ ಪಶ್ಚಿಮ ಬಂಗಾಳದಲ್ಲಿ ರುವ ಸಹೋದರಿಗೆ ಕರೆ ಮಾಡುವಂತೆ ತಿಳಿಸಿದ್ದ. ತಂಗಿ ಊರಿಗೆ ಬರುವ ಇಂಗಿತ ವ್ಯಕ್ತಪಡಿಸುತ್ತಿದ್ದಂತೆ ಆಟೋ ರಿಕ್ಷಾ ಚಾಲಕನ ಸಹಾಯ ಯಾಚಿಸಿದ ಅಕ್ಕ, 2 ಸಾವಿರ ಗೂಗಲ್ ಪೇ ಮಾಡಿ ರೈಲು ಹತ್ತಿಸುವಂತೆ ತಿಳಿಸಿದ್ದಳು. ಪಶ್ಚಿಮ ಬಂಗಾಳದ ರೈಲು ತಡವಾಗಿದೆ ಎಂದು ನಂಬಿಸಿ ಸುಮಾರು 6 ಗಂಟೆ ರಿಕ್ಷಾದಲ್ಲೇ ಸುತ್ತಾಡಿಸಿ ಮತ್ತು ಬರುವಾಗ ಪಾನೀಯ ಕುಡಿಸಿ ತಡರಾತ್ರಿ ವೇಳೆ ಮೂವರು ಸೇರಿ ಅತ್ಯಾಚಾರವೆಸಗಿದ್ದಾರೆ.

ಕರ್ನಾಟಕ ನೀರಾವರಿ ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಉದ್ಯಮ)
ಕಾರ್ಯನಿರ್ವಾಹಕ ಇಂಜಿನಿಯರ್‌ರವರ ಕಚೇರಿ, ಕ.ನೀ.ನಿ.ನಿ., ಘ.ಬ.ದಂ.ಕಾ.ನಿ. ವಿಭಾಗ, ಸಂ. 3, ತಾಲ್ಲೂಕು: ಗೋಕಾಕ, ಜಿಲ್ಲಾ: ಬೆಳಗಾವಿ, ರಾಜ್ಯ: ಕರ್ನಾಟಕ, ಪಿನ್ – 591 307, ದೂರವಾಣಿ: 08332–225213.
ಇ–ಮೇಲ್: knnlgrbccd3.gokak@gmail.com

ಸಂಖ್ಯೆ : ಕ.ನೀ.ನಿ.ನಿ./ಜಿ.ಆರ್.ಬಿ.ಸಿ.ಸಿ.ವಿ.–3/ಡಿ.ಬಿ./ಟೆಂಡರ್/ಅರಭಾವಿ ಟ್ಯಾಂಕ್ ಫಿಲ್ಲಿಂಗ್ ಸ್ಟೇಜ್–2/2025–26/02 ದಿನಾಂಕ : 19–04–2025

ಟೆಂಡರ್ ಅಧಿಸೂಚನೆ ಎರಡನೇ ಕರೆ
(ಕೆ.ಪಿ.ಪಿ. ಪೋರ್ಟಲ್ ಮೂಲಕ ಮಾತ್ರ)

ಮಾನ್ಯ ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ನೀರಾವರಿ ನಿಗಮ ನಿಯಮಿತ, ಬೆಂಗಳೂರು ಇವರ ಪರವಾಗಿ ಕಾರ್ಯನಿರ್ವಾಹಕ ಅಭಿಯಂತರರು, ಕ.ನೀ.ನಿ.ನಿ., ಘ.ಬ.ದಂ.ಕಾ.ನಿ. ವಿಭಾಗ ಸಂ. 3, ಗೋಕಾಕ ಕಚೇರಿಯಲ್ಲಿ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಆದ್ಯಾದೇಶ 1999 – 2000 ರ ಪ್ರಕಾರ ಆಕ್ಟ್ 2000 ರ ನಿಯಮದಂತೆ ಸ್ಟ್ಯಾಂಡರ್ಡ್ ಬಿಡ್ ಡಾಕ್ಯೂಮೆಂಟ್ ಕೆ.ಡಬ್ಲ್ಯೂ - IV ನಿಯಮದನ್ವಯ ಕರ್ನಾಟಕ ಲೋಕೋಪಯೋಗಿ ಇಲಾಖೆಯಲ್ಲಿ ನೊಂದಾಯಿತರಾದ ಅರ್ಹ ಗುತ್ತಿಗೆದಾರರಿಂದ ಕೆ.ಪಿ.ಪಿ. ಪೋರ್ಟಲ್ ಮುಖಾಂತರ ಟೆಂಡರ್ ಕರೆಯಲಾಗಿದ್ದು, ಕೆಟಿಪಿಪಿ ಕಾಯ್ದೆಯ ರೂಲ್ 28 ರನ್ವಯ ದ್ವಿ–ಲಕೋಟೆ ವಿಧಾನವನ್ನು ಅನುಸರಿಸಿ ಅರ್ಹ ಗುತ್ತಿಗೆದಾರರು ತಮ್ಮ ಟೆಂಡರ್‌ನ್ನು ದ್ವಿ–ಲಕೋಟೆ ವಿಧಾನದಲ್ಲಿ ಸಲ್ಲಿಸಬೇಕು. ಘಟಪ್ರಭಾ ನದಿಯಿಂದ ಅರಭಾವಿ ವಿಧಾನಸಭಾ ವ್ಯಾಪ್ತಿಯ ಆಯ್ದ 13 ಕೆರೆಗಳಿಗೆ ನೀರು ತುಂಬುವ (ಟ್ಯಾಂಕ ಫಿಲ್ಲಿಂಗ್) ಸ್ಟೇಜ್–II ಟರ್ನ–ಕೀ ಆಧಾರಿತ ಕಾಮಗಾರಿಗೆ (ಕಾಮಗಾರಿಯ ಇಂಡೆಂಟ್ ನಂಬರ 2583) ಟೆಂಡರ್ ಕರೆಯಲಾಗಿದೆ.

ಈ ಕಾಮಗಾರಿಯ ಅಂದಾಜು ಮೊತ್ತ ರೂ. 107.66 ಕೋಟಿ ಇರುತ್ತದೆ. (ಜಿ.ಎಸ್.ಟಿ. ಹೊರತುಪಡಿಸಿ) (ಒಟ್ಟು ಕಾಮಗಾರಿ – 01)

ಕಾರ್ಯನಿರ್ವಾಹಕ ಅಭಿಯಂತರರು, ಕ.ನೀ.ನಿ.ನಿ., ಜಿ.ಆರ್.ಬಿ.ಸಿ.ಸಿ. ವಿಭಾಗ ನಂ. 3, ಗೋಕಾಕ ಕಚೇರಿಯ ಟೆಂಡರ್‌ಗಳನ್ನು ದಿನಾಂಕ : 21–04–2025 ರಿಂದ 22–05–2025 ರ ಸಂಜೆ 4.00 ಘಂಟೆಯವರೆಗೆ ಸಲ್ಲಿಸಬಹುದಾಗಿದೆ. ಟೆಂಡರ್ ಪೂರ್ವಭಾವಿ ಸಭೆ ದಿನಾಂಕ : 05–05–2025 ರ ಬೆಳಿಗ್ಗೆ 11.30 ಗಂಟೆಗೆ ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ನೀರಾವರಿ ನಿಗಮ ನಿಯಮಿತ, ಕಾಫೀ ಬೋರ್ಡ್ ಬಿಲ್ಡಿಂಗ್, ಬೆಂಗಳೂರು ಕಚೇರಿಯಲ್ಲಿ ಕರೆಯಲಾಗಿದೆ. ಟೆಂಡರ್ ಕುರಿತ ಪ್ರಶ್ನೆಗಳಿಗಾಗಿ / ಸ್ಪಷ್ಟೀಕರಣಗಳಿಗಾಗಿ ಕೊನೆಯ ದಿನಾಂಕ & ಸಮಯ : 12–05–2025 ರ ಸಂಜೆ 5.00 ಗಂಟೆಯವರೆಗೆ. ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ & ಸಮಯ : 22–05–2025 ರ ಸಂಜೆ 4.00 ಗಂಟೆಯವರೆಗೆ. ತಾಂತ್ರಿಕ ಬಿಡ್‌ನ್ನು ತೆರೆಯುವ ದಿನಾಂಕ : 26–05–2025 ರ ಬೆಳಿಗ್ಗೆ 11.00 ಗಂಟೆಗೆ, ಆರ್ಥಿಕ ಬಿಡ್‌ನ್ನು ತಾಂತ್ರಿಕ ಬಿಡ್ ಅನುಮೋದನೆಗೊಂಡ ನಂತರ ತೆರೆಯಲಾಗುವುದು.

ಇತರೆ ವಿವರಗಳನ್ನು ಕರ್ನಾಟಕ ಸರ್ಕಾರದ https://www.kppp.karnataka.gov.in ವೆಬ್‌ಸೈಟ್‌ನಲ್ಲಿ ಪಡೆಯಬಹುದು. ಇನ್ನು ಮುಂದೆ ಸದರಿ ಟೆಂಡರ್‌ಗಳಲ್ಲಿ ಯಾವುದೇ ಬದಲಾವಣೆಗಳು / ಮಾರ್ಪಾಡುಗಳು ಅಥವಾ ಅವಧಿ ವಿಸ್ತರಣೆ ಇತ್ಯಾದಿ ತಿದ್ದುಪಡಿಗಳಾದಲ್ಲಿ, ಕೆ.ಪಿ.ಪಿ. ಪೋರ್ಟಲ್ ವೆಬ್‌ಸೈಟ್‌ನಲ್ಲಿ ಮಾತ್ರ ಪ್ರಕಟಿಸಲಾಗುವುದು.

ಸಹಿ/– ಕಾರ್ಯನಿರ್ವಾಹಕ ಇಂಜಿನೀಯರು,
ಕ.ನೀ.ನಿ.ನಿ., ಜಿ.ಆರ್.ಬಿ.ಸಿ.ಸಿ. ವಿಭಾಗ ನಂ. 3,
ಗೋಕಾಕ.
ಡಿಐಪಿಆರ್/ಬೆಳಗಾವಿ/118/ಮಣಿಪಾಲ್/2025–26

ಕರ್ನಾಟಕ ಸರ್ಕಾರ
ತಾಲ್ಲೂಕು ಪಂಚಾಯಿತಿ, ಕೆ.ಆರ್.ನಗರ
ದೂರವಾಣಿ ಸಂಖ್ಯೆ: 08223–262824
ಇ–ಮೇಲ್: eokrntp@gmail.com
ಸಂಖ್ಯೆ:ತಾಪಂಕೃ/ಹೊ.ನೌ/ಇ–ಟೆಂಡರ್/ಲೆ.ಪ.ಶಾ–1/2025–26/80
ದಿನಾಂಕ:15.04.2025

ಇ–ಟೆಂಡರ್ ಪ್ರಕಟಣೆ

ಈ ಕಛೇರಿಯ ಇ–ಟೆಂಡರ್ ಅಪ್‌ಲೋಡ್ ಸಂಖ್ಯೆ: RDPR/2025-26/SE2441 ದಿನಾಂಕ: 17.04.2025
2025–26ನೇ ಸಾಲಿಗೆ ಹೊರಗುತ್ತಿಗೆ ಆಧಾರದ ಮೇಲೆ ಕಂಪ್ಯೂಟರ್ ಆಪರೇಟರ್, ವಾಹನ ಚಾಲಕ ಮತ್ತು 'ಡಿ' ಗ್ರೂಪ್ ಹುದ್ದೆಗಳ ಸೇವೆಗಾಗಿ ಇ– ಪ್ರೊಕ್ಯೂರ್‌ಮೆಂಟ್ ಮೂಲಕ ಕರೆಯಲಾದ ಟೆಂಡರ್.
ಟೆಂಡರ್ ಫಾರಂಗಳನ್ನು ಹಾಗೂ ನಿಬಂಧನೆಗಳನ್ನೊಳಗೊಂಡ ಟೆಂಡರ್ ಪುಸ್ತಕವನ್ನು 02.05.2025 ರ ಸಾಯಂಕಾಲ 05.00 ಗಂಟೆಯೊಳಗೆ ಇ–ಪ್ರೊಕ್ಯೂರ್‌ಮೆಂಟ್ ವೆಬ್‌ಸೈಟ್:www.kppp.karnataka.gov.in ರಲ್ಲಿ ಇಪೋರ್ಟಲ್ ನಿಗಧಿಪಡಿಸಿದ ಶುಲ್ಕದೊಂದಿಗೆ ಭರ್ತಿ ಮಾಡಿದ ಟೆಂಡರ್ ಫಾರ್ಮ್‌ಗಳನ್ನು ಇಪೋರ್ಟಲ್‌ನಲ್ಲಿ ಅಪ್‌ಲೋಡ್ ಮಾಡಬಹುದು. ಹೆಚ್ಚಿನ ವಿವರಗಳನ್ನು ಕಛೇರಿ ವೇಳೆಯಲ್ಲಿ ಕೆಲಸದ ದಿನಗಳಂದು ಪಡೆಯಬಹುದು.
ಸಹಿ/– ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯಿತಿ, ಕೆ.ಆರ್.ನಗರ
DIPR-DD-MYS/75/KSMCA-72/2025-26

ಕರ್ನಾಟಕ ಸರ್ಕಾರ
ಪ್ರವಾಸೋದ್ಯಮ ಇಲಾಖೆ
ಉಪ ನಿರ್ದೇಶಕರ ಕಛೇರಿ, ಪ್ರವಾಸೋದ್ಯಮ ಇಲಾಖೆ,
ಪಿಇಎಸ್ ಇಂಜಿನಿಯರಿಂಗ್ ಕಾಲೇಜು ರಸ್ತೆ, ಮಂಡ್ಯ–571401
E-Mail: ddmandyatourism@gmail.com
ದೂರವಾಣಿ ಸಂಖ್ಯೆ: 08232–238377
ಸಂ:ಪ್ರಇ/ಉನಿ/ಮಂ/04/2025–26 ದಿನಾಂಕ:16.04.2025

ಇ–ಟೆಂಡರ್ ಪ್ರಕಟಣೆ

ಮಂಡ್ಯ ಜಿಲ್ಲೆಯ ಮದ್ದೂರು ತಾಲ್ಲೂಕಿನಲ್ಲಿರುವ ಕೊಕ್ಕರೆ ಬೆಳ್ಳೂರು ಪಕ್ಷಿಧಾಮ ಪ್ರವಾಸಿ ತಾಣದಲ್ಲಿ ಪ್ರವಾಸೋದ್ಯಮ ಇಲಾಖೆಯಿಂದ ನಿರ್ಮಿಸಿರುವ ಪ್ರವಾಸಿ ಮಾಹಿತಿ ಕೇಂದ್ರವನ್ನು (ಇಂಟರ್‌ಪ್ರಿಟೇಷನ್ ಸೆಂಟರ್) 05 ವರ್ಷಗಳ ಅವಧಿಗೆ ನಿರ್ವಹಣೆಗೆ ವಹಿಸುವ ಸಂಬಂಧ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್‌ನಲ್ಲಿ (ಕೆಪಿಪಿಪಿ) ಇ–ಟೆಂಡರ್ ಆಹ್ವಾನಿಸಲಾಗಿದೆ.

(1) ಇ.ಎಂ.ಡಿ ಮೊಬಲಗು : **ರೂ.50,000/–**. (2) ಟೆಂಡರ್ ಅರ್ಜಿ ಸಲ್ಲಿಸುವ ಪೋರ್ಟಲ್ : https://kppp.karnataka.gov.in. (03) ಅರ್ಜಿದಾರರು ಟೆಂಡರ್ ಅರ್ಜಿ ಸಲ್ಲಿಸುವ ಆರಂಭಿಕ ದಿನಾಂಕ : **21.04.2025 ಬೆಳಿಗ್ಗೆ 12.00 ಗಂಟೆ**. (04) ಟೆಂಡರ್ ಅರ್ಜಿ ಸಲ್ಲಿಸಲು ಕಡೆಯ ದಿನಾಂಕ : **28.04.2025 ಸಂಜೆ 5.30 ಗಂಟೆ**. (05) ಪೂರ್ವ ಬಿಡ್ಡಿಂಗ್ ಸಭೆಯ ಸಮಯ ಮತ್ತು ದಿನಾಂಕ (Pre Bidding Meeting) : **ದಿ:25.04.2024 ಬೆಳಿಗ್ಗೆ 11.00 ಗಂಟೆಗೆ**. (06) ಟೆಂಡರ್ ತೆರೆಯುವ ಸಮಯ ಮತ್ತು ದಿನಾಂಕ : **(1) ದಿನಾಂಕ : 29.04.2025, ಬೆಳಿಗ್ಗೆ: 11.00 ಗಂಟೆ (ತಾಂತ್ರಿಕ ಬಿಡ್). (2) ದಿನಾಂಕ : 02.05.2025 ಬೆಳಿಗ್ಗೆ 11.00 (ಆರ್ಥಿಕ ಬಿಡ್)**. (07) ಟೆಂಡರ್ ತೆರೆಯುವ ಸ್ಥಳ : **ಉಪ ನಿರ್ದೇಶಕರ ಕಛೇರಿ, ಪ್ರವಾಸೋದ್ಯಮ ಇಲಾಖೆ, ಪಿಇಎಸ್ ಇಂಜಿನಿಯರಿಂಗ್ ಕಾಲೇಜು ರಸ್ತೆ, ಮಂಡ್ಯ**. (08) ಟೆಂಡರ್ ತೆರೆಯುವ ಅಧಿಕಾರಿ : **ಉಪನಿರ್ದೇಶಕರು, ಪ್ರವಾಸೋದ್ಯಮ ಇಲಾಖೆ, ಮಂಡ್ಯ ಜಿಲ್ಲೆ**. (09) ಮೇಲ್ಮನವಿ ಪ್ರಾಧಿಕಾರ : **ನಿರ್ದೇಶಕರು, ಪ್ರವಾಸೋದ್ಯಮ ಇಲಾಖೆ**, ಬೆಂಗಳೂರು. (10) ಷರತ್ತು/ನಿಬಂಧನೆಗಳ ಕುರಿತು ಹೆಚ್ಚುವರಿ ಮಾಹಿತಿಯನ್ನು ಉಪನಿರ್ದೇಶಕರ ಕಛೇರಿ, ಪ್ರವಾಸೋದ್ಯಮ ಇಲಾಖೆ, ಮಂಡ್ಯ ಕಛೇರಿಯಿಂದ ಪಡೆಯಬಹುದು. (ದೂರವಾಣಿ ಸಂಖ್ಯೆ : 08232–238377, 9591213224, E-mail : ddmandyatourism@gmail.com.

ಸಹಿ/–ಉಪನಿರ್ದೇಶಕರು,
ಪ್ರವಾಸೋದ್ಯಮ ಇಲಾಖೆ, ಮಂಡ್ಯ
ವಾಸಾಸಂಇ/ಸನಿ–ಮಂ/ಕೆಎಸ್‌ಎಂಸಿ&ಎ/033/2025–26

ಜಿಲ್ಲಾ ಪಂಚಾಯತ್, ಕೋಲಾರ
ಜಿಲ್ಲಾ ಆಯುಷ್ ಅಧಿಕಾರಿಗಳ ಕಛೇರಿ, ಎಸ್.ಎನ್.ಆರ್. ಆಸ್ಪತ್ರೆ ಆವರಣ, ಕೋಲಾರ–563101.
E-Mail ID: dao.kolar09@gmail.com, Ph:08152-220025
ಸಂಖ್ಯೆ:ಆಯುಷ್/ಕೋ/92/2024–25 ದಿನಾಂಕ: 16.04.2025

ಟೆಂಡರ್ ಪ್ರಕಟಣೆ

ಕೋಲಾರ ಜಿಲ್ಲಾ ಆಯುಷ್ ಇಲಾಖೆಯ ಸರ್ಕಾರದ ಅಧಿಕೃತ ಕೆಲಸಗಳ ಉಪಯೋಗಕ್ಕಾಗಿ ಒಂದು ವರ್ಷದ ಅವಧಿಗೆ ಚಾಲಕ ಸಮೇತ ಒಂದು ಎ.ಸಿ. ಕಾರನ್ನು ಹಾಗೂ 14 ಗ್ರೂಪ್–ಡಿ (ಸ್ವಚ್ಛತಾ ಸಿಬ್ಬಂದಿ) ಸಿಬ್ಬಂದಿಗಳ ಸೇವೆಯನ್ನು ಹೊರಗುತ್ತಿಗೆ ಆಧಾರದ ಮೇಲೆ ಒಂದು ವರ್ಷದ ಅವಧಿಗೆ ಒದಗಿಸಲು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕ ಅಧಿನಿಯಮ 1999–2000 ರನ್ವಯ ಇ–ಟೆಂಡರ್ ಅಧಿಸೂಚನೆ ಹೊರಡಿಸಲಾಗಿದೆ. **ಇ–ಟೆಂಡರ್ ಪ್ರಕ್ರಿಯೆ:** (1) ಇ–ಪೋರ್ಟಲ್‌ನಲ್ಲಿ ಟೆಂಡರ್ ನಮೂನೆ ಡೌನ್‌ಲೋಡ್ ಮಾಡಿಕೊಳ್ಳಲು ಪ್ರಾರಂಭವಾಗುವ **ದಿನಾಂಕ: 19.04.2025 ಪೂರ್ವಾಹ್ನ 11.00 ಘಂಟೆ**. (2) ಇ–ಪೋರ್ಟಲ್ ಮುಖಾಂತರ ಟೆಂಡರ್ ಬಿಡ್‌ಗಳನ್ನು ಸಲ್ಲಿಸಲು ಕೊನೆ **ದಿನಾಂಕ: 05.05.2025ರ ಪೂರ್ವಾಹ್ನ 11.00 ಘಂಟೆ**. (3) ತಾಂತ್ರಿಕ ಬಿಡ್ ತೆರೆಯುವ **ದಿನಾಂಕ, ಸಮಯ ಮತ್ತ ಸ್ಥಳ: 07.05.2025 ಪೂರ್ವಾಹ್ನ 12.00 ಘಂಟೆ** ಜಿಲ್ಲಾ ಆಯುಷ್ ಕಛೇರಿ, ಕೋಲಾರ. (4) ಆರ್ಥಿಕ ಬಿಡ್ ತೆರೆಯುವ ಸಂಭವನೀಯ **ದಿನಾಂಕ, ಸಮಯ ಮತ್ತು ಸ್ಥಳ: 12.05.2025 ಪೂರ್ವಾಹ್ನ 11.30 ಘಂಟೆ. ಜಿಲ್ಲಾ ಪಂಚಾಯತ್, ಕೋಲಾರ.**
ಟೆಂಡರ್ ನಮೂನೆ/ದಾಖಲೆಗಳಿಗಾಗಿ ಮತ್ತು ಷರತ್ತು/ನಿಭಂದನೆಗಳ ಬಗ್ಗೆ ಹೆಚ್ಚಿನ ಮಾಹಿತಿಯನ್ನು https://kppp.karnataka.gov.in. ವೆಬ್‌ಸೈಟ್‌ನಲ್ಲಿ ಪಡೆಯಬಹುದಾಗಿದೆ.

ಸಹಿ/–
ಜಿಲ್ಲಾ ಆಯುಷ್ ಅಧಿಕಾರಿಗಳು
ಜಿಲ್ಲಾ ಆಯುಷ್ ಕಛೇರಿ
ಕೋಲಾರ
ವಾಸಾಸಂಇ/ಕೋಲಾರ/ಆರ್.ಓ.ಸಂಖ್ಯೆ:25/ಕೆಎಸ್ಎಂಸಿಎ/2025–26

ಕರ್ನಾಟಕ ಸರ್ಕಾರ
ಕಾರ್ಯನಿರ್ವಾಹಕ ಅಭಿಯಂತರರವರ ಕಛೇರಿ
ಪಂಚಾಯತ ರಾಜ್ ಇಂಜಿನೀಯರಿಂಗ್ ವಿಭಾಗ ಕಲಬುರಗಿ
ಸಂಖ್ಯೆ: ಕಾನಿಅ/ಪಂರಾಇಂ/ವಿಕ/ತಾಶಾ2/ಟೆಂಡರ/2025–26/208 ದಿನಾಂಕ:17/04/2025

:: ಇ–ಪ್ರೊಕ್ಯೂರಮೆಂಟ್ ಅಲ್ಪಾವಧಿ ಟೆಂಡರ ಪ್ರಕಟಣೆ ದ್ವಿ–ಲಕೋಟೆ ಪದ್ದತಿಯಲ್ಲಿ ::

1) ಕಾಮಗಾರಿಗಳ ಇಂಡೆಂಟ್ ಸಂಖ್ಯೆ : ಸೇಡಂ ತಾಲೂಕು – 01) ಆಡಕಿ ಗ್ರಾಮದಲ್ಲಿ ಪ.ಜಾತಿ ಓಣಿಯಲ್ಲಿ ಸಿ ಸಿ ರಸ್ತೆ ಮತ್ತು ಚರಂಡಿ ನಿರ್ಮಾಣ. 02) ಆಡಕಿ ತಾಂಡಾದ ರಸ್ತೆ ಸುಧಾರಣೆ. 03) ಜಾಕನಪಲ್ಲಿ ಗ್ರಾಮದ ಪ.ಜಾತಿ ಓಣಿಯಲ್ಲಿ ಸಿ ಸಿ ರಸ್ತೆ ಮತ್ತು ಚರಂಡಿ ನಿರ್ಮಾಣ. 04) ಜಾಕನಪಲ್ಲಿ ತಾಂಡಾದಲ್ಲಿ ಸಿ ಸಿ ರಸ್ತೆ ಮತ್ತು ಚರಂಡಿ ನಿರ್ಮಾಣ. 05) ರಾಘಾಪೂರ ಗ್ರಾಮದ ಪ.ಜಾತಿ ಓಣಿಯಲ್ಲಿ ಸಿ ಸಿ ರಸ್ತೆ ಮತ್ತು ಚರಂಡಿ ನಿರ್ಮಾಣ. 06) ಮುನುಕನಪಲ್ಲಿ ಗ್ರಾಮದ ಪ.ಜಾತಿ ಓಣಿಯಲ್ಲಿ ಸಿ ಸಿ ರಸ್ತೆ ಮತ್ತು ಚರಂಡಿ ನಿರ್ಮಾಣ. 07) ರುದ್ರವಾರಂ ಗ್ರಾಮದ ಪ.ಜಾತಿ. ಓಣಿಯಲ್ಲಿ ಸಿ ಸಿ ರಸ್ತೆ ಮತ್ತು ಚರಂಡಿ ನಿರ್ಮಾಣ. 08) ಎಸ್.ಎನ್. ತಾಂಡಾ ರಸ್ತೆಯ ಪಕ್ಕದಲ್ಲಿ ಬಸ್ ನಿಲ್ದಾಣ ನಿರ್ಮಾಣ. 09) ಎಸ್.ಎನ್. ತಾಂಡಾದಿಂದ ಲೋಕೋಪಯೋಗಿ ರಸ್ತೇಯವರೆಗೆ ಬಿ.ಟಿ. ರಸ್ತೆ ನಿರ್ಮಾಣ. 10) ರಾಮಲಿಂಗ ತಾಂಡಾದಲ್ಲಿ ರಸ್ತೆ ನಿರ್ಮಾಣ. 11) ಹೈಯ್ಯಾಳ ಗ್ರಾಮದ ಹರಿಜನ ಶೀನು ಮನೆಯಿಂದ ಹುಸೇನಪ್ಪಾ ಮನೆಯವರೆಗೆ ಚರಂಡಿ ನಿರ್ಮಾಣ. ಇಂಡೆಂಟ್ ಸಂಖ್ಯೆ : **RDPR/2024-25/RD/WORK_INDENT14006,** 2) ಲೆಕ್ಕ ಶೀರ್ಷಿಕೆ: 2024–25 ನೇ ಸಾಲಿನ ಕಲ್ಯಾಣ ಕರ್ನಾಟಕ ಪ್ರದೇಶ ಅಭಿವೃದ್ಧಿ, 3) ಟೆಂಡರಗಿಟ್ಟ ಅಂದಾಜು ಮೊತ್ತ: **ಇಂಡೆಂಟ್ ಸಂಖ್ಯೆ: 14006, ರೂ. 84,93,923.52**, 4) ಗುತ್ತಿಗೆದಾರರ ಅರ್ಹತೆ: 3ನೇ ದರ್ಜೆ ಮತ್ತು ಮೇಲ್ಪಟ್ಟು, 5) ಟೆಂಡರ ಫಾರಂ ಪಡೆಯುವ ದಿನಾಂಕ: **17–04–2025 ರಿಂದ 02–05–2025 ಮಧ್ಯಾಹ್ನ 1:00 ಗಂಟೆವರೆಗೆ,** 6) ಟೆಂಡರ ಅರ್ಜಿ ಬೆಲೆ: ಇ–ಪ್ರೊಕ್ಯೂರಮೆಂಟ್ ನಿಯಮಾನುಸಾರ, 7) ಇ.ಎಂ.ಡಿ. : ರೂ. 1,70,000.00, 8) ಟೆಂಡರ ಸಲ್ಲಿಸುವ ದಿನಾಂಕ: **17–04–2025 ರಿಂದ 02–05–2025 ಮಧ್ಯಾಹ್ನ 1:00 ಗಂಟೆವರೆಗೆ,** 9) ತಾಂತ್ರಿಕ ಬಿಡ್ ತೆರೆಯುವ ದಿನಾಂಕ: **03–05–2025 ಮಧ್ಯಾಹ್ನ 1:00 ಗಂಟೆ ನಂತರ,** 10) ಆರ್ಥಿಕ ಬಿಡ್ ತೆರೆಯುವ ದಿನಾಂಕ: **05–05–2025 ಬೆಳಿಗ್ಗೆ 11:00 ಗಂಟೆ ನಂತರ,** 11) ಕೆಲಸ ಮುಗಿಸಲು ಕಾಲಮಿತಿ: 5 ತಿಂಗಳು ಮಳೆಗಾಲ ಸಹಿತ, 12) ಹೆಚ್ಚಿನ ವಿವರಗಳಿಗೆ ಸಂಪರ್ಕಿಸಬೇಕಾದ ವಿಳಾಸ: ಕಾರ್ಯನಿರ್ವಾಹಕ ಅಭಿಯಂತರರವರ ಕಛೇರಿ ಪಂಚಾಯತ ರಾಜ್ ಇಂಜಿನೀಯರಿಂಗ್ ವಿಭಾಗ ಕರ್ನಾಟಕ ಗ್ರಾಮೀಣ ಬ್ಯಾಂಕ ಎದುರಿಗೆ ಕುಸನೂರ ರಸ್ತೆ ರಾಜಾಪೂರ ಕಲಬುರಗಿ, 13) ಅಂತರಜಾಲ ತಾಣದ ವಿಳಾಸ: www.kppp.karnataka.gov.in

ಸಹಿ/– ಕಾರ್ಯನಿರ್ವಾಹಕ ಅಭಿಯಂತರರು
ಪಂಚಾಯತ ರಾಜ್ ಇಂಜಿನೀಯರಿಂಗ್ ವಿಭಾಗ ಕಲಬುರಗಿ
ವಾ.ಸಾ.ಸಂ.ಇ/ಕಲಬುರಗಿ/48/ಕೆ.ಎಸ್.ಎಂ.ಸಿ.&ಎ/2025–26

ಟ್ವೀಟೂ-ಖಾರಾ

ಬಿಜೆಪಿ ಕರ್ನಾಟಕ
ಹುಬ್ಬಳ್ಳಿಯಲ್ಲಿ ನೇಹಾ ಹಿರೇಮಠ್ ಕೊಲೆಯಾಗಿ ಒಂದು ವರ್ಷ ಕಳೆದರೂ ಆರೋಪಿಗೆ ಶಿಕ್ಷೆ ಕೊಡಿಸುವಲ್ಲಿ ಭ್ರಷ್ಟ INCKarnataka ಸರಕಾರ ವಿಫಲವಾಗಿದೆ. ಮತಾಂಧರ ಪರವಾಗಿ ನಿಲ್ಲುವ siddaramaiah ಸರಕಾರ ಎಲ್ಲಿ ವೋಟ್ ಬ್ಯಾಂಕ್ ಕಳೆದುಕೊಂಡು ಬಿಡುತ್ತೇವೆ ಎನ್ನುವ ಭಯದಲ್ಲಿ ಕಾಂಗ್ರೆಸ್ ಕಾರ್ಯಕರ್ತ, ಕಾಂಗ್ರೆಸ್‌ನಿಂದ ಪಾಲಿಕೆ ಸದಸ್ಯ ಆಗಿರುವ ತಂದೆಯ ಪುತ್ರಿಗೆ ನ್ಯಾಯ ಕೊಡಿಸಲು ಮೀನಾಮೇಷ ಎಣಿಸುತ್ತಿದೆ. 90 ದಿನದಲ್ಲಿ ನ್ಯಾಯ ಕೊಡಿಸುವುದಾಗಿ ಹೇಳಿ ಇದೀಗ ಪ್ರಕರಣವನ್ನೇ ಮುಚ್ಚಿ ಹಾಕಲು ಸಂಚು ರೂಪಿಸಿದೆ ಕಾಂಗ್ರೆಸ್.

ಜೈ ಬಸವ
ಹುಬ್ಬಳ್ಳಿಯಲ್ಲಿ ಒಂದು NIA ಕಚೇರಿ ತೆರೆಯಲು ಹೇಳಿ ನಿಮ್ಮ ಕೇಂದ್ರ ಸರಕಾರಕ್ಕೆ.

ಸಮಾಚಾರ ಸಣ್ಣದಲ್ಲ

ಅಪಘಾತ: ತಂದೆ, ಮಗಳ ಸಾವು

ಚಿಕ್ಕಬಳ್ಳಾಪುರ: ರಾಷ್ಟ್ರೀಯ ಹೆದ್ದಾರಿ 44ರ ಈಶಾ ಫೌಂಡೇಶನ್ ತಿರುವಿನ ಲಿಂಗಶೆಟ್ಟಿಪುರ ಗೇಟ್ ಬಳಿ ಬೈಕ್ ಮೇಲೆ ಲಾರಿ ಕಂಟೈನರ್ ಉರುಳಿ ಬಿದ್ದ ಪರಿಣಾಮ ತಂದೆ, ಮಗಳು ಮೃತಪಟ್ಟ ಘಟನೆ ಚಿಕ್ಕಬಳ್ಳಾಪುರದಲ್ಲಿ ನಡೆದಿದೆ. ಈ ಅಪಘಾತದಲ್ಲಿ ಮಗಳು ದೀಕ್ಷಾ(4) ಹಾಗೂ ತಂದೆ ವೆಂಕಟೇಶ್ (40) ಕಂಟೈನರ್ ನಡಿ ಸಿಲುಕಿ ಸಾವನ್ನಪ್ಪಿದ ದುರ್ದೈವಿಗಳು. ಇದೇ ಅಪಘಾತದಲ್ಲಿ ತಾಯಿ ರೂಪ ಸೇರಿ ಮತ್ತೊಬ್ಬರ ಸ್ಥಿತಿ ಗಂಭೀರವಾಗಿದ್ದು ಇಬ್ಬರನ್ನೂ ಚಿಕಿತ್ಸೆಗೆ ದಾಖಲಿಸಲಾಗಿದೆ. ಮೃತರು ಚಿಕ್ಕಬಳ್ಳಾಪುರ ತಾಲೂಕು ಬಂಡಹಳ್ಳಿ ನಿವಾಸಿಗಳಾಗಿದ್ದು ಚಿಕ್ಕಬಳ್ಳಾಪುರದ ಮದುವೆಗೆ ಬರುತ್ತಿದ್ದರು ಎನ್ನಲಾಗಿದೆ. ಕಂಟೈನರ್ ಬೆಂಗಳೂರಿನಿಂದ ಆಂಧ್ರದ ಕಡೆಗೆ ತೆರಳುತ್ತಿತ್ತು. ಘಟನಾ ಸ್ಥಳಕ್ಕೆ ಗ್ರಾಮಾಂತರ ಪೊಲೀಸರು ಭೇಟಿ ನೀಡಿದ್ದು ಪ್ರಕರಣ ದಾಖಲಿಸಿಕೊಂಡು ತನಿಖೆ ಮುಂದುವರಿಸಿದ್ದಾರೆ. ಅಪಘಾತದ ಮಾಹಿತಿ ತಿಳಿಯುತ್ತಿದ್ದಂತೆ ಜಮಾಯಿಸಿದ ನೂರಾರು ಸ್ಥಳೀಯರು ಸಾರಿಗೆ ಇಲಾಖೆಯ ನಿರ್ಲಕ್ಷ್ಯಕ್ಕೆ ಆಕ್ರೋಶ ವ್ಯಕ್ತಪಡಿಸಿದರು. ಮೃತರ ಕುಟುಂಬಕ್ಕೆ ನ್ಯಾಯ ನೀಡಲು ಒತ್ತಾಯಿಸಿದರು.

ಪ್ರತಿಭಟನೆ ವೇಳೆ ರಸ್ತೆ ತಡೆ: ಪ್ರಕರಣ ದಾಖಲು

ಮಂಗಳೂರು: ವಕ್ಫ್ ತಿದ್ದುಪಡಿ ಮಸೂದೆ ವಿರೋಧಿಸಿ, ಉಲಮಾ ಸಮನ್ವಯ ಸಮಿತಿಯ ನೇತೃತ್ವದಲ್ಲಿ ಶುಕ್ರವಾರ ಮಂಗಳೂರಿನ ಕಣ್ಣೂರಿನ ಅಡ್ಯಾರ್ ಶಾ ಗಾರ್ಡನ್‌ನಲ್ಲಿ ನಡೆದ ಬೃಹತ್ ಪ್ರತಿಭಟನೆ ವೇಳೆ ಕಾನೂನುಬಾಹಿರವಾಗಿ ರಸ್ತೆ ತಡೆ ನಡೆಸಿದ್ದಕ್ಕಾಗಿ ಪೊಲೀಸರು ಪ್ರಕರಣ ದಾಖಲಿಸಿದ್ದಾರೆ. ಸಂಜೆ 4:30 ರ ಸುಮಾರಿಗೆ, ಪ್ರತಿಭಟನಾಕಾರರ ಪೈಕಿ ಕೆಲವರ ಗುಂಪು ಉದ್ದೇಶಪೂರ್ವಕವಾಗಿ ರಾಷ್ಟ್ರೀಯ ಹೆದ್ದಾರಿ 73 ರ ಬದಿಯಲ್ಲಿ ಮತ್ತು ಮಧ್ಯದಲ್ಲಿ ಜಮಾಯಿಸಿ, ವಾಹನಗಳ ಮುಕ್ತ ಸಂಚಾರಕ್ಕೆ ಅಡ್ಡಿಪಡಿಸಲಾಗಿದೆ. ಪೊಲೀಸರು ಪ್ರತಿಭಟನಾಕಾರರನ್ನು ಚದುರಿಸಲು ಮತ್ತು ಮುಕ್ತ ಸಂಚಾರಕ್ಕೆ ಅವಕಾಶ ನೀಡುವಂತೆ ಪದೇ ಪದೇ ಮನವಿ ಮಾಡಿ ಸೂಚನೆಗಳನ್ನು ನೀಡಿದ್ದರೂ, ಕೆಲವು ಪ್ರತಿಭಟನಾಕಾರರು ಸಂಚಾರಕ್ಕೆ ಅಡ್ಡಿಪಡಿಸುವ, ತುರ್ತು ಸೇವೆಗಳಿಗೆ ಅಡ್ಡಿಪಡಿಸುವ ಮತ್ತು ಪೊಲೀಸರು ಕರ್ತವ್ಯ ನಿರ್ವಹಿಸುವಲ್ಲಿ ಹಸ್ತಕ್ಷೇಪ ಮಾಡಿದ್ದಾರೆ. ನೇರ ವೀಕ್ಷಣೆ ಮತ್ತು ಆರಂಭಿಕ ವಿಡಿಯೊ ಪರಿಶೀಲನೆಯ ಆಧಾರದ ಮೇಲೆ, ಕೃಷ್ಣಾಪುರ ನಿವಾಸಿ ಜಲೀಲ್, ವಳಚಿಲ್ ನಿವಾಸಿ ಫರ್ಖುಲ್ ಮತ್ತು ಮೊಹಮ್ಮದ್ ಹನೀಫ್ ನೌಫಲ್ ಅವರನ್ನು ಆರೋಪಿಗಳೆಂದು ಗುರುತಿಸಲಾಗಿದೆ. ಕಂಕನಾಡಿ ಟೌನ್ ಪೊಲೀಸ್ ಠಾಣೆಯಲ್ಲಿ ಕ್ರಿಮಿನಲ್ ಪ್ರಕರಣ ದಾಖಲಿಸಲಾಗಿದೆ.

ಪುನೀತ್ ಕೆರೆಹಳ್ಳಿಗೆ ಪೊಲೀಸ್ ಘೇರಾವ್

ಬೆಳ್ತಂಗಡಿ: ವಿಶ್ವ ಹಿಂದೂ ಪರಿಷತ್ ಬೆಳ್ತಂಗಡಿ ಪ್ರಖಂಡ ವತಿಯಿಂದ ಶನಿವಾರ ಸಂಜೆ 7 ಗಂಟೆಗೆ

ಉಜಿರೆ ಶ್ರೀ ಕೃಷ್ಣಾನುಗ್ರಹ ಸಭಾಭವನದಲ್ಲಿ ನಡೆ ಯಲಿದ್ದ ರಾಮೋತ್ಸವ ಕಾರ್ಯಕ್ರಮಕ್ಕೆ ಆಗಮಿಸಲು ಬರುತ್ತಿದ್ದ ಹಿಂದೂ ಹೋರಾಟಗಾರ, ಗೋ ರಕ್ಷಕ ಪುನೀತ್ ಕೆರೆಹಳ್ಳಿ ಅವರನ್ನು ಬೆಳ್ತಂಗಡಿ ಪೊಲೀಸರು ಉಜಿರೆಯ ಕಾಲೇಜು ರಸ್ತೆಯಲ್ಲಿ ಘೇರಾವ್ ಹಾಕಿ ತಡೆದಿದ್ದಾರೆ. ದಕ್ಷಿಣ ಕನ್ನಡ ಪ್ರವೇಶ ನಿಷೇಧ ಮಾಡಿದ ಡಿಸಿ ಆದೇಶ ಕೆರೆಹಳ್ಳಿಗೆ ತೋರಿಸಿದ ಬಳಿಕ ವಾಪಸ್ ತೆರಳಿದ್ದಾರೆ ಎನ್ನಲಾಗಿದೆ.

ವಿಷ ಸೇವಿಸಿ ಚಾಲಕ ಆತ್ಮಹತ್ಯೆಗೆ ಯತ್ನ

ಚಿಕ್ಕಮಗಳೂರು: ಮೇಲಾಧಿಕಾರಿಗಳ ಕಿರುಕುಳಕ್ಕೆ ಬೇಸತ್ತು ಕೆಎಸ್ಆರ್‌ಟಿಸಿ ಬಸ್ ಚಾಲಕನೊಬ್ಬ ಡೆತ್ ನೋಟ್ ಬರೆದಿಟ್ಟು, ವಿಷ ಸೇವಿಸಿ ಆತ್ಮಹತ್ಯೆಗೆ ಯತ್ನಿಸಿರುವ ಘಟನೆ ಚಿಕ್ಕಮಗಳೂರು ಜಿಲ್ಲೆಯ ಕಡೂರು ತಾಲೂಕಿನಲ್ಲಿ ನಡೆದಿದೆ. ಚಂದ್ರು, ವಿಷ ಸೇವಿಸಿ ಆತ್ಮಹತ್ಯೆಗೆ ಯತ್ನಿಸಿದ ಕೆಎಸ್ಆರ್‌ಟಿಸಿ ಚಾಲಕ. ಮೇಲಾಧಿಕಾರಿ ಪುಟ್ಟಸ್ವಾಮಿ ವಿರುದ್ಧ ಡೆತ್ ನೋಟ್ ಬರೆದಿಟ್ಟು ಕಡೂರು ಡಿಪೋದಲ್ಲಿ ಆತ್ಮಹತ್ಯೆಗೆ ಯತ್ನಿಸಿದ್ದಾರೆ. ಹುಷಾರಿಲ್ಲದೇ ಕೆಲಸಕ್ಕೆ ಬಾರದಿದ್ದಕ್ಕೆ ಹಾಜರಾತಿಯಲ್ಲಿ ಗೈರು ಹಾಕಿದ್ದಾರೆ. ನನ್ನ ಖಾತೆಯಲ್ಲಿ ಸಾಕಷ್ಟು ರಜೆ ಇದೆ. ಆದ್ರೂ ಗೈರು ಹಾಕಿದ್ದಾರೆ. ಆದರೆ ಹಣ ಕೊಟ್ಟವರಿಗೆ ಎಷ್ಟು ದಿನ ರಜೆ ಬೇಕಾದ್ರೂ ಕೊಡ್ತಾರೆ ಎಂದು ಎಟಿಎಸ್ ಪುಟ್ಟಸ್ವಾಮಿ ವಿರುದ್ಧ ಆರೋಪ ಮಾಡಿದ್ದಾರೆ.

ಆಪತ್ತಿನ ಕಾಲದಲ್ಲಿ ಹಳದಿ ಲೋಹವೇ ಸಂಕಟ ಪರಿಹಾರಕ್ಕೆ ಸಹಕಾರಿ | ಬಂಗಾರ ಖರೀದಿಗೆ ಹಿಂಜರಿಕೆ ಬೇಡ | ರಾಜಕೀಯವಾಗಿ ಎಲ್ಲವೂ ಸಿಕ್ಕಿದೆ; ಮುಂದೊಂದು ದಿನ ಜೆಡಿಎಸ್ ಅಧಿಕಾರಕ್ಕೆ ಬರಲಿದೆ

ಆಯುಸ್ಸಿನ ರೀತಿಯೇ, ಬಂಗಾರದ ಬೆಲೆಯೂ ಕಡಿಮೆಯಾಗಲ್ಲ

ವಿಶ್ವವಾಣಿ ಸಂದರ್ಶನ

ಜಯಂತ್ ಬಸವರಾಜ್

ಮನುಷ್ಯ ಆಯುಷ್ಯ ಹೇಗೆ ಕಡಿಮೆಯಾಗುವುದಿಲ್ಲವೋ, ಅದೇ ರೀತಿ ಬಂಗಾರದ ಮೌಲ್ಯವೂ ಕುಸಿಯುವುದಿಲ್ಲ. ಕುಸಿದರೂ 200ರಿಂದ 300 ರುಪಾಯಿ ಮಾತ್ರ ಕುಸಿಯಬಹುದು. ಆದರೆ ಭವಿಷ್ಯದ ಆಲೋಚನೆ ಹಾಗೂ ಸಂಕಷ್ಟದ ಸಮಯಕ್ಕೆ ಅನುಕೂಲವಾಗಲು ಬಂಗಾರ ಖರೀದಿಸಿರಬೇಕು. ಈ ವಿಷಯದಲ್ಲಿ ಜನರು ಹಿಂಜರಿಯಬಾರದು ಎಂದು ಶ್ರೀ ಸಾಯಿ ಗೋಲ್ಡ್ ಮುಖ್ಯಸ್ಥ, ವಿಧಾನಪರಿಷತ್ ಸದಸ್ಯ ಟಿ.ಎ ಶರವಣ ಸಲಹೆ ನೀಡಿದ್ದಾರೆ.

ಶ್ರೀಸಾಯಿ ಗೋಲ್ಡ್ ಪ್ಯಾಲೇಸ್ ಏಳನೇ ಶಾಖೆಯನ್ನು ಮಲ್ಲೇಶ್ವರದಲ್ಲಿ ಆರಂಭಿಸಿರುವ ಶರವಣ ಅವರು, ಸಾಯಿ ಗೋಲ್ಡ್ ಪ್ಯಾಲೇಸ್ ಆರಂಭದ ದಿನಗಳು, ಬಂಗಾರದ ಖರೀದಿ, ಬಂಗಾರದ ಭವಿಷ್ಯ, ತಮ್ಮ ರಾಜಕೀಯ ಜೀವನ ಸೇರಿದಂತೆ ಹಲವು ವಿಷಯಗಳ ಬಗ್ಗೆ 'ವಿಶ್ವವಾಣಿ'ಯೊಂದಿಗೆ ಮಾತನಾಡಿದ್ದಾರೆ. ಸಂದರ್ಶನದ ಪೂರ್ಣಪಾಠ ಇಲ್ಲಿದೆ.

- **ಬಂಗಾರದ ಬೆಲೆ ಏರಿಕೆಗೆ ಕಾರಣ ವೇನು?**

ಬಂಗಾರದ ಬೆಲೆ ದಿನೇ ದಿನೇ ಹೆಚ್ಚಾಗಲು ಹಲವು ಕಾರಣಗಳಿವೆ. ಪ್ರಮುಖವಾಗಿ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರು ತಮ್ಮ ದೇಶದ ಆರ್ಥಿಕತೆ ಬಲಿಷ್ಠ ಮಾಡುವ ನಿಟ್ಟಿನಲ್ಲಿ ಇತರ ದೇಶಗಳ ಮೇಲೆ ವಿಧಿಸುತ್ತಿರುವ ಸುಂಕ ನೀತಿ. ಇದರಿಂದಾಗಿ ಅಮೆರಿಕ ಮತ್ತು ಚೀನಾ ನಡುವೆ ತೆರಿಗೆ ಯುದ್ಧವಾಗಬಹುದು. ಆದರೆ ಎಲ್ಲಾ ದೇಶಗಳು ತಮ್ಮ ಆರ್ಥಿಕ ಭದ್ರತೆಗೆ ನಗದನ್ನು ಠೇವಣಿಯಾಗಿಡುವ ಬದಲಾಗಿ, ಬಂಗಾರದ ಮೇಲೆ ಬಂಡವಾಳ ಹೂಡಿಕೆ ಮಾಡುತ್ತಿವೆ. ಬಂಗಾರದ ಮೇಲೆ ಬಂಡವಾಳ ಹೂಡಿಕೆ ಮಾಡುವಲ್ಲಿ ಭಾರತ ಎರಡನೆ ಯ ಸ್ಥಾನದಲ್ಲಿದೆ. ನಮ್ಮ ದೇಶದಲ್ಲಿ ಬಂಗಾರ ಉತ್ಪಾದನಾ ಕೇಂದ್ರಗಳಿಲ್ಲ, ನೆರೆ ದೇಶಗಳಿಂದ ನಾವು ಆಮದು ಮಾಡಿಕೊಳ್ಳುತ್ತಿದ್ದೇವೆ. ಜನರಲ್ಲಿ ಬಂಗಾರದ ಮೇಲೆ ಬಂಡವಾಳ ಹೂಡಿದರೆ ನಷ್ಟವಿಲ್ಲ ಎಂದು ಅರಿವಾಗಿದೆ ಆದ್ದರಿಂದ ಬೇಡಿಕೆ ಹೆಚ್ಚಿದಂತೆ ಬೆಲೆಯೂ ಹೆಚ್ಚಿದೆ.

- **ಸಾಯಿ ಗೋಲ್ಡ್ ಪ್ಯಾಲೇಸ್‌ನ ನೂತನ ಮಳಿಗೆ ವಿಶೇಷತೆಯೇನು?**

1995ರಲ್ಲಿ ಬಸವನಗುಡಿಯಲ್ಲಿ ಸಣ್ಣದಾಗಿ ಆರಂಭವಾದ ಶ್ರೀ ಸಾಯಿ ಗೋಲ್ಡ್ ಪ್ಯಾಲೇಸ್ ಮಳಿಗೆಯಿಂದ ಪ್ರಾರಂಭವಾದ ಈ ಪಯಣ ಈಗ 35 ವರ್ಷಗಳನ್ನು ಪೂರ್ಣಗೊಳಿಸಿದೆ. ಹಂತ ಹಂತವಾಗಿ ಗ್ರಾಹಕರ ಸೇವೆಯಲ್ಲಿ ತೊಡಗಿಸಿಕೊಂಡಿ ದಕ್ಕೆ ಗ್ರಾಹಕರು ನನ್ನ ಮೇಲೆ ಹೆಚ್ಚಿನ ನಂಬಿಕೆಯಿಟ್ಟಿದ್ದಾರೆ. ಸಾಯಿ ಗೋಲ್ಡ್ ಉತ್ಪನ್ನಗಳು ಬೆಂಗಳೂರಿನ ಪ್ರತೀ ಮೂಲೆ ಯಲ್ಲೂ ಸಿಗುವಂತಾಗಬೇಕು. ಗ್ರಾಹಕರಿರುವ ಜಾಗ ದಲ್ಲೇ ಬಂದು ಬಂಗಾರ ಕೊಳ್ಳಬೇಕೆಂಬುದು ನನ್ನ ಉದ್ದೇಶ ದಿಂದ ಮಲ್ಲೇಶ್ವರದ ನೂತನ ಮಳಿಗೆ ಆರಂಭಿಸಿದ್ದೇವೆ.

- **ನಿಮ್ಮ ಅಂಗಡಿ ಬಗ್ಗೆ ಗ್ರಾಹಕರ ಭರವಸೆಏನು?**

ಮಳಿಗೆ ಪ್ರಾರಂಭಿಸಿದ ದಿನಗಳಲ್ಲಿ ಖುದ್ದು ಗ್ರಾಹಕರಿಗೆ ಕೈಯಾರೆ ಬಂಗಾರ ನೀಡುತ್ತಿದ್ದೆ. ಆಗ ಬಂಗಾರ ಕೊಂಡೊಯ್ದ ಗ್ರಾಹಕರು ನಿಮ್ಮ ಕೈಗುಣ ಚೆನ್ನಾಗಿದೆ, ಸಾಯಿ ಗೋಲ್ಡ್ ಪ್ಯಾಲೇಸ್‌ನಲ್ಲಿ ಚಿನ್ನ ಖರೀದಿಸಿದ ನಂತರ ನಮಗೆ ಒಳ್ಳೆಯದಾಗಿದೆ ಎನ್ನುತ್ತಿದ್ದರು. ಗ್ರಾಹಕರ ಬೇಡಿಕೆಯೇನು? ಗುಣಮಟ್ಟ, ಬೆಲೆ, ಅವುಗಳ ಪೂರೈಕೆಗಳ ಮೇಲೆ ನಾವು ಹೆಚ್ಚಿನ ಗಮನ ಹರಿಸಿ ಅವರಿಗೆ ಬೇಕಾದ ವಿವಿಧ ರೀತಿಯ ವಿನ್ಯಾಸಗಳಲ್ಲಿ ಎಲ್ಲಾ ರೀತಿ ಆಭರಣ ತಯಾರಿಸುತ್ತೇವೆ. ಅದರ ಜತೆಗೆ ಬಂಗಾರದ ಶುದ್ಧತೆಗೆ ನಮ್ಮ ಮೊದಲ ಆದ್ಯತೆಯಾಗಿದೆ. 25 ವರ್ಷದ ಹಿಂದೆಯೇ ಹಾಲ್ ಮಾರ್ಕ್ 916 ಬಂಗಾರವನ್ನು ನಾವು ಗ್ರಾಹಕರಿಗೆ ನೀಡಿದೆವು. ಇದು ಕೇವಲ ಬಂಗಾರದ ಮಳಿಗೆಯಲ್ಲ ಇದು ಸಾಯಿ ಮಂದಿರ, ಇಲ್ಲಿ ಗ್ರಾಹಕರಿಗೆ ಏನು ಸಲ್ಲಬೇಕೋ ಅದನ್ನು ಪ್ರಾಮಾಣಿಕವಾಗಿ, ನಗುಮೊಗದಲ್ಲೇ ನೀಡುತ್ತಾ ಬಂದಿದ್ದೇವೆ. ಆದ್ದರಿಂದ ಗ್ರಾಹಕರು ಬಂಗಾರದ ಖರೀದಿಸಿದರೆ ಅದು ಸಾಯಿ ಗೋಲ್ಡ್ ಪ್ಯಾಲೇಸ್‌ನಲ್ಲಿ ಎಂದು ಹೇಳುತ್ತಾರೆ.

> ಪ್ರಧಾನ ಮಂತ್ರಿ ನರೇಂದ್ರ ಮೋದಿಯವರ ನೇತೃತ್ವದ ಬಿಜೆಪಿ ಇಂದು ಅತಿ ದೊಡ್ಡ ರಾಜಕೀಯ ಪಕ್ಷವಾಗಿ ಆಡಳಿತ ನಡೆಸುತ್ತಿದೆ. ಆದರೆ ಪ್ರಾರಂಭದಲ್ಲಿ ಕೇವಲ ಎರಡೇ ಸಂಸದರು ಬಿಜೆಪಿಯಲ್ಲಿ ಇದದ್ದು, ಇಂದು 275 ಸೀಟು ಪಡೆದು ಬೇರೆ ಪಕ್ಷಗಳ ಜತೆಗೂಡಿ ದೇಶದ ಚುಕ್ಕಾಣಿ ಹಿಡಿದು 3 ನೇ ಬಾರಿಗೆ ಅಧಿಕಾರ ನಡೆಸುತ್ತಿಲ್ಲವಾ. ರಾಜಕೀಯ ಎಂಬುದೇ ಹಾಗೆ ಯಾವಾಗ ಏನಾಗುತ್ತದೆ ಎಂದು ಹೇಳಲಾಗುವುದಿಲ್ಲ, ಬದಲಾವಣೆ ಜಗದ ನಿಯಮ, ಒಂದಲ್ಲ ಒಂದು ದಿನ ಎಲ್ಲವೂ ಬದಲಾಗಲೇಬೇಕು. ಮತ್ತೆ ಜನರ ಆಶೀರ್ವಾದ ಪಡೆದು ನಮ್ಮ ಪಕ್ಷ ಆಡಳಿತಕ್ಕೇ ಬಂದೇ ಬರುತ್ತದೆ.
>
> -ಟಿ.ಎ. ಶರವಣ, ಶ್ರೀ ಸಾಯಿ ಗೋಲ್ಡ್ ಪ್ಯಾಲೇಸ್ ಮುಖಸ್ಥ, ವಿಧಾನಪರಿಷತ್ ಸದಸ್ಯ

- **ಮಧ್ಯಮ ವರ್ಗಕ್ಕೆ ಕೈಗೆಟದಷ್ಟು ಬಂಗಾರ ಏರಿದೆಯಲ್ಲವೇ?**

ಬಂಗಾರ ಬಲು ಭಾರವಾಗಿದೆ. ಆದರೆ ಚಿನ್ನ ಬಲು ಚೆನ್ನವೇ, ಹಳದಿ ಲೋಹ ಹಿಂದೆಂದಿಗೂ ಕಾಣದ ಮಟ್ಟಿಗೆ ಬೆಲೆ ಏರಿದೆ. ನಮ್ಮ ವಯಸ್ಸು ಹೇಗೆ ಕಡಿಮೆಯಾಗುವುದಿಲ್ಲವೋ ಹಾಗೆ ಬಂಗಾರದ ಬೆಲೆಯೂ ಕಡಿಮೆಯಾಗುವುದಿಲ್ಲ, ಬಂಗಾರದ ಮೇಲೆ ನಾವು ಬಂಡವಾಳ ಹೂಡುವಾಗ ಭವಿಷ್ಯದ ಬಗ್ಗೆ ಯೋಚಿಸಬೇಕು. ಈಗ ಕೊಳ್ಳುವಾಗ ಬೆಲೆ ಹೆಚ್ಚಿದೆ ಅಂದಾದರೆ ಕೆಲ ವರ್ಷಗಳು ಕಳೆದ ಮೇಲೆ ಈಗ ಕೊಂಡ ಬೆಲೆಯ ದುಪ್ಪಟ್ಟು ಬೆಲೆ ಸಿಗುತ್ತದೆ. ಯಾವುದೇ ಬ್ಯಾಂಕಿನಲ್ಲಿ ಹಣವಿಟ್ಟರೂ ಇಷ್ಟರ ಮಟ್ಟಿಗೆ ಬಡ್ಡಿ ಬರುವುದಿಲ್ಲ. ಬಂಗಾರದ ಎನ್ನುವುದು ಕೇವಲ ಅಲಂಕಾರಿಕ ವಸ್ತುವಲ್ಲ, ಅದೊಂದು ಆಸ್ತಿ. ಜೀವನದಲ್ಲಿ ಸಂಕಟ ಬಂದರೆ ಚಿನ್ನದ ರಮಣ. ಬೇರೆ ಆಸ್ತಿಗಳನ್ನು ಅಡಮಾನ ಇಡಬೇಕಾದರೆ ಎಷ್ಟೋ ಪ್ರಕ್ರಿಯೆ ಪಾಲಿಸಬೇಕು ಆದರೆ ತತ್‌ಕ್ಷಣ ಅಡಮಾನ ಇಟ್ಟು ಕಷ್ಟ ತೀರಿಸಿಕೊಳ್ಳಬಹುದಾದ ಮಾರ್ಗ ಬಂಗಾರ ಒಂದೇ ಆಗಿದೆ. ಆದ್ದರಿಂದ ಬಂಗಾರಕೊಳ್ಳಲು ಹಿಂಜರಿಯಬಾರದು.

- **ಏರಿರುವ ಬಂಗಾರ ಕಡಿಮೆಯಾಗಬಹುದೇ?**

ಕಳೆದ ವರ್ಷ ಬಂಗಾರದ ಬೆಲೆ ಗ್ರಾಂಗೆ ಸುಮಾರು ಆರು ಸಾವಿರಗಳಿದ್ದಿರಬಹುದು, ಆದರೆ ಇಂದು ಸುಮಾರು ಹತ್ತು ಸಾವಿರ ಆಸು ಪಾಸಿನಲ್ಲಿದೆ. ಬಂಗಾರದ ಬೆಲೆ ಎಂದಿಗೂ ಕುಸಿಯುವುದಿಲ್ಲ. ಕೇವಲ 100 ರಿಂದ 200 ರು.ಗಳ ವ್ಯತ್ಯಾಸವಾಗಬಗಹುದಷ್ಟೆ, ಆದರೆ ಅದನ್ನು ಬೆಲೆ ಕಡಿಮೆ ಎನ್ನಲಾಗದು. ಬಂಗಾರವು ಒಂದು ಬಂಡವಾಳ ಉದ್ಯಮವಾಗಿದೆ. ಇತ್ತೀಚಿನ ದಿನಗಳಲ್ಲಿ ಷೇರು ಮಾರುಕಟ್ಟೆ ಕುಸಿತವಾಗಿರುವುದನ್ನುನಾವು ಗಮನಿಸಬಹುದು, ಆದರೆ ಎಂದಾದರೂ ಬಂಗಾರದ ಬೆಲೆಯಲ್ಲಿ ಕುಸಿತವಗಿದೆಯಾ? ಇಲ್ಲ. ಇಂದಿನ ದರ ನೋಡುವವರು ಮುಂದಿನ ದರದ ಬಗ್ಗೆ ಯೋಚಿಸಬೇಕು. ಇಂದಿನ ಬೆಲೆಗಿಂತ ನೂರರಷ್ಟು ಬಂಗಾರದ ಬೆಲೆ ಏರಲಿದೆ ಹೊರತು ಕಡಿಮೆಯಾಗುವುದಿಲ್ಲ.

- **ರಾಜಕೀಯ ಜೀವನದ ಸವಾಲುಗಳೇನು?**

ಸಮಸ್ಯೆಯೇ ಜೀವನ, ಜೀವನದಲ್ಲಿ ಸಮಸ್ಯೆಗಳು ಬರುತ್ತಿರುತ್ತವೆ. ಅವು ಬಂದಾಗ ಕುಗ್ಗುವ ಮನಸ್ಥಿತಿಯೇ ನನ್ನದಲ್ಲ. ನಾನು ರಾಜಕೀಯ ರಂಗ ಪ್ರವೇಶಿಸಿದ್ದೇ ಜೀವನದಲ್ಲಿ ನಡೆದ ಒಂದು ಘಟನೆಯಿಂದಾಗಿ. ನನ್ನ ಆರಂಭದ ದಿನಗಳಲ್ಲಿ ಕೆಲವು ರಾಜಕಾರಣಿಗಳಿಂದಾಗಿ ನನಗೆ ತುಂಬಾ ತೊಂದರೆ ಉಂಟಾಯಿತು. ನಾನು ಆಗ ಯೋಚಿಸಿದೆ ನಾನು ಒಬ್ಬ ರಾಜಕಾರಣಿಯಾದರೆ ಈ ಸಮಸ್ಯೆಗಳನ್ನು ಎದುರಿಸಬಹುದು ಹಾಗೆಯೇ ನನ್ನಂತೆ ತೊಂದರೆಗಳಿಗೆ ಒಳಗಾದವರನ್ನು ನಾನು ಕಾಪಾಡಬಹುದಲ್ಲ ಎಂದು ಯೋಚಿಸಿ ರಾಜಕೀಯ ರಂಗ ಪ್ರವೇಶಿಸಿದೆ. ನನ್ನ ಶಕ್ತಿ, ಸಮಯ, ಹಣ ಎಲ್ಲವನ್ನು ವ್ಯಯಿಸಿ ನಾನು ರಾಜಕಾರಣಕ್ಕೆ ಬಂದು ಜನರ ಸೇವೆ ಮಾಡುತ್ತಿದ್ದೇನೆ. ಜನರಿಂದಲೂ ಸಹ ಅದೇ ರೀತಿಯ ಗೌರವ ದೊರೆಯುತ್ತಿದೆ. ಸಾಯಿ ಗೋಲ್ಡ್ ಎಷ್ಟು ಹೆಸರು ಮಾಡಿತೋ, ಅಷ್ಟೇ ನೊಂದ ಕುಟುಂಬಗಳಿಗೆ ಸಹಾಯ ಹಸ್ತ ಚಾಚಿದೆ. ಬಡತನದಿಂದ ಬಂದವರಿಗೆ ಹಸಿವಿನ ಬೆಲೆ ತಿಳಿದಿರುತ್ತದೆ, ಈ ಹಸಿವು ತಿಳಿದ ನಾನು ಬಡ ಜನರ ಸೇವೆ ಮಾಡುತ್ತಿದ್ದೇನೆ.

- **ದೇವೇಗೌಡರ ಜತೆಗಿನ ನಿಮ್ಮ ಒಡನಾಟ ಹೇಗಿದೆ?**

ಬಹಳ ಜನ ನನ್ನನ್ನು ದೇವೇಗೌಡರ ದತ್ತು ಪುತ್ರ ಎಂದೇ ಭಾವಿಸಿದ್ದಾರೆ. ಅವರಿಗೀಗ 93 ಮೂರು ವರ್ಷ. ಈಗಲೂ ಅವರು ರಾಜ್ಯಸಭೆಯಲ್ಲಿ ರೈತರ ಪರವಾಗಿ ಸತತವಾಗಿ ಧ್ವನಿ ಎತ್ತುತ್ತಾರೆ. ನೀರಾವರಿ ವಿಷಯಕ್ಕೆ ಸಂಬಂಧಿಸಿದಂತೆ ದೀರ್ಘ ಭಾಷಣ ಮಾಡುತ್ತಾರೆ, ಆ ರೀತಿಯಾದ ಬದ್ಧತೆ, ಕಳಂಕ ರಹಿತವಾದ ರಾಜಕಾರಣಿ ಅಂದರೆ ಅದು ದೇವೇಗೌಡರು. ಅವರನ್ನು ಬಹಳ ಹತ್ತಿರದಿಂದ ನಾನು ನೋಡಿದ್ದೇನೆ. ಕಾವೇರಿ ಹೋರಾಟದ ಸಮಯದಲ್ಲಿ ಅವರು ಉಪವಾಸ ಸತ್ಯಾಗ್ರಹ ನಡೆಸಲು ಮುಂದಾದರು. ಆಗ ಎಷ್ಟು ಜನ ಅವರ ಆರೋಗ್ಯದೃಷ್ಟಿಯಿಂದ ಮನ ಒಲಿಸಲು ಪ್ರಯತ್ನಿಸಿದರೂ ಅವರು ಒಪ್ಪಲಿಲ್ಲ. ಕೊನೆಗೆ ಕೇಂದ್ರ ಸರಕಾರದ ಕಚೇರಿಯಿಂದ ಭರವಸೆಯ ಪತ್ರ ಬಂದ ನಂತರವೇ ಅವರು ಉಪವಾಸ ಮುರಿದದ್ದು. ಅವರ ಈ ಬದ್ಧತೆ ನೋಡಿ ನಾವು ಅವರ ಅನುಯಾಯಿ ಆದವರು. ರಾಜ್ಯದಲ್ಲಿ ಒಂದು ಪ್ರಾದೇಶಿಕ ಪಕ್ಷದ ಅಗತ್ಯವಿದೆ. ರಾಷ್ಟ್ರೀಯ ಪಕ್ಷದ ರಾಜ್ಯ ನಾಯಕರು ಪ್ರಾದೇಶಿಕ ಸಮಸ್ಯೆಗಳ ಬಗ್ಗೆ ಧ್ವನಿ ಎತ್ತುವುದಿಲ್ಲ. ಪ್ರಾದೇಶಿಕ ಪಕ್ಷದವರು ಜನರ ಪರವಾಗಿ ಧ್ವನಿ ಎತ್ತಿ ಸಮಸ್ಯೆಗೆ ಪರಿಹಾರ ಪಡೆಯಬಹುದು. ಅಂತಹ ಕೆಲಸವನ್ನು ನಮ್ಮ ಪಕ್ಷ ಸತತವಾಗಿ ಮಾಡಿಕೊಂಡು ಬಂದಿದೆ. ಆದರೆ ಜನ ನಮ್ಮ ಕೈ ಹಿಡಿಯಲಿಲ್ಲ. ಎರಡು ಬಾರಿ ಕುಮಾರಸ್ವಾಮಿ ಅವರು ಮುಖ್ಯ ಮಂತ್ರಿಯಾದರು ರೈತರ ಸಾಲಮನ್ನಾ ಮಾಡಿದರು, ನೀರಾವರಿ ಯೋಜನೆಗಳನ್ನು ತಂದರೂ ಜನ ಅವರನ್ನು ಮರೆತುಬಿಟ್ಟರು. ರಾಜಕೀಯ ನಿಂತ ನೀರಲ್ಲ ಹರಿಯುವ ನೀರು ಬದಲಾವಣೆ ಆಗಲೇ ಬೇಕು ಮುಂದೆ ನೋಡೋಣ ಜನ ಏನು ಮಾಡುತ್ತಾರೆ ಎಂದು.

> **ರಾಜಕೀಯದಲ್ಲಿ ನೀವಂದುಕೊಂಡ ಎಲ್ಲ ಸ್ಥಾನಮಾನ ಸಿಕ್ಕಿವೆಯೇ?**
>
> ನಾನು ಆರ್ಯ ವೈಶ್ಯ ಎಂಬ ಒಂದು ಸಣ್ಣ ಸಮಾಜದಿಂದ ಬಂದವನು. ನನ್ನ ಸಮಾಜದ ಮುನ್ನಲೆಗೆ ತಂದು ರಾಜಕೀಯವಾಗಿ ಕೆಲವು ಜವಾಬ್ದಾರಿಗಳನ್ನು ನೀಡಿ, ಜನರ ಸೇವೆ ಮಾಡಲು ಅವಕಾಶ ಮಾಡಿಕೊಟ್ಟಿದ್ದಾರೆ. ಪಕ್ಷ ಅಧಿಕಾರಕ್ಕೆ ಬಂದರೆ ತಾನೇ ನಮಗೂ ಸ್ಥಾನ ಸಿಗುವುದು. ಪಕ್ಷ ಅಧಿಕಾರಕ್ಕೆ ಬಂದಾಗೆಲ್ಲಾ ನನಗೆ ಅವಕಾಶ ಮಾಡಿಕೊಟ್ಟಿದೆ. ಪಕ್ಷ ಅಧಿಕಾರದಲ್ಲಿದ್ದಾಗ ಮಾತ್ರ ನನ್ನದು ಇಲ್ಲವೆಂದರೆ ಅಧಿಕಾರ ಇರುವ ಪಕ್ಷಕ್ಕೆ ಎಗರುವ ಜಯಮಾನ ನನ್ನದಲ್ಲ. ಪಕ್ಷ ತಾಯಿ ಇದ್ದಹಾಗೆ, ಪಕ್ಷಕ್ಕೆ ದ್ರೋಹ ಬಗೆಯುವುದು ತಾಯಿಗೆ ದ್ರೋಹ ಬಗೆಯುವುದು ಎರಡೂ ಒಂದೇ. ಯಾವುದೇ ಕಾರಣಕ್ಕೂ ನನ್ನ ನಿಯತ್ತಿನಲ್ಲಿ ಬದಲಾವಣೆಗಳಿಲ್ಲ. ಕೊಟ್ಟ ಜವಾಬ್ದಾರಿ ನಿರ್ವಹಿಸಿಕೊಂಡು ಹೋಗುತ್ತೇನೆ.

ಉತ್ತರ ಪತ್ರಿಕೆಯಲ್ಲಿ 500 ರು. ಇಟ್ಟು ವಿದ್ಯಾರ್ಥಿಯ ವಿಚಿತ್ರ ಬೇಡಿಕೆ

ಪ್ಲೀಸ್ ಸರ್... ನನ್ನ ಲವ್ ನಿಮ್ಮ ಕೈಯಲ್ಲಿದೆ

ಚಿಕ್ಕೋಡಿ: ಎಸ್‌ಎಸ್‌ಎಲ್‌ಸಿ ಪರೀಕ್ಷಾ ಮೌಲ್ಯ ಮಾಪನದ ವೇಳೆ ಚಿತ್ರ ಗೀತೆಯ ಹಾಡು, ಕಥೆ, ಕವನ ಬರೆದಿರುವ ವಿಷಯಗಳು ಸಾಕಷ್ಟು ನೋಡಿದ್ದೇವೆ. ಆದರೆ ಇಲ್ಲೊಬ್ಬ ಎಸ್ಸೆಸ್ಸೆಲ್ಸಿ



ವಿದ್ಯಾರ್ಥಿಯೊಬ್ಬ ಮೌಲ್ಯ ಮಾಪನ ಮಾಡುವ ಶಿಕ್ಷಕರಿಗೆ 500 ರು. ನೋಟು ಇಟ್ಟು ತನ್ನ ಪ್ರೇಮ ನಿವೇದನೆ ಪ್ರಶ್ನೆ ಪತ್ರಿಕೆಯ ಉತ್ತರದಲ್ಲಿ ಇಟ್ಟಿದ್ದು ಸಾಕಷ್ಟು ಚರ್ಚೆಗೆ ಗ್ರಾಸವಾಗಿದೆ.

ಚಿಕ್ಕೋಡಿ ಶೈಕ್ಷಣಿಕ ಜಿಲ್ಲೆಯಲ್ಲಿ ಎಸ್ಸೆಸ್ಸೆಲ್ಸಿ ವಿದ್ಯಾರ್ಥಿಗಳನ್ನು ಪಾಸ್ ಮಾಡುವಂತೆ ವಿಚಿತ್ರ ಬೇಡಿಕೆ ಇಟ್ಟು ಉತ್ತರ ಪತ್ರಿಕೆಯಲ್ಲಿ ಬರೆದ ಸಂಗತಿ ಬೆಳಕಿಗೆ ಬಂದಿದೆ. ಹೌದು ಇಲ್ಲೊಬ್ಬ ವಿದ್ಯಾರ್ಥಿ ವಿಚಿತ್ರವಾಗಿ ಬೇಡಿಕೆ ಇಟ್ಟು, ನೀವು ಪಾಸ್ ಮಾಡಿದರೆ, ಅಷ್ಟೇ ನನಗೆ ಲವ್ ಮಾಡುತ್ತೇನೆ ಅಂದಾಳು. ಪ್ಲೀಸ್ ನನ್ನ ಲವ್ ನಿಮ್ಮ ಕೈಯಲ್ಲಿದೆ ಎಂದು 500 ರು.ಹಣ ಇಟ್ಟು ನೀವು ಚಹಾ ಕುಡಿಯಿರಿ ಎಂದು ಬೇಡಿಕೊಂಡ ವಿಚಿತ್ರ ಪತ್ರಿಕೆ ಬೆಳಕಿಗೆ ಬಂದಿದೆ. ಸರ್ ನನ್ನನ್ನು ದಯವಿಟ್ಟು ಪಾಸ್ ಮಾಡಿ. ದೇವರು ಒಳ್ಳೆಯದು ಮಾಡಲಿ, ನಿಮ್ಮ ಹೆಸರು ಹೇಳಿ ಬದುಕುತ್ತೀನಿ ಎಂದು ವಿನಮ್ರವಾಗಿ ಬೇಡಿಕೆ ಇಟ್ಟಿದ್ದೂ ಉದಾಹರಣೆ ಇದೆ. ಹೀಗೆ ಲವ್ ಮಾಡುತ್ತೇನೆ ಎಂದು ಬರೆದು ಹಣ ಇಟ್ಟುಕಳಿಸಿದ್ದು ನೋಡಿ ಮೇಲ್ವಿಚಾರಕರಿಗೆ ಹಾಸ್ಯಾಸ್ಪದ ಆಗಿದೆ. ಕಲಿಯುವ ಆಸಕ್ತಿ ಇಲ್ಲದೇ ಕೆಲವು ವಿದ್ಯಾರ್ಥಿಗಳ ಬೇಡಿಕೆ ನೋಡಿ ಬೇಸರ ವ್ಯಕ್ತಪಡಿಸಿದ್ದಾರೆ.

ಜಾತಿ ಸಮೀಕ್ಷೆ ವೈಜ್ಞಾನಿಕವಾಗಿದೆ: ಕೃಷ್ಣ ಭೈರೇಗೌಡ

ಕೋಲಾರ: ಜಾತಿ ಸಮೀಕ್ಷೆಯು ವೈಜ್ಞಾನಿಕವಾಗಿ ನಡೆದಿದೆ, ಎಲ್ಲ ಜಾತಿಗಳನ್ನು ಪಟ್ಟಿ ಮಾಡಿದರೆ 15 ರಿಂದ 20 ಕೋಟಿ ಜನಸಂಖ್ಯೆಯ ಲೆಕ್ಕಕ್ಕೆ ಬರುತ್ತದೆ. ಇದನ್ನು ಅವೈಜ್ಞಾನಿಕ ಅನ್ನೊದು ಸರಿಯಲ್ಲ ಎಂದು ಕಂದಾಯ ಸಚಿವ ಕೃಷ್ಣ ಬೈರೇಗೌಡ ಹೇಳಿದರು.

ತಾಲೂಕಿನ ಚೌಡದೇನಹಳ್ಳಿಯಲ್ಲಿ ಹಮ್ಮಿಕೊಂಡಿದ್ದ ಊರಬ್ಬದಲ್ಲಿ ಭಾಗವಹಿಸಿ ಮಾತನಾಡಿದ ಅವರು, ಸಮೀಕ್ಷೆ ಕುರಿತು ಈಗಾಗಲೇ ಚರ್ಚೆ ನಡೆದಿದೆ. ಸಚಿವರು ಸಹ ಅವರವರ ಅಭಿಪ್ರಾಯ ವ್ಯಕ್ತಪಡಿಸಿದ್ದು, ಮುಂದಿನ ನಿರ್ಧಾರ ಸಿಎಂ ಅವರಿಗೆ ಬಿಟ್ಟಿದ್ದು ಎಂದರು.

ವರದಿ ಅಂಗೀಕಾರಕ್ಕೆ ಕೆಲವರು ಸಮಯ ಕೇಳಿದ್ದಾರೆ, ವೈಯಕ್ತಿಕವಾಗಿ ಕೆಲವರು ಹೇಳಲಿದ್ದಾರೆ. ಎಲ್ಲರ ಅಭಿಪ್ರಾಯ



ಪಡೆದು ಮುಂದಕ್ಕೆ ಹೋಗಲಾಗುವುದು. ಯಾರ ಅಭಿಪ್ರಾಯದ ಬಗ್ಗೆ ತಕರಾರಿಲ್ಲ, ಪ್ರಜಾ ಪ್ರಭುತ್ವದಲ್ಲಿ ಎಲ್ಲರ ಅಭಿಪ್ರಾಯ ಕೇಳಬೇಕಿದೆ, ಹಾಗಾಗಿ ಮುಕ್ತವಾಗಿ ಅವಕಾಶ ನೀಡಿದ್ದು, ಅಭಿಪ್ರಾಯ ವಿಮರ್ಶೆ ಮಾಡಿ ತಾರ್ಕಿಕ ತೀರ್ಮಾನವಾಗಲಿದೆ ಎಂದರು. ಚರ್ಚೆಗಳ ಕುರಿತು ಸುಳ್ಳು ಪ್ರತಿಕ್ರಿಯೆ, ತಪ್ಪು ಗ್ರಹಿಕೆ, ಚರ್ಚೆ ಎನ್ನಲಾಗಿದೆ, ಇದು ವೈಜ್ಞಾನಿಕವಾಗಿ ಮಾಡಲಾಗಿದೆ. ಆದರೆ ಅವೈಜ್ಞಾನಿಕ ಎಂಬುದನ್ನು ನಾನು ಒಪ್ಪಲ್ಲ, ವಿಚಾರ ಆಧಾರಿತವಾಗಿ ಚರ್ಚೆಯಾಗಲಿ ಅದು ಬಿಟ್ಟು ಅವೈಜ್ಞಾನಿಕ ಎಂದು ಹೇಳಿಕೆ ನೀಡುವುದು ಸರಿಯಲ್ಲ ಎಂದು ಹೇಳಿದರು.

ರಾಷ್ಟ್ರೀಯ ಆಯೋಗಕ್ಕೆ ಪತ್ರ ಬರೆದಿದ್ದ ಕೇಂದ್ರ ಸಚಿವೆ ಶೋಭಾ ಕರಂದ್ಲಾಜೆ

ದೌರ್ಜನ್ಯ: ಕ್ರಮಕ್ಕೆ ಆಯೋಗ ಸೂಚನೆ

ಬೆಂಗಳೂರು: ದಾವಣಗೆರೆಯ ಚನ್ನಗಿರಿಯಲ್ಲಿ ಮಹಿಳೆಯೋರ್ವರಿಗೆ ಗುಂಪೊಂದು ಥಳಿಸಿರುವ ಸಂಬಂಧ ಸೂಕ್ತ

ಕ್ರಮ ಕೈಗೊಳ್ಳುವಂತೆ ರಾಜ್ಯ ಪೊಲೀಸ್ ಮುಖ್ಯಸ್ಥ ಅಲೋಕ್ ಮೋಹನ್ ಅವರಿಗೆ ರಾಷ್ಟ್ರೀಯ ಮಹಿಳಾ ಆಯೋಗ ಸೂಚಿಸಿದೆ.

ದಾವಣಗೆರೆಯ ಚನ್ನಗಿರಿಯ ತಾವರೆಕೆರೆಯಲ್ಲಿ ಏಪ್ರಿಲ್ 7 ರಂದು ಕೌಟುಂಬಿಕ ವಿಚಾರಕ್ಕೆ ಸಂಬಂಧ ಮಹಿಳೆಯೋರ್ವರಿಗೆ ಕುಟುಂಬದವರ ಎದುರೇ ಹಲವಾರು ಪುರುಷರು ದೊಣ್ಣೆ, ಪೈಪ್‌ಗಳಿಂದ ಶರಿಯತ್ ಶಿಕ್ಷೆ ಮಾದರಿಯಲ್ಲಿ ಹಲ್ಲೆ ನಡೆಸಿದ್ದರು. ಈ ಘಟನೆ ನಂತರ ಸಾಮಾಜಿಕ ಜಾಲತಾಣದಲ್ಲಿ ವೈರಲ್ ಆಗಿತ್ತು. ಇದಾದ ನಂತರ ಮಸೀದಿ ಎದುರುಗಡೆ ನಡೆದ ಘಟನೆಯಂತೆ ಮಹಿಳೆಯ ಪತಿ ನೀಡಿದ ದೂರನ್ನು ಆಧರಿಸಿ ಸ್ಥಳೀಯವಾಗಿ ಕ್ರಮ ಕೈಗೊಂಡಿತ್ತು. ಹೀಗಿದ್ದರೂ ಮಹಿಳೆಯ ಮೇಲಿನ ದೌರ್ಜನ್ಯವನ್ನು ಗಂಭೀರವಾಗಿ ಪರಿಗಣಿಸಿ ಕ್ರಮ ಕೈಗೊಳ್ಳಬೇಕೆಂದು ಕೇಂದ್ರ ಮಹಿಳಾ ಆಯೋಗಕ್ಕೆ ಸಚಿವೆ ಶೋಭಾ ಕರಂದ್ಲಾಜೆ ಪತ್ರ ಬರೆದಿದ್ದರು.

ಘಟನೆ ಸಂಬಂಧ ಮಾಧ್ಯಮಗಳಲ್ಲಿ ಬಂದಿರುವ ವರದಿ ಹಾಗೂ ಸಚಿವೆ ಯ ಪತ್ರವನ್ನು ಗಂಭೀರವಾಗಿ ಪರಿಗಣಿಸಿರುವ ಆಯೋಗ, ಪೈಶಾಚಿಕ ಕೃತ್ಯದ ಬಗ್ಗೆ ಭಾರತೀಯ ದಂಡ ಸಂಹಿತೆ 2023 ರ ಅಡಿ ಸೂಕ್ತ ಕ್ರಮ ತಪ್ಪಿತಸ್ಥರ ವಿರುದ್ಧ ಕಠಿಣ ಕ್ರಮ ಕೈಗೊಳ್ಳಬೇಕು. ದೌರ್ಜನ್ಯಕ್ಕೆ ಒಳಗಾದ ಮಹಿಳೆಗೆ ಉಚಿತ ವೈದ್ಯಕೀಯ ಹಾಗೂ ಕಾನೂನು ನೆರವು ನೀಡಬೇಕು. ಈ ಸಂಬಂಧಿತ ಎಫ್‌ಐಆರ್ ಹಾಗೂ ಮೂರು ದಿನದಲ್ಲಿ ಸೂಕ್ತ ಕ್ರಮ ಕೈಗೊಳ್ಳುವಂತೆ ಆಯೋಗದ ಕಮಿಷನರ್ ವಿಜಯಾ ರಾಹತ್ಕರ್ ಅವರು ನಿರ್ದೇಶಿಸಿದ್ದಾರೆ.

ಮುರಿದು ಬಿದ್ದ ರಥ

ಮಂಗಳೂರು: ಕರಾವಳಿಯ ಇತಿಹಾಸ ಪ್ರಸಿದ್ಧ ಮೂಲ್ಕಿ ಬಪ್ಪನಾಡು ಶ್ರೀದುರ್ಗಾಪರಮೇಶ್ವರಿ ಕ್ಷೇತ್ರದ ವಾರ್ಷಿಕ ಉತ್ಸವದ ವೇಳೆ ರಥ ಮುರಿದು ಬಿದ್ದ ಘಟನೆ ಶುಕ್ರವಾರ ತಡರಾತ್ರಿ ಸಂಭವಿಸಿದೆ.

ವರ್ಷಾವಧಿ ಜಾತ್ರೆಯ ವೇಳೆ ಬ್ರಹ್ಮರಥೋತ್ಸವ ನಡೆಯುತ್ತಿರುವಾಗ ರಥದ ಮೇಲ್ಭಾಗ ಮುರಿದು ಬಿದ್ದಿದೆ. ರಾತ್ರಿ ಸುಮಾರು 2 ಗಂಟೆ ವೇಳೆಗೆ ಈ ಘಟನೆ ಸಂಭವಿಸಿದೆ. ಈ ವೇಳೆ, ಕ್ಷೇತ್ರದಲ್ಲಿ ಸಾಕಷ್ಟು ಭಕ್ತರು ಹಾಗೂ ಅರ್ಚಕರು ರಥದಲ್ಲೇ ಇದ್ದರು. ಆದರೆ, ಯಾರಿಗೂ ಯಾವುದೇ ಹಾನಿ ಸಂಭವಿಸಿಲ್ಲ. ಬಳಿಕ ದೇವಿಯನ್ನು ಚಂದ್ರಮಂಡಲ ರಥದಲ್ಲಿ ಕೂರಿಸಿ ಉತ್ಸವ ಮುಂದುವರಿಸಿ, ವಿಧಿವಿಧಾನಗಳನ್ನು ನೆರವೇರಿಸಲಾಯಿತು.

ಉತ್ಸವ ಸಂದರ್ಭದಲ್ಲೇ ಬ್ರಹ್ಮರಥ ಮುರಿದು ಬಿದ್ದಿರುವುದು ಭಕ್ತರ ಮತ್ತು ಕ್ಷೇತ್ರ ದವರ ಆತಂಕ ಮತ್ತು ಕಳವಳಕ್ಕೆ ಕಾರಣವಾಗಿದೆ. ಬಪ್ಪನಾಡು ದುರ್ಗಾಪರಮೇಶ್ವರಿ ದೇವಿಯ ಶಯನೋತ್ಸವ ಬಹಳ ಪ್ರಸಿದ್ಧವಾಗಿದೆ. ದೇವಿ ಮಲ್ಲಿಗೆ ಹೂಗಳ ಮೇಲೆ ಪವಡಿಸುತ್ತಾರೆ ಎಂಬ ನಂಬಿಕೆಯಿದೆ. ಶುಕ್ರವಾರ ರಾತ್ರಿ ನೆರವೇರಿದ ಶಯನೋತ್ಸವಕ್ಕೆ ಭಕ್ತರು 1.5 ಲಕ್ಷಕ್ಕೂ ಅಧಿಕ ಅಟ್ಟೆ ಮಲ್ಲಿಗೆ ಹೂಗಳನ್ನು ಅರ್ಪಿಸಿದ್ದರು.

ದೇಶದ ಉದ್ದಗಲಕ್ಕೂ ಬೆಲೆ ಏರಿಕೆ ಆಗಲು ಮೋದಿ ಕಾರಣ: ಉಗ್ರಪ್ಪ

ದೇಶದ ದುರ್ಬಲ ಪ್ರಧಾನಿ ಮೋದಿ

ಮೈಸೂರು: ನರೇಂದ್ರ ಮೋದಿ ದೇಶ ಕಂಡ ಅತ್ಯಂತ ದುರ್ಬಲ ಪ್ರಧಾನಮಂತ್ರಿ ಎಂದು ಮಾಜಿ ಸಂಸದ ವಿ .ಎಸ್. ಉಗ್ರಪ್ಪ ಟೀಕಿಸಿದರು.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ನರೇಂದ್ರಮೋದಿ ಅತ್ಯಂತ ದುರ್ಬಲ ಪ್ರಧಾನಿ, ಜನವಿರೋಧಿ ಪ್ರಧಾನಿ. ಮೋದಿ ಆಡಳಿತಾವಧಿಯಲ್ಲಿ ದೇಶದ ಸಾಲದ ಪ್ರಮಾಣ ಅತಿ ಹೆಚ್ಚಾಗಿದೆ. ಜಾತಿ ಜಾತಿಗಳ ನಡುವೆ, ಧರ್ಮ ಧರ್ಮಗಳ ನಡುವೆ ಕಂದಕ ಸೃಷ್ಟಿಸುವ ಕೆಲಸವನ್ನು ಮೋದಿ ಮಾಡುತ್ತಿದ್ದಾರೆ. ದೇಶದ ಉದ್ದಗಲಕ್ಕೂ ಬೆಲೆ ಏರಿಕೆ ಆಗಲು ಮೋದಿ ಕಾರಣರು ಎಂದು ಹರಿಹಾಯ್ದರು.

ಬಿಜೆಪಿಯವರು ಮೈಸೂರಿನಿಂದ ಜನಾಕ್ರೋಶ ಯಾತ್ರೆ ಆರಂಭಿಸಿದ್ದಾರೆ. ಆದರೆ, ಜನರಿಗೆ ನಿಜವಾಗಿಯೂ ಬಿಜೆಪಿ ವಿರುದ್ಧವೇ ಜನಾಕ್ರೋಶವಿದೆ. ಬೆಲೆ ಏರಿಕೆಗೆ ಯಾರು ಕಾರಣರು ಎಂಬುದರ ಕುರಿತು ಬಿಜೆಪಿಯವರ ಜೊತೆ ಬಹಿರಂಗ ಚರ್ಚೆಗೆ ಕಾಂಗ್ರೆಸ್ ನಾಯಕರು ಸಿದ್ಧರಿದ್ದೇವೆ ಎಂದು ಸವಾಲು ಹಾಕಿದರು.

> **ಜನಿವಾರ ಪ್ರಕರಣ ಬಿಜೆಪಿ ಸೃಷ್ಟಿ**
>
> ಪರೀಕ್ಷಾರ್ಥಿಗಳಿಗೆ ಜನಿವಾರ, ಶಿವದಾರ ತೆಗೆಸಿದ ವಿಚಾರ ಬಿಜೆಪಿಯವರ ಸೃಷ್ಟಿ ಎಂದು ಕಟುವಾಗಿ ಟೀಕಿಸಿದ ಅವರು, ಇದು ವಿಜಯೇಂದ್ರ ಪ್ರೇರಿತ ಸೃಷ್ಟಿ. ಇದರ ಬಗ್ಗೆ ನಿಜವಾದ ಅಂಶ ಗೊತ್ತಾಗಬೇಕಾದರೆ, ಈ ವಿಚಾರವಾಗಿ ಉನ್ನತಮಟ್ಟದ ತನಿಖೆ ನಡೆಯಬೇಕು. ಆಗ ಸತ್ಯಾಂಶ ಹೊರ ಬರಲಿದೆ ಎಂದು ಮಾಜಿ ಸಂಸದ ವಿ .ಎಸ್. ಉಗ್ರಪ್ಪ ಹೇಳಿದರು.

ಜಾತಿ ಜನಗಣತಿ ಅಲ್ಲ : ಹಿಂದುಳಿದ ವರ್ಗಗಳ ಕಮಿಷನ್ ಪ್ರಕಾರ ಸೆಕ್ಷನ್ 9 ಸಬ್ ಕ್ಲಾಸ್ 2ರ ಪ್ರಕಾರ ಜಾತಿಗಣತಿ ನಡೆಸುವಂತಿಲ್ಲ. ಯಾರನ್ನು ಸೇರಿಸಬೇಕು, ಯಾರನ್ನು ತೆಗೆಯಬೇಕು ಎಂದು ಒಂದು ಸಮೀಕ್ಷೆ ಮಾತ್ರ ಮಾಡಿದ್ದಾರೆ. ಇದೊಂದು ಸಮೀಕ್ಷೆಯೇ ಹೊರತು ಜಾತಿ ಜನಗಣತಿ ಅಲ್ಲ. ಅವಶ್ಯಕತೆ ಬಿದ್ದರೆ ಮೀಸಲಾತಿ ಪ್ರಮಾಣವನ್ನು ಹೆಚ್ಚಳ ಮಾಡುವ ದೃಷ್ಟಿಯಿಂದ ಜಾತಿಗಣತಿ ಅವಶ್ಯಕತೆ ಇದೆ ಎಂದು ಹೇಳಿದರು.

ಜಾತಿಗಣತಿ; ಸಿಎಂ ಚೆಕ್‌ಮೆಟ್!

← ಮೊದಲಪುಟದಿಂದ

ಸಿದ್ದರಾಮಯ್ಯ ಅವರು ಈ ನಡೆಯನ್ನು ಅನುಸರಿಸುವಾಗ ಇದರಿಂದ ಪಕ್ಷಕ್ಕಾಗುವ ಅಥವಾ ಲಿಂಗಾಯತ, ಒಕ್ಕಲಿಗರು ಸೇರಿದಂತೆ ಮೇಲ್ಜಾತಿಗಳಿಂದ ಎದುರಾಗಬಹುದಾದ ವಿರೋಧವನ್ನು ಊಹಿಸಿಯೇ ತೀರ್ಮಾನ ಕೈಗೊಂಡಿದ್ದಾರೆ. ಇದರಿಂದ ಚುನಾವಣೆ ವೇಳೆಗೆ ಪಕ್ಷಕ್ಕೆ ಯಾವ ಹಂತದಲ್ಲಿ ಡ್ಯಾಮೇಜ್ ಆಗುತ್ತದೆ ಎನ್ನುವ ಸ್ಪಷ್ಟತೆ ಇಲ್ಲದಿದ್ದರೂ, ಸದ್ಯಕ್ಕಂತೂ ಸಿದ್ದರಾಮಯ್ಯ ಅವರು ಭಾರಿ ಲಾಭವನ್ನೇ ತರಿಸಿದೆ ಎನ್ನುವುದು ಸ್ಪಷ್ಟ.

ಬದಲಾವಣೆ ಬಗ್ಗೆ ಮಾತಾಡಿದರೆ ಸಂಕಷ್ಟ: ಜಾತಿಗಣತಿಯನ್ನು ಒಪ್ಪಿಕೊಳ್ಳುವುದು, ಶಿಫಾ ರಸುಗಳನ್ನು ಜಾರಿಗೊಳಿಸುವುದು ಬಿಡುವುದು ಸಚಿವ ಸಂಪುಟ ಹಾಗೂ ರಾಜಕೀಯ ತೀರ್ಮಾನಗಳ ಮೇಲೆ ನಿಂತಿದೆ. ಆದರೆ ಸಂಪುಟದಲ್ಲಿ ಈ ವಿಷಯವನ್ನು ಮಂಡಿಸುವ ಮೂಲಕ 'ತಾನು ಅಹಿಂದ' ಪರ ಎನ್ನುವುದನ್ನು ಮತ್ತೊಮ್ಮೆ ಸಿದ್ದರಾಮಯ್ಯ ಸಾಬೀತುಪಡಿಸಿದ್ದಾರೆ.

ಕುರುಬ ಸಮುದಾಯದ ಸಾಹಿತಿಗಳ ಸಮಾವೇಶದಲ್ಲಿ ಸಿಎಂ ಸಿದ್ದರಾಮಯ್ಯ ಭರವಸೆ

ಗ್ಯಾರಂಟಿ ಯೋಜನೆ ಸ್ಥಗಿತಗೊಳಿಸುವುದಿಲ್ಲ

ತುಮಕೂರು: ಗ್ಯಾರಂಟಿ ಯೋಜನೆಗಳನ್ನು ಸ್ಥಗಿತಗೊಳಿಸುವುದಿಲ್ಲ. ರಾಜ್ಯದಲ್ಲಿ ಆರ್ಥಿಕವಾಗಿ ಹಿಂದುಳಿದಿರುವ ಜನರು ಆರ್ಥಿಕ ಸಬಲತೆಗೆ ಗ್ಯಾರಂಟಿ ಯೋಜನೆಗಳನ್ನು ಜಾರಿಗೆ ಮಾಡಿ ದ್ದೇವೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದರು.

ನಗರದ ಶ್ರೀದೇವಿ ಕಾಲೇಜಿನಲ್ಲಿ ಹಮ್ಮಿಕೊಂಡಿದ್ದ ಕುರುಬ ಸಮುದಾಯದ ಸಾಹಿತಿಗಳ ಸಮಾವೇಶದಲ್ಲಿ ಮಾತನಾಡಿ, ಆರ್ಥಿಕವಾಗಿ, ಸಾಮಾಜಕವಾಗಿ ಶಕ್ತಿ ಬಂದರೆ, ಸಮಾನತೆ ಬರಲು ಸಾಧ್ಯವಾಗುತ್ತದೆ. ಮಹಿಳೆಯ ರಿಗೆ ಉಚಿತ ಬಸ್ ಪ್ರಯಾಣದಿಂದ ಬಹಳ ಉಪ ಯೋಗವಾಗಿದೆ. ಇದನ್ನು ಸಹಿಸದವರು ಅಪಪ್ರಚಾರ ಮಾಡುತ್ತಿದ್ದಾರೆ ಎಂದರು.

ಗ್ಯಾರಂಟಿ ಯೋಜನೆಗಳ ಬಗ್ಗೆ ಕೆಲ ಪಟ್ಟಭದ್ರ ಹಿತಾಸಕ್ತಿಗಳು ಇದು ದೊಡ್ಡ ತಪ್ಪು ಅಂತ ಮಾತನಾಡುತ್ತಾರೆ. ಉಚಿತ ಬಸ್ ಯೋಜನೆಯಿಂದ ಧರ್ಮಸ್ಥಳಕ್ಕೆ ಬರುವ ಭಕ್ತರ ಸಂಖ್ಯೆ ಅಧಿಕವಾಗಿದೆ ಎಂದು ವೀರೇಂದ್ರ ಹೆಗ್ಗಡೆ ಅವರು ನನಗೆ ಪತ್ರ ಬರೆದಿದ್ದರು ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ಗೃಹ ಸಚಿವ ಪರಮೇಶ್ವರ್, ಗ್ಯಾರಂಟಿ ಯೋಜನೆಗಳ ಪ್ರಾಧಿ ಕಾರದ ಅಧ್ಯಕ್ಷ ಎಚ್.ಎಂ.ರೇವಣ್ಣ, ವಿಧಾನ ಪರಿಷತ್‌ನ ಮಾಜಿ ಸದಸ್ಯ ಡಾ. ಎಂ.ಆರ್.ಹುಲಿನಾಯ್ಕರ್, ಕೊಪ್ಪಳ ವಿಶ್ವವಿದ್ಯಾಲಯದ ಕುಲಪತಿ ಪ್ರೊ. ಬಿ.ಕೆ.ರವಿ, ಇನ್‌ಸೈಟ್ ಅಕಾಡೆಮಿಯ ವಿನಯಕುಮಾರ್, ಪತ್ರಕರ್ತ ಪ್ರಜಾಪ್ರಗತಿ ನಾಗಣ್ಣ ಉಪಸ್ಥಿತರಿದ್ದರು.



ನಗರದ ಶ್ರೀದೇವಿ ಕಾಲೇಜಿನಲ್ಲಿ ಹಮ್ಮಿಕೊಂಡಿದ್ದ ಕುರುಬ ಸಮುದಾಯದ ಸಾಹಿತಿಗಳ ಸಮಾವೇಶವನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಉದ್ಘಾಟಿಸಿದರು. ಗೃಹ ಸಚಿವ ಪರಮೇಶ್ವರ್, ಗ್ಯಾರಂಟಿ ಯೋಜನೆಗಳ ಪ್ರಾಧಿಕಾರದ ಅಧ್ಯಕ್ಷ ಎಚ್.ಎಂ.ರೇವಣ್ಣ, ವಿಧಾನ ಪರಿಷತ್‌ನ ಮಾಜಿ ಸದಸ್ಯ ಡಾ.ಎಂ.ಆರ್.ಹುಲಿನಾಯ್ಕರ್, ಕೊಪ್ಪಳ ವಿಶ್ವವಿದ್ಯಾಲಯದ ಕುಲಪತಿ ಪ್ರೊ. ಬಿ.ಕೆ.ರವಿ, ಇನ್‌ಸೈಟ್ ಅಕಾಡೆಮಿಯ ವಿನಯಕುಮಾರ್ ಇದ್ದರು.

> ಗೃಹಲಕ್ಷ್ಮಿ ಯೋಜನೆಯಿಂದ ಬಡ ಕುಟುಂಬಗಳು ಆರ್ಥಿಕ ಸದೃಢತೆ ಪಡೆದುಕೊಂಡಿವೆ. 200 ಯೂನಿಟ್ ವರೆಗೆ ಉಚಿತ ವಿದ್ಯುತ್ ನೀಡಿದ್ದೇನೆ. ಹಿಂದುಳಿದವರು ಜಾತಿ ಸಮಾವೇಶ ಮಾಡಲಿ, ಮುಂದುವರೆದವರು ಮಾಡಬಾರದು ಎಂದು ಲೋಹಿಯಾ ಹೇಳುತ್ತಿದ್ದರು. ಇದೆಲ್ಲ ಚಿಂತನೆ ಮಾಡಬೇಕು ನನಗೆ ಗೊತ್ತಿರುವ ವಿಚಾರ ಹೇಳಿದ್ದೇನೆ. ಇದರಿಂದ ಕೆಲವರಿಗೆ ನೋವಾದರೆ ನಾನು ಏನು ಮಾಡುವುದಕ್ಕೆ ಆಗಲ್ಲ. ನನ್ನ ಮನಸ್ಸಿನಲ್ಲಿರುವುದನ್ನು ಹೇಳಿದ್ದೇನೆ.
>
> ಸಿದ್ದರಾಮಯ್ಯ, ಮುಖ್ಯಮಂತ್ರಿ

> **ನನಗೆ ಹೆಚ್ಚು ಟ್ರಾವೆಲ್ ಮಾಡಲು ಆಗಲ್ಲ**
>
> ನನಗೆ ಎಡಗಾಲು ಸ್ವಲ್ಪ ನೋವಾಗಿದೆ. ಆದರೆ ಒತ್ತಾಯ ಮಾಡಿದಕ್ಕೆ ಬಂದಿದ್ದೇನೆ. ನನಗೆ ಹೆಚ್ಚು ಟ್ರಾವೆಲ್ ಮಾಡಲು ಆಗುವುದಿಲ್ಲ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ತಮ್ಮ ಕಾಲು ನೋವಿನ ಬಗ್ಗೆ ಮಾಹಿತಿ ಹಂಚಿಕೊಂಡರು. ಕಾಲು ನೋವು ಇರುವುದರಿಂದ ಬಹಳ ಸಮಯ ನಿಂತು ಮಾತಾಡಲು ಕೂಡ ಆಗುತ್ತಿಲ್ಲ. ನಾನು 2005ರಲ್ಲಿ ಕಬಡ್ಡಿ ಆಡುವಾಗ ಲಿಗಮೆಂಟ್ ಕಟ್ ಆಗಿತ್ತು. ಈಗ ಅದೇ ಲಿಗಮೆಂಟ್‌ಗೆ ಪೆಟ್ಟು ಬಿದ್ದಿದೆ. ಹೀಗಾಗಿ ಹೆಚ್ಚು ತಿರುಗಾಡಲು ಕೂಡ ಆಗ್ತಾ ಇಲ್ಲ ಎಂದು ಹೇಳಿದರು.

ಜಪಾನಿನಲ್ಲಿ ಮಾಂಗ ಮುದ್ರಣಕ್ಕೆ ಟಾಯ್ಲೆಟ್ ಪೇಪರ್‌ಗಿಂತ ಹೆಚ್ಚು ಕಾಗದ ಬಳಸುತ್ತಾರೆ!

ಇದೇ ಅಂತರಂಗ ಸುದ್ದಿ

ವಿಶ್ವೇಶ್ವರ ಭಟ್
vbhat@me.com

ಜಪಾನಿನ ಬಗ್ಗೆ ಬರೆದು 'ಮಾಂಗ' (Manga) ಬಗ್ಗೆ ಬರೆಯದಿದ್ದರೆ ಹೇಗೆ? 'ಮಾಂಗ' ಅಂದ್ರೆ ಕೋತಿ ಅಥವಾ ಮಾಂಗ ಎಂದು ಭಾವಿಸಬೇಕಿಲ್ಲ. ಅದಾಗಿದ್ದರೆ ನಾನು ಇಲ್ಲಿ ಬರೆಯುತ್ತಿರಲಿಲ್ಲ. ಕಾಮಿಕ್ ಅಥವಾ ಕಾರ್ಟೂನ್ ಪುಸ್ತಕಗಳಿಗೆ ಜಪಾನಿಯರು ಮಾಂಗ ಅಂತಾರೆ. ಮಾಂಗ ಕಾಮಿಕ್ ಚಿತ್ರರೇಖೆ ಮತ್ತು ಕಥೆ ಎರಡೂ ಮುಖ್ಯಪಾತ್ರ ವಹಿಸುತ್ತವೆ. 'ಮಾಂಗ' ಪದವು ಎರಡು ಚೈನೀಸ್ ಅಕ್ಷರಗಳಿಂದ ಬಂದಿದೆ- 'ಮನ್' (ಮಜಾ ಅಥವಾ ತಮಾಷೆ) ಮತ್ತು 'ಗಾ' (ಚಿತ್ರ). ಈ ಆಧಾರದ ಮೇಲೆ ಮಾಂಗ ಎಂದರೆ 'ತಮಾಷೆಯ ಚಿತ್ರಗಳು' ಎಂದು ಅರ್ಥೈಸಬಹುದು.

ಜಪಾನಿನ ಹೊರಗಿನ ದೇಶಗಳಲ್ಲಿರುವವರು ಮಾಂಗ ಅಂದ್ರೆ ಜಪಾನಿನಲ್ಲಿ ಪ್ರಕಾಶಿಸುವ ಕಾಮಿಕ್ ಪುಸ್ತಕ ಎಂದು ಅರ್ಥೈಸಿಕೊಳ್ಳುತ್ತಾರೆ. ಜಪಾನಿನ ಮಾಂಗಗಳು ಜಗತ್ತಿನಲ್ಲಿಯೇ ಪ್ರಸಿದ್ಧ. ಚಿಕ್ಕಮಕ್ಕಳಿಗೆ ಜಪಾನ್ ಯಾವುದಕ್ಕೆ ಪ್ರಸಿದ್ಧ ಎಂದು ಕೇಳಿದರೆ, ಹತ್ತರಲ್ಲಿ ಒಂಬತ್ತು ಮಂದಿ 'ಮಾಂಗ' ಎಂದು ಹೇಳುವುದರಲ್ಲಿ ಸಂದೇಹವಿಲ್ಲ. ಮಾಂಗ ಸಾಮಾನ್ಯವಾಗಿ ಬಿಳಿ ಮತ್ತು ಕಪ್ಪು ಬಣ್ಣಗಳಲ್ಲಿ ಮುದ್ರಿತವಾಗಿದ್ದು, ಕಥೆಯು ಚಿತ್ರರೇಖೆಗಳ ಮೂಲಕ ಮುಂದುವರಿಯುತ್ತದೆ. ಕಥೆಗಳ ವಿಭಿನ್ನ ಶೈಲಿಗಳು, ಗಂಭೀರ ವಿಚಾರಗಳು, ವೈಜ್ಞಾನಿಕ ಕಲ್ಪನೆ, ಸಾಹಸಗಾಥೆಗಳು, ಕೌಟುಂಬಿಕ ನಾಟಕಗಳು ಮತ್ತು ಹಾಸ್ಯ- ಎಲ್ಲವೂ ಮಾಂಗ ಪ್ರಕಾರದಲ್ಲಿ ಲಭ್ಯವಿವೆ.



ಜಪಾನಿನ ಸಂಸ್ಕೃತಿ ಮತ್ತು ಜನಜೀವನದಲ್ಲಿ ಮಾಂಗ ಎಂಬ ಪದವು ಅತ್ಯಂತ ಪ್ರಮುಖವಾದ ಸ್ಥಳವನ್ನು ಪಡೆದಿದೆ. ಇಂದು ಜಪಾನ್ ಮಾತ್ರವಲ್ಲದೆ, ವಿಶ್ವದಾದ್ಯಂತ ಓದುಗರನ್ನು ಮಾಂಗ ಹೊಂದಿದ್ದು, ಇದು ಜಪಾನಿನ ಸಾಫ್ಟ್ ಪವರ್ (Soft Power) ಎಂಬಂತೆ ಜಾಗತಿಕ ಸಾಂಸ್ಕೃತಿಕ ವಿಸ್ತಾರಕ್ಕೆ ಕಾರಣವಾಗಿದೆ.

ಮಾಂಗದ ಮೂಲವನ್ನು 12ನೇ ಶತಮಾನದಲ್ಲಿ ನಿರ್ಮಿತವಾದ 'ಚೋಜು ಗಿಗಾ' ಎಂಬ ಚಿತ್ತಾರ ಮಾಲಿಕೆಯೊಂದಿಗೆ ಸಂಪರ್ಕಿಸಲಾಗಿದೆ. ಆದರೆ, ಹೊಸ ರೂಪದ ಮಾಂಗ 20ನೇ ಶತಮಾನದಲ್ಲಿ ಕಾಣಿಸಿಕೊಂಡಿತು. ಟೇಜುಕಾ ಒಸಮು ಎಂಬ ಕಲಾವಿದನು 'ಅಸ್ಟ್ರೋ ಬಾಯ್' (Astro Boy) ಮೂಲಕ ನವೀನ ಮಾಂಗ ಜಗತ್ತಿಗೆ ಪ್ರೇರಣೆಯಾದ ವ್ಯಕ್ತಿ. ಅವನು ಡಿಸ್ನಿ ಶೈಲಿಯ ಚಲನಚಿತ್ರಗಳಿಂದ ಪ್ರಭಾವಿತನಾಗಿ, ಮಾಂಗ ಚಲನಶೀಲತೆಯನ್ನು ಹೊಸ ಮಟ್ಟಕ್ಕೆ ಏರಿಸಿದನು.

ಮಾಂಗವನ್ನು ವಿವಿಧ ವಯಸ್ಸಿನ ಮತ್ತು ಆಸಕ್ತಿಯ ಓದುಗರಿಗೆ ತಕ್ಕಂತೆ ವಿಭಜಿಸಲಾಗಿದೆ. ಪ್ರಮುಖ ಪ್ರಕಾರಗಳೆಂದರೆ, ಶೋನೇನ್ (ಹುಡುಗರಿಗಾಗಿ)- ಸಾಹಸ, ಕ್ರಿಯೆ, ಶೋಜೋ (ಹುಡುಗಿಯರಿಗಾಗಿ)- ಭಾವನೆಗಳ ಕಥೆಗಳು, ಸೈನನ್ (ವಯಸ್ಕ ಪುರುಷರಿಗಾಗಿ)- ಗಂಭೀರ ಅಥವಾ ಹಿಂಸಾತ್ಮಕ ವಿಷಯಗಳು, ಜೋಸೈ (ವಯಸ್ಕ ಮಹಿಳೆಯರಿಗಾಗಿ)- ಪರಿಪಕ್ವ ಸಂಬಂಧಗಳು, ವಾಸ್ತವಿಕ ಕಥೆಗಳು ಹಾಗೂ ಕೋಮಾ ಮಾಂಗ: ಹಾಸ್ಯ ಪ್ರಕಾರದ ಚಿಕ್ಕ ಚಿಕ್ಕ ಕೋಷ್ಟಕಗಳಲ್ಲಿ ಸಾಗುವ ಕಥೆಗಳು.

ಜಪಾನಿನಲ್ಲಿ ಮಾಂಗ ಓದುಗರು ಎಲ್ಲೆಲ್ಲೂ ಇದ್ದಾರೆ. ರೈಲ್ವೆ ನಿಲ್ದಾಣಗಳಲ್ಲಿ, ಪಾರ್ಕುಗಳಲ್ಲಿ, ವಿಮಾನ ನಿಲ್ದಾಣಗಳಲ್ಲಿ, ಕಾಫಿ ಶಾಪ್‌ಗಳಲ್ಲಿ, ಮನೆಗಳಲ್ಲಿ .. ಹೀಗೆ ಎಲ್ಲೆಲ್ಲೂ ಮಾಂಗ ಓದುಗರನ್ನು ಕಾಣಬಹುದು. ಹಲವಾರು ಮಾಂಗ ಮ್ಯಾಗಜಿನ್‌ಗಳು (ಉದಾ: Weekly Shonen Jump, Weekly Shonen Magazine) ವಾರವಾರಕ್ಕೆ ಲಕ್ಷಾಂತರ ಪ್ರತಿಗಳ ಮುದ್ರಣವಾಗುತ್ತವೆ. ಮಾಂಗ ಓದುವ ವಯಸ್ಸು ಅಥವಾ ವರ್ಗಕ್ಕೆ ಸೀಮಿತವಲ್ಲ- ಮಕ್ಕಳು, ಯುವಕರು, ವೃದ್ಧರು- ಎಲ್ಲರೂ ಮಾಂಗ ಓದುಗರೇ. ಇದೊಂದು ಜನಸಾಮಾನ್ಯರಿಗಾಗಿ ಇರುವ ಮಾಧ್ಯಮ. ಮಾಂಗ ಓದದವರು ಸಿಗುವುದು ಅಪರೂಪ.

ಜಪಾನಿನ ಮಾಂಗಗಳ ಬಗ್ಗೆ ಒಂದು ವಕ್ರತುಂಡೋಕ್ತಿ ಮಾದರಿಯ ಮಾತಿದೆ. ಆ ದೇಶದಲ್ಲಿ ಮಾಂಗ ಮುದ್ರಣಕ್ಕಾಗಿ ಬಳಸುವ ಕಾಗದದ ಪ್ರಮಾಣವು ಟಾಯ್ಲೆಟ್ ಪೇಪರ್ ಬಳಕೆಗಿಂತ ಹೆಚ್ಚು ಅಂತ. ಜಪಾನಿನ ಮಾಂಗ ಉದ್ಯಮ ಅದೆಷ್ಟು ದೊಡ್ಡದು ಎಂಬ ಕಲ್ಪನೆಯೇ ಇರಲಿಕ್ಕಿಲ್ಲ. 2020ರಲ್ಲಿ ಈ ಉದ್ಯಮದ ಮೌಲ್ಯವು 612 ಶತಕೋಟಿ ಯೆನ್ (ಒಂದು ಯೆನ್ ಅಂದ್ರೆ ಅರವತ್ತು ಪೈಸೆ)ಗಿಂತ ಹೆಚ್ಚು ಆಗಿತ್ತು. ಪ್ರತಿ ತಿಂಗಳು ಆರು ನೂರಕ್ಕೂ ಹೆಚ್ಚು ಮಾಂಗ ಶ್ರೇಣಿಗಳು ಬಿಡುಗಡೆಯಾಗುತ್ತವೆ ಅಂದ್ರೆ ಯಾವ ಪ್ರಮಾಣದಲ್ಲಿ ಈ ಉದ್ಯಮದಲ್ಲಿ ಹಣ ಹರಿಯುತ್ತಿರಬಹುದು ಎಂಬುದನ್ನು ಊಹಿಸಬಹುದು. ಹೀಗಾಗಿ ಮಾಂಗ ಮುದ್ರಣಕ್ಕಾಗಿ ಬಳಸುವ ಕಾಗದದ ಪ್ರಮಾಣ ಅಲ್ಲಿನ ಟಾಯ್ಲೆಟ್ ಪೇಪರಿಗಿಂತ ಅಧಿಕ ಎನ್ನುವುದು ಬರೀ ತಮಾಷೆಯ ಮಾತಲ್ಲ.

ಮಾಂಗ ಪುಸ್ತಕಗಳು ಸಾಮಾನ್ಯವಾಗಿ ಟ್ಯಾಂಕೋಬೋನ್ ರೂಪದಲ್ಲಿ (17x11 ಸೆಮಿ ಪೇಪರ್‌ಬ್ಯಾಕ್ ಬುಕ್) ಪ್ರಕಟವಾಗುತ್ತವೆ ಮತ್ತು ಪ್ರತಿ ಪುಸ್ತಕವು ಹಲವಾರು ಪುಟಗಳನ್ನು ಹೊಂದಿರುತ್ತದೆ. ಈ ಮುದ್ರಣ ಪ್ರಕ್ರಿಯೆಗಾಗಿ ಭಾರಿ ಪ್ರಮಾಣದ ಕಾಗದ ಬೇಕಾಗುತ್ತದೆ. ಮಂಗಾ ಆಧಾರಿತ ಫಿಲ್ಮ್‌ಗಳು, ಆಟಿಕೆಗಳು, ವಿಡಿಯೋ ಗೇಮ್‌ಗಳು ಕೂಡ ಉದ್ಯಮಕ್ಕೆ ಪೂರಕವಾಗಿವೆ. ಜಪಾನಿಗೆ ಬರುವ ಅನೇಕ ಪ್ರವಾಸಿಗರು ಮಂಗಾ ಮತ್ತು ಅನಿಮೆಯ ಪ್ರಭಾವದಿಂದ ಪ್ರೇರಿತರಾಗಿರುತ್ತಾರೆ.

ಜಪಾನಿನಲ್ಲಿ ಪ್ರತಿ ವ್ಯಕ್ತಿ ವರ್ಷಕ್ಕೆ ಸರಾಸರಿ 17 ಕೆಜಿ ಟಾಯ್ಲೆಟ್ ಪೇಪರ್ ಬಳಸುತ್ತಾನೆ. ಇದು ಏಷ್ಯಾದಲ್ಲಿ ಅಗ್ರಸ್ಥಾನದಲ್ಲಿದೆ. ಹಾಗೆ ನೋಡಿದರೆ, ಜಪಾನಿನಲ್ಲಿ ಟಾಯ್ಲೆಟ್ ಪೇಪರ್ ಬಳಕೆ ಕಡಿಮೆಯೇ. ಯಾಕೆಂದರೆ ಜಪಾನಿನ ಬಹುತೇಕ ಮನೆಗಳು ಮತ್ತು ಸಾರ್ವಜನಿಕ ಶೌಚಾಲಯಗಳಲ್ಲಿ ಬಿಡೆ (bidet) ಸೌಲಭ್ಯವಿದೆ. ಇವು ನೀರಿನ ಸಿಂಪಡಣೆ (ಸ್ಪ್ರೇ) ಮೂಲಕ ಶುದ್ಧಗೊಳಿಸುವುದರಿಂದ ಟಾಯ್ಲೆಟ್ ಪೇಪರ್ ಬಳಕೆಯನ್ನು ಕುಗ್ಗಿಸುತ್ತದೆ.

ಮಾಂಗ ಕೇವಲ ಮನರಂಜನೆಗಾಗಿ ಮಾತ್ರವಲ್ಲ, ಅದು ಜಪಾನಿನ ಸಾಮಾಜಿಕ ಯಥಾರ್ಥವನ್ನು ಪ್ರತಿಬಿಂಬಿಸುವ ಮಾಧ್ಯಮವಾಗಿ ರೂಪುಗೊಂಡಿದೆ. ಕೆಲಸದ ಒತ್ತಡ, ಸಂಬಂಧಗಳು, ಶಾಲಾ ಬದುಕು, ಏಕಾಂತತೆ, ಮಾನಸಿಕ ಆರೋಗ್ಯ- ಈ ಎಲ್ಲವುಗಳನ್ನು ಮಾಂಗ ಹಲವು ರೀತಿಯಲ್ಲಿ ನಿರೂಪಿಸುತ್ತದೆ. ಅದು ಯುವ ಜನತೆಯ ಭಾವನೆಗಳನ್ನು ವ್ಯಕ್ತಪಡಿಸಲು ಸೂಕ್ತ ವೇದಿಕೆಯಾಗಿದ್ದು, ಕೆಲವು ಮಾಂಗ ಸಂಪುಟಗಳು ಸಮಾಜದಲ್ಲಿ ಚರ್ಚೆಗೆ ದಾರಿ ಮಾಡಿವೆ. ಉದಾಹರಣೆಗೆ, "A Silent Voice' ಎಂಬ ಮಾಂಗ, ಮೌನತ್ವ, ಶೋಷಣೆ ಮತ್ತು ಕ್ಷಮೆ ಕುರಿತಾಗಿ ಗಂಭೀರ ವಿಷಯಗಳ ಚರ್ಚೆಗೆ ಗ್ರಾಸವನ್ನೊದಗಿಸಿದೆ.

ಮಾಂಗ ಆಧರಿತ ಫಿಲ್ಮ್‌ಗಳು, ಆಟಿಕೆಗಳು, ವಿಡಿಯೋ ಗೇಮ್‌ಗಳು ಕೂಡ ಉದ್ಯಮಕ್ಕೆ ಪೂರಕವಾಗಿವೆ. ಜಪಾನಿಗೆ ಬರುವ ಅನೇಕ ಪ್ರವಾಸಿಗರು ಮಾಂಗ ಮತ್ತು ಅನಿಮೆಯ ಪ್ರಭಾವದಿಂದ ಪ್ರೇರಿತರಾಗಿರುತ್ತಾರೆ. ಇತ್ತೀಚಿನ ವರ್ಷಗಳಲ್ಲಿ ಡಿಜಿಟಲ್ ಮಾಂಗ (Web Manga, Webtoons) ಜನಪ್ರಿಯವಾಗುತ್ತಿದೆ. ಓದುಗರಿಗೆ ಮೊಬೈಲ್ ಅಥವಾ ಟ್ಯಾಬ್ಲೆಟ್‌ಗಳಲ್ಲಿ ಮಾಂಗ ಓದಲು ಅನುಕೂಲವಾಗಿದೆ. ಜಪಾನಿನಲ್ಲಿ Line Manga, Shonen Jump+ ಮುಂತಾದ ಡಿಜಿಟಲ್ ಪ್ಲಾಟ್‌ಫಾರ್ಮ್‌ಗಳು ಭಾರಿ ಓದುಗರನ್ನು ಸೆಳೆಯುತ್ತಿವೆ. ಈ ಮೂಲಕ ಹೊಸ ಕಲಾವಿದರಿಗೆ ತಮ್ಮ ಕೃತಿಗಳನ್ನು ಡಿಜಿಟಲ್ ಸ್ವರೂಪದಲ್ಲಿ ಪ್ರಕಟಿಸುವ ಅವಕಾಶಗಳು ಹೆಚ್ಚಾಗಿವೆ.

ಜಪಾನಿನ ಮಾಂಗ ಇಂದು ಜಗತ್ತಿನ ಅನೇಕ ಭಾಷೆಗಳಿಗೆ ಅನುವಾದವಾಗುತ್ತಿದ್ದು, ಇದರಿಂದ ಅಮೆರಿಕ, ಯುರೋಪ್, ಭಾರತ... ಹೀಗೆ ಎಲ್ಲೆಲ್ಲೂ ಮಾಂಗ ಓದುಗರು ಹುಟ್ಟಿಕೊಳ್ಳುತ್ತಿದ್ದಾರೆ. ಮಾಂಗ ಆಧರಿತ ಅನಿಮೇಷನ್ ಸರಣಿಗಳು (Anime) ಜಾಗತಿಕ ಮಟ್ಟದಲ್ಲಿ ಪ್ರಸಾರವಾಗುತ್ತಿವೆ. ಮಾಂಗ ಕಲೆಯನ್ನು ಕಲಿಯಲು ಈಗ ಜಗತ್ತಿನ ಅನೇಕ ಕಾಲೇಜುಗಳಲ್ಲಿ ಕೋರ್ಸ್‌ಗಳನ್ನು ಸಹ ಆರಂಭಿಸಲಾಗಿದೆ. ಅನೇಕ ಭಾರತೀಯ ಕಲಾವಿದರೂ ಮಂಗಾ ಶೈಲಿಯನ್ನು ಅನುಸರಿಸುತ್ತಿದ್ದಾರೆ.

ಭಿನ್ನ ಮಾಧ್ಯಮಗಳಲ್ಲಿ (ಆಗ್ಮೆಂಟೆಡ್ ರಿಯಾಲಿಟಿ, ಇಂಟರ್‍ಯಾಕ್ಟಿವ್ ಮಾಂಗ, ಡಿಜಿಟಲ್ ಓದು) ಮಾಂಗ ಹೊಸ ಆಯಾಮಗಳನ್ನು ಸೃಷ್ಟಿಸುತ್ತಿದೆ. ಕಥೆ ಹೇಳುವ ಶಕ್ತಿ ಮತ್ತು ಕಲಾತ್ಮಕ ದೃಷ್ಟಿಕೋನವನ್ನು ಹೊಂದಿರುವ ಮಾಂಗ, ಮುಂದೆ ಇನ್ನಷ್ಟು ವೈವಿಧ್ಯಮಯ ಮಾಧ್ಯಮಗಳಲ್ಲಿ ಬೆಳೆಯಲಿದೆ. ಇದು ಯುವ ಜನಾಂಗಕ್ಕೆ ಹತ್ತಿರವಾದ ಮಾಧ್ಯಮವಾಗಿ ಅವರ ಕಲ್ಪನಾಲೋಕದಲ್ಲಿ ಹೊಸ ಅಲೆಯನ್ನು ಎಬ್ಬಿಸುವುದರಲ್ಲಿ ಎರಡು ಮಾತಿಲ್ಲ.

ಮಾಂಗ ಕೇವಲ ಕಾರ್ಟೂನ್ ಪುಸ್ತಕವಲ್ಲ, ಇದು ಜಪಾನಿನ ಸಂಕೀರ್ಣ ಸಂಸ್ಕೃತಿಯ ಪ್ರತಿಬಿಂಬ, ಯುವಜನತೆಗೆ ಒದಗಿಸುವ ಆತ್ಮಸಂವಾದದ ಮಾಧ್ಯಮ ಹಾಗೂ ಜಗತ್ತಿನ ನಾನಾ ಸ್ತರಗಳ ಓದುಗರನ್ನು ಕಾವ್ಯಾತ್ಮಕವಾಗಿ ಸಂಪರ್ಕಿಸುವ ಸೇತುವೆ. ಜಪಾನಿನ ಜನಜೀವನವನ್ನು ಮಾಂಗ ಮೆರೆಸುವ ರೀತಿಯಲ್ಲಿ ಹೇಳುವ ಇನ್ನೊಂದು ಮಾಧ್ಯಮವಿಲ್ಲವೆನ್ನಬಹುದು.

ಒಂದು ದೇಶದ ಕಲಾಶಕ್ತಿ ವಿಶ್ವದ ಗಮನ ಸೆಳೆಯಲು ಹೇಗೆ ಸಾಕ್ಷಿಯಾಗಿದೆ ಎಂಬುದಕ್ಕೆ ಮಾಂಗ ಅತ್ಯುತ್ತಮ ಉದಾಹರಣೆ!

ಖಾಲಿ ಪುಕ್ಕಟ್ ಮನುಷ್ಯ

ಇಂಥ ಒಬ್ಬ ವ್ಯಕ್ತಿ ಇದ್ದಿರಬಹುದಾ ಎಂದು ನೀವು ಊಹಿಸಲೂ ಸಾಧ್ಯವಿಲ್ಲ. ಜಪಾನಿನ ಟೋಕಿಯೋದಲ್ಲಿ ಒಬ್ಬನಿದ್ದಾನೆ. ಅವನಿಗೆ ಈಗ 41 ವರ್ಷ. ಆತನ ಹೆಸರು ಶೋಜಿ ಮೊರಿಮೊಟೊ. ಆತ 'ಏನೂ ಮಾಡದೇ' (Doing nothing) ಜೀವನೋಪಾಯ ಮಾಡುತ್ತಿರುವ ವ್ಯಕ್ತಿ ಎಂದೇ ಜಪಾನಿನಲ್ಲಿ ಪ್ರಸಿದ್ಧ. ಆತ ತನ್ನನ್ನು 'ಬಾಡಿಗೆ ವ್ಯಕ್ತಿ' ಎಂದು ಪರಿಚಯಿಸಿಕೊಳ್ಳುತ್ತಾನೆ. ಆತ ತನ್ನನ್ನು ಯಾವುದೇ ರೀತಿಯ ಕೆಲಸಗಳಿಗೆ ಸಾಲವಾಗಿ ಕೊಡುತ್ತಾನೆ. ಅಂದರೆ ಆತ ಯಾರಿಗೆ ಬೇಕಾದರೂ ಸಾಥ್ ನೀಡುವ ಸೇವೆಯನ್ನು ಒದಗಿಸುತ್ತಾನೆ.

ಮೊರಿಮೊಟೊ ಪದವಿಪೂರ್ವ ಶಿಕ್ಷಣವನ್ನು ಪೂರೈಸಿದ ನಂತರ, ಒಂದು ಪ್ರಕಟಣಾ ಸಂಸ್ಥೆಯಲ್ಲಿ ಕೆಲಸ ಆರಂಭಿಸಿದ. ಆದರೆ, ತನ್ನ ಶೈಲಿಗೆ ಹೊಂದಿಕೆಯಾಗದ ಈ ಉದ್ಯೋಗದಲ್ಲಿ ಆತನಿಗೆ ಮುಂದುವರಿಯಲು ಸಾಧ್ಯವಾಗಲಿಲ್ಲ. 'ನೀವು ಇಲ್ಲದಿದ್ದರೂ ಪರವಾಗಿಲ್ಲ' ಎಂದು ಆತನ ಮೇಲಧಿಕಾರಿ ಹೇಳಿದ್ದಕ್ಕೆ ಮೊರಿಮೊಟೊಗೆ ತೀವ್ರ ಬೇಸರವಾಯಿತು. ಆತ ತಕ್ಷಣ ತನ್ನ ಉದ್ಯೋಗವನ್ನು ತ್ಯಜಿಸಿದ. 'ನಾನು ಏನೂ ಮಾಡದೇ ನನ್ನ ಬದುಕನ್ನು ಕಟ್ಟಿಕೊಳ್ಳುತ್ತೇನೆ, ನೋಡುತ್ತಿರು' ಎಂದು ದಬಾಯಿಸಿ ಅಲ್ಲಿಂದ ಹೊರಬಿದ್ದ.

2018ರಲ್ಲಿ, ಮೊರಿಮೊಟೊ 'ಏನೂ ಮಾಡದ' (Doing nothing) ಸೇವೆಯನ್ನು ಆರಂಭಿಸಿದ. ಈ ಸೇವೆಯಲ್ಲಿ ಆತ ಗ್ರಾಹಕರಿಗೆ ಸಂಗಾತಿಯಾಗುತ್ತಾನೆ, ಆದರೆ ಯಾವುದೇ ನಿರ್ದಿಷ್ಟ ಕಾರ್ಯವನ್ನು ನಿರ್ವಹಿಸುವುದಿಲ್ಲ. ಆರಂಭದಲ್ಲಿ ಈ ಸೇವೆಯನ್ನು ಉಚಿತವಾಗಿ ನೀಡಿದ ಆತ, ನಂತರ ಪ್ರತಿ ಸೆಷನ್‌ಗೆ 10 ಸಾವಿರ ಯೆನ್ (ಸುಮಾರು 6,000 ರುಪಾಯಿ) ಶುಲ್ಕ ವಿಧಿಸಲು ಆರಂಭಿಸಿದ.

ಮೊರಿಮೊಟೊ ತನ್ನ ಗ್ರಾಹಕರಿಗೆ ವಿಚ್ಛೇದನ ದಾಖಲೆ ಸಲ್ಲಿಸುವಾಗ, ಮ್ಯಾರಥಾನ್ ಮುಕ್ತಾಯದ ಸ್ಥಳದಲ್ಲಿ ಕಾಯುವಾಗ, ಪಾರ್ಕ್‌ನಲ್ಲಿ ಆಟವಾಡಲು, ಅನಾಮಧೇಯ ವ್ಯಕ್ತಿಗೆ ರೈಲಿನಲ್ಲಿ ಬೀಳ್ಕೊಡುವಾಗ, ಅಂತ್ಯಕ್ರಿಯೆಯಲ್ಲಿ ಸಾಂತ್ವನ ಹೇಳಲು, ಬಾರ್-ಪಬ್‌ನಲ್ಲಿ ಜತೆಗಾರನಾಗಿ, ಪ್ರವಾಸದಲ್ಲಿ ಸಂಗಾತಿಯಾಗಿ ಹೀಗೆ ಹತ್ತಾರು ರೀತಿಯ ಕೆಲಸಗಳಲ್ಲಿ ನೆರವಾಗುತ್ತಾನೆ. ಆದರೆ ಆತ ಯಾವುದೇ ಭೌತಿಕ ಶ್ರಮ ಅಥವಾ ಲೈಂಗಿಕ ಆಸಕ್ತಿಯ ವಿನಂತಿಗಳನ್ನು ನಿರಾಕರಿಸುತ್ತಾನೆ.

ಮೊರಿಮೊಟೊ ತನ ಸೇವೆಯನ್ನು ಪ್ರಚಾರ ಮಾಡಲು ಟ್ವಿಟರ್ (ಈಗ X) ಅನ್ನು ಬಳಸುತ್ತಾನೆ. ಆತ ಸುಮಾರು ಮೂರು ಲಕ್ಷ ಅನುಯಾಯಿಗಳನ್ನು ಹೊಂದಿದ್ದಾನೆ. ಹಾಗೆ ನೋಡಿದರೆ ಮೊರಿಮೊಟೊನದು ಖಾಲಿ ಪುಕ್ಕಟ್ ಕೆಲಸ. ಅವನ ಉದ್ಯೋಗವನ್ನು ನಿರ್ದಿಷ್ಟವಾಗಿ ಹೇಳಲು ಸಾಧ್ಯವಿಲ್ಲ. ಅವನಿಗೆ 'ನೀನು ಏನು ಮಾಡುತ್ತೀಯ?' ಎಂದು ಕೇಳಿದರೆ, 'ನಾನು ಏನೂ ಮಾಡುವುದಿಲ್ಲ' ಅಂತಲೇ ಹೇಳುತ್ತಾನೆ. ಅದು ನಿಜವೂ ಹೌದು. ಆದರೆ ಆತ 'ಏನೂ ಮಾಡದ ಉದ್ಯೋಗ' ಮಾಡುತ್ತಾನೆ

ಎಂಬುದು ಸಹ ಖರೆ. ಒಮ್ಮೆ ಮಹಿಳೆಯೊಬ್ಬಳು ತನ್ನ ಜತೆಗೆ ಸೀರೆ ಧರಿಸಿ ರೆಸ್ಟೋರೆಂಟ್‌ಗೆ ಚಹಾ ಕುಡಿಯಲು ಬರಬೇಕು ಎಂದು ಹೇಳಿದಳು. ಅದಕ್ಕೆ ಆತ ಸಮ್ಮತಿಸಿದ. ಒಂದು ತಾಸು ತನ್ನೊಂದಿಗೆ ಮಾತಾಡಲೆಂದು ಆ ಮಹಿಳೆ ಆತನ ಸೇವೆಯನ್ನು ಬಯಸಿದ್ದಳು.

ಕರೆದವರಿಗೆಲ್ಲ ಮೊರಿಮೊಟೊ ತನ್ನ ಸೇವೆಯನ್ನು ನೀಡುವುದಿಲ್ಲ. ದಿನಕ್ಕೆ ಒಂದು ಅಥವಾ ಎರಡು ಸೆಷನ್‌ಗಳನ್ನು ಮಾತ್ರ ಒಪ್ಪಿಕೊಳ್ಳುತ್ತಾನೆ. ಈ ಸೇವೆಯಿಂದ ತನ್ನ ಪತ್ನಿ ಮತ್ತು ಮಗನನ್ನು ಪೋಷಿಸುತ್ತಿದ್ದಾನೆ. ಆತ ತನ್ನ ಆದಾಯವನ್ನು ಬಹಿರಂಗಪಡಿಸದಿದ್ದರೂ, ಈ ಸೇವೆಯಿಂದ ಅವನು ತೃಪ್ತನಾಗಿದ್ದಾನೆ. ಒಂದು ಅಂದಾಜಿನ ಪ್ರಕಾರ ಆತ ವಾರ್ಷಿಕ 80 ಸಾವಿರ ಡಾಲರ್ ಸಂಪಾದನೆ ಮಾಡುತ್ತಾನೆ.

ಉತ್ಕೃಷ್ಟತೆ ಮತ್ತು ಉತ್ಪಾದಕತೆಯನ್ನು ಮಹತ್ವಪೂರ್ಣವಾಗಿ ಪರಿಗಣಿಸುವ ಜಪಾನಿನಂಥ ಸಮಾಜದಲ್ಲಿ ಮೊರಿಮೊಟೊ ಸೇವೆಯು ವಿಭಿನ್ನ ರೀತಿಯ ಸೇವೆ ಎಂದು ಪರಿಗಣಿತವಾಗಿರುವುದು ಸತ್ಯ. 'ಏನೂ ಮಾಡದೇ' ಇದ್ದರೂ, ಏನನ್ನೋ ಮಾಡುತ್ತಿದ್ದಾನೆ. ಏನೂ ಮಾಡದೆಯೂ ಸಾಧನೆ ಮಾಡಬಹುದು ಎಂಬ ಸಂದೇಶವನ್ನು ತನ್ನ ಸೇವೆಯ ಮೂಲಕ ಹರಡುತ್ತಿದ್ದಾನೆ. ಆತನ ಸೇವೆ ಅಲ್ಲಿನ ಜನರಿಗೆ ಸಾಂತ್ವನ ಮತ್ತು ಸಹಾಯವನ್ನು ಒದಗಿಸುತ್ತಿದೆ.

ಪ್ರತಿಷ್ಠೆ-ಗೌರವದ ಸಂಕೇತ

ಜಗತ್ತಿನಲ್ಲಿಯೇ ಜಪಾನಿನ ಪಾಸ್‌ಪೋರ್ಟ್ ಅತ್ಯಂತ ಪ್ರಭಾವಶಾಲಿ ಮತ್ತು ಶಕ್ತಿಶಾಲಿ ಏಕೆ?

ಜಗತ್ತಿನಲ್ಲಿ ವಿವಿಧ ದೇಶಗಳ ಪಾಸ್‌ಪೋರ್ಟುಗಳಿಗೆ ವಿಭಿನ್ನ ಮಟ್ಟದ ಪ್ರಭಾವ ಮತ್ತು ಶಕ್ತಿಯಿದೆ. ದೇಶವೊಂದರ ಪಾಸ್‌ಪೋರ್ಟುದಾರರು ಅತಿ ಹೆಚ್ಚು ದೇಶಗಳಿಗೆ ವೀಸಾ ಇಲ್ಲದೆ ಪ್ರವೇಶಿಸುವ ಅವಕಾಶ ಹೊಂದಿದರೆ, ಆ ದೇಶದ ಪಾಸ್‌ಪೋರ್ಟ್ ಪವರ್‌ಫುಲ್ ಎಂದು ಕರೆಯಿಸಿಕೊಳ್ಳುತ್ತದೆ. ಇಂಥ ಶಕ್ತಿಶಾಲಿ ಪಾಸ್‌ಪೋರ್ಟುಗಳ ಪಟ್ಟಿಯಲ್ಲಿ ಜಪಾನ್ ಇತ್ತೀಚಿನ ವರ್ಷಗಳಲ್ಲಿ ಮೊದಲ ಸ್ಥಾನದಲ್ಲಿದೆ. ಇದರ ಹಿಂದಿರುವ ಕಾರಣಗಳು ಅನೇಕ.

ಯಾವ ದೇಶಗಳ ಪಾಸ್‌ಪೋರ್ಟು ಶಕ್ತಿಶಾಲಿ ಎಂಬುದನ್ನು ಹೆನ್ಲೆಯ್ ಪಾಸ್‌ಪೋರ್ಟ್ ಇಂಡೆಕ್ಸ್ ಮತ್ತು ಅರಟಾನ್ ಕ್ಯಾಪಿಟಲ್ ಪಾಸ್‌ಪೋರ್ಟ್ ಇಂಡೆಕ್ ಎಂಬ ಸಂಸ್ಥೆಗಳು ವರ್ಷಕ್ಕೊಮ್ಮೆ ನಿರ್ಧರಿಸುತ್ತವೆ. ಈ ಪಟ್ಟಿಯಲ್ಲಿ ಮೊದಲ ಸ್ಥಾನದಲ್ಲಿರುವ ಪಾಸ್‌ಪೋರ್ಟ್‌ಗಳನ್ನು 'ಅತ್ಯಂತ ಪ್ರಭಾವಶಾಲಿ' ಎಂದು ಕರೆಯಲಾಗುತ್ತದೆ.

ಜಪಾನ್ ಪಾಸ್‌ಪೋರ್ಟ್ ಹೊಂದಿದವರು 190ಕ್ಕಿಂತ ಹೆಚ್ಚು ದೇಶಗಳಿಗೆ ವೀಸಾ ಇಲ್ಲದೆ ಅಥವಾ ಆಗಮನ ವೀಸಾ (visa on arrival) ಮೂಲಕ ಪ್ರವೇಶಿಸಬಹುದು. ಇದು ಜಗತ್ತಿನಲ್ಲಿ ಬಹುಪಾಲು ರಾಷ್ಟ್ರಗಳು ನೀಡುವ ವಿಶ್ವಾಸದ ಸೂಚನೆಯಾಗಿದ್ದು, ಜಪಾನ್ ದೇಶದ ಬಲಿಷ್ಠತೆ, ರಾಜತಾಂತ್ರಿಕ ಸ್ನೇಹ, ಆರ್ಥಿಕ ಸ್ಥಿರತೆ ಮತ್ತು ಶಿಸ್ತುಬದ್ಧತೆಗೆ ಮಾನ್ಯತೆ ನೀಡಿದಂತಾಗಿದೆ.

ಜಪಾನ್ ಬಹುತೇಕ ಎಲ್ಲ ದೇಶಗಳೊಂದಿಗೆ ಉತ್ತಮ ರಾಜತಾಂತ್ರಿಕ ಸಂಬಂಧ ಹೊಂದಿರುವ ಶಾಂತಿಪ್ರಿಯ ರಾಷ್ಟ್ರವಾಗಿದೆ. ಈ ದ್ವಿಪಕ್ಷೀಯ ಮತ್ತು ಬಹುಪಕ್ಷೀಯ ಸಂಬಂಧಗಳು ವೀಸಾ ಸಡಿಲತೆ ಒದಗಿಸಲು ಸಹಾಯಕವಾಗಿವೆ. ಜಪಾನ್ ವಿಶ್ವದ ಮೂರನೇ ಅತಿದೊಡ್ಡ ಆರ್ಥಿಕತೆಯ ದೇಶ. ಟೋಕಿಯೋ ಸ್ಟಾಕ್ ಎಕ್ಸ್‌ಚೇಂಜ್, ತಂತ್ರಜ್ಞಾನ, ಇಲೆಕ್ಟ್ರಾನಿಕ್ಸ್ ಮತ್ತು ತಯಾರಿಕಾ ಕ್ಷೇತ್ರದಲ್ಲಿ ಜಪಾನ್ ವಿಶ್ವದ ನಾಯಕನಾಗಿದೆ. ಈ ಆರ್ಥಿಕ ಶಕ್ತಿಯು ಜಪಾನಿನ ಪ್ರಜೆಗಳಿಗೆ ವಿಶ್ವದಲ್ಲಿ ಹೆಚ್ಚಿನ ಗೌರವ ಮತ್ತು ಪ್ರವೇಶ ಸೌಲಭ್ಯಗಳನ್ನು ಒದಗಿಸುತ್ತದೆ.

ಜಪಾನಿನ ಪ್ರಜೆಗಳು ಶಿಸ್ತುಬದ್ಧರು, ಪ್ರಾಮಾಣಿಕರು, ವಿನಯಶೀಲರು ಮತ್ತು ಪ್ರವಾಸದ ಸಂದರ್ಭಗಳಲ್ಲಿ ಕಾನೂನು ಪಾಲನೆ ಮಾಡುವವರು ಎಂಬ ಅಭಿಪ್ರಾಯ ಮತ್ತು ನಂಬಿಕೆಯನ್ನು ಇತರ ರಾಷ್ಟ್ರಗಳು ಹೊಂದಿವೆ. ಇದು ವೀಸಾ ಮಾಫಿ ಅಥವಾ ಸುಲಭ ವೀಸಾ ನಿಯಮಗಳನ್ನು ರೂಪಿಸಲು ಕಾರಣವಾಗಿದೆ. ಜಪಾನ್ ಎರಡನೇ ಮಹಾಯುದ್ಧದ ನಂತರ ಶಾಂತಿಯುತ ದೇಶವಾಗಿ ರೂಪುಗೊಂಡಿದ್ದು, ತನ್ನ ಸಂವಿಧಾನದಲ್ಲಿ ಯುದ್ಧ ವಿರೋಧಿ ನಿಲುವು ಹೊಂದಿದೆ. ಈ ಕಾರಣದಿಂದ ಜಪಾನ್ ವಿಶ್ವದ ಹೆಚ್ಚಿನ ರಾಷ್ಟ್ರಗಳಿಂದ ಅಭಿಮಾನಕ್ಕೆ ಪಾತ್ರವಾಗಿದೆ.

ಜಪಾನ್ ಪಾಸ್‌ಪೋರ್ಟ್ ಹೊಂದಿರುವ ವ್ಯಕ್ತಿಗೆ ಅದರದ್ದೇ ಆದ ಲಾಭಗಳಿವೆ. 1. ವೀಸಾ ಸಂಪಾದನೆಗಾಗಿ ಸಮಯ ಮತ್ತು ಹಣದ ಉಳಿವು 2. ವಿವಿಧ ರಾಷ್ಟ್ರಗಳಲ್ಲಿ ಸುಲಭವಾಗಿ ಶಿಕ್ಷಣ ಅಥವಾ ಉದ್ಯೋಗಕ್ಕೆ ಪ್ರವೇಶ ಪಡೆಯಬಹುದು. 3. ವ್ಯಾಪಾರಕ್ಕೆ ಸಂಬಂಧಿಸಿದಂತೆ ಇತರ ರಾಷ್ಟ್ರಗಳಿಗೆ ಸುಲಭವಾಗಿ ತೆರಳಬಹುದು. 4. ಪ್ರವಾಸೋದ್ಯಮ ಪ್ರೋತ್ಸಾಹ.

ಭಾರತೀಯ ಪಾಸ್‌ಪೋರ್ಟ್ ಹೊಂದಿರುವವರಿಗೆ ಸುಮಾರು 60-65 ದೇಶಗಳಿಗೆ ಮಾತ್ರ ವೀಸಾ ಮುಕ್ತ ಪ್ರವೇಶ ಸೌಲಭ್ಯವಿದೆ. 190 ದೇಶಗಳಲ್ಲಿ ವೀಸಾ ಬೇಕಿಲ್ಲದ ಜಪಾನ್‌ಗೂ, ಭಾರತಕ್ಕೂ ತುಂಬಾ ವ್ಯತ್ಯಾಸ. ಜಪಾನ್ ಮುಂದುವರಿದು ತನ್ನ ರಾಜತಾಂತ್ರಿಕ ಸಂಬಂಧಗಳನ್ನು ಬಲಪಡಿಸುತ್ತಾ, ತಂತ್ರಜ್ಞಾನ, ಆರ್ಥಿಕತೆ ಮತ್ತು ಶಾಂತಿಯುತ ನಿಲುವು ಕಾಯ್ದುಕೊಂಡರೆ, ಅದರ ಪಾಸ್‌ಪೋರ್ಟ್ ಮುಂಬರುವ ವರ್ಷಗಳಲ್ಲಿಯೂ ತನ್ನ ಸ್ಥಾನವನ್ನು ಕಾಯ್ದುಕೊಳ್ಳಬಹುದು. ಜಪಾನಿನ ಪಾಸ್‌ಪೋರ್ಟ್ ಹೊಂದಿರುವುದು ವಿಶ್ವದಲ್ಲಿಯೇ ಅತ್ಯಂತ ಪ್ರತಿಷ್ಠೆಯ ಮತ್ತು ಗೌರವದ ಸಂಕೇತ.

ಈಸ್ಟರ್ ಎಷ್ಟು ಸೌರಮಾನವೋ ಅಷ್ಟೇ ಚಾಂದ್ರಮಾನವೂ ಹೌದು!

ತಿಳಿರು ತೋರಣ

ಶ್ರೀವತ್ಸ ಜೋಶಿ
srivathsajoshi@yahoo.com

ಅಮೆರಿಕದಲ್ಲೊಂದು ರೈತರ ಪಂಚಾಂಗ ಅಂತ ಇದೆ, The Old Farmer's Almanac ಎಂದು ಅದರ ಹೆಸರು. ಕ್ರಿ.ಶ. 1792ರಿಂದ ಪ್ರತಿವರ್ಷವೂ ಪ್ರಕಟವಾಗುತ್ತಿರುವುದರಿಂದ 'ಉತ್ತರ ಅಮೆರಿಕ ಖಂಡದಲ್ಲಿ ಅಖಂಡ ಪ್ರಕಟಣೆ ಕಂಡಿರುವ ಅತ್ಯಂತ ಹಳೆಯ ನಿಯತಕಾಲಿಕ' ಎಂಬ ಹೆಗ್ಗಳಿಕೆ ಅದರದು. ಹೆಸರಿನ ಮಟ್ಟಿಗೆ ರೈತರ ಪಂಚಾಂಗ ಅಂತ ಇದ್ದರೂ ಅದರ ಹೂರಣದಲ್ಲಿ ರಸವೈವಿಧ್ಯ ಇರುತ್ತದೆ. ಹವಾಮಾನ ಮುನ್ಸೂಚನೆ, ಮಳೆ-ಬೆಳೆ ಲಕ್ಷಣಗಳು, ಯಾವ ಬಿತ್ತನೆಯನ್ನು ಯಾವಾಗ ಮಾಡಬೇಕು ಎಂಬ ಕೋಷ್ಟಕಗಳು ಮತ್ತಿತರ ಕೃಷಿ ಸಲಹೆಗಳೆಲ್ಲ ರೈತರಿಗೆ ಮಾರ್ಗದರ್ಶಿ. ಹೊಸರುಚಿಗಳು, ಫ್ಯಾಷನ್ ಶೈಲಿಗಳು, ತಂತ್ರಜ್ಞಾನದ ಹೊಸ ಉತ್ಪನ್ನಗಳ ಪರಿಚಯ, ಪ್ರಮುಖ ಕ್ರೀಡೆಗಳ, ಜನಪದ ಉತ್ಸವಗಳ ವೇಳಾಪಟ್ಟಿ, ಗ್ರಹಗತಿಗಳ ಪ್ರಕಾರ ವರ್ಷಭವಿಷ್ಯ... ಇವೆಲ್ಲ ರೈತರಲ್ಲದ ಜನಸಾಮಾನ್ಯರಿಗೂ ಜ್ಞಾನದಾಯಕ, ಮನೋರಂಜಕ. ಇನ್ನೊಂದು ಗಮನಾರ್ಹ ವೈಶಿಷ್ಟ್ಯವೆಂದರೆ ಈ ಪಂಚಾಂಗ ಪುಸ್ತಕ ಅಚ್ಚಿನಮನೆಯಿಂದ ಮಾರುಕಟ್ಟೆಗೆ ಬರುವಾಗಲೇ ಅದರ ಎಡ ಮೂಲೆಯಲ್ಲೊಂದು ತೂತು ಪಂಚ್ ಮಾಡಿದ್ದಿರುತ್ತದೆ, ದಾರ ಪೋಣಿಸಿ ಗೋಡೆಯ ಮೊಳೆಗೆ ನೇತುಹಾಕಲಿಕ್ಕೆ ಅನುಕೂಲ ಆಗಲೆಂದು. ಅಂದರೆ ಈ ದೇಶದಲ್ಲೂ ನಮ್ಮಲ್ಲಿಯಂತೆ ಪಂಚಾಂಗವನ್ನು ಗೋಡೆಗೆ ನೇತಾಡಿಸಿಡುವ ಕ್ರಮವೇ ಇರುವುದು!

ಪಂಚಾಂಗ ಎಂದಮೇಲೆ ಯಾವ್ಯಾವ ಹಬ್ಬಗಳು ಯಾವ ದಿನ/ದಿನಾಂಕದಂದು ಬರುತ್ತವೆಂಬ ವಿವರಗಳೂ ಇದ್ದೇ ಇರುತ್ತವೆ. ಅಮೆರಿಕದಲ್ಲಿ ಬಹುಸಂಖ್ಯಾತರು ಕ್ರಿಶ್ಚಿಯನ್ ಮತಾನುಯಾಯಿಗಳು ಆದ್ದರಿಂದ ಕ್ರಿಶ್ಚಿಯನ್ ಹಬ್ಬಗಳ ವಿವರಗಳಿರುತ್ತವೆಯೇ ಹೊರತು ಸಂಕಷ್ಟ ಚತುರ್ಥಿ, ವೈಕುಂಠ ಏಕಾದಶಿ, ಬನದ ಹುಣ್ಣಿಮೆ, ಭೀಮನ ಅಮಾವಾಸ್ಯೆಗಳೆಲ್ಲ ಈ ರೈತರ ಪಂಚಾಂಗದಲ್ಲಿ ನಮೂದಾಗಿರುವುದಿಲ್ಲವೆನ್ನಿ. ಅಥವಾ ಈದ್-ಮಿಲಾದ್, ಬಕ್ರಿದ್, ರಮ್ಜಾನ್‌ಗಳೂ ಇದುವರೆಗೆ ರೈತರ ಪಂಚಾಂಗದಲ್ಲಿ ಕಾಣಿಸಿಕೊಂಡಿಲ್ಲವೆನ್ನಿ. ಅಂದಹಾಗೆ ಕ್ರಿಶ್ಚಿಯನ್ ಹಬ್ಬಗಳು- ಹೊಸ ವರ್ಷದ ದಿನ ಯಾವಾಗಲೂ ಜನವರಿ 1, ಕ್ರಿಸ್ಮಸ್ ಯಾವಾಗಲೂ ಡಿಸೆಂಬರ್ 25- ಹೀಗೆ ನಿರ್ದಿಷ್ಟ ದಿನಾಂಕದಂದೇ ಬರುವುದರಿಂದ ಪಂಚಾಂಗದ ಆವಶ್ಯಕತೆಯೇನಿದೆ? ಹಾಗೆ ನೋಡಿದರೆ ಅಮೆರಿಕದಲ್ಲಿ ಬೇರೆ ಕೆಲವು ಸಾರ್ವಜನಿಕ ರಜಾದಿನಗಳೂ- ಪ್ರೆಸಿಡೆಂಟ್ಸ್ ಡೇ, ಮೆಮೋರಿಯಲ್ ಡೇ, ಲೇಬರ್ ಡೇ, ಥ್ಯಾಂಕ್ಸ್‌ಗಿವಿಂಗ್ ಡೇ ಮುಂತಾದುವು- ಇಂಥಿಂಥ ತಿಂಗಳ ಇಂಥಿಂಥ ವಾರದಂದು, ಉದಾಹರಣೆಗೆ ಪ್ರೆಸಿಡೆಂಟ್ಸ್ ಡೇ ಫೆಬ್ರವರಿ ತಿಂಗಳ ಮೂರನೇ ಸೋಮವಾರ, ಮೆಮೋರಿಯಲ್ ಡೇ ಮೇ ತಿಂಗಳ ಕೊನೆಯ ಸೋಮವಾರ, ಲೇಬರ್ ಡೇ ಸೆಪ್ಟೆಂಬರ್ ತಿಂಗಳ ಮೊದಲ ಸೋಮವಾರ- ಹೀಗೆ ಇರುವುದರಿಂದ ಸರಿಸುಮಾರಾಗಿ ಯಾವಾಗ ಬರುತ್ತವೆಂದು ಪಂಚಾಂಗವಿಲ್ಲದೆಯೇ ಅಂದಾಜು ಮಾಡಲಿಕ್ಕಾಗುತ್ತದೆ. ಗ್ರೆಗೋರಿಯನ್ ಕ್ಯಾಲೆಂಡರ್‌ನ ತಿಂಗಳು, ದಿನಾಂಕ ಅಥವಾ ವಾರದ ಯಾವ ದಿನ- ಇದಿಷ್ಟೇ ಪರಿಗಣನೆಯಾದ್ದರಿಂದ ಇವೆಲ್ಲವೂ ಸೌರಮಾನ. ಅಂದರೆ ಸೂರ್ಯನ ಸುತ್ತ ಭೂಮಿಯ ಚಲನೆಯನ್ನು ಆಧರಿಸಿ ನಿರ್ಣಯವಾಗುವಂಥವು.

ಆದರೆ ಈಸ್ಟರ್ ಸಂಡೇ (ಮತ್ತು ಅದರಿಂದಾಗಿ ಗುಡ್ ಫ್ರೈಡೇ ಆಚರಣೆ) ಇದಕ್ಕೊಂದು ಅಪವಾದ! ಕಾರಣ, ಈಸ್ಟರ್ ಪ್ರತಿವರ್ಷವೂ ಭಾನುವಾರದಂದೇ ಇರುವುದು ಹೌದಾದರೂ ಕರಾರುವಾಕ್ಕಾಗಿ ಯಾವ ತಿಂಗಳ ಯಾವ ದಿನದಂದು ಎಂಬ ಲೆಕ್ಕಾಚಾರ ತುಂಬ ಸಂಕೀರ್ಣವಾದುದು, ಮತ್ತು ಅದರಲ್ಲಿ ಚಾಂದ್ರಮಾನ ಕಾಲಗಣನೆಯೂ ಸೇರಿಕೊಂಡಿರುವುದು! ರೈತರ ಪಂಚಾಂಗದಲ್ಲಿ ಇದನ್ನು ಕೂಲಂಕಷವಾಗಿ ವಿವರಿಸಿದ್ದಾರೆ. ನಮ್ಮೆಲ್ಲರ ಸಾಮಾನ್ಯಜ್ಞಾನ ಭಂಡಾರದಲ್ಲಿ ಇಂಥ ವಿಷಯಗಳೂ ಸೇರಿಕೊಂಡಿರಬೇಕು ಎಂಬ ಆಶಯದಿಂದ ಮತ್ತು ಈದಿನ (20 ಏಪ್ರಿಲ್ 2025) ಈಸ್ಟರ್ ಸಂಡೇ ಆದ್ದರಿಂದ, ಸಂದರ್ಭೋಚಿತವಾಗಿ ಕನ್ನಡದಲ್ಲಿ ಸರಳವಾಗಿ ಅರ್ಥವಾಗುವಂತೆ ಕೆಲವು ವಿವರಗಳನ್ನೊದಗಿಸುವ ಒಂದು ಪ್ರಯತ್ನವನ್ನಿಲ್ಲಿ ಮಾಡಿದ್ದೇನೆ. ಓದುಗಮಿತ್ರರೆಲ್ಲರಿಗೂ ಈಸ್ಟರ್ ಹಬ್ಬದ ಶುಭ ಹಾರೈಕೆಗಳನ್ನೂ ಇದರೊಡನೆ ಸೇರಿಸಿದ್ದೇನೆ.

ಈಸ್ಟರ್ ಸಂಡೇ ಅಂದರೆ ನಮಗೆಲ್ಲ ತಿಳಿದಿರುವಂತೆ ಯೇಸುಕ್ರಿಸ್ತನ ಪುನರುತ್ಥಾನ (Resurrection) ಆದ ದಿನ. ಅದಕ್ಕೆ ಎರಡು ದಿನಗಳ ಹಿಂದೆ ಗುಡ್ ಫ್ರೈಡೇಯಂದು ಕ್ರಿಸ್ತನನ್ನು ಶಿಲುಬೆಗೇರಿಸಿದ್ದು. ಪ್ರತಿವರ್ಷ ಈಸ್ಟರ್ ಸಂಡೇ (ಮತ್ತು ಅದರ ಹಿಂದಿನ ಗುಡ್ ಫ್ರೈಡೇ) ಯಾವ ದಿನಾಂಕದಂದು ಬರುತ್ತದೆಯೆಂಬುದು, ಮೇಲ್ನೋಟಕ್ಕೆ ಸುಲಭವಾಗಿ ಕಾಣುವ ಆದರೆ ನಿಜವಾಗಿಯೂ ಸಂಕೀರ್ಣವಾದ ಲೆಕ್ಕಾಚಾರ. ಸುಲಭವಾದ ಲೆಕ್ಕಾಚಾರದಂತೆ ''ಪ್ರತಿವರ್ಷ ಮಾರ್ಚ್ 21ರಂದು ಸಂಭವಿಸುವ ಸಮನಿಶಿ (ಹಗಲು ಮತ್ತು ರಾತ್ರಿ ಸಮಪ್ರಮಾಣದಲ್ಲಿರುವ ದಿನ ಅಥವಾ Spring Equinox) ಆದಮೇಲಿನ ಹುಣ್ಣಿಮೆಯ ತರುವಾಯ ಬರುವ ಮೊದಲ ಭಾನುವಾರ'' ಈಸ್ಟರ್ ಸಂಡೇ ಮತ್ತು ಅದಕ್ಕಿಂತ ಹಿಂದಿನ ಶುಕ್ರವಾರವೇ ಗುಡ್ ಫ್ರೈಡೇ. ಈ ವ್ಯಾಖ್ಯೆಯ ಪ್ರಕಾರ ಈಸ್ಟರ್ ಸಂಡೇ ಯಾವುದೇ ವರ್ಷದಲ್ಲಿ ಮಾರ್ಚ್ 22ರಿಂದ ಏಪ್ರಿಲ್ 25ರವರೆಗಿನ ಅವಧಿಯಲ್ಲಿನ ಒಂದು ಭಾನುವಾರದಂದು ಬರುತ್ತದೆ. ಈಗ, ಈ ಸುಲಭ ಲೆಕ್ಕಾಚಾರ ಈ ವರ್ಷಕ್ಕೆ, ಅಂದರೆ 2025ನೇ ಇಸವಿಗೆ ಕೂಡಿಬ

ರುತ್ತದೆಯೇ ನೋಡೋಣ. ಈ ವರ್ಷ ಸಮನಿಶಿ ಇದ್ದದ್ದು ಮಾರ್ಚ್ 20ರಂದು. ಸುಲಭ ಲೆಕ್ಕಾಚಾರಕ್ಕೆ ಅಲ್ಲೇ ಸ್ವಲ್ಪ ಎಡವಟ್ಟಾಯ್ತು, ಆದರೂ ಪರವಾಇಲ್ಲ, ಹುಣ್ಣಿಮೆ ಇನ್ನೂ ದೂರದಲ್ಲಿದ್ದುದರಿಂದ ಗೊಂದಲವಿಲ್ಲ. ಆ ಹುಣ್ಣಿಮೆ ಇದ್ದದ್ದು ಏಪ್ರಿಲ್ 12ರಂದು ಶನಿವಾರ. ಹುಣ್ಣಿಮೆಯ ತರುವಾಯ ಬರುವ ಮೊದಲ ಭಾನುವಾರ ಅಂದರೆ ಏಪ್ರಿಲ್ 13. ಸುಲಭ ಲೆಕ್ಕಾಚಾರ ಮತ್ತೊಮ್ಮೆ ತಪ್ಪಿತು. ಆವತ್ತು ಈಸ್ಟರ್ ಸಂಡೇ ಆಗಿರಲಿಲ್ಲ, ಬದಲಿಗೆ ಹುಣ್ಣಿಮೆ ಆದಮೇಲಿನ ಎರಡನೇ ಭಾನುವಾರ, ಅಂದರೆ ಏಪ್ರಿಲ್ 20ರಂದು ಈಸ್ಟರ್ ಬಂದಿದೆ. ಹಾಗಾಗಿ ಈ ವರ್ಷದ ಈಸ್ಟರ್ ದಿನನಿರ್ಧಾರ ಸುಲಭ ಲೆಕ್ಕಾಚಾರದ್ದಲ್ಲ, ಸಂಕೀರ್ಣ ಲೆಕ್ಕಾಚಾರದ್ದು.

ಲೆಕ್ಕಾಚಾರ ಸಂಕೀರ್ಣ ಆಗುವುದು ಕೆಲವು ವರ್ಷಗಳಲ್ಲಿ ನೈಜ ಖಗೋಳ ವಿದ್ಯಮಾನದ ಪ್ರಕಾರ ಅಂದರೆ ಸೂರ್ಯನ ಸುತ್ತ ಭೂಮಿ ಮತ್ತು ಭೂಮಿಯ ಸುತ್ತ ಚಂದ್ರನ ಚಲನೆಯನ್ನಾಧರಿಸಿ ಹಗಲು-ರಾತ್ರಿ ಹುಣ್ಣಿಮೆ-ಅಮಾವಾಸ್ಯೆಗಳು ಸಂಭವಿಸುವುದಕ್ಕೂ, ಹಿಂದಿನ ಕಾಲದ ಕ್ರೈಸ್ತ ಧರ್ಮಗುರುಗಳು ನಿರ್ಧರಿಸಿಟ್ಟ ಕೋಷ್ಟಕದ ಪ್ರಕಾರ ಆಯಾ ವರ್ಷಗಳಲ್ಲಿ ಸಮನಿಶಿ ಮತ್ತು ತದನಂತರದ ಹುಣ್ಣಿಮೆ ಯಾವತ್ತೆಂದು ನಮೂದಾಗಿರುವುದಕ್ಕೂ ವ್ಯತ್ಯಾಸ ಬಂದಾಗ. ಹಿಂದಿನ ಕಾಲದ ಅಂದರೆ ಒಂದೆರಡು ಶತಮಾನಗಳ ಹಿಂದಿನ ಅಲ್ಲ, ಕ್ರಿ.ಶ. 325ನೆಯ ಇಸವಿಯಲ್ಲಿ ಮುಂದಿನ ಸಾವಿರಾರು ವರ್ಷಗಳಿಗಾಗುವಂತೆ ಪ್ಯಾಶ್ಚಲ್ ಹುಣ್ಣಿಮೆ(ಮಾರ್ಚ್ 21ರ ಸಮನಿಶಿ ದಿನ ಆದಮೇಲಿನ ಮೊದಲ ಹುಣ್ಣಿಮೆ)ಗಳ ಪಟ್ಟಿಯೊಂದನ್ನು ಮಾಡಿಟ್ಟಿದ್ದಾರೆ, ಮತ್ತು ಪಾಶ್ಚಾತ್ಯ ಚರ್ಚ್‌ಗಳು ಈಗಲೂ ಅದೇ ಪಟ್ಟಿಯನ್ನು ಅನುಸರಿಸುತ್ತವೆ. ಈಮಧ್ಯೆ ಜೂಲಿಯನ್ ಕ್ಯಾಲೆಂಡರ್ ಮತ್ತು ಗ್ರೆಗೋರಿಯನ್ ಕ್ಯಾಲೆಂಡರ್ ಎಂಬೆರಡು ಭಿನ್ನ ಕಾಲಗಣನೆಗಳು ಗೊಂದಲವನ್ನು ಇನ್ನಷ್ಟು ಹೆಚ್ಚಿಸುತ್ತವೆ. ಜೂಲಿಯನ್ ಕ್ಯಾಲೆಂಡರ್‌ನಲ್ಲಿ ಪ್ರತಿ ನಾಲ್ಕು ವರ್ಷಕ್ಕೊಮ್ಮೆ ಅಧಿಕವರ್ಷ, ಫೆಬ್ರವರಿಯಲ್ಲಿ 29 ದಿನ. ಗ್ರೆಗೋರಿಯನ್ ಕ್ಯಾಲೆಂಡರ್‌ನಲ್ಲಿ ಪ್ರತಿ ನಾಲ್ಕು ವರ್ಷಕ್ಕೊಮ್ಮೆ ಅಧಿಕವರ್ಷ ಹೌದು ಆದರೆ 100ರಿಂದ ನಿಶ್ಶೇಷ ಭಾಗವಾಗುವ ಇಸವಿಗಳು 400ರಿಂದಲೂ ನಿಶ್ಶೇಷ ಭಾಗವಾದರೆ ಮಾತ್ರ ಅಧಿಕವರ್ಷ. ಉದಾಹರಣೆಗೆ 1900 ಅಥವಾ 2100ನೇ ಇಸವಿಗಳು ಜೂಲಿಯನ್ ಪ್ರಕಾರ ಮಾತ್ರ ಅಧಿಕವರ್ಷಗಳು. 2000ನೇ ಇಸವಿ ಗ್ರೆಗೋರಿಯನ್‌ನಲ್ಲೂ ಅಧಿಕವರ್ಷವೇ.

ಕ್ರಿ.ಶ 325ನೆಯ ಇಸವಿಯಲ್ಲಿ ಕ್ರೈಸ್ತ ಧರ್ಮಗುರುಗಳು ಪಟ್ಟಿ ಮಾಡಿಟ್ಟದ್ದು ಈಸ್ಟರ್ ದಿನನಿರ್ಣಯ ಸುಲಭವಾಗಲಿ ಎಂದೇ. ಆದರೆ ಸೂರ್ಯ, ಭೂಮಿ, ಚಂದ್ರನ ಸಾಪೇಕ್ಷ ಸ್ಥಾನಗಳು ಮತ್ತು ಚಲನೆಗಳಲ್ಲಿನ ಸೂಕ್ಷ್ಮ ಏರುಪೇರುಗಳು ಒಂದೋ ಅವರಿಗೆ ಅರಿವಿರಲಿಲ್ಲ, ಅಥವಾ ಇದ್ದರೂ ಅವುಗಳನ್ನವರು ಗಣನೆಗೆ ತೆಗೆದುಕೊಳ್ಳಲಿಲ್ಲ. ಸಮನಿಶಿ ಪ್ರತಿವರ್ಷವೂ ಮಾರ್ಚ್ 21ರಂದೇ ಬರುತ್ತದೆಯೆಂದು ಅವರು ಬರೆದಿಟ್ಟರು ಮತ್ತು ಅದನ್ನೇ ಈಸ್ಟರ್ ದಿನನಿರ್ಧಾರಕ್ಕೆ ಆಧಾರವಾಗಿರಿಸಿದರು. ಸಮನಿಶಿಯ ಬಳಿಕ ಬರುವ ಪ್ಯಾಶ್ಚಲ್ ಹುಣ್ಣಿಮೆಯ ದಿನವನ್ನೂ ಪ್ರತಿವರ್ಷಕ್ಕೆ ಅವರು ಆಗಲೇ ಬರೆದಿಟ್ಟಿದ್ದರು. ಈಸ್ಟರ್ ದಿನನಿರ್ಧಾರದಲ್ಲಿ ಪ್ಯಾಶ್ಚಲ್ ಹುಣ್ಣಿಮೆಯೂ ಮುಖ್ಯವಾಗುತ್ತದೆ. 2019ರಲ್ಲಿ ಏನಾಯ್ತೆಂದರೆ ಸಮನಿಶಿ ಮಾರ್ಚ್ 20ರಂದು, ಅಮೆರಿಕದ ಪೂರ್ವ ಕರಾವಳಿ ಸಮಯ ಸಂಜೆ 5:58ಕ್ಕೆ ಆಯ್ತು. ಆವತ್ತೇ ಹುಣ್ಣಿಮೆಯೂ ಇತ್ತು. ರಾತ್ರಿ 9:43ಕ್ಕೆ ಪೂರ್ಣಚಂದ್ರದರ್ಶನ. ಸರಳ ಲೆಕ್ಕಾಚಾರದ ಪ್ರಕಾರವಾದರೆ ಆ ವರ್ಷ ಈಸ್ಟರ್ ಆಚರಣೆ ಭಾನುವಾರ ಮಾರ್ಚ್ 24ರಂದು ಇರಬೇಕಿತ್ತು. ಆದರೆ ಹಾಗಾಗಲಿಲ್ಲ. ಮುಂದೆ ಏಪ್ರಿಲ್ 19ರಂದು ಶುಕ್ರವಾರ ಪ್ಯಾಶ್ಚಲ್ ಹುಣ್ಣಿಮೆ ಆಯ್ತು, ಅನಂತರದ ಭಾನುವಾರ ಏಪ್ರಿಲ್ 21ರಂದು ಈಸ್ಟರ್ ಸಂಡೇ ಆಚರಣೆ ಆಯ್ತು. ಈ ವರ್ಷ(2025) ಸಮನಿಶಿ ಆದಮೇಲಿನ ನಿಜವಾದ ಹುಣ್ಣಿಮೆ ಇದ್ದದ್ದು ಶನಿವಾರ ಏಪ್ರಿಲ್ 12ರಂದು. ಆದರೆ ಕ್ರೈಸ್ತ ಧರ್ಮಗುರುಗಳ ಪಟ್ಟಿಯಲ್ಲಿ ಈ ವರ್ಷದ ಪ್ಯಾಶ್ಚಲ್ ಹುಣ್ಣಿಮೆ ಇರುವುದು ಭಾನುವಾರ ಏಪ್ರಿಲ್ 13ರಂದು. ಅದಾದ ಮೇಲಿನ ಭಾನುವಾರವೆಂದರೆ ಏಪ್ರಿಲ್ 20 ಈ ವರ್ಷದ ಈಸ್ಟರ್ ದಿನಾಚರಣೆ ಎಂದಾಯ್ತು. ಒಮ್ಮೆ ಈಸ್ಟರ್ ದಿನನಿರ್ಧಾರವಾದ ಮೇಲೆ ಗುಡ್ ಫ್ರೈಡೇ ದಿನನಿರ್ಧಾರ ಸುಲಭ. ಬೇರೇನೂ ನಿಯಮಗಳಿಲ್ಲ, ಈಸ್ಟರ್ ಸಂಡೇಗಿಂತ ಎರಡು ದಿನ ಹಿಂದಿನ ಶುಕ್ರವಾರವೇ ಗುಡ್ ಫ್ರೈಡೇ. ಹಾಗಾಗಿ ಈ ವರ್ಷ ಗುಡ್ ಫ್ರೈಡೇ ಏಪ್ರಿಲ್ 18ರಂದು ಆಯ್ತು.

ಅಷ್ಟಾಗಿ, ಪ್ರಪಂಚದಾದ್ಯಂತ ಎಲ್ಲ ಕ್ರಿಶ್ಚಿಯನ್ನರೂ ಒಂದೇ ದಿನದಂದು ಈಸ್ಟರ್ ಆಚರಿಸುತ್ತಾರೆಯೇ? ಉತ್ತರ ಹೌದು ಮತ್ತು ಇಲ್ಲ ಎರಡೂ! ಪೌರ್ವಾತ್ಯ ಸಾಂಪ್ರದಾಯಿಕ ಚರ್ಚ್ ಎಂದು ಕರೆಯಲ್ಪಡುವ ಪಂಗಡವು ಸಮನಿಶಿ ಮತ್ತು ಅನಂತರದ ಹುಣ್ಣಿಮೆಯು ಜೆರುಸಲೆಮ್‌ನ (ಕ್ರಿಸ್ತನನ್ನು ಶಿಲುಬೆಗೆ ಆರೋಹಿಸಿದ ಮತ್ತು ಪುನರುತ್ಥಾನವಾದ ಸ್ಥಳ) ಅಕ್ಷಾಂಶ-ರೇಖಾಂಶಗಳಿಗೆ ಅನ್ವಯವಾಗುವಂತೆ ಯಾವಾಗ ಬರುತ್ತದೆಂದು ಲೆಕ್ಕಮಾಡಿ ಅದರಂತೆ ಈಸ್ಟರ್ ದಿನವನ್ನು ನಿರ್ಧರಿಸುತ್ತದೆ. ಪಾಶ್ಚಾತ್ಯ ಚರ್ಚ್, ಮೇಲೆ ವಿವರಿಸಿದಂತೆ ಸಮನಿಶಿ ಪ್ರತಿವರ್ಷವೂ ಮಾರ್ಚ್ 21ಕ್ಕೇ ಬರುತ್ತದೆಂದು ಪರಿಗಣಿಸಿ ಅನಂತರದ ಪ್ಯಾಶ್ಚಲ್ ಹುಣ್ಣಿಮೆಯ ದಿನವನ್ನೂ ಕ್ರಿ.ಶ 325ರಲ್ಲಿ ಸಿದ್ಧಪಡಿಸಿಟ್ಟಿರುವ ಕೋಷ್ಟಕದ ರೀತ್ಯಾ ಗೊತ್ತುಪಡಿಸಿ ಈಸ್ಟರ್ ದಿನವನ್ನು ನಿರ್ಧರಿಸುತ್ತದೆ. ಈ ವರ್ಷ 2025ರಲ್ಲಿ ಎರಡೂ ಪಂಗಡಗಳಿಗೆ ಏಪ್ರಿಲ್ 20ರಂದು ಈಸ್ಟರ್ ಹಬ್ಬ. 2026ರಲ್ಲಿ ಪಾಶ್ಚಾತ್ಯರಿಗೆ ಏಪ್ರಿಲ್ 5ರಂದು ಮತ್ತು ಪೌರ್ವಾತ್ಯರಿಗೆ ಏಪ್ರಿಲ್ 12ರಂದು ಈಸ್ಟರ್. 2027ರಲ್ಲಿ ಪಾಶ್ಚಾತ್ಯರಿಗೆ ಮಾರ್ಚ್ 28ರಂದು ಮತ್ತು ಪೌರ್ವಾತ್ಯರಿಗೆ ಮೇ 2ರಂದು ಈಸ್ಟರ್. 2028ರಲ್ಲಿ ಎರಡೂ ಪಂಗಡಗಳಿಗೆ ಏಪ್ರಿಲ್ 16ರಂದು ಈಸ್ಟರ್.

ಇರಲಿ, ಈಸ್ಟರ್ ದಿನನಿರ್ಧಾರದ ಗೊಂದಲವನ್ನು ಕ್ರೈಸ್ತ ಧರ್ಮಗುರುಗಳಿಗೆ, ಖಗೋಳ ಶಾಸ್ತ್ರಜ್ಞರಿಗೆ, ಗಣಿತಜ್ಞರಿಗೆ ಬಿಟ್ಟು ಈಸ್ಟರ್ ಬಗ್ಗೆ ಬೇರೆ ಕೆಲವು ಸ್ವಾರಸ್ಯಕರ ಸಂಗತಿಗಳೊಂದಿಷ್ಟನ್ನು ಅವಲೋಕಿಸೋಣ. ಈಸ್ಟರ್ ಹಬ್ಬದ ಹೆಸರಿನ ಮೂಲ ಬ್ಯಾಬಿಲೋನಿಯನ್ ಸಂಸ್ಕೃತಿಯಲ್ಲಿ ಪ್ರೀತಿ ಮತ್ತು ಸಂತಾನೋತ್ಪತ್ತಿಯ ದೇವತೆಯಾದ Ishtar. ಜೀವನಚೈತನ್ಯವನ್ನು ಉಡುಗಿಸುವ ಚಳಿ ಹಿಮಪಾತಗಳೆಲ್ಲ ಮುಗಿದ ಮೇಲೆ ಪ್ರಕೃತಿಯಲ್ಲಿ ನಳನಳಿಸುವ ಕಾಂತಿಯನ್ನು, ಉಲ್ಲಾಸವನ್ನು ತರುವ ವಸಂತ ಋತುವಿಗೆ ಉತ್ಸಾಹ ಸಡಗರ ತುಂಬಿದ ಸ್ವಾಗತ ಕೋರುವ ಕ್ರಮ ಪ್ರಾಚೀನ ಸಂಸ್ಕೃತಿಗಳೆಲ್ಲದರಲ್ಲೂ ಇತ್ತು. ಪ್ರಕೃತಿಯನ್ನು ಚಿಗುರಿಸುವ ಆ ದೇವತೆಯನ್ನು ಸ್ಕಾಂಡಿನೇವಿಯನ್ನರು Ostra ಎಂದೂ, ಆಂಗ್ಲೊಸಾಕ್ಸನ್ನರು Eostre ಎಂದೂ, ಜರ್ಮನ್ನರು Eastre ಅಂತಲೂ ಕರೆದು ಗೌರವಿಸುತ್ತಿದ್ದರು. ಐರೋಪ್ಯ ಭಾಷೆಗಳಲ್ಲಿನ ಈ ಪದಗಳೇ ಆಂಗ್ಲ ಭಾಷೆಯಲ್ಲಿ Easter ಎಂದಾಗಿದ್ದು ಅತಿಸಂಭ್ರಮದ ಕ್ರಿಶ್ಚಿಯನ್ ಹಬ್ಬಗಳ ಪೈಕಿ ಒಂದಾಗಿದೆ. ಈಸ್ಟರ್‌ಗೂ ಮೊಟ್ಟೆಗಳಿಗೂ ನಂಟಿರುವುದು, ಮೊಟ್ಟೆಯು ಸಂತಾನವೃದ್ಧಿಯ ಅರ್ಥಪೂರ್ಣ ಸಂಕೇತವಾಗಿರುವುದರಿಂದ. ಬಣ್ಣ ಬಳಿದ ಮೊಟ್ಟೆಗಳು ಅಥವಾ ಮೊಟ್ಟೆಯಾಕಾರದ ವಸ್ತುಗಳು ಈಸ್ಟರ್ ಹಬ್ಬದ ಉಡುಗೊರೆಗಳಲ್ಲಿ ಅತಿ ಮುಖ್ಯವಾದುವು. ತಿಂಗಳುಗಟ್ಟಲೆ ಚಳಿಗಾಲದ ಕಪ್ಪುಕತ್ತಲೆಯ ಬಳಿಕ ಸೂರ್ಯರಶ್ಮಿಯ ಪುನರ್ದರ್ಶನವಾಗುವುದು ಒಂದು ಪವಾಡವೇ ಎಂದು ನಂಬಿದ್ದ ಜನರು ಮೊಟ್ಟೆಗಳನ್ನು ಪ್ರಕೃತಿಯ ನವೀಕರಣದ ಸಂಕೇತವಾಗಿಸಿಕೊಂಡಿದ್ದು ಆಶ್ಚರ್ಯವೇನೂ ಇಲ್ಲ. ಮೊಟ್ಟೆಯ ಕವಚದಿಂದ ಹೊರಬರುವ ಮರಿ ಮತ್ತು ಸಮಾಧಿಯಿಂದ ಪುನರುತ್ಥಾನಗೊಂಡು ಬರುವ ಪ್ರಭು ಯೇಸು- ಪ್ರಕೃತಿಯಲ್ಲಿ ಧರ್ಮತತ್ತ್ವವನ್ನು ಕಾಣುವ ಮಾನವನ ಸ್ವಭಾವಕ್ಕೆ ಅತಿ ಸಮಂಜಸವಾದ ನಿದರ್ಶನ.

ಈಸ್ಟರ್ ಹಬ್ಬದ ವಾತಾವರಣದ ಇನ್ನೊಂದು ಅವಿನಾಭಾವ ಸಂಕೇತವಾದ ಮೊಲ ಸಹ ಸಂತಾನಾಭಿವೃದ್ಧಿಯ ಪ್ರತೀಕ. ರಾತ್ರಿಯ ಹೊತ್ತಿನಲ್ಲಿ ಆಹಾರವನ್ನು ಹುಡುಕುತ್ತ ಹೊರಡುವ ಮೊಲವು ಚಂದ್ರನ ಪ್ರತಿನಿಧಿಯಾಗಿಯೂ ಈಸ್ಟರ್ ಹಬ್ಬಕ್ಕೆ ಕಳೆಯೇರಿಸುತ್ತದೆಯೆಂದು ಪ್ರಾಚೀನ ಈಜಿಪ್ಟ್ ಮತ್ತು ಪರ್ಷಿಯನ್ ಸಂಸ್ಕೃತಿಗಳ ಜನರ ನಂಬಿಕೆ. ಈಸ್ಟರ್‌ಗೆ ಸಂಬಂಧಪಟ್ಟಂತೆ ಪ್ರಪಂಚದ ಬೇರೆಬೇರೆ ಭಾಗಗಳಲ್ಲಿ ಸ್ವಾರಸ್ಯಕರ ನಂಬಿಕೆಗಳು, ಚಿತ್ರವಿಚಿತ್ರ ಆಚರಣೆಗಳ ವೈವಿಧ್ಯಗಳು ಯಥೇಷ್ಟವಾಗಿ ಕಾಣಸಿಗುತ್ತವೆ. ಈಸ್ಟರ್ ಹಬ್ಬದ ದಿನ ಹೊಸಬಟ್ಟೆ ಧರಿಸುವ ರಿವಾಜಿನ ಬಗ್ಗೆ ಕೂಡ ದಂತಕಥೆಗಳಿವೆ. ಈಸ್ಟರ್ ಆಚರಣೆಗಿಂತ ಮುಂಚಿನ ದಿನಗಳು ಒಂದು ರೀತಿಯಲ್ಲಿ ಸೂತಕದ ದಿನಗಳಿದ್ದಂತೆ. ಆಗ ಹಳೆಯ ಬಟ್ಟೆಗಳನ್ನೇ ಧರಿಸಿರಬೇಕಾಗುತ್ತಿತ್ತು. ಈಸ್ಟರ್ ಸಂಭ್ರಮವನ್ನು ಸಾರುವುದಕ್ಕಾಗಿಯೇ ಹಳೆಯ ಬಟ್ಟೆಗಳನ್ನು ಬಿಸಾಕಿ ಹೊಸದನ್ನು ಧರಿಸಬೇಕು. ಒಂದು ವೇಳೆ ಯಾರಾದರೂ ಹೊಸ ಬಟ್ಟೆ ಧರಿಸದಿದ್ದರೆ ಪ್ರಾಣಿಪಕ್ಷಿಗಳು ಅವರನ್ನು ಭ್ರಷ್ಟರನ್ನಾಗಿಸಬಹುದು, ಕಾಗೆ-ಗೂಬೆಗಳು ಬಂದು ಕಣ್ಣು ಕುಕ್ಕಬಹುದು ಅಂತೆಲ್ಲ ನಂಬಿಕೆಗಳಿವೆಯಂತೆ. ಒಟ್ಟಿನಲ್ಲಿ ಕತ್ತಲೆ ಕಳೆದು ಬೆಳಕು ಮೂಡಿದ ಭಾವವಿದೆ ಈಸ್ಟರ್ ಸಂಭ್ರಮದಲ್ಲಿ.

ನಾರ್ವೆಯಲ್ಲಿ ಈಸ್ಟರ್ ಸಂದರ್ಭದಲ್ಲಿ ಪತ್ತೆದಾರಿ ಕಾದಂಬರಿಗಳು ಮತ್ತು ಕ್ರೈಮ್‌ಥ್ರಿಲ್ಲರ್‌ಗಳನ್ನು ಓದುವುದು ಹಬ್ಬದಂದು ಕಾಲಕ್ಷೇಪಕ್ಕೆ ಒಂದು ವಿಧಾನ. ಕೊಲೆಸುಲಿಗೆಗಳ ಕಥಾನಕಗಳನ್ನೋದುವುದು ಕ್ರಿಸ್ತನ ಮರಣವನ್ನು ಪ್ರತಿಬಿಂಬಿಸುವ ಒಂದು ನಮೂನೆಯಿರಬಹುದು ಎಂದು ನಂಬಲಾಗುತ್ತದೆ. ಈಸ್ಟರ್‌ಗೆ ಸುತ್ತಮುತ್ತ ನಾಲ್ಕೈದು ದಿನಗಳ ರಜೆ ಇದ್ದು ಜನರು ಬೆಟ್ಟಪ್ರದೇಶಗಳಿಗೆ ಪ್ರವಾಸ ಹೋಗುತ್ತಾರೆ. ಲಾಟ್ವಿಯಾ ದೇಶದಲ್ಲಿ ಈಸ್ಟರ್ ವಿಶೇಷವೆಂದು ಮೊಟ್ಟೆ ಒಡೆಯುವ ಸ್ಪರ್ಧೆಯಿರುತ್ತದೆ (ನಮ್ಮ ಗ್ರಾಮೀಣ ಪ್ರದೇಶಗಳಲ್ಲಿ ತೆಂಗಿನಕಾಯಿಗಳನ್ನು ಒಂದಕ್ಕೊಂದು ಕುಟ್ಟಿ ಒಡೆಯುವ ಸ್ಪರ್ಧೆಯಂತೆ ಇರಬಹುದು). ವಿಧವಿಧದ ಮೊಟ್ಟೆಗಳ ಜತೆ ಸೆಣಸಾಡಿಯೂ ಒಡೆಯದೇ ಇರುವ ಮೊಟ್ಟೆಯ ಮಾಲೀಕ ಸ್ಪರ್ಧೆಯಲ್ಲಿ ವಿಜೇತನಾಗುತ್ತಾನೆ. ಬರ್ಮುಡಾದ ಬಿಳಿ ಲಿಲ್ಲಿ ಹೂಗಳು ಈಸ್ಟರ್ ಅಲಂಕಾರಕ್ಕೆಂದು ಬಳಕೆಯಾಗುವ ಹೂಗಳು. ಅಮೆರಿಕದಲ್ಲಿ ಇವು ಈಸ್ಟರ್ ಲಿಲ್ಲಿಗಳೆಂದೇ ಪ್ರಖ್ಯಾತ. ಯೇಸುವಿನ ಪುನರುತ್ಥಾನದ ವೇಳೆ ಗೇಬ್ರಿಯಲ್ ನುಡಿಸಿದ ಟ್ರಂಪೆಟ್ ಆಕಾರ ಈ ಲಿಲ್ಲಿ ಹೂಗಳಿಗಿರುವುದರಿಂದ ಮತ್ತು ಅವು ಪರಿಶುದ್ಧತೆಯ ಅಚ್ಚಬಿಳಿ ಬಣ್ಣದಲ್ಲಿರುವುದರಿಂದ ಈಸ್ಟರ್ ಹಬ್ಬದ ವಿಶೇಷವಾಗಿ ಬಳಕೆಯಾಗುತ್ತವೆ.

ಮೆಕ್ಸಿಕೊ ದೇಶದಲ್ಲಿ ಈಸ್ಟರ್ ಆಚರಣೆಗೆ ನೃತ್ಯ-ನಾಟಕಗಳ ವಿಶೇಷವಿರುತ್ತದೆ. ಇದರಲ್ಲಿ ಊರವರೆಲ್ಲ ಭಾಗವಹಿಸುತ್ತಾರೆ. 1833ರಲ್ಲಿ ಅಲ್ಲಿ ಕಾಣಿಸಿಕೊಂಡ ಕಾಲರಾ ಹೆಮ್ಮಾರಿಯನ್ನು ಜಯಿಸಿ ಬದುಕುಳಿದವರು ಕೃತಜ್ಞತಾರೂಪದಲ್ಲಿ ಈರೀತಿ ರೂಪಕಗಳನ್ನು ಅಭಿನಯಿಸುತ್ತಾರಂತೆ. ಸ್ವೀಡನ್‌ನಲ್ಲಿ ಈಸ್ಟರ್ ಆಚರಣೆಯು ಅಮೆರಿಕದ ಹ್ಯಾಲೊವೀನ್ ಆಚರಣೆಯನ್ನು ಹೋಲುತ್ತದೆ. ಸ್ವೀಡನ್‌ನಲ್ಲಿ ಈಸ್ಟರ್‌ನ ಹಿಂದಿನ ದಿನ ದೆವ್ವಗಳು ಕಸಬರಿಕೆ ಹಿಡಿದುಕೊಂಡು ಚರ್ಚ್ ಗಂಟೆಗಳನ್ನು ಸ್ವಚ್ಛಗೊಳಿಸಲು ಬರುತ್ತವೆಂಬ ಪ್ರತೀತಿಯಿದೆ. ಶ್ವೇತಭವನದ ಹುಲ್ಲುಹಾಸಿನಲ್ಲಿ ಈಸ್ಟರ್ ಮೊಟ್ಟೆ ಹುಡುಕುವ ಆಟ ಅಮೆರಿಕದ ರಾಜಧಾನಿಯಲ್ಲಿ ರಾಷ್ಟ್ರಾಧ್ಯಕ್ಷರ ಅಧಿಕೃತ ನಿವಾಸದಲ್ಲಿ ಈಸ್ಟರ್ ಆಚರಣೆಯ ವಿಶೇಷ. ಈಸ್ಟರ್‌ನ ಮಾರನೆಯ ದಿನ ಸೋಮವಾರದಂದು ಶ್ವೇತಭವನದ ಸುತ್ತಲ ಹುಲ್ಲುಹಾಸಿನ ಪ್ರದೇಶದಲ್ಲಿ ಬಣ್ಣಬಣ್ಣದ ಮೊಟ್ಟೆಗಳನ್ನು ಅಡಗಿಸಿಡಲಾಗುತ್ತದೆ. ಆ ಮೊಟ್ಟೆಗಳ ಮೇಲೆ ಗಣ್ಯವ್ಯಕ್ತಿಗಳು ಸಹಿ ಮಾಡಿದ್ದಿರುತ್ತದೆ. ಗಣ್ಯರೆಂದರೆ ಕ್ರೀಡೆ, ವಿಜ್ಞಾನ, ಚಲನಚಿತ್ರ, ಸಂಗೀತ ಇತ್ಯಾದಿ ವಿವಿಧ ಕ್ಷೇತ್ರಗಳವರು. ಕೆಲವೇ ಕೆಲವು ಮೊಟ್ಟೆಗಳ ಮೇಲೆ ಸ್ವತಃ ಪ್ರೆಸಿಡೆಂಟ್ ಮತ್ತು ಫಸ್ಟ್ ಲೇಡಿ ಸಹಿ ಮಾಡಿರುತ್ತಾರೆ. ಪುಟ್ಟಪುಟ್ಟ ಮಕ್ಕಳು ಈ ಮೊಟ್ಟೆಗಳನ್ನು ಹುಡುಕಿ ತೆಗೆದು ನಿಧಿ ಸಿಕ್ಕವರಂತೆ ಸಂಭ್ರಮಪಡುತ್ತಾರೆ.

ಅಂತೂ ಮಾನವಜನಾಂಗವು ಪ್ರಕೃತಿಯ ನವಚೈತನ್ಯವನ್ನು ಹಬ್ಬವನ್ನಾಗಿಸಿ ಸಂಭ್ರಮಿಸುವ ರೀತಿ- ಅದು ನಮ್ಮ ಸಂಕ್ರಾಂತಿಯೇ ಇರಲಿ, ಯುಗಾದಿಯೇ ಇರಲಿ, ಶರನ್ನವರಾತ್ರಿಯೇ ಇರಲಿ ಅಥವಾ ಪುನರುತ್ಥಾನ ಪ್ರತೀಕದ ಈಸ್ಟರ್ ಹಬ್ಬವೇ ಇರಲಿ, ಜಾತಿ-ಮತ-ದೇಶಗಳ ಸೀಮೆಗಳಿಗಿಂತ ಮಿಗಿಲಾದುದು ಎಂದೆನಿಸುವುದಿಲ್ಲವೇ?

ಸದಾ ವತ್ಸಲೆಯ ಸೇವೆಯಲ್ಲಿ ಸವೆದ ನೂರು ವರ್ಷ

ತ್ಯಾಗ-ಬಲಿದಾನಗಳೊಂದಿಗೆ 100 ವಸಂತಗಳನ್ನು ಕಂಡ ಆರೆಸ್ಸೆಸ್‌ನ ಯಶಸ್ಸು ಅನನ್ಯವಾಗಿದೆ. ದೇಶಭಕ್ತಿಯು ಕೇವಲ ಧ್ವಜಹಾರಿಸುವುದಕ್ಕೆ, ದೇಶಭಕ್ತಿ ಗೀತೆಗಳನ್ನು ಹಾಡುವುದಕ್ಕೆ, ರಾಷ್ಟ್ರೀಯ ಏಕತೆಯ ಪ್ರತಿಜ್ಞೆಯನ್ನು ಕೈಗೊಳ್ಳುವುದಕ್ಕೆ ಸೀಮಿತವಾಗಬಾರದು ಎಂಬ ಅರಿವನ್ನು ಜನರಲ್ಲಿ ಮೂಡಿಸಿದ ಕೀರ್ತಿ ಆರೆಸ್ಸೆಸ್‌ಗೆ ಸಲ್ಲಬೇಕು.



ವಿದ್ಯಮಾನ
ವಿನಾಯಕ ವೆಂ.ಭಟ್ಟ, ಅಂಬ್ಲಿಹೊಂಡ
vveditoped@gmail.com

ಖಾಕಿ ಚಡ್ಡಿ ಮತ್ತು ಬಿಳಿ ಅಂಗಿಯು ಸಂಘದ ಸಮವಸ್ತ್ರವಾಗಿರುವುದರಿಂದ, ಸಂಘಕ್ಕೆ ತೆರಳುವವರನ್ನು ಲಂಕೇಶರು 'ಚಡ್ಡಿಗಳು' ಎಂದೇ ಸಂಬೋಧಿಸುತ್ತಿದ್ದರು. ಸಂಘದ ಹಿನ್ನೆಲೆಯಿಂದ ಬಂದವರೆಂಬ ಕಾರಣಕ್ಕೆ ಜನಸಂಘಿಗಳು/ಬಿಜೆಪಿಗರನ್ನೂ ಅವರು ಹಾಗೇ ಕರೆಯುತ್ತಿದ್ದರು. ಮಾತ್ರವಲ್ಲದೆ, ಬಂಗಾರಪ್ಪನವರನ್ನು 'ಬಂ' ಎಂದೂ, ಗುಂಡೂರಾಯರನ್ನು 'ಗುಂ' ಎಂದೂ ತಮ್ಮ ಪತ್ರಿಕೆಯಲ್ಲಿ ಅವರು ಉಲ್ಲೇಖಿಸುತ್ತಿದ್ದುದು ಅಂದಿನ 'ಲಂಕೇಶ್ ಪತ್ರಿಕೆ'ಯ ಓದುಗರಿಗೆ ನೆನಪಿರಬಹುದು. ಹಾಗೆ, 'ಸಂಘಿಗಳು' ಅಂದರೆ 'ಎಲ್ಲರಿಂದಲೂ ಟೀಕೆಗೊಳಗಾಗುತ್ತಿದ್ದವರು, ಕೆಲಸವಿಲ್ಲದ ನಾಲ್ಕು ಹುಡುಗರು, ಹತ್ತಿರದ ಶಾಲೆಯ ಬಯಲಿನಲ್ಲಿ ಕೇಸರಿ ಧ್ವಜ ಹುಗಿದು, ನಮಗೆ ಮರೆತುಹೋದ ಹಳೆಯ ದೇಶೀಯ ಆಟಗಳನ್ನಾಡುತ್ತಾ ಕಾಲ ಕಳೆಯುವವರು; ಇವರು ದೇಶಕ್ಕಾಗಿ ಮಾಡಿದ್ದು ಅಷ್ಟಕ್ಕಷ್ಟೇ' ಎಂಬ ಭಾವನೆ ಬಹುತೇಕರಲ್ಲಿತ್ತು. ರಕ್ಷಾಬಂಧನದ ದಿನ ಮಾತ್ರ ಸಂಘದ ಶಾಖೆಯಲ್ಲಿ ಎಂದಿಗಿಂತ ಹೆಚ್ಚು ಜನ ಕಾಣುತ್ತಿದ್ದರು. ಕಾರಣ, ಅಂದು ಬಂದವರಿಗೆಲ್ಲ, ರೇಷ್ಮೆನೂಲಿನ ಕೇಸರಿ ಬಣ್ಣದ ರಕ್ಷೆಯನ್ನು ಕಟ್ಟಲಾಗುತ್ತಿತ್ತು. ಅದರ ಗುಣಮಟ್ಟ ಚೆನ್ನಾಗಿದ್ದು ವರ್ಷಪೂರ್ತಿ ತನ್ನ ಬಣ್ಣವನ್ನೂ ಮೃದುತ್ವವನ್ನೂ ಕಳೆದುಕೊಳ್ಳುತ್ತಿರಲಿಲ್ಲ. ಸಾಮಾನ್ಯವಾಗಿ ಹೆಣ್ಣು ಮಕ್ಕಳು, ಅಗತ್ಯ ಬಂದಾಗ ರಕ್ಷಣೆ ನೀಡಿರೆಂದು ತಮ್ಮ ಸೋದರರಿಗೆ ಭಾಷೆ ಕಟ್ಟುವ ಸಂಪ್ರದಾಯ ದೇಶದ ಕೆಲ ಭಾಗದಲ್ಲಿತ್ತು. ಪರಸ್ಪರ ಎಲ್ಲರಿಗೂ ರಕ್ಷೆ ಕಟ್ಟುವ ಸಂಪ್ರದಾಯ ಸಂಘದಲ್ಲಿ ಹೊಸದಾಗಿ ಶುರುವಾಯಿತು. ಇದರ ಹಿಂದಿನ ಉದ್ದೇಶ ಪರಸ್ಪರ ಹಿಂದೂಗಳ ರಕ್ಷಣೆಯೇ ಇರಬೇಕು. ಹೀಗೆ ಸಂಘದ ಜನರನ್ನು, ಅವರು ಶಾಖೆ ನಡೆಸುವ ಪರಿಯನ್ನು ಸಮಾಜ ವಿಚಿತ್ರವಾಗಿ ಕಾಣುತ್ತಿದ್ದ ಕಾಲವದು. ಸಂಘದ ಸ್ವಯಂಸೇವಕರು ಎಂದರೆ ಸಮಾಜದಿಂದ ಭಿನ್ನವಾಗಿರುವವರು, ಎಲ್ಲರೊಂದಿಗೂ ಸಹಜವಾಗಿ ಬೆರೆಯದವರು ಎಂದು ದೂರವಿಡುತ್ತಿದ್ದ ಕಾಲವದು.

ಒಂದು ನಾಗರಿಕ ರಾಷ್ಟ್ರಕ್ಕೆ ಸಂಸ್ಕೃತಿಯು ಅಡಿಪಾಯವಾಗಿರಬೇಕು. ಭಾರತೀಯ ರಾಷ್ಟ್ರೀಯತೆ ಅಂದರೆ ಅದರ ತಿರುಳಿನಲ್ಲಿ ಸಾಂಸ್ಕೃತಿಕತೆ ಇರಬೇಕು. ಆದರೆ ದುರದೃಷ್ಟವಶಾತ್, ಸ್ವಾತಂತ್ರ್ಯಾನಂತರ ಪ್ರಜಾಪ್ರಭುತ್ವ ಮತ್ತು ಜಾತ್ಯತೀತತೆಯ ಸೋಗಿನಡಿ ನಮ್ಮ ಸಂಸ್ಕೃತಿಯ ಕೇಂದ್ರೀಕರಣವನ್ನು ನಿರಾಕರಿಸುವುದೇ ಸರಕಾರಗಳಿಗೆ ಅಭ್ಯಾಸವಾಗಿ ಹೋಯಿತು. ಇದರ ಭಾಗವಾಗಿ, ನಮ್ಮ ಪೂರ್ವೇತಿಹಾಸವನ್ನು ತಿರುಚುವುದು, ಸಂಪ್ರದಾಯಗಳನ್ನು ತಪ್ಪಾಗಿ ಅರ್ಥೈಸುವುದು, ಭಾರತವು ಒಂದು ರಾಷ್ಟ್ರವೇ ಅಲ್ಲವೆಂದು ತೋರಿಸಲು ವಿಘಟನೆಯ ಪರವಾದ ಸಿದ್ಧಾಂತಗಳನ್ನು ಪ್ರತಿಪಾದಿಸುವುದು, ರಾಷ್ಟ್ರೀಯತೆಯನ್ನು ಅಂಚಿಗೆ ತಳ್ಳುವುದು, ದೇಶಭಕ್ತಿಯನ್ನು ಅಂಧಶ್ರದ್ಧೆಯಾಗಿ ಸಂಕುಚಿತ ಪರಿಕಲ್ಪನೆಯಾಗಿ ಬಿಂಬಿಸುವುದು ವಾಡಿಕೆಯಾಗಿಬಿಟ್ಟಿತು. ಮಾತ್ರವಲ್ಲದೆ, 'ಭಾರತವೊಂದು ಸಂಯೋಜಿತ ರಾಷ್ಟ್ರವೇ ಅಲ್ಲ, ಅದು ಕೇವಲ ಪ್ರಾಂತ್ಯಗಳ ಒಕ್ಕೂಟ; ಕೃತಕವಾಗಿ ಜೋಡಿಸಲಾದ ಹಲವು ಪ್ರಾಂತ್ಯಗಳ ತುಣುಕುಗಳಿಂದ ಭಾರತದ ನಕ್ಷೆಯನ್ನು ರೂಪಿಸಲಾಗಿದೆ' ಎಂದು ಅನೇಕರು ನಂಬಿಸುತ್ತಾ ಬಂದರು. ಭಾರತವು ವಿವಿಧತೆಯಲ್ಲಿ ಏಕತೆಯನ್ನು ಹೊಂದಿದ್ದರೂ, 'ಭಾರತವು ಮೂಲತಃ ಛಿದ್ರಗೊಂಡಿತ್ತು' ಎಂದು ಅನೇಕರು ಈ ಪರಿಕಲ್ಪನೆಯನ್ನು ತಿರುಚಿ ವ್ಯಾಖ್ಯಾನಿಸುತ್ತಿದ್ದರು. ಗುಲಾಮಿ ಮನಸ್ಥಿತಿಯಿಂದ ದೇಶವಿನ್ನೂ ಹೊರಬರದ ಮತ್ತು ಸಾಂಸ್ಕೃತಿಕ ಏರಿಳಿತದ ಈ ಕಾಲಘಟ್ಟದಲ್ಲಿ ಪ್ರವಾಹದೆದುರು ಈಜುತ್ತಾ ದೇಶಭಕ್ತಿಯನ್ನು, ಬಹುಸಂಖ್ಯಾತ ಹಿಂದೂಗಳ ಅಸ್ಮಿತೆಯ ರಕ್ಷಣೆಯನ್ನು ಪ್ರತಿಪಾದಿಸಿದ್ದು ರಾಷ್ಟ್ರೀಯ ಸ್ವಯಂಸೇವಕ ಸಂಘ (ಆರೆಸ್ಸೆಸ್) ಮತ್ತು ಅದರ ಅಂಗಸಂಸ್ಥೆಗಳು.

ರಾಷ್ಟ್ರೀಯ ಏಕೀಕರಣ ಮತ್ತು ಸಾಮಾಜಿಕ ಸಾಮರಸ್ಯಕ್ಕೆ ಸಂಬಂಧಿಸಿದ ವಿಷಯಗಳ ಬಗ್ಗೆ ಒಂದು ಶತಮಾನದಿಂದ ಜನಜಾಗೃತಿಯಲ್ಲಿ ತೊಡಗಿರುವ ಆರೆಸ್ಸೆಸ್, ದೇಶಭಕ್ತಿಯನ್ನು ಒಂದು ಮೂಲಭೂತ ಮೌಲ್ಯವಾಗಿ ವಿಕಸನಗೊಳಿಸಿದೆ, ನಾಗರಿಕರನ್ನು ಒಗ್ಗೂಡಿಸಲು ಪ್ರೇರೇಪಿಸುತ್ತಿದೆ. ಅನೇಕ ಸವಾಲುಗಳು, ತ್ಯಾಗ-ಬಲಿದಾನಗಳೊಂದಿಗೆ 100 ವಸಂತಗಳನ್ನು ಕಂಡ ಆರೆಸ್ಸೆಸ್‌ನ ಯಶಸ್ಸು ಅನನ್ಯವಾಗಿದೆ. ದೇಶಭಕ್ತಿಯೆಂಬುದು ಕೇವಲ ಧ್ವಜಹಾರಿಸುವುದಕ್ಕೆ, ದೇಶಭಕ್ತಿ ಗೀತೆಗಳನ್ನು ಹಾಡುವುದಕ್ಕೆ, ರಾಷ್ಟ್ರೀಯ ಏಕತೆಯ ಪ್ರತಿಜ್ಞೆಯನ್ನು ಕೈಗೊಳ್ಳುವುದಕ್ಕೆ ಸೀಮಿತವಾಗಬಾರದು ಎಂಬ ಅರಿವನ್ನು ಜನರಲ್ಲಿ ಮೂಡಿಸಿದ ಕೀರ್ತಿ ಆರೆಸ್ಸೆಸ್‌ಗೆ ಸಲ್ಲಬೇಕು. ಸಾಮಾಜಿಕ-ಸಾಂಸ್ಕೃತಿಕ ನಡವಳಿಕೆ, ಆರ್ಥಿಕ ಸ್ವಾಯತ್ತತೆ ಸೇರಿದಂತೆ ದೇಶಭಕ್ತಿಗೆ ಬಹು ಆಯಾಮಗಳಿವೆ ಎಂದು ಪ್ರತಿಪಾದಿಸುವ ಆರೆಸ್ಸೆಸ್, ಸಾಂಸ್ಕೃತಿಕ ದೇಶಭಕ್ತಿಯ ಮೌಲ್ಯಗಳನ್ನು ಒಂದು ಬಂಧಕ ಶಕ್ತಿಯಾಗಿ ಜನರಿಗೆ ಮನವರಿಕೆ ಮಾಡಿಕೊಡುತ್ತಾ ಬಂದಿದೆ. ಸಾಮಾಜಿಕ ಋಣಭಾರದ ಪ್ರಜ್ಞೆಯನ್ನು ನಾಗರಿಕರಲ್ಲಿ ಮೂಡಿಸುವ ಆರೆಸ್ಸೆಸ್, ನೈತಿಕತೆಗೆ ಬದ್ಧವಾಗಿರಲು ಬಯಸುವ ನಾಗರಿಕರನ್ನು ಬೆಳೆಸಲು ಯತ್ನಿಸುತ್ತದೆ.

ಸಂಘದಿಂದ ಪ್ರೇರಿತವಾದ ನೂರಾರು ಸಂಘಟನೆಗಳು ದೇಶಾದ್ಯಂತ ಕಾರ್ಯನಿರ್ವಹಿಸುತ್ತಿದ್ದು, ಇವುಗಳಲ್ಲಿ ಭ್ರಷ್ಟಾಚಾರ, ಸ್ವಜನ ಪಕ್ಷಪಾತ ಕಂಡುಬರುವುದು, ಪಾರದರ್ಶಕತೆಯ ಮತ್ತು ಉತ್ತರದಾಯಿತ್ವದ ಕೊರತೆಯ ಬಗ್ಗೆ ಕೇಳಿಬರುವುದು ಅಪರೂಪ. ತಾನು ಹೇಳುವುದನ್ನೇ ಮಾಡಿ ತೋರಿಸುವ ಆರೆಸ್ಸೆಸ್, ಕೇವಲ ಸಮಾನತೆಗಿಂತ ಮುಂದೆ ಹೋಗಿ ಸಾಮಾಜಿಕ ಸಾಮರಸ್ಯದ ಬಗ್ಗೆ ಆಲೋಚಿಸುತ್ತದೆ, ಸೇವಾ ದೇಶಭಕ್ತಿ ಮತ್ತು ಮಾನವೀಯ ದೇಶಭಕ್ತಿಯನ್ನು ಉತ್ತೇಜಿಸುತ್ತದೆ. ಆರೆಸ್ಸೆಸ್ ಕಾರ್ಯಕರ್ತರು ಪ್ರಚಾರದ ಹಂಗಿಲ್ಲದೆಯೇ ಪರಿಹಾರ ಮತ್ತು ಪುನರ್ವಸತಿ ಕಾರ್ಯಗಳಿಗೆ ಧಾವಿಸುವುದು ಶ್ಲಾಘನೀಯ. ಆರೆಸ್ಸೆಸ್‌ನ ಹಿಂದುತ್ವದ ಅಜೆಂಡಾದ ಬಗ್ಗೆ ಅನೇಕರು ಪ್ರಶ್ನಿಸುವುದುಂಟು. ಆದರೆ ಇಲ್ಲಿಯೂ ಆರೆಸ್ಸೆಸ್ ಸ್ಪಷ್ಟವಾಗಿದೆ. 'ನಾವೆಲ್ಲ ಒಂದು, ನಾವೆಲ್ಲ ಹಿಂದೂ' ಎನ್ನುವ ಆರೆಸ್ಸೆಸ್‌ನ ಅಭಿಪ್ರಾಯದಲ್ಲಿ ಹಿಂದುತ್ವವು ಒಂದು ಜೀವನ ವಿಧಾನವಾಗಿದ್ದು ಹೃದಯವೈಶಾಲ್ಯಕ್ಕೆ ಅದು ಸಮಾನಾರ್ಥಕವಾಗಿದೆ. ಹಿಂದೂ ಅಸ್ಮಿತೆಯ ರಕ್ಷಣೆಯೇ ಆರೆಸ್ಸೆಸ್‌ನ ಅಸ್ಮಿತೆಯಾಗಿದೆ.

ಸ್ವಯಂಸೇವಕರ ಬಲದಿಂದಲೇ ನಡೆಸಲ್ಪಡುವ ಆರೆಸ್ಸೆಸ್‌ಗೆ ಈ ವರ್ಷ ಶತಮಾನೋತ್ಸವದ ಸಂಭ್ರಮ. 'ಏಕಾಂತ್ ಮೇ ಆತ್ಮಸಾಧನಾ, ಲೋಕಾಂತ್ ಮೇ ಸೇವಾ ಪರೋಪಕಾರ್' ಇದು ಆರೆಸ್ಸೆಸ್‌ನ ಮೂಲತತ್ವ. 'ಒಂದು ತಾಸಿನ ಸ್ವಂತ ಸಾಧನೆಯಾದರೆ, ಉಳಿದ 23 ತಾಸುಗಳು ಲೋಕಸೇವೆ' ಎನ್ನುವುದು ಸ್ವಯಂಸೇವಕರಿಗೆ ವಿಧಿಸಲಾದ ನಿಯಮ ಎನ್ನುತ್ತಾರೆ ಆರೆಸ್ಸೆಸ್‌ನ ಮುಖ್ಯಸ್ಥ ಮೋಹನ್ ಭಾಗವತ್. ಕಾರ್ಯಕರ್ತರ ಕಾರ್ಯಾಗಾರದ ಅವಧಿಯಲ್ಲಿ ಒಮ್ಮೆಯೂ ರಾಜಕೀಯ ಚಟುವಟಿಕೆಗಳ ತರಬೇತಿಯಾಗಲೀ, ಚರ್ಚೆ-ಸಂವಾದಗಳಾಗಲೀ ಆಗದು. ಅಂಥ ನಿರೀಕ್ಷೆಯೊಂದಿಗೆ ಅಲ್ಲಿಗೆ ಬರುವವರಿಗೆ ನಿರಾಸೆಯೇ ಗತಿ. ಜಾತಿ, ಮತ, ಭಾಷೆಗಳ ಗೋಡೆಯನ್ನೂ ಮೀರಿ ಸಾಮರಸ್ಯ ಸಾಧಿಸುವ ಬಗೆ, ಸಮಾಜ ಎದುರಿಸುತ್ತಿರುವ ವಿವಿಧ ಸವಾಲುಗಳ ನಿರ್ವಹಣೆ, ವೈಯಕ್ತಿಕ ಚಾರಿತ್ರ್ಯ ನಿರ್ಮಾಣ ಸೇರಿದಂತೆ ಒಬ್ಬ ಸಾಮಾಜಿಕ ಕಾರ್ಯಕರ್ತನಿಗೆ ಅತ್ಯಗತ್ಯವಾಗುವ ಹಲವು ವೈಶಿಷ್ಟ್ಯಗಳ ಕುರಿತು ಅಲ್ಲಿ ವಿಸ್ತೃತವಾಗಿ ಚರ್ಚಿಸಲಾಗುತ್ತದೆ. ರಾಷ್ಟ್ರೀಯ ವಿಚಾರಧಾರೆಗಳ ಈ ಮೂಸೆಯಲ್ಲಿ ಅರಳಿದ ಕಾರ್ಯಕರ್ತರು ಆರೆಸ್ಸೆಸ್ ಸೂಚಿಸಿದಂತೆ ಶಿಸ್ತಿನಿಂದ ಕೆಲಸ ಮಾಡುತ್ತಾರೆ; ಅದು ಜನಸಂಪರ್ಕ ವಿರಳವಾಗಿರುವ ಗುಡ್ಡಗಾಡು ಪ್ರದೇಶವೇ, ನಗರದ ಕೊಳೆಗೇರಿಯೇ ಎಂಬುದನ್ನೂ ಲೆಕ್ಕಿಸದೆ ಗ್ರಾಮೀಣಾಭಿವೃದ್ಧಿಯಿಂದ ಮೊದಲ್ಗೊಂಡು ಶಿಕ್ಷಣ, ಆರೋಗ್ಯದವರೆಗಿನ ಹತ್ತಾರು ಆಯಾಮಗಳಲ್ಲಿ ಸಮಾಜದೆದುರು ನಿಸ್ವಾರ್ಥದಿಂದ ತಮ್ಮನ್ನು ತೆರೆದುಕೊಳ್ಳುತ್ತಾರೆ. ಆರೆಸ್ಸೆಸ್ ಹೆಸರಲ್ಲೇ ರಾಷ್ಟ್ರೀಯತೆಯಿದೆ, ಸೇವೆಯೂ ಇದೆ. ಆರೆಸ್ಸೆಸ್‌ಗೆ 'ಸೇವೆಯೇ ಧರ್ಮ'.

100 ವರ್ಷಗಳ ಇತಿಹಾಸವಿರುವ ಆರೆಸ್ಸೆಸ್ ರಾಜಕೀಯಕ್ಕೆ ಮೊದಮೊದಲು ಎಷ್ಟು ಬೇಕೋ ಅಷ್ಟು ಮಹತ್ವವನ್ನು ಕೊಟ್ಟಿತ್ತು. ನಂತರದ ವರ್ಷಗಳಲ್ಲಿ, 'ರಾಜಕೀಯ ಅಸ್ತಿತ್ವವಿರದಿದ್ದಲ್ಲಿ ಸಾಧಿಸಬೇಕಾದ್ದನ್ನು ಸಾಧಿಸಲಾಗದು' ಎಂದು ನಿರ್ಧರಿಸಿ ರಾಜಕೀಯದ ಕುರಿತು ಆರೆಸ್ಸೆಸ್ ಸ್ಪಷ್ಟ ಮತ್ತು ತೀಕ್ಷ್ಣ ಒಳನೋಟಗಳನ್ನು ಹೊಂದುವಂತಾಯಿತು. ಅನೇಕ ರಾಜ್ಯಗಳಲ್ಲಿ ಮತ್ತು ಸುಮಾರು 20 ವರ್ಷಗಳ ನಂತರ ಕೇಂದ್ರದಲ್ಲಿ ಬಲಪಂಥೀಯರು ಅಧಿಕಾರಕ್ಕೆ ಬರುವಂತಾಗುವಲ್ಲಿ ಆರೆಸ್ಸೆಸ್‌ನ ಪಾತ್ರವನ್ನು ಅಲ್ಲಗಳೆಯಲಾಗದು. ಇಲ್ಲೂ ಕೆಲಸ ಮಾಡಿದ್ದು ಆರೆಸ್ಸೆಸ್‌ನ ದೂರದರ್ಶಿತ್ವ, ಸ್ವಯಂಸೇವಕರ ಪರಿಶ್ರಮವೇ. ಅದರಲ್ಲೂ, ಆರೆಸ್ಸೆಸ್‌ನ ಸಾಮಾನ್ಯ ಕಾರ್ಯಕರ್ತರಾಗಿದ್ದವರೊಬ್ಬರು ಸತತ 3ನೇ ಬಾರಿಗೆ ದೇಶದ ಚುಕ್ಕಾಣಿ ಹಿಡಿದು, ಜಾಗತಿಕ ಮಟ್ಟದ ವರ್ಚಸ್ಸನ್ನು ದಕ್ಕಿಸಿಕೊಂಡಿರುವ ಈ ಕಾಲಘಟ್ಟವನ್ನು ಆರೆಸ್ಸೆಸ್‌ನ 'ಸುವರ್ಣಕಾಲ' ಎನ್ನಲೇಬೇಕು.

ಕಳೆದ ವರ್ಷ ಅನ್ಯಕಾರ್ಯದ ನಿಮಿತ್ತ ನಾಗ್ಪುರಕ್ಕೆ ತೆರಳಿದ್ದ ನಾನು ಪೂರ್ವನಿರ್ಧಾರದಂತೆ ಕಾರ್ಯಾಲಯಕ್ಕೆ ತೆರಳಿ ಅಲ್ಲಿನ ಜನರನ್ನು ಮಾತಾಡಿಸಿದೆ. ಅಲ್ಲಿ ಎಲ್ಲರನ್ನೂ ಗೌರವದಿಂದ ಮಾತನಾಡಿಸುತ್ತಾರಾದರೂ, ಕರ್ನಾಟಕದವರೆಂದರೆ ಒಂದು ತೂಕ ಹೆಚ್ಚು ಮರ್ಯಾದೆ. ಸರಸಂಘಚಾಲಕರಾಗಿದ್ದ ಸುದರ್ಶನ್ ಮತ್ತು ಸದ್ಯ ಉನ್ನತ ಸ್ಥಾನದಲ್ಲಿರುವ ಹೊಸಬಾಳೆಯವರಂಥವರು ಕರ್ನಾಟಕದವರು ಎಂಬುದೂ ಇದಕ್ಕೆ ಕಾರಣವಿರಬಹುದು. ಅಲ್ಲಿನ ಆಡಳಿತಗಾರರನ್ನು ಮಾತಿಗೆಳೆದ ನಾನು, ''ಭಾರತದ ರಾಜಕೀಯ ಭೂಪಟದಲ್ಲಿ 100 ವರ್ಷಗಳ ನಂತರ ಏನಾಗಬೇಕು ಎಂಬುದನ್ನು ಆರೆಸ್ಸೆಸ್ ಈಗಲೇ ಆಲೋಚಿಸಿ ಅದರ ನೆರವೇರಿಕೆಯತ್ತ ಕಾರ್ಯಪ್ರವೃತ್ತವಾಗುತ್ತದೆ ಎನ್ನಲಾಗುತ್ತದೆ, ನಿಜವಾ?'' ಎಂದು ಕೇಳಿದಾಗ ಆರೆಸ್ಸೆಸ್‌ನ ಆ ಹಿರಿಯ ಜೀವ, ''ನೀವು ದೇಶದ ಇಂದಿನ ರಾಜಕೀಯ ಪರಿಸ್ಥಿತಿಯನ್ನು ಏನು ನೋಡುತ್ತಿದ್ದೀರಾ, ಅದು ಅದರಷ್ಟಕ್ಕೇ ಆಗಿದ್ದಲ್ಲ ಮತ್ತು ನಿನ್ನೆ ಮೊನ್ನೆಯ ಚಿಂತನೆಯಿಂದ ಆಗಿದ್ದಲ್ಲ; ಬಹಳ ವರ್ಷಗಳ ಹಿಂದೆಯೇ ಆರೆಸ್ಸೆಸ್ ಚಿಂತನೆ ಮಾಡಿ ಕಾರ್ಯಪ್ರವೃತ್ತವಾಗಿದ್ದರ ಫಲವಾಗಿಯೇ ಇಂದು ದೇಶಕ್ಕೆ ಸಮರ್ಥ ನೇತೃತ್ವ ಸಾಧ್ಯವಾಗಿದ್ದು'' ಎಂದು ಸ್ಪಷ್ಟವಾಗಿ ಹೇಳಿದರು. ನನ್ನ ಪ್ರಶ್ನೆಗೆ ಉತ್ತರ ಸಿಕ್ಕಿತು!

''ಆರೆಸ್ಸೆಸ್ ಎಂಬುದು ಪುರುಷಪ್ರಧಾನ ಸಮಾಜವನ್ನು ಪ್ರತಿಪಾದಿಸುವ, ಬ್ರಾಹ್ಮಣರು ಮತ್ತು ಮೇಲ್ಜಾತಿಯವರ ಒಂದು ಸಂಸ್ಥೆ. ಈ ಮನುವಾದಿ ಸಂಘಟನೆಯಲ್ಲಿ ಸ್ತ್ರೀಯರಿಗೆ ಆದ್ಯತೆಯಿಲ್ಲ. ಇದಕ್ಕಿರುವುದು ಹಿಂದೂ ರಾಷ್ಟ್ರದ ಮೂಲಭೂತ ಚಿಂತನೆ. ಪ್ರಜಾಪ್ರಭುತ್ವದಲ್ಲಿ ನಂಬಿಕೆಯಿಲ್ಲದ ಸಂಘಿಗಳು ಮೀಸಲಾತಿಯ ವಿರೋಧಿಗಳು'' ಎಂಬ ಹಣೆಪಟ್ಟಿಗಳನ್ನು ಕಾಂಗ್ರೆಸ್ಸಿಗರು, ಎಡಪಂಥೀಯರು ಕಟ್ಟುತ್ತಲೇ ಬಂದಿದ್ದಾರೆ; ಆರೆಸ್ಸೆಸ್ ವಿಷಯದಲ್ಲಿ ಅವರಿಗೆ ಇಂದಿಗೂ ಒಂಥರಾ ಭಯವೂ ಇದೆಯೆನ್ನಿ! ಈ 100 ವರ್ಷಗಳ ಅವಧಿಯಲ್ಲಿ ಆರೆಸ್ಸೆಸ್ ಅನ್ನು 3 ಬಾರಿ ನಿಷೇಧಿಸಲಾಗಿತ್ತು. 1948ರಲ್ಲಿ ಮಹಾತ್ಮ ಗಾಂಧಿಯವರ ಹತ್ಯೆಯಾದಾಗ, ಆಗಿನ ಗೃಹಸಚಿವ ಸರ್ದಾರ್ ವಲ್ಲಭಭಾಯಿ ಪಟೇಲರು, 'ದ್ವೇಷ ಮತ್ತು ವಿಚ್ಛಿದ್ರಕಾರಕ ಶಕ್ತಿಗಳನ್ನು ಬೇರುಸಹಿತ ಕಿತ್ತೊಗೆಯಲು ಆರೆಸ್ಸೆಸ್ ಅನ್ನು ನಿಷೇಧಿಸಲಾಗುತ್ತಿದೆ' ಎಂದು ಅಧಿಸೂಚನೆ ಹೊರಡಿಸಿದ್ದು ಮೊದಲ ನಿದರ್ಶನ. ಒಂದು ವರ್ಷದ ನಂತರ ಪಟೇಲರು ಈ ನಿಷೇಧವನ್ನು ತೆಗೆದುಹಾಕಿದ್ದರು. ನಂತರ, 1975ರಲ್ಲಿ ಆಗಿನ ಪ್ರಧಾನಿ ಇಂದಿರಾ ಗಾಂಧಿಯವರು ತುರ್ತು ಪರಿಸ್ಥಿತಿಯನ್ನು ಹೇರಿದಾಗ ಆರೆಸ್ಸೆಸ್‌ನ ಚಟುವಟಿಕೆಗಳನ್ನು ಮೊಟಕುಗೊಳಿಸಲಾಗಿತ್ತು. ಮತ್ತೆ 1992ರಲ್ಲಿ, ಬಾಬ್ರಿ ಮಸೀದಿ ಧ್ವಂಸವಾದ ಬಳಿಕ ಪ್ರಧಾನಿ ಪಿ.ವಿ.ನರಸಿಂಹರಾಯರು ನಿಷೇಧಿಸಿದ್ದು 3ನೇ ನಿದರ್ಶನ.

ಕಾಲ ಬದಲಾಗಿದೆ. ಆರೆಸ್ಸೆಸ್ ವೈಚಾರಿಕವಾಗಿ ಅನೇಕ ಪರಿವರ್ತನೆಯನ್ನು ತಂದುಕೊಂಡು ಸಮಾಜದಲ್ಲಿ ಹೆಚ್ಚೆಚ್ಚು ಸ್ವೀಕಾರಾರ್ಹವಾಗಿದೆ. ಅನೇಕ ಏರಿಳಿತಗಳನ್ನು ಕಂಡರೂ, ರಾಷ್ಟ್ರೀಯತೆ ಕುರಿತಾದ ತನ್ನ ನಿಲುವಿನಲ್ಲಿ ಯಾವುದೇ ರಾಜಿ ಮಾಡಿಕೊಳ್ಳದೆ ವ್ಯವಸ್ಥಿತವಾಗಿ ಹೋರಾಡುತ್ತಾ, ದೇಶಪ್ರೇಮಿಗಳ ಭರವಸೆಯ ಬೆಳಕಾಗಿ ಇಂದಿಗೂ ನಿಂತಿದೆ. ಆರೆಸ್ಸೆಸ್ ಅನ್ನು ಅಸ್ಪೃಶ್ಯ ಭಾವದಿಂದ ನೋಡುತ್ತಿದ್ದ ಕಾಲದಿಂದ ಮೊದಲ್ಗೊಂಡು, ರಾಷ್ಟ್ರಪತಿ ಮತ್ತು ಪ್ರಧಾನ ಮಂತ್ರಿಗಳಂಥವರು ಆರೆಸ್ಸೆಸ್ ಕಾರ್ಯಾಲಯಕ್ಕೆ ಹೆಮ್ಮೆಯಿಂದ ಭೇಟಿಯಿತ್ತು ಅದರ ಕಾರ್ಯಗಳನ್ನು ಶ್ಲಾಘಿಸುವ ಮಟ್ಟಕ್ಕೆ ಇಂದು ತನ್ನನ್ನು ತಾನು ತೆರೆದುಕೊಂಡಿದೆ. ಮೂಲತಃ ಕಾಂಗ್ರೆಸ್ಸಿಗರಾಗಿದ್ದ ಮಾಜಿ ರಾಷ್ಟ್ರಪತಿ ಪ್ರಣಬ್ ಮುಖರ್ಜಿಯವರು ಆರೆಸ್ಸೆಸ್‌ನ ಕಾರ್ಯಾಲಯಕ್ಕೆ ಭೇಟಿಯಿತ್ತು ದೇಶ ಕಟ್ಟುವಲ್ಲಿನ ಅದರ ಕಾರ್ಯಕ್ಷಮತೆಯನ್ನು ಶ್ಲಾಘಿಸಿದ್ದು ಇದಕ್ಕೆ ಮತ್ತೊಂದು ನಿದರ್ಶನ. ಈ ನಿರಂತರ ಪಯಣದಲ್ಲಿ ಆರೆಸ್ಸೆಸ್‌ಗೆ 'ಆಪ್ರಮ' ಇಲ್ಲವೇ ಇಲ್ಲ, ಯಾವಾಗಲೂ 'ಸಂಘ ದಕ್ಷ'ವೇ ಆಗಿರುತ್ತದೆ.

ಅನ್ನದ ಬೋಗುಣಿಯ ತಳದಲ್ಲಿತ್ತು ತಣ್ಣನೆಯ ಕ್ರೌರ್ಯ!

ರಸದೌತಣ
ಯಗಟಿ ರಘು ನಾಡಿಗ್
naadigru@gmail.com

ಶ್ರಮಜೀವಿಯ ವೃತ್ತಾಂತವನ್ನು ಕೇಳುತ್ತ ಕಲ್ಪನಾಲೋಕದಲ್ಲಿ ವಿಹರಿಸುತ್ತಿದ್ದ ಕಥೆಗಾರನಿಗೆ, ಆತ ಇದ್ದಕ್ಕಿದ್ದಂತೆ ಮೌನವಾಗಿದ್ದು ಅರಿವಾಗಿ ಕಣ್ಣು ತೆರೆದ. ಶ್ರಮಜೀವಿ ಕಥೆಗಾರನನ್ನೇ ನೋಡುತ್ತಿದ್ದ. ಅದಕ್ಕೆ ಕಥೆಗಾರ, ''ನಿಮ್ಮ ವೃತ್ತಾಂತವನ್ನು ಒಂದೇ ಓಘದಲ್ಲಿ ಹೇಳಬೇಕು, ಕಮರ್ಷಿಯಲ್ 'ಬ್ರೇಕ್' ಕೊಟ್ಟರೆ ನಿಮ್ಮ ಮೂಳೆಯನ್ನೂ 'ಬ್ರೇಕ್' ಮಾಡಿಬಿಡ್ತೇನೆ ಅಂದಿದ್ದೆ. ಆದ್ರೂ 'ಬ್ರೇಕ್' ಕೊಟ್ಟಿದ್ದೇಕೆ?'' ಎಂದ ಹುಸಿಮುನಿಸಿನಲ್ಲಿ.

ಅದಕ್ಕೆ ಶ್ರಮಜೀವಿ, ''ಸರ್, ಇಲ್ಲಿಯವರೆಗೂ ಅಂಗಾತನಾಗಿ ಮಲಗಿದ್ರಿ. ಈಗ ಮಕಾಡೆ ಮಲಗಿದ್ರೆ, ಬೆನ್ನಿಗೆ ಮಾಲೀಶ್ ಮಾಡ್ತಾ ಕಥೆ ಮುಂದುವರಿಸುವೆ'' ಎಂದ. ಭಾವುಕತೆಯ ನಡುವೆಯೂ ಕಾಯಕ ಮರೆಯದ ಆತನ ವೃತ್ತಿಪರತೆಯನ್ನು ಮೆಚ್ಚಿದ ಕಥೆಗಾರ ಹಾಗೇ ಮಲಗಿದ, ಶ್ರಮಜೀವಿ ವೃತ್ತಾಂತವನ್ನು ಮುಂದುವರಿಸಿದ....

''ಕಿರೀಟಿಯನ್ನು ತರಬೇತಿ ಕೇಂದ್ರಕ್ಕೆ ಬಿಡಲೆಂದು ಬರುತ್ತಿದ್ದಾಗ ಆ ತಾಯಿ 'ಪೃಥೆ'ಯನ್ನು ನೋಡಿದ್ದ ನೆನಪಿತ್ತು, ಹಾಗಾಗಿ ನಮಸ್ಕರಿಸಿದೆ. ನನ್ನ ಕೈಯಲ್ಲಿನ ಟ್ರಂಕನ್ನೂ, ಮುಖದಲ್ಲಿನ ಮಂಕನ್ನೂ ಕಣ್ಣಲ್ಲೇ ಅಳೆದ ಕಾವಲುಗಾರ ರಾಜಣ್ಣ, ''ಎಲ್ಲಿಗೆ ಹೊಂಟೆ ಮಗಾ?'' ಎಂದ. ''ಇನ್ನೆಲ್ಲಿಗೆ ರಾಜಣ್ಣಾ... ಸಾಕುತಾಯಿಯ ಬಳಿಗೆ'' ಎಂದೆ ಗದ್ಗದಿತನಾಗಿ. ಆಗ ನನ್ನನ್ನು ಬಾಚಿ ತಬ್ಬಿದ ರಾಜಣ್ಣ, ''ನಿನ್ನ ನೋವು ಅರ್ಥವಾಯ್ತದೆ ಮಗಾ. ಮಾಡೋ ಊಟವ, ಓಡೋ ಓಟವ ಅರ್ಧಕ್ಕೇ ನಿಲ್ಲಿಸ್ತಾರಾ ಮಗಾ? ನೀನು ಬಿಲ್ವಿದ್ಯೆನಾಗೆ ರಾಜ್ಯಕ್ಕೆ ಎಸರು ತರಬೇಕು ಅಂತಲ್ವಾ ದಣಿಗಳು ಆಸೆಪಟ್ಟಿದ್ದೂ? ನೀನೂ ಒಂಟೋದ್ರೆ, ಅವರ ಆತ್ಮ ಆ ಸ್ವರ್ಗದಾಗೂ ನರಳಾಕಿಲ್ವಾ?'' ಎಂದು ಜಿಜ್ಞಾಸೆ ತೋಡಿಕೊಂಡ. ಆದರೆ ನನ್ನ ಚಿಂತೆ ಬೇರೆಯೇ ಇತ್ತು- 'ಬಿಲ್ಲು ಹಿಡ್ಕೊಂಡುಬಿಟ್ರೆ ಸಾಕೇ? ಅದಕ್ಕೆ ಶಕ್ತಿ ದಕ್ಕೋದು ಹೇಗೆ? 'ಅಜ' ಇರೋವರೆಗೂ ಊಟಕ್ಕೆ ಕೊರತೆಯಿರಲಿಲ್ಲ... ಆದರೀಗ? ಅದನ್ನು ರಾಜಣ್ಣನಲ್ಲಿ ಹೇಳಿಕೊಳ್ಳಲಿಕ್ಕಾಗುವುದೇ?'...

''ಆದರೆ, ನನ್ನ ತೊಳಲಾಟ ಗ್ರಹಿಸಿದ ಪೃಥೆ ಮುಂದೆ ಬಂದು ಡಬ್ಬಿಯಲ್ಲಿ ತಂದಿದ್ದ ಚಿತ್ರಾನ್ನ ಕೊಟ್ಟರು. ಮೊದಲೇ ರಣಹಸಿವು, ಟ್ರಂಕನ್ನು ಕೆಳಗಿಟ್ಟು ಗಬಗಬನೆ ತಿಂದುಬಿಟ್ಟೆ. ನಂತರ ಮಾತಿಗಿಳಿದ 'ಪೃಥೆ', 'ಊಟದ ಬಗ್ಗೆ ಚಿಂತಿಸಬೇಡ. ನಿನಗೆ ದಿನವೂ ನಮ್ಮ ಮನೆಯಿಂದಲೇ ಕಳಿಸುವೆ. ಕ್ರೀಡಾಕೂಟದ ನಂತರ ಸಾಕುತಾಯಿ ಬಳಿಗೆ ಹೋಗುವೆಯಂತೆ' ಎಂದರು. ನನಗೆ ಒಪ್ಪಲು ಮನಸ್ಸಾಗದೆ ರಾಜಣ್ಣನನ್ನು ನೋಡಿದಾಗ, 'ಒಪ್ಪಿಕೋ' ಎಂದ ಕಣ್ಣಲ್ಲೇ. ಆಕೆಗೆ ನಮಸ್ಕರಿಸಿ ಫಾರ್ಮ್‌ಹೌಸಿಗೆ ಮರಳಿದೆ....

''ಬಿಲ್ಲುಗಾರಿಕೆ ಅಭ್ಯಾಸ ಮುಂದುವರಿಯಿತು, 'ಪೃಥೆ' ಕಡೆಯಿಂದ ಊಟೋಪಚಾರವೂ ಅಬಾಧಿತವಾಗಿತ್ತು. ಕ್ರೀಡಾಕೂಟ ಹತ್ತಿರ ಬಂದೇಬಿಟ್ಟಿತು. 'ಅಜ'ರಿಲ್ಲದೆ ಅನಾಥಪ್ರಜ್ಞೆಯಿಂದ ಬಳಲುತ್ತಿದ್ದ ನಾನು ಕ್ರೀಡಾಕೂಟಕ್ಕೆ ತೆರಳುವ ಮುನ್ನ ಸಾಕುತಾಯಿಯ ಆಶೀರ್ವಾದ ಪಡೆಯಲು ಅವಳಿದ್ದ ಮನೆಗೆ ಬಂದೆ. ಆದರೆ ಕಾಯಕದಿಂದ ಅವಳಿನ್ನೂ ಮರಳಿರಲಿಲ್ಲ. ಹೀಗಾಗಿ ಹೊರಜಗುಲಿಯಲ್ಲಿ ಕಾಯುತ್ತಾ ಕೂತೆ. ಕೆಲಕ್ಷಣದಲ್ಲೇ 'ಭರ್' ಎಂದು ಧೂಳೆಬ್ಬಿಸಿಕೊಂಡು ಕಾರೊಂದು ಬಂತು. ಅದರ ಮುಂಬಾಗಿಲಿಂದ ಕಾವಲುಗಾರ ರಾಜಣ್ಣ ಇಳಿದ, ಹಿಂಬಾಗಿಲಿನಿಂದ 'ಪೃಥೆ'! ಇವರು ಇಲ್ಲಿಗೇಕೆ ಬಂದರು? ಎಂಬ ಗೊಂದಲದಲ್ಲಿದ್ದೆ. ಅದನ್ನರಿತ ಪೃಥೆ, 'ಮರೀ, ನಿನ್ನೊಂದಿಗೆ ಮಾತಾಡಬೇಕಲ್ಲಾ?' ಎಂದರು. ಗೋಣುಹಾಕಿದೆ. ಸಂದರ್ಭ ಅರಿತ ರಾಜಣ್ಣ ದೂರಕ್ಕೆ ಹೋಗಿ ನಿಂತ. ಪೃಥೆ ಮಾತು ಮುಂದುವರಿಸಿ, 'ಮರೀ, ನೀನು ಬಿಲ್ಲು ವಿದ್ಯೆಯಲ್ಲಿ ಚಾಲಾಕಿ ಅಂತ ಕಿರೀಟಿಯಿಂದ ತಿಳಿಯಿತು. ಈ ಬಾರಿಯ ಕ್ರೀಡಾಕೂಟಕ್ಕೆ ನಿನ್ನನ್ನು ಅಥವಾ ಕಿರೀಟಿಯನ್ನು ಆಯ್ಕೆ ಮಾಡ್ತಾರಲ್ಲವೇ? ನೀನು ತೆರಳಿದರೆ ರಾಜ್ಯಕ್ಕೆ ಪ್ರಶಸ್ತಿ ತಂದೇ ತರುತ್ತೀಯ ಅಂತ ರಾಜಣ್ಣ ಕೂಡ ಹೇಳಿದ. ಆದರೆ, ಅದಕ್ಕೂ ಮುಂಚೆ ನನ್ನದೊಂದು ಕೋರಿಕೆಯಿದೆ, ನಡೆಸಿಕೊಡ್ತೀಯಾ?' ಎಂದರು....

''ಅಯ್ಯೋ ಶಿವನೇ, ಸಾವಿನ ಮನೆಯ ರಣಹಸಿವಿನಲ್ಲಿದ್ದ ಈ ಅನಾಥನಿಗೆ ಒಂದು ತಿಂಗಳು ಅನ್ನವಿಟ್ಟ ಅನ್ನಪೂರ್ಣೇಶ್ವರಿ ನೀವು, ಇಷ್ಟೊಂದು ಕೋರಿಕೊಳ್ಳೋದೇ? ಅದೇನು ಕೇಳಿ, ಪ್ರಾಣ ಒತ್ತೆಯಿಟ್ಟಾದ್ರೂ ನಡೆಸಿಕೊಡ್ತೀನಿ ಎಂದುಬಿಟ್ಟೆ. ಅದಕ್ಕೆ ಪೃಥೆ, 'ನಿನ್ನದೆ ಅಕ್ಷಯಪಾತ್ರೆ ಮರೀ, ಅದಕ್ಕೇ ಭಿಕ್ಷೆಗೆ ಬಂದಿರುವೆ. ಗುರಿಗಾರಿಕೆಯಲ್ಲಿ ನಿನಗಿರೋ ಜನ್ಮಜಾತ ಪ್ರತಿಭೆಯ ಮುಂದೆ ತನ್ನ ಪರಿಣತಿ 'ಪುಸ್ತಕದ ಬದನೇಕಾಯಿ' ಅಂತ ಕಿರೀಟಿಗೆ ಗೊತ್ತಾಗಿದೆ. ಈ ಕ್ರೀಡಾಕೂಟದಲ್ಲಿ ಮಿಂಚಬೇಕು ಅಂತ ಕನಸುಕಟ್ಟಿದ್ದ ಆತ. ಆಯ್ಕೆಪಟ್ಟಿಯಲ್ಲಿ ನೀನೂ ಇರೋದ್ರಿಂದ ಅಲ್ಲಿಗೆ ನೀನೇ ತೆರಳೋದು ಅಂತ ಖಾತ್ರಿಯಾಗಿ ಅವನೀಗ ಹಾಸಿಗೆಪಾಲು. ಊಟವನ್ನೂ ಮಾಡ್ತಿಲ್ಲ. ಎಷ್ಟೋ ವರ್ಷಗಳ ನಂತರ ದೇವರಿತ್ತ ಪ್ರಸಾದ ಅವನು. ನೀನು ಆಯ್ಕೆಪಟ್ಟಿಯಿಂದ ಹಿಂದೆ ಸರಿದರೆ, ಮುಂದಿನ ಕ್ರಮಾಂಕದಲ್ಲಿರೋ ಅವನೇ ಆಯ್ಕೆಯಾಗಿ ಕ್ರೀಡಾಕೂಟಕ್ಕೆ ಹೋಗ್ತಾನೆ. ನನಗೆ ನಿನ್ನ ತ್ಯಾಗಭಿಕ್ಷೆ ನೀಡ್ತೀಯಾ ಮರೀ?' ಎಂದು ಸೆರಗೊಡ್ಡಿದರು ಪೃಥೆ....

''ಅಯ್ಯೋ ವಿಧಿಯೇ, ನನಗೆ ಅನ್ನವುಣಿಸಿದ್ದ ಕೈ ಈಗ ತನ್ನ ಮಗನಿಗಾಗಿ ಭಿಕ್ಷೆ ಬೇಡುತ್ತಿದೆ... ಮತ್ತೊಂದೆಡೆ ನನಗೆ ಬಿಲ್ಲುಗಾರಿಕೆಯ ಶಾಸ್ತ್ರವನ್ನು ಧಾರೆಯೆರೆದ 'ಅಜ'ರ ಆಸೆಯನ್ನು ಈಡೇರಿಸಬೇಕೆಂಬ ನನ್ನ ಸಂಕಲ್ಪ... ಏನು ಮಾಡಲಿ ಎಂದು ತೊಳಲಾಡಿ ಕಣ್ಣುಮುಚ್ಚಿ, ಎರಡೂ ಆಯ್ಕೆಯನ್ನು ತಕ್ಕಡಿಗೆ ಹಾಕಿದೆ. ನನ್ನ ಸಂಕಲ್ಪಕ್ಕಿಂತ, 'ಪೃಥೆ' ಒಂದು ತಿಂಗಳವರೆಗೆ ಹಾಕಿದ ಅನ್ನದ ತೂಕವೇ ಜಾಸ್ತಿಯಾಗಿ ತೂಗಿತು. ರೆಪ್ಪೆ ತೆರೆದರೆ ಒಳಗೆ ತುಂಬಿರುವ ನೀರು ತುಳುಕೀತು ಅಂತ ಕಣ್ಣು ಮುಚ್ಚಿಕೊಂಡೇ 'ಹಾಗೇ ಆಗಲಿ ಆಂಟೀ' ಎಂದುಬಿಟ್ಟೆ... ಪೃಥೆ ಸಂತಸದಿಂದ 'ನಿಂಗೆ ಒಳ್ಳೇದಾಗ್ಲೀ ಮರೀ' ಎಂದು ಹರಸಿ ಜೇಬಿಗೆ 100 ರುಪಾಯಿ ತುರುಕಿ ಹೊರಟರು. ಆಕೆ ಇನ್ನೇನು ಕಾರು ಹತ್ತಬೇಕಿತ್ತು, ಕಾಯಕ ಮುಗಿಸಿಕೊಂಡು ನನ್ನ ಸಾಕುತಾಯಿ ಮನೆಗೆ ಬಂದವಳು, ಕಾರಿನೆಡೆಗೆ ಸಾಗುತ್ತಿದ್ದ ಪೃಥೆಯನ್ನೇ ದಿಟ್ಟಿಸುತ್ತಾ, 'ಪಾಪಿ ಹೆಂಗಸೇ.... ಹಿಂದೆ ಮಾಡಿದ್ದ ಅನ್ಯಾಯ ಸಾಲದು ಅಂತ ಈಗ ಇಲ್ಲೀವರೆಗೂ ಬಂದ್ಯಾ? ನಿಂಗೇನು ಕೆಲಸ ಈ ಜೋಪಡಿಯ ಹತ್ರ?' ಎಂದು ಅರಚುತ್ತಾ, ಮೀನಿನ ಗಾಳದಿಂದಲೇ ಆಕೆಗೆ ಅಪ್ಪಳಿಸಲು ಹೋದಳು. ಅದು ನಾನು ಅದುವರೆಗೂ ಕಾಣದಿದ್ದ ಸಾಕುತಾಯಿಯ ದುರ್ಗಾವತಾರ! 'ಅಮ್ಮಾ, ಇದೇನು ಮಾಡ್ತಿದ್ದೀಯಾ?' ಎನ್ನುತ್ತಾ ಕಾರಿನ ಬಳಿಗೆ ಓಡಿದೆ. ಆಘಾತದಿಂದ ಇನ್ನೂ ಚೇತರಿಸಿಕೊಳ್ಳದಿದ್ದ ಪೃಥೆ, ರಾಜಣ್ಣನೊಂದಿಗೆ ಕಾರು ಹತ್ತಿ ಅಲ್ಲಿಂದ ನಿರ್ಗಮಿಸಿದರು....

''ಸಾಕುತಾಯಿಯನ್ನು ಸಮಾಧಾನಿಸಿ ಮನೆಯೊಳಗೆ ಕರೆತಂದು, 'ಅವರೆಷ್ಟು ದೊಡ್ಡ ಮನುಷ್ಯರು ಗೊತ್ತಾ? ಅವರಿಗೇ ಹೊಡೆಯಲು ಹೋದ್ಯಲ್ಲಾ, ಅವರೇನು ತಪ್ಪು ಮಾಡಿದ್ರು?' ಎಂದೆ. ಅದಕ್ಕೆ ಸಾಕುತಾಯಿ, 'ಅವಳ ತಪ್ಪು ಗೊತ್ತಾದ್ರೆ ನಿನ್ ಹೊಟ್ಟೆ ಬೆಂಕಿಯಾಗುತ್ತೆ ಮಗಾ... ಇವರೆಲ್ಲಾ ಗಾಳಕ್ಕೆ ಚಿಕ್ಕ ಹುಳು ಸಿಕ್ಕಿಸಿ ದೊಡ್ಡ ಮೀನು ಹಿಡಿಯೋ ನಮ್ಮ ಕಸುಬನ್ನೂ ಮೀರಿಸಿದ ಕಿಲಾಡಿಗಳು...' ಎಂದು ಬಡಬಡಿಸತೊಡಗಿದಳು. ಅದಕ್ಕೆ ನಾನು, 'ಅದಿರಲಿ, ಆಕೆ ಅದೇನೋ ತಪ್ಪು ಮಾಡಿದ್ರು ಅಂದ್ಯಲ್ಲಾ ಅದೇನು? ಹೇಳದಿದ್ರೆ ನನ್ನ ಮೇಲಾಣೆ' ಎಂದುಬಿಟ್ಟೆ. ಆಗ ಸಾಕುತಾಯಿ, 'ಅಯ್ಯೋ, ಆಣೆಹಾಕಿ ಸಿಕ್ಕಿಸಿಬಿಟ್ಯಲ್ಲೋ ಕಂದಾ... ಈಗ ಬಂದಿದ್ದೋಳು ಮತ್ತಿನ್ನಾರೂ ಅಲ್ಲ, ಮದುವೆಗೆ ಮುಂಚೆಯೇ ಗರ್ಭಧರಿಸಿದ್ದಕ್ಕೆ ಲೋಕನಿಂದೆಗೆ ಹೆದರಿ, ಕರುಳಿನ ಕುಡಿ ಎಂಬ ಮಮಕಾರವೂ ಇಲ್ಲದೆ, ಆಗಷ್ಟೇ ಹುಟ್ಟಿದ ಕೂಸನ್ನು ವರ್ಷಗಳ ಹಿಂದೆ ಉದ್ಯಾನದಲ್ಲಿ ಮಲಗಿಸಿ ಪರಾರಿಯಾಗಿದ್ದ ಪುಣ್ಯಾತ್ಗಿತ್ತಿ, ಅವಳೇ ನಿನ್ನ ಹೆತ್ತತಾಯಿ ಕಣಪ್ಪಾ. ಅವಳು ಹಾಗೆ ಉದ್ಯಾನದಲ್ಲಿ ಮಲಗಿಸಿದ್ದನ್ನು ಮರೆಯಿಂದಲೇ ನೋಡ್ತಿದ್ದ ನಾನು, ಅವಳು ಈಗ ಬರ್ತಾಳೆ ಆಮೇಲೆ ಬರ್ತಾಳೆ ಅಂತ ಕಾದಿದ್ದೇ ಕಾದಿದ್ದು. ಅವಳು ಬರಲೇ ಇಲ್ಲ, ನಂತರ ದೇವರ ಪ್ರಸಾದ ಅಂದ್ಕೊಂಡು ನಿನ್ನನ್ನು ಮನೆಗೆ ಕರೆತಂದೆ' ಎಂದು ಪೂರ್ವವೃತ್ತಾಂತ ಬಿಚ್ಚಿಟ್ಟಳು....

ಭಾಗ-3

''ನಾನು ದಿಗ್ಭ್ರಾಂತನಾಗಿದ್ದೆ. ಅಂದ್ರೆ... ಅಂದ್ರೆ... ಕಿರೀಟಿಯ ತಾಯಿಯೇ ನನ್ನ ಹೆತ್ತವ್ವ... ದೇವರೇ ಇದೆಂಥಾ ಆಟ ನಿನ್ನದು! ಹೆತ್ತವ್ವನೇ ಎದುರಿದ್ದರೂ ಬಾಯಿ ತುಂಬಾ 'ಅಮ್ಮಾ' ಎನ್ನದೆ 'ಆಂಟಿ' ಎಂದು ಕರೆಯುವಂತಾಯಿತಲ್ಲಾ? ಎಂದು ಮರುಗಿದೆ. ನಂತರ ಸಾಕುತಾಯಿ, 'ಅದ್ಸರಿ ಮಗಾ, ಅವಳು ಇಲ್ಲಿಗೇಕೆ ಬಂದಿದ್ಲು? ನಿನ್ನ ಹತ್ರ ಅವಳಿಗೇನು ಕೆಲಸವಿತ್ತು?' ಎಂದಿದ್ದಕ್ಕೆ ನಡೆದಿದ್ದನ್ನೆಲ್ಲಾ ವಿವರಿಸಿದೆ. ಆಗ ವ್ಯಂಗ್ಯವಾಗಿ ನಕ್ಕ ಅವಳು, 'ನಾನು ಈಗಷ್ಟೇ ಹೇಳಲಿಲ್ಲವೇ ಮಗಾ? ಆ ಘನವಂತೆ ಕೊನೆಗೂ ಗಾಳಕ್ಕೆ ಸಣ್ಣಹುಳ ಪೋಣಿಸಿ ನಿನ್ನ ಬೇಟೆಯಾಡೇಬಿಟ್ಟಳು, ಸ್ಪರ್ಧೆಯಲ್ಲಿ ಪಾಲ್ಗೊಳ್ಳಲ್ಲ ಅಂತ ನೀನೂ ಮಾತು ಕೊಟ್ಟುಬಿಟ್ಟೆ. ಆಗಿದ್ದಾಯ್ತು ಬಿಡು... ನಿನ್ನ ಧಣಿ ಸತ್ತೋಗಿದ್ದು ಗೊತ್ತಾಯ್ತು, ನಾನಿನ್ನೂ ಗುಂಡುಕಲ್ಲಿನ ಹಾಗಿದ್ದೀನಿ ಮಗಾ, ಹೆದರಬೇಡ' ಎಂದು ತಲೆ ನೇವರಿಸಿದಳು. ಅದನ್ನು ಕೇಳುತ್ತಿದ್ದಂತೆ, 'ಅನಾಥನನ್ನು ಮಗನೆಂದು ತಿಳಿಯುತ ಆಡಿಸಿದ ಆ ಯಶೋದೆ'ಯನ್ನು ಬಿಗಿದಪ್ಪಿಬಿಟ್ಟೆ... ರಾತ್ರಿಯೂಟಕ್ಕೆ ಒಬ್ಬಟ್ಟು ಮಾಡಿದಳು ಯಶೋದೆ.. 'ಇದ್ಯಾವ ಸಂಭ್ರಮಕ್ಕೆ?' ಎಂದು ಕೇಳಿದೆ. ಅದಕ್ಕೆ ಸಾಕುತಾಯಿ, 'ಇಂದು ನೀನು ನನಗೆ ಉದ್ಯಾನದಲ್ಲಿ ಸಿಕ್ಕಿದ ದಿನ, ನನ್ನ ಪಾಲಿಗೆ ಇಂದೇ ನಿನ್ನ ಹುಟ್ಟುಹಬ್ಬ; ಇವತ್ತು ನೀನು ಮನೇಲಿ ಇದ್ದಿದ್ರೆ ಎಷ್ಟು ಚೆನ್ನಾಗಿತ್ತು ಅಂತ ಕರುಳು ಒಂದೇ ಸಮನೆ ಕೂಗ್ತಾ ಇತ್ತು. ಕೇಳಿಸಿಕೊಂಡ ದೇವರು ನಿನ್ನನ್ನು ಕಳಿಸಿಬಿಟ್ಟ' ಎಂದಳು. ಹಾಗೆಂದವಳ ಮುಖವನ್ನು ಒಮ್ಮೆ ತೃಪ್ತಿಯಾಗಿ ನೋಡಿಬಿಡೋಣ ಅಂದುಕೊಂಡೆ, ಆಗಲೇ ಇಲ್ಲ, ಕಾರಣ ನನ್ನ ಕಣ್ಣು ಜಲಾಶಯವಾಗಿತ್ತು! ಒಬ್ಬಟ್ಟಿನ ಜತೆಗೆ ಅವಳ ಕೈತುತ್ತನ್ನು ಪುಷ್ಕಳವಾಗಿ ಉಂಡೆ. 'ಇವತ್ತು ನಿನ್ನನ್ನು ತಬ್ಬಿ ಮಲಕ್ಕೋಬೇಕು ಅನ್ನಿಸ್ತಿದೆ' ಎಂದೆ, 'ಅಯ್ಯೋ ಬಾರೋ ನನ್ನ ಕೂಸೇ' ಎನ್ನುತ್ತಾ ಮಮತೆಯ ಕಡಲಾದಳು, ಅಪ್ಪಿ ಮಲಗಿಸಿಕೊಂಡಳು...

''ಕಣ್ಣಿಗೆ ಸೂರ್ಯಕಿರಣ ಚುಚ್ಚಿದಾಗಲೇ ನನಗೆ ಬೆಳಗಾಗಿದ್ದು ಗೊತ್ತಾಗಿದ್ದು. ಸೂರ್ಯ ಹುಟ್ಟೋಕೆ ಮುಂಚೆಯೇ ಏಳುತ್ತಿದ್ದಾಕೆ ಇನ್ನೂ ಮಲಗಿರೋದು ನೋಡಿ, 'ಸಾಕಷ್ಟು ದಿನ ನನ್ನನ್ನು ಬಿಟ್ಟಿದ್ದ ಯಶೋದೆಗೆ ನಾನು ಬಂದಿದ್ದು ನಿಧಿಯೇ ಸಿಕ್ಕಂತಾಗಿರಬೇಕು' ಎಂದುಕೊಂಡೆ. ಎಷ್ಟು ಅಲುಗಾಡಿಸಿದರೂ ಆಕೆ ಏಳಲಿಲ್ಲ, ಎದೆಗೆ ಕಿವಿಯಾನಿಸಿದರೆ ಸದ್ದಿಲ್ಲ... ನನ್ನ ಅಪ್ಪುಗೆಯಲ್ಲೇ ಅಮರಳಾಗಿಬಿಟ್ಟಿದ್ದಳು! ಕೆಲವೇ ದಿನಗಳ ಅಂತರದಲ್ಲಿ ಎರಡೆರಡು ಸಾವನ್ನು ದಕ್ಕಿಸಿಕೊಳ್ಳುವಷ್ಟು ಶಕ್ತಿಯಾಗಲೀ ಸ್ಥಿತಪ್ರಜ್ಞತೆಯಾಗಲೀ ನನಗಿರಲಿಲ್ಲ. ಆದರೂ ಮತ್ತೊಂದು ಅಂತ್ಯಸಂಸ್ಕಾರಕ್ಕೆ ಹೆಗಲಾದೆ. ಮತ್ತೊಂದು ಸಾವಿನ ಮನೆ, ಮತ್ತದೇ ರಣಹಸಿವು. ನನಗೆ ಅನ್ನ, ಅರಿವು, ಅರಿವೆ, ಆಶ್ರಯ ನೀಡಿದ್ದ 'ಅಜ' ನನ್ನ ಬಿಟ್ಟುಹೋದರು, ಇತ್ತ ಸಾಕುತಾಯಿಯೂ ಸ್ವರ್ಗ ಸೇರಿದಳು. ನನ್ನ ಹೆತ್ತವ್ವ ಯಾರೆಂದು ಈಗ ಗೊತ್ತಾಗಿದ್ದರೂ, ಆಕೆಯ ಸಾಮಾಜಿಕ ಅಂತಸ್ತಿಗೆ ಒದಗುವ ಧಕ್ಕೆ ಮತ್ತು ಲೋಕಾಪವಾದದ ಭಯದ ಕಾರಣಕ್ಕೆ ನಾನು ಅವರಲ್ಲಿಗೆ ಹೋಗಲಾಗದು. ಇನ್ನು ಯಾವ ಪುರುಷಾರ್ಥಕ್ಕೆ ಬದುಕಿರಬೇಕು ಎಂದುಕೊಂಡು, ರೈಲಿಗೆ ತಲೆಕೊಟ್ಟು ಸಾಯಲು ರೈಲುಹಳಿಯತ್ತ ಸಾಗತೊಡಗಿದೆ....

''ಹಿಂದಿನಿಂದ ಚಪ್ಪಾಳೆ ಸದ್ದು ಕೇಳಿತು. ತಿರುಗಿನೋಡಿದರೆ ಚೌರದ ಅಂಗಡಿ ಚಂದ್ರಣ್ಣ..!

(ಮುಂದುವರಿಯುವುದು)

ಬಸವಣ್ಣ 'ಜಾತಿನ ಲೆಕ್ಕಕ್ಕೇ ಇಡಬೇಡಿ' ಅಂದ್ರು, ಇವ್ರ ನೋಡಿದ್ರೆ ಜಾತಿ ಲೆಕ್ಕ ಹಾಕ್ತಾ ಇದ್ದಾರೆ

ಸಿನಿಗನ್ನಡ

ಸಂಗೀತ ನಿರ್ದೇಶಕ ರವಿ ಬಸ್ರೂರು ನಿರ್ದೇಶನದ 'ವೀರ ಚಂದ್ರಹಾಸ' ಚಿತ್ರ ಈ ವಾರ ಬಿಡುಗಡೆ ಆಗಿದೆ. ಇದು ಯಕ್ಷಗಾನ ಪ್ರಧಾನ ಚಿತ್ರ. ಚಿತ್ರರಂಗದಲ್ಲಿ ಯಶಸ್ಸು ಗಳಿಸೋದು ಹೇಗೆ, ಜನರು ಕನ್ನಡ ಸಿನಿಮಾ ನೋಡ್ತಾ ಇಲ್ಲವಲ್ಲ, ಏನ್ ಮಾಡೋದು ಅನ್ನೋ ಯಕ್ಷ ಪ್ರಶ್ನೆಗಳು ಸಿನಿಮಾ ಮಂದಿಯನ್ನು ಕಾಡುವಾಗ ಯಕ್ಷಗಾನದ ಬಗ್ಗೆಯೇ ಸಿನಿಮಾ ಮಾಡಿದ್ದಾರೆ ರವಿ ಬಸ್ರೂರು. ಅಂದಹಾಗೆ ಇದು ಎಲ್ಲರಿಗೂ ಅರ್ಥ ಮತ್ತು ಇಷ್ಟ ಆಗುವ ಸಿನಿಮಾ ಆಗಿರಲ್ಲ ಅನ್ನೋದು ಸತ್ಯ. ಯಾಕಂದ್ರೆ, ಯಕ್ಷಗಾನ ಅನ್ನೋ ಕಲಾಪ್ರಕಾರ ಎಲ್ಲ ಭಾಗದ ಕನ್ನಡಿಗರಿಗೂ ಆಪ್ತವಾಗುವಂಥದ್ದಲ್ಲ. ಬಯಲುಸೀಮೆ ಜನಕ್ಕೆ ಇದೊಂದು ಬಯಲಾಟದ ಥರ ಕಾಣಿಸಿದರೆ ಕರಾವಳಿ ತೀರದ ಜನರಿಗೆ ಇದು ಅತಿ ಆಪ್ತ ಎನಿಸುವ ಪ್ರಕಾರ. ಹಾಗಾಗಿ ಯಕ್ಷಗಾನದ ಬಗ್ಗೆ ತಿಳಿದವರು ಮತ್ತು ಆಸಕ್ತಿ ಇರುವವರಿಗೆ ಈ ಸಿನಿಮಾ ಸೂಕ್ತ. ಹಾಗೆಯೇ ಯಕ್ಷಗಾನದ ಗಂಧಗಾಳಿ ಇಲ್ಲದವರು ಈ ಸಿನಿಮಾ ವಿಮರ್ಶೆ ಮಾಡುವುದೂ ತರವಲ್ಲ. ಯಾಕಂದ್ರೆ ಆ ಬಗ್ಗೆ ಜ್ಞಾನವೇ ಇಲ್ಲದೆ ಈ ಕೆಟಗರಿಯ ಸಿನಿಮಾವನ್ನು ಅಳೆಯುವುದು ಸರಿಯಲ್ಲ. ಆದರೆ ಅದನ್ನೂ ಮೀರಿ 'ಎಐ'ನಲ್ಲಿ ಡಾ. ರಾಜ್‌ಕುಮಾರ್, ಪುನೀತ್ ರಾಜ್‌ಕುಮಾರ್ ಇದ್ದಾರೆ ಮತ್ತು ಶಿವರಾಜ್‌ಕುಮಾರ್ ಅವರು ಅತಿಥಿ ಪಾತ್ರದಲ್ಲಿ ಕಾಣಿಸಿಕೊಂಡಿದ್ದಾರೆ ಅನ್ನೋ ಕಾರಣಕ್ಕಾದರೂ ಎಲ್ಲ ಬಗೆಯ ಕನ್ನಡಿಗರು ಈ ಸಿನಿಮಾ ನೋಡಲು ಕಾರಣಗಳಂತೂ ಇವೆ. ಹಾಗಾಗಿ ರವಿ ಬಸ್ರೂರು ಎಂಬ ಅಪ್ರತಿಮ ಕೆಲಸಗಾರ, ಕಷ್ಟಜೀವಿ ಮಾಡಿರುವ ಈ ಚಿತ್ರ ಯಶಸ್ವಿ ಆಗಬೇಕು. ಅದು ಆದರೆ ಈ ಚಿತ್ರ ಕನ್ನಡಿಗರ ಹೆಮ್ಮೆ ಎನಿಸಿಕೊಳ್ಳುವುದರಲ್ಲಿ ಅನುಮಾನವಿಲ್ಲ.

ತುಂಟರಗಾಳಿ
ಹರಿ ಪರಾಕ್
vveditoped@gmail.com

ಲೂಸ್ ಟಾಕ್ ▸▸ ಜಾತಿಕ್ಯಾತ

- **ಎನ್ರೀ ನಿಮ್ ಮನೆಗೆ ಜಾತಿಗಣತಿ ಮಾಡೋರು ಬಂದಿದ್ರಾ?**
- ನಮ್ಮನೆಗೆ ಯಾರೂ ಬಂದೂ ಇಲ್ಲ, ಬಂದ್ರೂ ನಾನ್ ನನ್ ಜಾತಿ ಹೇಳೋದೂ ಇಲ್ಲ.
- **ಎನ್ರೀ ಒಳ್ಳೆ ಗಡ್ಡಪ್ಪನ ಥರ ಮಾತಾಡ್ತಾ ಇದ್ದೀರ?**
- ಹಲೋ, ನಾನೆಲ್ಲಿ ಮೋದಿಯವರ ಥರ ಮಾತಾಡಿದೆ?
- **ಹಲೋ ನಾನೇಳಿದ್ದು 'ತಿಥಿ' ಗಡ್ಡಪ್ಪನ ಥರ ಅಂತ. ಸರಿ, ಈ ಜಾತಿಗಣತಿ ಬಗ್ಗೆ ನಿಮ್ಮ ಅಭಿಪ್ರಾಯ ಏನು?**
- ನೋಡಿ ಈ ಜಾತಿಗಳ ಬಗ್ಗೆ ಜಗಜ್ಜಾತಿ ಬಸವೇಶ್ವರರು ಏನ್ ಹೇಳಿದ್ರು ಅಂದ್ರೆ...
- **ರೀ, ಸ್ವಾಮಿ ಅದು ಜಗಜ್ಜಾತಿ ಅಲ್ಲ, ಜಗಜ್ಯೋತಿ ಬಸವೇಶ್ವರರು..**
- ಹೋ, ಹಂಗಾ, ಸಾರಿ, ನಾನ್ ಏನ್ ಹೇಳೋಕೆ ಹೊರಟೆ ಅಂದ್ರೆ, ಬಸವಣ್ಣ 'ಜಾತಿನ ಲೆಕ್ಕಕ್ಕೇ ಇಡಬೇಡಿ' ಅಂದ್ರು, ಇವ್ರ ನೋಡಿದ್ರೆ ಜಾತಿನೇ ಲೆಕ್ಕ ಹಾಕ್ತಾ ಇದ್ದಾರೆ. ಇದು ಸರಿ ಅಲ್ಲ.
- **ನೂರಕ್ಕೆ ಒಂದ್ ಮಾತ್ ಹೇಳಿದ್ರಿ ಬಿಡಿ. ಸಖತ್ ಬುದ್ಧಿವಂತರು ನೀವು**
- ಬುದ್ಧಿ ಇಲ್ದೇ ಇರುತ್ತಾ? ನಾನ್ ಹುಟ್ಟಿರೋದು ಯಾವ ಜಾತೀಲಿ ಗೊತ್ತಾ?

(ಕಾಲ್ಪನಿಕ ಸಂದರ್ಶನ)

ನೆಟ್ ಪಿಕ್ಸ್

ಖೇಮು ಮತ್ತು ಖೇಮುಶ್ರೀ ಅಮ್ಯೂಸ್‌ಮೆಂಟ್ ಪಾರ್ಕ್‌ಗೆ ಹೋದ್ರು. ಅಲ್ಲಿನ ಜಯಂಟ್ ವೀಲ್ ನೋಡಿ ಖೇಮುಗೆ ಅದರಲ್ಲಿ ಕೂರಬೇಕು ಅಂತ ಆಸೆಯಾಯ್ತು. ಹಾಗಂತ ಖೇಮುಶ್ರೀಗೆ ಹೇಳಿದ. ಅದಕ್ಕೆ ಖೇಮುಶ್ರೀ, 'ಅಲ್ಲಿ ಹಾಕಿರೋ ಬೋರ್ಡ್ ನೋಡಿ, ಒಂದ್ ರೈಡ್‌ಗೆ 500 ರುಪಾಯಿ. 500 ರುಪಾಯಿ ಏನು ಸುಮ್ನೆ ಬರುತ್ತಾ?' ಅಂದ್ಲು. ಖೇಮು ಸುಮ್ಮನಾದ. ಮುಂದಿನ ವರ್ಷ ಅದೇ ಸಮಯಕ್ಕೆ ಅಲ್ಲಿಗೆ ಹೋದ್ರು. ಖೇಮುಗೆ ಮತ್ತೆ ಜಯಂಟ್ ವೀಲ್‌ನಲ್ಲಿ ಕೂರೋ ಆಸೆಯಾಗಿ ಹೆಂಡತಿಗೆ ಹೇಳಿದ. ಖೇಮುಶ್ರೀಯಿಂದ ಅದೇ ಉತ್ತರ ಬಂತು- '500 ರುಪಾಯಿ ಏನು ಸುಮ್ನೆ ಬರುತ್ತಾ' ಅಂತ. ಸರಿ ಹೀಗೇ ವರುಷಗಳು ಕಳೆದು ಖೇಮು ಮುದುಕ ಆದ. ಮತ್ತೆ ಇಬ್ಬರೂ ಅಲ್ಲಿಗೆ ಹೋದ್ರು. 'ನಂಗೆ ವಯಸ್ಸು 70 ಆಯ್ತು, ಈ ಸಲನಾದ್ರೂ ಅದರಲ್ಲಿ ಕೂತ್ಕೊತೀನಿ ಕಣೇ. ಇಲ್ಲಾಂದ್ರೆ ನನ್ನ ಆಸೆ ಯಾವತ್ತೂ ಈಡೇರಲ್ಲ' ಅಂದ ಖೇಮು. ಅದಕ್ಕೆ ಖೇಮುಶ್ರೀ ಮತ್ತದೇ ಮಾತು ಹೇಳಿದ್ಲು- '500 ರುಪಾಯಿ ಏನು ಸುಮ್ನೆ ಬರುತ್ತಾ'. ಇದನ್ನ ಆ ಜಯಂಟ್ ವೀಲ್ ರೈಡರ್ ಕೇಳಿಸಿಕೊಂಡು, 'ನೋಡಿ, ನಾನು ನಿಮ್ಮನ್ನ ಫ್ರೀ ಆಗಿ ಜಯಂಟ್ ವೀಲ್‌ನಲ್ಲಿ ಕರ್ಕೊಂಡ್ ಹೋಗ್ತೀನಿ. ಆದ್ರೆ, ಒಂದ್ ಕಂಡೀಷನ್. ನಾನು ರೈಡ್ ಮಾಡುವಾಗ, ನೀವು ಹೆದರಿಕೊಂಡು ಬಾಯಲ್ಲಿ ಒಂದ್ ಪದ ಉಚ್ಚರಿಸಿದರೂ ನಿಮ್ಗೆ 500 ರುಪಾಯಿ ಫೈನ್ ಆಗುತ್ತೆ' ಅಂತ ಖೇಮು ದಂಪತಿಗೆ ಹೇಳಿದ. ಸರಿ ಅಂತ ಇಬ್ಬರೂ ಒಪ್ಪಿಕೊಂಡು ವೀಲ್ ಹತ್ತಿದರು. ಆ ರೈಡರ್, ಇವರನ್ನು ಹೆದರಿಸೋಕೆ ಅಂತ ಏನೆಲ್ಲಾ ಸರ್ಕಸ್ ಮಾಡಿದ, ಪಲ್ಟಿ ಹೊಡೆಸಿದ. ಆದರೆ ಇಬ್ಬರೂ ಕಮಕ್-ಕಿಮಕ್ ಅನ್ನಲಿಲ್ಲ. ಕೊನೆಗೆ, ಸಾಕಾಗಿ ವೀಲನ್ನು ಕೆಳಗೆ ಇಳಿಸುತ್ತಾ ರೈಡರ್ ಹೇಳಿದ, 'ಮೆಚ್ಚಬೇಕು ಕಣ್ರೀ, ನಾನು ಏನೇ ಸರ್ಕಸ್ ಮಾಡಿದ್ರೂ ನಿಮ್ಮನ್ನ ಹೆದರಿಸೋಕೆ ಆಗ್ಲಿಲ್ಲ. ಗುಡ್ ಜಾಬ್''. ಅದಕ್ಕೆ ಹಿಂದೆ ಕೂತಿದ್ದ ಖೇಮು ಮೆಲ್ಲಗೆ ಹೇಳಿದ- 'ಹಂಗೇನಿಲ್ಲ ಸರ್, ನೀವು ಮೊದಲ ಸಲ ಪಲ್ಟಿ ಹೊಡೆಸಿದಾಗಲೇ, ನನ್ನ ಹೆಂಡ್ತಿ ಕೆಳಗೆ ಬಿದ್ದುಹೋದಳು. ಆದ್ರೂ ಸುಮ್ಮನೆ ಕೂತಿದ್ದೆ, ಯಾಕಂದ್ರೆ, 500 ರುಪಾಯಿ ಏನು ಸುಮ್ನೆ ಬರುತ್ತಾ?''.

ಲೈನ್ ಮ್ಯಾನ್

- **ಮಳೆಗಾಲದ ಎಫೆಕ್ಟ್ ಏನು?**
- ತಮಿಳುನಾಡಿನವರು ನೀರು ಬಿಡಿ ಅಂತ ನಮ್ಮನ್ನ ಕೇಳಲ್ಲ.
- ಮರಗಳನ್ನು ಬೆಳೆಸೋ ಸಾಲು ಮರದ ತಿಮ್ಮಕ್ಕನನ್ನು ಜನ ಮರೆತೇ ಹೋಗ್ತಾರೆ.
- ಇನ್ಮೇಲೆ 'ಎಸಿ' ಅಂದ್ರೆ ಏರ್ ಕಂಡೀಷನರ್ ಅಲ್ಲ, ಬರೀ ಅಸಿಸ್ಟೆಂಟ್ ಕಮಿಷನರ್.
- ಹುಡುಗಿಯರು ಮನೆಯಿದ ಹೊರಗೆ ಬರೋದು ಜಾಸ್ತಿ ಆಗುತ್ತೆ. ಸೋ, ಅವರನ್ನ ನೋಡುತ್ತಾ ರಸ್ತೆಯಲ್ಲಿ ಅಪಘಾತ ಮಾಡುವ ಹುಡುಗರ ಸಂಖ್ಯೆ ಜಾಸ್ತಿ ಆಗುತ್ತೆ.
- ತಪ್ಪು ಮಾಡಿದವರು ಮಾತ್ರ ಬೆವರುವುದರಿಂದ, ಪೊಲೀಸರಿಗೆ ಅಪರಾಧಿಗಳನ್ನು ಕಂಡುಹಿಡಿಯೋದು ಸುಲಭ ಆಗುತ್ತೆ.
- **ಟೆಸ್ಟ್‌ನಲ್ಲಿ ಗೆಲ್ಲೋ ಅಥವಾ ಸೋಲೋ ಮ್ಯಾಚ್ ಡ್ರಾ ಆದ್ರೆ ಅದು**
- ಡ್ರಾ-ಮ್ಯಾಟಿಕ್ ರಿಸಲ್ಟ್
- **ಸ್ಮಶಾನದಲ್ಲಿ ಆಡೋ ಆಟ**
- ಲ'ಗೋರಿ'
- **ತಮಿಳುನಾಡಿನಲ್ಲಿರುವ ಪರಿಸರ ಪ್ರೇಮಿ**
- 'ಸಸಿ'ಕುಮಾರ
- **ಬೇಬಿ ಸಿಟ್ಟರ್‌ನ ಕನ್ನಡದಲ್ಲಿ ಏನಂತಾರೆ?**
- ಶಿಶು-ಪಾಲ
- **ಕುಡಿದು ಚಿತ್ತಾಗಿರೋ ಸೆಕ್ಯುರಿಟಿ ಗಾರ್ಡ್**
- 'ಟೈಟ್' ವಾಚ್‌ಮನ್
- **ರಾಜಕೀಯ ಸಮಾವೇಶಗಳಲ್ಲಿ ಜೈಕಾರ ಹಾಕೋಕೆ ಬರೋ ಜನಗಳಿಗೆ ಏನು ಕೊಡ್ತಾರೆ?**
- 'ಜೈ'ವಿಕ ಆಹಾರ
- ಸೋಮು: LPG ರೇಟ್ ಮತ್ತೆ ಜಾಸ್ತಿ ಆಗಿದೆಯಂತೆ.
- ಖೇಮು: ಹೋಗ್ಲಿ, ಬಿಡೋ.. ಅದು ಹುಡುಗೀರ್ ಪ್ರಾಬ್ಲಮ್. ನಾವ್ಯಾಕ್ ತಲೆ ಕೆಡಿಸ್ಕೊಬೇಕು?
- ಸೋಮು: ಲೋ, ಗ್ಯಾಸ್ ರೇಟ್ ಬರೀ ಹುಡುಗೀರ್ ಪ್ರಾಬ್ಲಮ್ ಹೆಂಗೋ ಆಗುತ್ತೆ?
- **ಖೇಮು: ಓಹ್, ಗ್ಯಾಸ್ ರೇಟಾ? ನಾನೆಲ್ಲೋ Ladies PG ಬಗ್ಗೆ ಹೇಳ್ತಿದೀಯಾ ಅಂದ್ಕೊಂಡೆ.**
- **ಇಬ್ಬರು ಸಮಾನ ದುಃಖಿಗಳು ಅನುಭವಿಸೋ ನೋವು**
- 'ಜಾಯಿಂಟ್' ಪೇನ್

ಅಚ್ಚುಕಟ್ಟು ಪ್ರದೇಶ
RNI no: 3918/59
VISHVAVANI, Printed & Published by : VISHWESHWAR BHAT, On behalf of Vishwakshara Media Private Ltd., #483/1A/2A/3 Shri Ram plaza, 3rd floor, opp to Jain college, behind Kotak Mahindra Bank, Club Road, Hubli. Printed at M/s Elegant Offset Printers Pvt. Ltd. Plot No.33/1 & 15/1(part)M.T.Sagar Industrial Estate, Gokul Road, Hubballi-580030.
Editor-in Chief : Vishweshwar Bhat. ಪ್ರಧಾನ ಸಂಪಾದಕ: ವಿಶ್ವೇಶ್ವರ ಭಟ್
CopyRight: Vishwakshara Media Private Ltd. All rights reserved. Reproduction in any manner electronic or otherwise, in whole or in part, without prior written permission is prohibited.
ನಮ್ಮ ಆವೃತ್ತಿಗಳು: ಬೆಂಗಳೂರು, ಹುಬ್ಬಳ್ಳಿ ಮಂಗಳೂರು, ಬೆಳಗಾವಿ ಕಲಬುರಗಿ, ದಾವಣಗೆರೆ
Vol:67, Issue: 346

ಸಮಾಚಾರ ಸಣ್ಣದಲ್ಲ

ಕಾರ್ಮಿಕರಿಗೆ ಉಗುರು ಕಿತ್ತು, ಶಾಕ್ ನೀಡಿ ಹಿಂಸೆ

ಕೊರ್ಬಾ: ಛತ್ತೀಸ್‌ಗಢದ ಕೊರ್ಬಾ ಜಿಲ್ಲೆಯ ಐಸ್ ಕ್ರೀಮ್ ಕಾರ್ಖಾನೆಯೊಂದರ ಮಾಲೀಕ ಮತ್ತು ಸಹಚರ, ಇಬ್ಬರು ಕಾರ್ಮಿಕರಿಗೆ ಉಗುರು ಕಿತ್ತು, ವಿದ್ಯುತ್ ಶಾಕ್ ನೀಡಿ ಚಿತ್ರಹಿಂಸೆಗೊಳಪಡಿಸಿದ್ದಾರೆ. ಕಾರ್ಖಾನೆ ಮಾಲೀಕ ಘೋಟು ಗುರ್ಜರ್ ಮತ್ತು ಸಹಚರ ಮುಖೇಶ್ ಶರ್ಮಾ, ಕಾರ್ಮಿಕರ ಮೇಲೆ ಕಳವು ಆರೋಪ ಹೊರಿಸಿ ಇಬ್ಬರನ್ನೂ ನಗ್ನಗೊಳಿಸಿ, ವಿದ್ಯುತ್ ಶಾಕ್ ನೀಡಿದ್ದಾರೆ. ರಾಜಸ್ಥಾನದ ಭಿಲ್ವಾರಾ ಜಿಲ್ಲೆಯ ಅಭಿಷೇಕ್ ಭಂಬಿ ಮತ್ತು ವಿನೋದ್ ಭಂಬಿ ಹಿಂಸೆಗೊಳಗಾದವರು. ಎಲೆಕ್ಟ್ರಿಕ್ ಶಾಕ್ ನೀಡಿದ್ದನ್ನೂ ವಿಡಿಯೊ ಮಾಡಿ ಸಿಕ್ಕಿಬಿದ್ದಿದ್ದಾರೆ. ಕಾರ್ಮಿಕರು ತಪ್ಪಿಸಿಕೊಂಡು ತಮ್ಮ ಊರನ್ನು ತಲುಪಿದ ಬಳಿಕ ಗುಲಾಬ್‌ಪುರ ಪೊಲೀಸ್ ಠಾಣೆಯಲ್ಲಿ 'ಜೀರೊ ಎಫ್‌ಐಆರ್' ದಾಖಲಿಸಿದ ಬಳಿಕ ವಿಷಯ ಬೆಳಕಿಗೆ ಬಂದಿದೆ. ಬಳಿಕ ಕೊರ್ಬಾ ಪೊಲೀಸ್ ಠಾಣೆಯಲ್ಲಿ ಗುರ್ಜರ್ ಮತ್ತು ಶರ್ಮಾ ವಿರುದ್ಧ ಪ್ರಕರಣ ದಾಖಲಾಗಿದೆ. ಈವರೆಗೆ ಯಾರನ್ನೂ ಬಂಧಿಸಿಲ್ಲ, ತನಿಖೆ ನಡೆಯುತ್ತಿದೆ ಎಂದು ಸಿವಿಲ್ ಲೈನ್ಸ್ ಎಸ್‌ಎಚ್‌ಒ ಪ್ರಮೋದ್ ದಾದ್ಸೇನಾ ತಿಳಿಸಿದ್ದಾರೆ.

ಇಸ್ರೇಲ್ ದಾಳಿಗೆ ಗಾಜಾದಲ್ಲಿ 90 ಸಾವು

ಗಾಜಾ: ಇಸ್ರೇಲ್ ಸೇನಾಪಡೆಗಳು ಗಾಜಾ ಮೇಲಿನ ದಾಳಿಯನ್ನು ಮತ್ತೆ ತೀವ್ರಗೊಳಿಸಿವೆ. ಗುರುವಾರ ಮತ್ತು ಶುಕ್ರವಾರದ ದಾಳಿಯಲ್ಲಿ ಮಹಿಳೆಯರು ಮತ್ತು ಮಕ್ಕಳು ಸೇರಿದಂತೆ 90 ಜನರ ಸಾವಿಗೆ ಕಾರಣವಾಗಿವೆ ಎಂದು ಗಾಜಾ ಆರೋಗ್ಯ ಸಚಿವಾಲಯ ಶನಿವಾರ ಹೇಳಿದೆ. ಖಾನ್ ಯೂನಿಸ್‌ನಲ್ಲಿ ಸ್ಥಳಾಂತರಗೊಂಡು ಟೆಂಟ್‌ನಲ್ಲಿ ನೆಲೆಸಿದ್ದವರ ಮೇಲೆ ಇಸ್ರೇಲ್ ಹಾರಿಸಿದ ಬಾಂಬ್ ಬಿದ್ದು ಸ್ಫೋಟಗೊಂಡ ಪರಿಣಾಮ 11 ಮಂದಿ ಸಾವಿಗೀಡಾದರು. ಕಳೆದ ರಾತ್ರಿಯಲ್ಲೇ ಒಂದೆಡೆ ನಿರಾಶ್ರಿತರ ಶಿಬಿರದಲ್ಲಿ 15 ಮಂದಿ ಹತರಾದರು ಎಂದು ಸಚಿವಾಲಯ ಮಾಹಿತಿ ನೀಡಿದೆ.

ಮ.ಪ್ರ. ಕನ್ಹಾದಲ್ಲಿ ಹೆಣ್ಣು ಹುಲಿ ಸಾವು

ಮಾಂಡ್ಲಾ: ಮಧ್ಯಪ್ರದೇಶದ ಮಾಂಡ್ಲಾ ಜಿಲ್ಲೆಯ 'ಕನ್ಹಾ ಟೈಗರ್ ರಿಸರ್ವ್'(ಕೆಟಿಆರ್-ಹುಲಿ ಸಂರಕ್ಷಿತ ಪ್ರದೇಶ)ದಲ್ಲಿ ಹೆಣ್ಣು ಹುಲಿಯ ಶವ ಶುಕ್ರವಾರ ಪತ್ತೆಯಾಗಿದೆ. ಕನ್ಹಾ ಟೈಗರ್ ರಿಸರ್ವ್‌ನ ಕಿಸ್ಲಿ ವಲಯದ ಜಮೂನ್ ತೋಲ ಪ್ರದೇಶದಲ್ಲಿ ಹುಲಿಯ ಕೊಳೆತ ಕಳೇಬರ ಕಂಡುಬಂದಿದೆ. ಹುಲಿ ಸಾವಿಗೀಡಾಗಿ ಕೆಲ ದಿನಗಳಾಗಿರಬಹುದು ಎಂದು ಕೆಟಿಆರ್ ವಲಯ ನಿರ್ದೇಶಕ ರವೀಂದ್ರ ಮನಿ ತ್ರಿಪಾಠಿ ಶನಿವಾರ ಸುದ್ದಿಸಂಸ್ಥೆಗೆ ತಿಳಿಸಿದ್ದಾರೆ.

ವರ್ಷಾಂತ್ಯಕ್ಕೆ ಭಾರತ ಭೇಟಿ: ಮಸ್ಕ್ ಸಂದೇಶ

ದೆಹಲಿ: 'ಭಾರತದ ಪ್ರಧಾನಿ ನರೇಂದ್ರ ಮೋದಿ ಅವರೊಂದಿಗೆ ಮಾತನಾಡುವುದೇ ದೊಡ್ಡ ಗೌರವ. ವರ್ಷಾಂತ್ಯದಲ್ಲಿ ಭಾರತಕ್ಕೆ ಬರಲಿದ್ದೇನೆ. ಅದಕ್ಕಾಗಿಯೇ ಎದುರು ನೋಡುತ್ತಿದ್ದೇನೆ' ಎಂದು ವಿಶ್ವದ ಸಿರಿವಂತ ಉದ್ಯಮಿ, ಟೆಸ್ಲಾ ಮತ್ತು ಸ್ಪೇಸ್‌ಎಕ್ಸ್ ಕಂಪನಿಗಳ ಮುಖ್ಯ ಕಾರ್ಯನಿರ್ವಹಣಾಧಿಕಾರಿ(ಸಿಇಒ) ಎಲಾನ್ ಮಸ್ಕ್ ಸಂದೇಶ ರವಾನಿಸಿದ್ದಾರೆ.

ಪ್ರಧಾನಿ ನರೇಂದ್ರ ಮೋದಿ ಅವರ ಜತೆ ಶುಕ್ರವಾರ ದೂರವಾಣಿಯಲ್ಲಿ ಮಾತನಾಡಿದ ಮಸ್ಕ್, ನಂತರ ಈ ಮಾಹಿತಿ ಹಂಚಿಕೊಂಡರು. 2025ರಲ್ಲೇ ಭಾರತದಲ್ಲಿ ಟೆಸ್ಲಾ ಕಾರು ಬಿಡುಗಡೆ ಮಾಡಲು ಮಸ್ಕ್ ಸಿದ್ಧತೆ ನಡೆಸುತ್ತಿದ್ದಾರೆ. ಟೆಸ್ಲಾ ಶೋರೂಂಗಾಗಿ ಮುಂಬೈ ಮತ್ತು ದೆಹಲಿಯಲ್ಲಿ ಜಾಗ ಬಾಡಿಗೆಗೆ ಪಡೆದು ಸಿದ್ಧತೆ ನಡೆಸಿದ್ದಾರೆ. ತಂತ್ರಜ್ಞಾನ ಮತ್ತು ನಾವೀನ್ಯತೆ ಕ್ಷೇತ್ರಗಳಲ್ಲಿ ಸಹಕಾರದ ಬಗ್ಗೆ ಎಲಾನ್ ಮಸ್ಕ್ ಜತೆ ಚರ್ಚಿಸಿದೆ. ಈ ಕ್ಷೇತ್ರಗಳಲ್ಲಿ ಅಮೆರಿಕದೊಂದಿಗೆ ಪಾಲುದಾರಿಕೆ ಹೆಚ್ಚಿಸಲು ಭಾರತ ಬದ್ಧವಾಗಿದೆ ಎಂದು ಪ್ರಧಾನಿ ಮೋದಿ 'ಎಕ್ಸ್'ನಲ್ಲಿ ಬರೆದುಕೊಂಡಿದ್ದಾರೆ.

ವಿದೇಶಿ ವಿನಿಮಯ ಸಂಗ್ರಹ ಸತತ ವೃದ್ಧಿ

ಮುಂಬೈ: ಭಾರತದಲ್ಲಿನ ವಿದೇಶೀ ವಿನಿಮಯ ಸಂಗ್ರಹ ಏ.11ಕ್ಕೆ ಕೊನೆಗೊಂಡ ವಾರದಲ್ಲಿ 157 ಕೋಟಿ ಡಾಲರ್ ಏರಿಕೆಯೊಂದಿಗೆ 67,783 ಕೋಟಿ ಡಾಲರ್‌ಗಳಿಗೆ ವೃದ್ಧಿಯಾಗಿದೆ. ಸತತ 6ನೇ ವಾರದಲ್ಲಿಯೂ ವಿವಿಧ ದೇಶಗಳ ಕರೆನ್ಸಿಗಳ ಸಂಗ್ರಹದಲ್ಲಿ ಏರಿಕೆ ಕಂಡುಬಂದಿದೆ. ವಿದೇಶಿ ಕರೆನ್ಸಿಗಳಲ್ಲಿ ಯೂರೊ, ಪೌಂಡ್ ಮತ್ತು ಯೆನ್ ಪ್ರಮಾಣವೂ ಗಣನೀಯವಾಗಿ ಹೆಚ್ಚಳವಾಗಿದೆ. ಇದೇ ವಾರ ಆರ್‌ಬಿಐ ಬಳಿ ಇರುವ ಚಿನ್ನದ ಸಂಗ್ರಹವೂ 7800 ಕೋಟಿ ಡಾಲರ್‌ಗಳಷ್ಟಕ್ಕೆ ಹೆಚ್ಚಳವಾಗಿದೆ ಎಂದು ಭಾರತೀಯ ರಿಸರ್ವ್ ಬ್ಯಾಂಕ್(ಆರ್‌ಬಿಐ) ಶನಿವಾರ ಹೇಳಿದೆ.

{ ಮಲ್ಲಿಕಾರ್ಜುನ ಖರ್ಗೆ } ಕಾಂಗ್ರೆಸ್ ಅಧ್ಯಕ್ಷ

ಕೇಂದ್ರ ಸರಕಾರ, ಜಾರಿ ನಿರ್ದೇಶನಾಲಯ ಬಳಸಿಕೊಂಡು ನ್ಯಾಷನಲ್ ಹೆರಾಲ್ಡ್ ಪತ್ರಿಕೆ ಪ್ರಕರಣದಲ್ಲಿ ದೋಷಾರೋಪ ಪಟ್ಟಿ ಸಲ್ಲಿಸಿದೆ, ಆಸ್ತಿ ವಶಕ್ಕೆ ಪಡೆದಿದೆ. ಆ ಮೂಲಕ ಕಾಂಗ್ರೆಸ್ ನಾಯಕಿ ಸೋನಿಯಾ ಗಾಂಧಿ, ಪ್ರತಿಪಕ್ಷ ನಾಯಕ ರಾಹುಲ್ ಗಾಂಧಿ ಅವರನ್ನು ಹೆದರಿಸಲೆತ್ನಿಸುತ್ತಿದೆ. ಇಂಥ ರಾಜಕೀಯ ದ್ವೇಷದ ಪ್ರಕರಣಗಳಿಗೆಲ್ಲಾ ಕಾಂಗ್ರೆಸ್ ನಾಯಕರು ಹೆದರುವುದಿಲ್ಲ.

ನಾರ್ವೆ, ನೆದರ್‌ಲೆಂಡ್, ಕ್ರೊವೇಷಿಯಾಗೆ 3ನೇ ವಾರ ಭೇಟಿ | ಮುಕ್ತ ವ್ಯಾಪಾರ ಒಪ್ಪಂದಗಳಿಗೆ ಸಿದ್ಧತೆ

ಮೇನಲ್ಲಿ ಮೋದಿ ತ್ರಿರಾಷ್ಟ್ರ ಪ್ರವಾಸ

ದೆಹಲಿ: ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರು ನಡೆಸಿದ 'ಪ್ರತಿಸುಂಕ'ದ ಗದಾಪ್ರಹಾರದಿಂದಾಗಿ ವಿಶ್ವದ 60ಕ್ಕೂ ಅಧಿಕ ದೇಶಗಳು ಗೊಂದದಲ್ಲಿವೆ. ಈ ಮಧ್ಯೆ, ಇದಕ್ಕೆ ಪರಿಹಾರ ಕಂಡುಕೊಳ್ಳಲೆಂದೇ ಪ್ರಧಾನಿ ನರೇಂದ್ರ ಮೋದಿ ಅವರು ಮುಂದಿನ ತಿಂಗಳು ಯೂರೋಪ್‌ನ ಮೂರು ರಾಷ್ಟ್ರಗಳಿಗೆ ಪ್ರವಾಸ ಹಮ್ಮಿಕೊಳ್ಳುತ್ತಿದ್ದಾರೆ.



ಈ ಪ್ರವಾಸ ಕಾಲದಲ್ಲಿ ಯೂರೋಪ್‌ನ 3 ರಾಷ್ಟ್ರಗಳ ಜತೆಗೆ ಭಾರತದ 'ಮುಕ್ತ ವ್ಯಾಪಾರ ಒಪ್ಪಂದ'(ಎಫ್‌ಟಿಎ)ವನ್ನು ಮಾಡಿಕೊಳ್ಳಲು ಯೋಜಿಸಿದ್ದಾರೆ ಎಂದು ಉನ್ನತ ಮೂಲಗಳಿಂದ ತಿಳಿದುಬಂದಿದೆ.

ಕ್ರೊವೇಷಿಯಾ, ನಾರ್ವೆ ಮತ್ತು ನೆದರ್‌ಲೆಂಡ್‌ಗೆ ಮೇ 3ನೇ ವಾರ ತೆರಳಲಿರುವ ಪ್ರಧಾನಿ ಮೋದಿ, ಈ ಭೇಟಿಯ ಅವಧಿಯಲ್ಲಿ ಮುಕ್ತ ವ್ಯಾಪಾರ ಒಪ್ಪಂದಗಳನ್ನು ಮಾಡಿಕೊಳ್ಳುವುದಕ್ಕೆ ಒತ್ತು ನೀಡಲಿದ್ದಾರೆ. ವರ್ಷಾಂತ್ಯದೊಳಗೆ 'ಎಫ್‌ಟಿಎ' ಅಂತಿಮಗೊಳಿಸಬೇಕು ಎಂಬುದು ಅವರ ಗುರಿಯಾಗಿದೆ ಎಂದು ತಿಳಿದುಬಂದಿದೆ.

ನೆದರ್‌ಲೆಂಡ್ 2ನೇ ಭೇಟಿ:

ಪ್ರಧಾನಿ ಮೋದಿ ಅವರದ್ದು ನೆದರ್‌ಲೆಂಡ್‌ಗೆ ಇದು 2ನೇ ಭೇಟಿಯಾಗಲಿದೆ. ಈ ಬಾರಿ ಮುಖ್ಯವಾಗಿ ಸೆಮಿಕಂಡಕ್ಟರ್ ಸೇರಿದಂತೆ ಅತ್ಯಾಧುನಿಕ ತಂತ್ರಜ್ಞಾನ ಆಧರಿಸಿದ ಉದ್ಯಮ ಕ್ಷೇತ್ರದತ್ತ ಮಾತುಕತೆ ನಡೆಯಲಿದೆ. ಅಲ್ಲದೇ, ಭಾರತದ ಉತ್ಪನ್ನಗಳು ಯೂರೋಪ್ ದೇಶಗಳಿಗೆ ತಲುಪುವುದಕ್ಕೆ ನೆದರ್‌ಲೆಂಡ್ ಬಹಳ ಮುಖ್ಯವಾಗಿದೆ. ಒಂದರ್ಥದಲ್ಲಿ ಭಾರತದ ಸರಕುಗಳು ಯೂರೋಪ್ ಮಾರುಕಟ್ಟೆ ಪ್ರವೇಶಕ್ಕೆ ನೆದರ್‌ಲೆಂಡ್ ಹೆಬ್ಬಾಗಿಲಾಗಿದೆ. ಹಾಗಾಗಿಯೇ ಮೋದಿ ಅವರು ಈ ದೇಶದ ಭೇಟಿ ಉತ್ಸುಕರಾಗಿದ್ದಾರೆ ಎನ್ನಲಾಗಿದೆ.

ಮೇ 15-16ಕ್ಕೆ ಭಾರತ, ನಾರ್ವೆ 3ನೇ ಶೃಂಗಸಭೆ

ನಾರ್ವೆಗೆ ಮೇ 15-16ರಂದು ಪ್ರಧಾನಿ ಮೋದಿ ಭೇಟಿ ನೀಡಲಿದ್ದಾರೆ. ಈ ಸಂದರ್ಭ '3ನೇ ಭಾರತ-ನಾರ್ವೆ ಶೃಂಗಸಭೆ' ನಡೆಯಲಿದೆ. ನಾರ್ಡಿಯಾಕ್ ವಲಯದ 5 ದೇಶಗಳ ಪ್ರತಿನಿಧಿಗಳೂ ಇದರಲ್ಲಿ ಭಾಗಿಯಾಗಲಿದ್ದಾರೆ. ಡೆನ್ಮಾರ್ಕ್, ಐಸ್‌ಲ್ಯಾಂಡ್, ನಾರ್ವೆ, ಸ್ವೀಡನ್ ಮತ್ತು ಫಿನ್‌ಲೆಂಡ್ ಭಾಗಿಯಾಗಲಿರುವ ಈ ಶೃಂಗದಲ್ಲಿ ನವೀಕರಿಸಬಹುದಾದ ಇಂಧನ ಕ್ಷೇತ್ರ, ಅತ್ಯಾಧುನಿಕ ತಾಂತ್ರಿಕತೆ ವಿನಿಮಯ ಮತ್ತು ಬಂಡವಾಳ ಹೂಡಿಕೆ ವಿಚಾರಗಳ ಚರ್ಚೆಗೆ ಬರಲಿವೆ ಎನ್ನಲಾಗಿದೆ. ಭಾರತ-ನಾರ್ವೆ ಶೃಂಗ ಮೊದಲಿಗೆ 2018ರಲ್ಲಿ ಸ್ವೀಡನ್‌ನಲ್ಲಿ, 2ನೇ ಶೃಂಗಸಭೆ 2022ರಲ್ಲಿ ಡೆನ್ಮಾರ್ಕ್‌ನಲ್ಲಿ ಜರುಗಿತ್ತು.

3ನೇ ಶೃಂಗದ ನಿರೀಕ್ಷೆಯಲ್ಲಿರುವ ಪ್ರಧಾನಿ ಮೋದಿ, ಅದರ ಭಾಗವಾಗಿ ಡೆನ್ಮಾರ್ಕ್ ಮತ್ತು ಫಿನ್‌ಲೆಂಡ್ ನಾಯಕರ ಜತೆಗೆ ಈಗಾಗಲೇ ಮಾತುಕತೆ ನಡೆಸಿದ್ದಾರೆ. ಹವಾಮಾನ ಬದಲಾವಣೆ, ಪರಿಸರ ಸಂರಕ್ಷಣೆ ವಿಚಾರದಲ್ಲಿ ಈ ದೇಶಗಳ ಪಾತ್ರ ಪ್ರಧಾನಿ ಮೋದಿ ಅವರ ಗಮನ ಸೆಳೆದಿದೆ. ಹಾಗಾಗಿಯೇ ಈ ಎರಡೂ ದೇಶಗಳ ಜತೆಗೆ 2020ರಲ್ಲಿ ಭಾರತ ಒಡಂಬಡಿಕೆ ಮಾಡಿಕೊಂಡಿದೆ.

ಐಎಂಇಸಿ ಶೃಂಗಸಭೆ: ಪ್ರಧಾನಿ ಮೋದಿ 22ಕ್ಕೆ ಸೌದಿ ಅರೇಬಿಯ

ಯೂರೋಪ್‌ನ ತ್ರಿರಾಷ್ಟ್ರ ಪ್ರವಾಸಕ್ಕೂ ಮುನ್ನ, 'ಇಂಡಿಯ-ಮಿಡಲ್ ಈಸ್ಟ್- ಯೂರೋಪ್ ಎಕನಾಮಿಕ್ ಕಾರಿಡಾರ್(ಐಎಂಇಸಿ) ಶೃಂಗಸಭೆ'ಗಾಗಿ ಪ್ರಧಾನಿ ಮೋದಿ ಇದೇ 22ರಂದು ಸೌದಿ ಅರೇಬಿಯಾಗೆ ಭೇಟಿ ನೀಡಲಿದ್ದಾರೆ. ಕಾರ್ಯತಂತ್ರ ಪಾಲುದಾರಿಕೆಯನ್ನು ಇನ್ನಷ್ಟು ವಿಸ್ತಾರಗೊಳಿಸುವುದಕ್ಕೆ ಈ ಭೇಟಿ ನಡೆಯುತ್ತಿದೆ. ಇಂಧನ ಕ್ಷೇತ್ರದಲ್ಲಿನ ಸಹಕಾರ ಮತ್ತು ವ್ಯಾಪಾರ ಹಾಗೂ ಭಾರತದಲ್ಲಿ ಸೌದಿ ಅರೇಬಿಯಾ ಬಂಡವಾಳ ಹೂಡಿಕೆ ಹೆಚ್ಚಳ ವಿಚಾರಗಳೂ ಈ ಭೇಟಿಯ ಮುಖ್ಯ ಸಂಗತಿಗಳಾಗಿರಲಿವೆ ಎನ್ನಲಾಗಿದೆ. ಭಾರತದ ಪ್ರಮುಖ ಬಂದರುಗಳಾದ ಮುಂದ್ರಾ, ಕಾಂಡ್ಲಾ, ಜವಾಹರಲಾಲ್ ನೆಹರು ಬಂದರುಗಳನ್ನು ಯುನೈಟೆಡ್ ಅರಬ್ ಎಮಿರೇಟ್ಸ್(ಯುಎಇ)ನ ಫ್ಯುಜೈರಾಹ್, ಖಲೀಫಾ ಬಂದರುಗಳು ಹಾಗೂ ಸೌದಿ ಅರೇಬಿಯಾದ ದಮ್ಮಮ್, ರಾಸ್ ಅಲ್ ಖೈರ್ ಬಂದರುಗಳ ಜತೆಗೆ ನೇರ ಸಂಪರ್ಕಗೊಳಿಸುವ ಕುರಿತೂ 'ಐಎಂಇಸಿ ಶೃಂಗಸಭೆ'ಯಲ್ಲಿ ಮಾತುಕತೆ ನಡೆಯಲಿದೆ ಎಂದು ತಿಳಿದುಬಂದಿದೆ.

ಬಾಂಗ್ಲಾದೇಶದ ಹಿಂದೂ ಮುಖಂಡ ಬರ್ಬರ ಹತ್ಯೆ

ಢಾಕಾ/ದೆಹಲಿ: ಬಾಂಗ್ಲಾದೇಶದಲ್ಲಿನ ಅಲ್ಪಸಂಖ್ಯಾತ ಹಿಂದೂ ಮುಖಂಡ ಭಬೇಶ್ ಚಂದ್ರ ರಾಯ್(58) ಅವರನ್ನು ದಿನಜ್‌ಪುರದಲ್ಲಿ ಬರ್ಬರವಾಗಿ ಕೊಲ್ಲಲಾಗಿದೆ. ಭಬೇಶ್ ಬಾಂಗ್ಲಾದೇಶ ಪೂಜಾ ಉದ್ಯಾಪನ್ ಪರಿಷದ್‌ನ ಬೀರಲ್ ಘಟಕದ ಉಪಾಧ್ಯಕ್ಷರಾಗಿದ್ದರು. ಬಾಂಗ್ಲಾದೇಶದಲ್ಲಿನ ಹಿಂದೂ ಸಮುದಾಯದಲ್ಲಿ ಪ್ರಭಾವಿ ವ್ಯಕ್ತಿಯಾಗಿದ್ದರು.

ಢಾಕಾದಿಂದ 330 ಕಿಮೀ ದೂರದಲ್ಲಿರುವ ಬಾಂಗ್ಲಾದೇಶದ ಉತ್ತರ ಭಾಗದ ದಿನಜ್‌ಪುರದಲ್ಲಿ ನೆಲೆಸಿದ್ದ ಭಬೇಶ್ ಅವರನ್ನು ದುಷ್ಕರ್ಮಿಗಳ ತಂಡ, ಮನೆಯಿಂದ ಗುರುವಾರ ರಾತ್ರಿ ಅಪಹರಿಸಿದೆ. ಬಳಿಕ ತೀವ್ರವಾಗಿ ಥಳಿಸಿ, ಹಿಂಸಿಸಿ ಬರ್ಬರವಾಗಿ ಕೊಂದುಹಾಕಿದೆ. ಅಪಹರಣದ ಕೆಲ ಗಂಟೆಗಳ ಬಳಿಕ ನರಬಾರಿ ಗ್ರಾಮದಲ್ಲಿ ರಕ್ತದ ಮಡುವಿನಲ್ಲಿದ್ದ ರಾಯ್ ಮೃತದೇಹ ಪತ್ತೆಯಾಗಿದೆ. ದಿನಜ್‌ಪುರ ಜಿಲ್ಲೆಯ ಬಸುದೇವಪುರದಲ್ಲಿನ ಮನೆಯಲ್ಲಿದ್ದ ರಾಯ್‌ಗೆ ಗುರುವಾರ ರಾತ್ರಿ ಅನಾಮಿಕ ಕರೆ ಬಂದಿದೆ. ನಂತರದ 30 ನಿಮಿಷಗಳಲ್ಲೇ 2 ಮೋಟಾರ್ ಬೈಕ್‌ಗಳಲ್ಲಿ ಮನೆಯ ಬಳಿ ಬಂದ ನಾಲ್ವರು ಮುಸುಕುಧಾರಿಗಳ ತಂಡ ಒಳಕ್ಕೆ ನುಗ್ಗಿ ರಾಯ್ ಅವರನ್ನು ಮನೆಯಿಂದ ಎಳೆದೊಯ್ದಿತು ಎಂದು ಭಬೇಶ್ ಅವರ ಮಡದಿ ಶಾಂತನಾ ರಾಯ್ ಹೇಳಿದ್ದಾರೆ. ಪ್ರಕರಣ ದಾಖಲಿಸಲು ಸಿದ್ಧತೆ ನಡೆದಿದೆ. ದಾಳಿಕೋರರನ್ನು ಗುರುತಿಸಿ ಬಂಧಿಸುವ ಪ್ರಯತ್ನ ಮುಂದುವರಿದಿದೆ ಎಂದು ಬೀರಾಲ್ ಪೊಲೀಸ್ ಠಾಣೆ ಪ್ರಭಾರಿ ಅಧಿಕಾರಿ ಅಬ್ದುಸ್ ಸಬೂರ್ ತಿಳಿಸಿದ್ದಾರೆ.

ದಿನಜ್‌ಪುರ ನಿವಾಸಿ ಭಬೇಶ್ ಚಂದ್ರ ರಾಯ್ ಭೀಕರ ಕೊಲೆ

ಭಾರತ ತೀವ್ರ ಖಂಡನೆ: ಭಬೇಶ್ ಚಂದ್ರ ರಾಯ್ ಹತ್ಯೆಯನ್ನು ಭಾರತ ಶನಿವಾರ ಬಲವಾಗಿ ಖಂಡಿಸಿದೆ. ಇದು ಬಾಂಗ್ಲಾದೇಶದ ಮಧ್ಯಂತರ ಸರಕಾರ ಬಲು ವ್ಯವಸ್ಥಿತವಾಗಿ ನಡೆಸುತ್ತಿರುವ ಅಲ್ಪಸಂಖ್ಯಾತರ ಮೇಲಿನ ವ್ಯವಸ್ಥಿತ ಹಿಂಸೆ, ಕೊಲೆಗಳ ಭಾಗವಾಗಿದೆ. ಮಧ್ಯಂತರ ಸರಕಾರದ ಕೃಪಾಕಟಾಕ್ಷದಲ್ಲಿಯೇ ಹಿಂದೂ ಮುಖಂಡ ಭಬೇಶ್ ಹತ್ಯೆಯಾಗಿದೆ. ಹಿಂದೂಗಳನ್ನು ವ್ಯವಸ್ಥಿತವಾಗಿ ಶೋಷಣೆಗೊಳಪಡಿಸಿ ಕೊಲ್ಲಲಾಗುತ್ತಿದೆ. ಅಲ್ಪಸಂಖ್ಯಾತ ಸಮುದಾಯದವರನ್ನು ರಕ್ಷಿಸುವುದು ಮಧ್ಯಂತರ ಸರಕಾರದ ಜವಾಬ್ದಾರಿ. ಅದನ್ನು ಮತ್ತೊಮ್ಮೆ ನೆನಪಿಸುತ್ತಿದ್ದೇವೆ ಎಂದು ಭಾರತದ ವಿದೇಶಾಂಗ ಸಚಿವಾಲಯ 'ಎಕ್ಸ್' ಸಂದೇಶದಲ್ಲಿ ಹೇಳಿದೆ.

ಕಡೆಗೂ ಕ್ಷಮೆ ಕೇಳುವೆ ಎಂದ ಮೂತ್ರಧಾರಿ ಅನುರಾಗ್

ಮುಂಬೈ: 'ಬ್ರಾಹ್ಮಣರ ಮೇಲೆ ಮೂತ್ರ ವಿಸರ್ಜನೆ ಮಾಡುತ್ತೇನೆ, ಏನಿವಾಗ?' ಎಂದು ಜಾಲತಾಣದಲ್ಲಿ ಹೇಳಿ ಉದ್ಧಟತನ ತೋರಿದ್ದ ಬಾಲಿವುಡ್ ನಿರ್ದೇಶಕ-ನಟ ಅನುರಾಗ್ ಕಶ್ಯಪ್, 'ಬೇಕಿದ್ದರೆ ಕ್ಷಮೆ ಕೇಳುವೆ' ಎಂದು ಶನಿವಾರ ಹೇಳಿದ್ದಾರೆ.

ಉತ್ತರ ಪ್ರದೇಶದ ಕಶ್ಯಪ ಬ್ರಾಹ್ಮಣ ಸಮುದಾಯದ ಬಗ್ಗೆ ಅಸಭ್ಯ ಹೇಳಿಕೆ ನೀಡಿ ಜನಸಮುದಾಯದಲ್ಲಿ ಆಕ್ರೋಶಕ್ಕೆ ಗುರಿಯಾಗಿದ್ದ ಹಿಂದಿ ಚಿತ್ರ ನಿರ್ಮಾಪಕ-ನಿರ್ದೇಶಕ ಅನುರಾಗ್ ಕಶ್ಯಪ್, ತಮ್ಮದೇ ಕುಟುಂಬದ ಸದಸ್ಯರಿಗೆ ಮತ್ತು ಸ್ನೇಹಿತರಿಗೆ 'ಜೀವ ಬೆದರಿಕೆ ಮತ್ತು ಅತ್ಯಾಚಾರದ ಎಚ್ಚರಿಕೆ' ಬರುತ್ತಿವೆ ಎಂದಿದ್ದಾರೆ.

'ನಾನು ಕ್ಷಮೆಯಾಚಿಸುತ್ತಿದ್ದೇನೆ. ನನ್ನ ಹೇಳಿದ ಮಾತಿಗಾಗಿ ಅಲ್ಲ, ತಪ್ಪಾಗಿ ಅರ್ಥೈಸಿದ ಒಂದು ಸಾಲಿಗಾಗಿ ಮತ್ತು ಈಗ ಹರಡುತ್ತಿರುವ ದ್ವೇಷ ಸಂದೇಶಕ್ಕಾಗಿ ಕ್ಷಮೆ ಯಾಚಿಸುವೆ. ಮಗಳು, ಕುಟುಂಬ, ಸ್ನೇಹಿತರು ಮತ್ತು ಸಹೋದ್ಯೋಗಿಗಳಿಗೆ ಅತ್ಯಾಚಾರ ಮತ್ತು ಜೀವ ತೆಗೆವ ಬೆದರಿಕೆ ಕರೆ ಬಂದಿವೆ. ಹಾಗಾಗಿ ಕ್ಷಮೆ ಕೇಳುತ್ತಿದ್ದೇನೆ' ಎಂದಿದ್ದಾರೆ. 'ಆದರೆ, ನಾನು ಹೇಳಿದ ಮಾತನ್ನು ಹಿಂತೆಗೆದುಕೊಳ್ಳಲ್ಲ. ನೀವು ನನ್ನನ್ನು ಎಷ್ಟಾದರೂ ನಿಂದಿಸಿ. ಕ್ಷಮೆ ಯಾಚಿಸಲೇಬೇಕೆಂದು ನೀವು ಒತ್ತಾಯಿಸಿದರೆ ಕ್ಷಮೆ ಕೇಳುವೆ ಅಷ್ಟೆ' ಎಂದು ಉದ್ಧಟತನ ಮುಂದುವರಿಸಿದ್ದಾರೆ.

ಸಾಮಾಜಿಕ ಮಾಧ್ಯಮ ಬಳಕೆದಾರರೊಬ್ಬರಿಗೆ ನೀಡಿದ ಉತ್ತರದಲ್ಲಿ ಕಶ್ಯಪ್ ಬ್ರಾಹ್ಮಣ ಸಮುದಾಯದ ಬಗ್ಗೆ ಅನುರಾಗ್ ಅಸಂಬದ್ಧ ಹೇಳಿಕೆ ನೀಡಿ, ಆ ಬಳಿಕ 'ತಪ್ಪಾಗಿ ಅರ್ಥೈಸಲಾಗಿದೆ' ಎಂದಿದ್ದರು. ಅನುರಾಗ್ ಕಶ್ಯಪ್ ಬಂಧಿಸಿ ಎಂಬ ಕೂಗು ಜಾಲತಾಣದಲ್ಲಿ ಜೋರಾಗಿದೆ. ವಿವಾದಾತ್ಮಕ ಚಿತ್ರ ನಿರ್ದೇಶಕನ ವಿರುದ್ಧ ಮುಂಬೈ ಪೊಲೀಸ್ ಠಾಣೆಯಲ್ಲಿ ದೂರೂ ದಾಖಲಾಗಿದೆ.

ನಟಿ ವಿನ್ಸಿ ಅಲೋಶಿಯಸ್ ದೂರು ಹಿನ್ನೆಲೆ

ಮಲಯಾಳಂ ಮಾದಕ ನಟ ಶೈನ್ ಟಾಮ್ ಚಾಕೊ ಸೆರೆ

ಕೊಚ್ಚಿ: ಮಾದಕವಸ್ತು ಸೇವಿಸಿ ಮಲಯಾಳಂ ಸಿನಿಮಾವೊಂದರ ಚಿತ್ರೀಕರಣ ಸಂದರ್ಭ ನಟಿ ವಿನ್ಸಿ ಅಲೋಶಿಯಸ್ ಮತ್ತು ಸಹ ಕಲಾವಿದರ ಜತೆ ಅಸಭ್ಯವಾಗಿ ವರ್ತಿಸಿ ತೊಂದರೆ ಕೊಟ್ಟ ಆರೋಪ ಕೇಳಿಬಂದಿದ್ದ ಮಲಯಾಳಂ ಚಿತ್ರನಟ ಶೈನ್ ಟಾಮ್ ಚಾಕೊರನ್ನು ಕೊಚ್ಚಿ ಪೊಲೀಸರು ಶನಿವಾರ ಬಂಧಿಸಿದ್ದಾರೆ.

ಪೊಲೀಸರು ನೋಟಿಸ್ ನೀಡಿದ್ದರಿಂದ ನಟ ಚಾಕೊ ಶನಿವಾರ ಕೊಚ್ಚಿ ನಗರ ಪೊಲೀಸರೆದುರು ವಿಚಾರಣೆಗೆ ಹಾಜರಾದರು. ಕೊಚ್ಚಿ ನಗರದ ಹೋಟೆಲೊಂದರ ಮೇಲೆ ಮಾದಕವಸ್ತು ನಿಗ್ರಹ ದಳ ಅಧಿಕಾರಿಗಳು ಬುಧವಾರ ರಾತ್ರಿ ದಾಳಿ ನಡೆಸಿದಾಗ ಪರಾರಿಯಾಗಿದ್ದ ಪ್ರಕರಣ ಸಂಬಂಧ ನಟ ಶೈನ್‌ರನ್ನು ಮೊದಲು ವಶಕ್ಕೆ ಪಡೆದು 4 ಗಂಟೆಗಳ ಕಾಲ ವಿಚಾರಣೆ ನಡೆಸಿದ ಪೊಲೀಸರು, ಬಳಿಕ ಬಂಧಿಸಿದರು.

ನಟನ ವಿರುದ್ಧ ಮಾದಕದ್ರವ್ಯ ಮತ್ತು ಮನೋವಿಕೃತಿ ಪದಾರ್ಥಗಳ(ಎನ್‌ಡಿಪಿಎ) ಕಾಯ್ದೆಯ ಸೆಕ್ಷನ್ 27 ಮತ್ತು 29ರಡಿ ಪ್ರಕರಣ ದಾಖಲಿಸಲಾಗಿದೆ. ವೈದ್ಯಕೀಯ ಪರೀಕ್ಷೆಗೊಳಪಡಿಸಿ ಕಾನೂನು ಪ್ರಕಾರ ಕ್ರಮ ಕೈಗೊಳ್ಳಲಾಗುವುದು ಎಂದು ಪೊಲೀಸರು ತಿಳಿಸಿದ್ದಾರೆ.

ಸಿನಿಮೀಯ: ಪೊಲೀಸ್ ತಂಡ ಹೋಟೆಲ್ ಮೇಲೆ ದಾಳಿ ಮಾಡಿದಾಗ 3ನೇ ಮಹಡಿಯ ಕೊಠಡಿಯಲ್ಲಿದ್ದ ನಟ ಶೈನ್, ಸಿನಿಮೀಯ ಶೈಲಿಯಲ್ಲಿ ಕಿಟಕಿಯಿಂದ 2ನೇ ಮಹಡಿಗೆ ಜಿಗಿದು, ಬಳಿಕ 'ಈಜುಕೊಳ'ಕ್ಕೆ ಹಾರಿ ಓಡಿಹೋಗಿದ್ದರು ಎಂದು ತಿಳಿದುಬಂದಿದೆ.

ಮರಿಗಳು ಸೇರಿ ಸದ್ಯ ದೇಶದಲ್ಲಿವೆ 26 ಚೀತಾ

ಬೋಟ್ಸುವಾನಾದಿಂದ 8 ಚೀತಾ

ಭೋಪಾಲ್: ದಕ್ಷಿಣ ಆಫ್ರಿಕಾದ ಬೋಟ್ಸುವಾನಾದಿಂದ ಭಾರತಕ್ಕೆ 8 ಚೀತಾ ಬರುತ್ತಿವೆ. ಅದರಲ್ಲಿ 4 ಚೀತಾಗಳನ್ನು ಮೇ ತಿಂಗಳಲ್ಲಿ ಕರೆತರಲಾಗುವುದು ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಕೀನ್ಯಾ ಮತ್ತು ಬೊಟ್ಸುವಾನಾದಿಂದ ಹೆಚ್ಚಿನ ಚೀತಾಗಳನ್ನು ಭಾರತಕ್ಕೆ ಕರೆತರುವ ಪ್ರಯತ್ನ ನಡೆದಿದ್ದು, 2 ಹಂತಗಳಲ್ಲಿ ಕಾರ್ಯಗತವಾಗಲಿದೆ. ಈ ಸಂಬಂಧ ಭಾರತ-ಕೀನ್ಯಾ ನಡುವೆ ಒಪ್ಪಂದವಾಗುತ್ತಿದೆ ಎಂದು ಕೇಂದ್ರ ಪರಿಸರ-ಅರಣ್ಯ ಸಚಿವ ಭೂಪೇಂದರ್ ಯಾದವ್ ಮತ್ತು ಮಧ್ಯಪ್ರದೇಶ ಮುಖ್ಯಮಂತ್ರಿ ಮೋಹನ್ ಯಾದವ್ ಸಮ್ಮುಖ ಚೀತಾ ಯೋಜನೆಯ ಪರಿಶೀಲನಾ ಸಭೆಯಲ್ಲಿ ರಾಷ್ಟ್ರೀಯ ಹುಲಿ ಸಂರಕ್ಷಣಾ ಪ್ರಾಧಿಕಾರದ ಅಧಿಕಾರಿಗಳು ಮಾಹಿತಿ ನೀಡಿದ್ದಾರೆ.

ಗಾಂಧಿ ಸಾಗರ್ ಅಭಯಾರಣ್ಯದಲ್ಲಿನ ಚೀತಾಗಳನ್ನು ಹಂತ ಹಂತವಾಗಿ ಸ್ಥಳಾಂತರಿಸಲಾಗುವುದು. ಗಾಂಧಿ ಸಾಗರ್ ಅಭಯಾರಣ್ಯ, ರಾಜಸ್ಥಾನ ಗಡಿಗೆ ಹೊಂದಿಕೊಂಡಿದೆ. ರಾಜಸ್ಥಾನ-ಮಧ್ಯಪ್ರದೇಶ ನಡುವೆ ಅಂತಾರಾಜ್ಯ ಚಿರತೆ ಸಂರಕ್ಷಣೆ ಪ್ರದೇಶ ಒಪ್ಪಂದವಾಗಲಿದೆ ಎಂದು ಅಧಿಕಾರಿಗಳು ಮಾಹಿತಿ ನೀಡಿದ್ದಾರೆ.

ಸಫಾರಿಗೆ ಮನವಿ: ಕುನೋದಲ್ಲಿ ಚೀತಾ ಸಫಾರಿ ನಿರ್ಮಿಸಲು ಅನುಮತಿ ಕೋರಿ ಮಧ್ಯಪ್ರದೇಶ ಸರಕಾರ ಸುಪ್ರೀಂಕೋರ್ಟ್‌ಗೆ ಮನವಿ ಮಾಡಿದ್ದು, ಅರ್ಜಿ ವಿಚಾರಣೆ ಬಾಕಿ ಇದೆ. ದಕ್ಷಿಣ ಆಫ್ರಿಕಾದ ನಮಿಬಿಯಾದಿಂದ 2022ರ ಸೆಪ್ಟೆಂಬರ್‌ನಲ್ಲಿ ಎಂಟು, 2023ರ ಫೆಬ್ರವರಿಯಲ್ಲಿ 12 ಚೀತಾಗಳನ್ನು ತರಲಾಗಿದ್ದು, ಕೆಲ ಚೀತಾಗಳು ಪರಿಸರಕ್ಕೆ ಹೊಂದಿಕೊಳ್ಳಲಾಗದೇ ಸಾವನ್ನಪ್ಪಿದವು. ಜ್ವಾಲಾ, ಆಶಾ, ಗಮಿನಿ ಮತ್ತು ವೀರಾ ಚೀತಾಗಳು ಮರಿಗಳಿಗೆ ಜನ್ಮ ನೀಡಿದ್ದು, ಮರಿಗಳು ಸೇರಿ ಸದ್ಯ ದೇಶದಲ್ಲಿ 26 ಚೀತಾಗಳಿವೆ. ದೊಡ್ಡ ಚೀತಾಗಳ ಕೊರಳಿಗೆ ಸ್ಯಾಟಲೈಟ್ ಕಾಲರ್ ಐಡಿ ಅಳವಡಿಸಲಾಗಿದೆ. 16 ಚೀತಾ ಮುಕ್ತ ಅರಣ್ಯದಲ್ಲಿ, 10 ಪುನರ್ವಸತಿ ಕೇಂದ್ರದಲ್ಲಿವೆ. ದೇಶದಲ್ಲಿ ಚೀತಾ ಯೋಜನೆಗೆ ಈವರೆಗೆ ಒಟ್ಟು 112 ಕೋಟಿ ರು. ವ್ಯಯಿಸಲಾಗಿದೆ.



ಔರಂಗಜೇಬ್, ಬಾಬರ್ ವೈಭವೀಕರಣ ದೇಶದ ಮುಸ್ಲಿಮರಿಗೆ ಅಪಮಾನ: ಸಿಂಗ್

ಛತ್ರಪತಿ ಸಂಭಾಜಿನಗರ: ಮಹಾರಾಣಾ ಪ್ರತಾಪ್ ಮತ್ತು ಛತ್ರಪತಿ ಶಿವಾಜಿ ಮಹಾರಾಜರು ರಾಷ್ಟ್ರೀಯ ವೀರರು, ಮೊಘಲ್ ಚಕ್ರವರ್ತಿ ಔರಂಗಜೇಬ ಧರ್ಮಾಂಧ, ಕ್ರೂರಿ ಎಂದು ರಕ್ಷಣಾ ಸಚಿವ ರಾಜನಾಥ್ ಸಿಂಗ್ ಹೇಳಿದ್ದಾರೆ.

ಮಹಾರಾಷ್ಟ್ರದ ಛತ್ರಪತಿ ಸಂಭಾಜಿನಗರದಲ್ಲಿ ಮೇವಾಡ್ ದೊರೆ ಮಹಾರಾಣಾ ಪ್ರತಾಪ್ ಅವರ ಆಳೆತ್ತರದ ಪ್ರತಿಮೆ ಅನಾವರಣಗೊಳಿಸಿ ಮಾತನಾಡಿದ ಸಿಂಗ್, ಬಾಬರ್, ತೈಮೂರ್, ಔರಂಗಜೇಬ್, ಘೋರಿ, ಘಜನಿಯನ್ನು ವೈಭವೀಕರಿಸುವುದು ಭಾರತದ ಮುಸ್ಲಿಮರನ್ನು ಅವಮಾನಿಸಿದಂತೆ ಎಂದರು. ಶಿವಾಜಿ ಮಹಾರಾಜರು ಗೆರಿಲ್ಲಾ ಯುದ್ಧ ತಂತ್ರಗಳಿಗಾಗಿ ಮಹಾರಾಣಾ ಪ್ರತಾಪ್ ಅವರ ಸ್ಫೂರ್ತಿ ಪಡೆದರು. ಮಹಾರಾಣಾ ಪ್ರತಾಪ್ ಅವರು ಧೈರ್ಯ ಮತ್ತು ದೇಶಭಕ್ತಿಯ ಸಂಕೇತ. ಎಡಪಂಥೀಯ ಇತಿಹಾಸಕಾರರು ರಾಣಾ ಪ್ರತಾಪ್ ಮತ್ತು ಶಿವಾಜಿ ಮಹಾರಾಜರಿಗೆ ಮನ್ನಣೆ ನೀಡದೇ ಔರಂಗಜೇಬನನ್ನು ಶ್ಲಾಘಿಸಿದರು. ಆದರೆ, ಪಂಡಿತ್ ಜವಾಹರಲಾಲ್ ನೆಹರು ಅವರು ಔರಂಗಜೇಬನನ್ನು ಧರ್ಮಾಂಧ, ಕ್ರೂರ ಆಡಳಿತಗಾರ ಎಂದೇ ಬರೆದಿದ್ದಾರೆ ಎಂದು ಸಿಂಗ್ ಹೇಳಿದ್ದಾರೆ.

ಮಹಾರಾಣಾ ಪ್ರತಾಪ್ ಪ್ರತಿಮೆ ಅನಾವರಣಗೊಳಿಸಿದ ರಕ್ಷಣಾ ಸಚಿವ ರಾಜನಾಥ್ ಸಿಂಗ್ ಮಾಲಾರ್ಪಣೆ ಮಾಡಿದರು.

ದೆಹಲಿ 4 ಮಹಡಿ ಕಟ್ಟಡ ಕುಸಿದು 11 ಮಂದಿ ಬಲಿ

ದೆಹಲಿ: ಈಶಾನ್ಯ ದೆಹಲಿಯ ಶಕ್ತಿ ವಿಹಾರದ ಮುಸ್ತಾಫಾಬಾದ್ ಪ್ರದೇಶದಲ್ಲಿನ 4 ಅಂತಸ್ತಿನ ಕಟ್ಟಡವೊಂದು ಶನಿವಾರ ನಸುಕಿನಲ್ಲಿ ದಿಢೀರ್ ಕುಸಿದು ಬಿದ್ದಿದ್ದರಿಂದ ಕಟ್ಟಡದ ಮಾಲೀಕ ಸೇರಿದಂತೆ 11 ಮಂದಿ ದುರ್ಮರಣಕ್ಕೀಡಾದರು.

4 ಮಹಡಿಗಳ ಕಟ್ಟಡದಲ್ಲಿ ಹಲವು ಮನೆಗಳಿದ್ದು, ನಿವಾಸಿಗಳೆಲ್ಲರೂ ಸುಖ ನಿದ್ರೆಯಲ್ಲಿದ್ದರು. ನಸುಕಿನ 2.50ರಲ್ಲಿ ಇಡೀ ಕಟ್ಟಡ ಹಠಾತ್ ಕುಸಿದುಬಿದ್ದಾಗ 22 ಜನರು ಅವಶೇಷಗಳಡಿ ಸಿಲುಕಿಕೊಂಡರು. ಕಟ್ಟಡದ ಮಾಲೀಕ, 60 ವರ್ಷದ ತೆಹ್ಸೀನ್ ಸ್ಥಳದಲ್ಲೇ ಸಾವಿಗೀಡಾದರು. ಕಟ್ಟಡ ಕುಸಿತದಲ್ಲಿ ಪ್ರಾಣಬಿಟ್ಟ 11 ಮಂದಿಯಲ್ಲಿ 8 ಮಂದಿ ಒಂದೇ ಕುಟುಂಬಕ್ಕೆ ಸೇರಿದವರು. ನಾಲ್ಕು ಮಕ್ಕಳು, ಮೂವರು ಮಹಿಳೆಯರು ಮೃತರಲ್ಲಿ ಸೇರಿದ್ದಾರೆ. ಇತರೆ 11 ಮಂದಿಗೆ ಗಾಯಗಳಾಗಿದ್ದು, ಸಮೀಪದ ಜಿಟಿಬಿ ಆಸ್ಪತ್ರೆಯಲ್ಲಿ 6 ಮಂದಿ ಹೊರರೋಗಿಗಳಾಗಿ ಚಿಕಿತ್ಸೆ ಪಡೆದು ಮನೆಗೆ ಮರಳಿದ್ದಾರೆ. ಉಳಿದ ಐವರಿಗೆ ತೀವ್ರ ಸ್ವರೂಪದ ಗಾಯಗಳಾಗಿದ್ದು, ಚಿಕಿತ್ಸೆ ಮುಂದುವರಿದಿದೆ.

ಕಟ್ಟಡ ಉರುಳಿದಾಗ ಭಾರೀ ಶಬ್ದ ಕೇಳಿಬಂದಿದ್ದರಿಂದ ನೆರೆಹೊರೆಯವರೆಲ್ಲಾ ದಡಬಡಿಸಿ ಎದ್ದು ಹೊರಗೋಡಿ ಬಂದರು. ಅವರಿಗೆ ಪಕ್ಕದಲ್ಲಿದ್ದ 4 ಮಹಡಿ ಕಟ್ಟಡ ಧರಾಶಾಯಿಯಾಗಿರುವುದು ಕಂಡಿದೆ. ಅಗ್ನಿಶಾಮಕ ದಳಕ್ಕೆ ಕರೆ ಮಾಡಿದ ನೆರೆಹೊರೆಯವರು, ತಕ್ಷಣವೇ ರಕ್ಷಣಾ ಕಾರ್ಯ ಆರಂಭಿಸಿದ್ದಾರೆ. ಎನ್‌ಡಿಆರ್‌ಎಫ್ ತಂಡವೂ ಧಾವಿಸಿ ರಕ್ಷಣಾ ಕಾರ್ಯ ನಡೆಸಿದೆ.

ಉಪಾಧ್ಯಕ್ಷ ಜೆ.ಡಿ.ವ್ಯಾನ್ಸ್ ಕುಟುಂಬ ನಾಳೆ ಭಾರತಕ್ಕೆ

ಲಖನೌ: ಅಮೆರಿಕ ಉಪಾಧ್ಯಕ್ಷ ಜೆ.ಡಿ.ವ್ಯಾನ್ಸ್ ಅವರು ಭಾರತ ಮೂಲದ ಪತ್ನಿ ಉಷಾ ಮತ್ತು 3 ಮಕ್ಕಳ ಜತೆಗೂಡಿ ಸೋಮವಾರ ಭಾರತಕ್ಕೆ ಆಗಮಿಸುತ್ತಿದ್ದಾರೆ. ಮೊದಲಿಗೆ ಸೋಮವಾರ ರಾತ್ರಿ ಜೈಪುರಕ್ಕೆ ತೆರಳಲಿರುವ ವ್ಯಾನ್ಸ್ ಮತ್ತು ಕುಟುಂಬ, ನಾಲ್ಕು ದಿನಗಳ ಭಾರತ ಪ್ರವಾಸ ಕಾಲದಲ್ಲಿ ಐತಿಹಾಸಿಕ ಸ್ಥಳಗಳಿಗೆ ಭೇಟಿ ನೀಡಲಿದ್ದಾರೆ. ಎರಡು ದಿನಗಳ ಕಾಲ ರಾಜಸ್ಥಾನದಲ್ಲಿದ್ದು ಹಲವು ಸ್ಥಳಗಳಿಗೆ ಭೇಟಿ ನೀಡಿ ಸಾಂಸ್ಕೃತಿಕ ಶ್ರೀಮಂತಿಕೆಯನ್ನು ವೀಕ್ಷಿಸಲಿದ್ದಾರೆ. ಏ.23ರಂದು ಆಗ್ರಾಗೆ ತೆರಳಿ ತಾಜ್ ಮಹಲ್ ವೀಕ್ಷಿಸಲಿದ್ದಾರೆ. ಆಬಳಿಕ, ದೆಹಲಿಯಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರನ್ನೂ ಭೇಟಿ ಆಗಲಿದ್ದಾರೆ. ರಾಷ್ಟ್ರಪತಿ ದ್ರೌಪದಿ ಮುರ್ಮು, ವಿದೇಶಾಂಗ ಸಚಿವ ಜೈಶಂಕರ್ ಸೇರಿದಂತೆ ಹಲವರನ್ನು ಪ್ರತ್ಯೇಕವಾಗಿ ಭೇಟಿಯಾಗಲಿದ್ದಾರೆ.

ಉತ್ತರ ಪ್ರದೇಶ ಸರಕಾರ ಮತ್ತು ಆಗ್ರಾ ಜಿಲ್ಲಾಡಳಿತ ಅಮೆರಿಕದ ಉಪಾಧ್ಯಕ್ಷರ ಭೇಟಿಗೆ ಸಿದ್ಧತೆ ಕೈಗೊಂಡಿದೆ. ಮುಖ್ಯಮಂತ್ರಿ ಯೋಗಿ ಆದಿತ್ಯನಾಥ್ ಬುಧವಾರ ಆಗ್ರಾದಲ್ಲಿ ಅಮೆರಿಕದ ಉಪಾಧ್ಯಕ್ಷರನ್ನು ಸ್ವಾಗತಿಸಲಿದ್ದಾರೆ. ಯುಎಸ್ ಕಮಾಂಡೋ ಪಡೆಯ ವಿಶೇಷ ತುಕಡಿ ಮಂಗಳವಾರ ಆಗ್ರಾದಲ್ಲಿ ಲ್ಯಾಂಡ್ ಆಗಲಿದೆ.

ಮುರ್ಷಿದಾಬಾದ್‌ಗೆ ಮಹಿಳಾ ಆಯೋಗ

ಮುರ್ಷಿದಾಬಾದ್: ಪಶ್ಚಿಮ ಬಂಗಾಳದಲ್ಲಿ ಮುಸ್ಲಿಂ ಪ್ರಾಬಲ್ಯದ ಮುರ್ಷಿದಾಬಾದ್ ಜಿಲ್ಲೆಯಲ್ಲಿ ಹಿಂಸಾಚಾರ, ಲೈಂಗಿಕ ಕಿರುಕುಳಕ್ಕೆ ಒಳಗಾಗಿ ಮನೆ ತೊರೆದು ನದಿಯಾಚೆಗಿನ ಗ್ರಾಮದಲ್ಲಿನ ಸರಕಾರಿ ಶಾಲೆಯಲ್ಲಿ ಆಶ್ರಯ ಪಡೆದಿರುವ ಹಿಂದೂ ಸಮುದಾಯದವರನ್ನು ರಾಷ್ಟ್ರೀಯ ಮಹಿಳಾ ಆಯೋಗದ (ಎನ್‌ಸಿಡಬ್ಲ್ಯು) ಅಧ್ಯಕ್ಷೆ ವಿಜಯಾ ರಹತ್ಕರ್ ನೇತೃತ್ವದ ನಿಯೋಗ ಶನಿವಾರ ಭೇಟಿ ಮಾಡಿ ಸಮಸ್ಯೆ ಆಲಿಸಿತು. ಭವಿಷ್ಯದಲ್ಲಿ ಅವರ ಸುರಕ್ಷತೆಗಾಗಿ ಕೇಂದ್ರ ಸರಕಾರ ಅಗತ್ಯವಾದ ಎಲ್ಲಾ ಕ್ರಮಗಳನ್ನೂ ತೆಗೆದುಕೊಳ್ಳುತ್ತದೆ ಎಂದು ಭರವಸೆ ನೀಡಿತು.

ಲೈಂಗಿಕ ಕಿರುಕುಳಕ್ಕೆ ಒಳಗಾದ ಮಹಿಳೆಯರು ವಿಜಯಾ ಅವರ ಬಳಿ ನೋವು ತೋಡಿಕೊಂಡರು. ಸ್ವಂತ ಮನೆ ತೊರೆಯಬೇಕಾಗಿ ಬಂದ ತಮ್ಮ ದುಃಸ್ಥಿತಿಯನ್ನು ವಿವರಿಸುತ್ತಾ ಕಣ್ಣೀರಾದರು. ಏ.11-12ರಂದು ಮುರ್ಷಿದಾಬಾದ್‌ನ ಶಂಶೇರ್‌ಗಂಜ್, ಸುಟಿ, ಧುಲಿಯನ್ ಮತ್ತು ಜಂಗಿಪುರದಲ್ಲಿ ವಕ್ಫ್ ಪ್ರತಿಭಟನೆ ನೆಪದಲ್ಲಿ ಹಿಂಸಾಚಾರ ನಡೆದಿದೆ.

ಜಿಲ್ಲೆಯ ಆಯ್ದ ಪ್ರದೇಶಗಳಲ್ಲಿ ಶಾಶ್ವತವಾದ 'ಗಡಿ ಭದ್ರತಾ ಪಡೆ'(ಬಿಎಸ್‌ಎಫ್) ಶಿಬಿರಗಳನ್ನು ಸ್ಥಾಪಿಸಬೇಕು ಮತ್ತು ಮೂರು ಜೀವಗಳನ್ನು ಬಲಿ ಪಡೆದ ಕೋಮು ಘರ್ಷಣೆಗಳ ಬಗ್ಗೆ ರಾಷ್ಟ್ರೀಯ ತನಿಖಾ ಸಂಸ್ಥೆ(ಎನ್‌ಐಎ)ಯಿಂದಲೇ ತನಿಖೆ ನಡೆಸಬೇಕೆಂದು ಒತ್ತಾಯಿಸಿದರು. ದೇಶ ಮತ್ತು ಆಯೋಗ ನಿಮ್ಮೆಲ್ಲರೊಂದಿಗಿದೆ. ಆಯೋಗ ಇಲ್ಲಿನ ಸ್ಥಿತಿಗತಿಯ ವರದಿಯನ್ನು ಕೇಂದ್ರಕ್ಕೆ ಸಲ್ಲಿಸಲಿದೆ. ಕೇಂದ್ರ ಸರಕಾರ ನೊಂದ ಜನರ ಪರವಾಗಿ ಇದೆ. ಚಿಂತೆ ಮಾಡಬೇಡಿ ಎಂದು ಸಂತ್ರಸ್ತರಿಗೆ ವಿಜಯಾ ಧೈರ್ಯ ಹೇಳಿದರು.

ಮುರ್ಷಿದಾಬಾದ್‌ನಲ್ಲಿ ಲೈಂಗಿಕ ಕಿರುಕುಳ, ಹಿಂಸೆಗೊಳಗಾಗಿ ಮನೆ ತೊರೆದ ಹಿಂದೂ ಮಹಿಳೆಯರಲ್ಲಿ ಒಬ್ಬರು ವಿಜಯಾ ರಹತ್ಕರ್ ಅವರನ್ನು ತಬ್ಬಿ ಕಣ್ಣೀರಿಟ್ಟರು.

ರಾಷ್ಟ್ರಪತಿ ಆಡಳಿತಕ್ಕೆ ಆಗ್ರಹ

ಮುರ್ಷಿದಾಬಾದ್‌ನಲ್ಲಿ ವಿಶ್ವ ಹಿಂದೂ ಪರಿಷತ್ ಸೇರಿದಂತೆ ವಿವಿಧ ಹಿಂದೂ ಸಂಘಟನೆಗಳು ಶನಿವಾರ ಪ್ರತಿಭಟನೆ ನಡೆಸಿದವು. ಪಶ್ಚಿಮ ಬಂಗಾಳದಲ್ಲಿ ಕಾನೂನು-ಸುವ್ಯವಸ್ಥೆ ಹದಗೆಟ್ಟಿದೆ. ರಾಜ್ಯದ ಪೊಲೀಸರು ಹಿಂಸೆ ತಡೆಯದೇ ನಿಷ್ಕ್ರಿಯರಾಗಿದ್ದಾರೆ. ಹಾಗಾಗಿ, ರಾಜ್ಯದಲ್ಲಿ ರಾಷ್ಟ್ರಪತಿ ಆಡಳಿತ ಜಾರಿಗೆ ತರಬೇಕು ಎಂದು ಪ್ರತಿಭಟನಾಕಾರರು ಆಗ್ರಹಿಸಿದರು.

ಕೆನಡಾದಲ್ಲಿ ಪಂಜಾಬ್ ಯುವತಿ ಗುಂಡಿಗೆ ಬಲಿ

ಹ್ಯಾಮಿಲ್ಟನ್: ಕೆನಡಾದ ಒಂಟಾರಿಯೊ ಪ್ರಾಂತ್ಯದ ಹ್ಯಾಮಿಲ್ಟನ್‌ನಲ್ಲಿ ಆಕಸ್ಮಿಕ ಗುಂಡೇಟಿನಿಂದ ಭಾರತ ಮೂಲದ ವಿದ್ಯಾರ್ಥಿನಿ ಸಾವನ್ನಪ್ಪಿದ್ದಾಳೆ ಎಂದು ಕೆನಡಾ ಪೊಲೀಸರು ತಿಳಿಸಿದ್ದಾರೆ.

ಹರ್‌ಸಿಮ್ರತ್ ಕೌರ್ ರಾಂಧವಾ(21), ಪಂಜಾಬ್ ರಾಜ್ಯದ ತರಣ್ ತರಣ್ ಜಿಲ್ಲೆಯ ಗೋಯಿಂಡ್ವಾಲ್ ಸಾಹಿಬ್ ಸಮೀಪದ ಧುಂಡಾ ಗ್ರಾಮದ ನಿವಾಸಿ. ವ್ಯಾಸಂಗಕ್ಕಾಗಿ ಕೆನಡಾಕ್ಕೆ ತೆರಳಿದ್ದ ಕೌರ್, ಒಂಟಾರಿಯೊದ ಹ್ಯಾಮಿಲ್ಟನ್‌ನ ಬಸ್ ನಿಲ್ದಾಣದಲ್ಲಿ ಗುರುವಾರ ರಾತ್ರಿ ನಿಂತಿದ್ದಾಗ ಗುರಿ ತಪ್ಪಿ ಬಂದ ಗುಂಡು ನೇರ ತಗುಲಿ ರಕ್ತದ ಮಡುವಿನಲ್ಲಿ ಬಿದ್ದಿದ್ದಾಳೆ. ತಕ್ಷಣ ಆಸ್ಪತ್ರೆಗೆ ಕರೆದೊಯ್ದರೂ ಚಿಕಿತ್ಸೆಗೆ ಸ್ಪಂದಿಸದೇ ಸಾವನ್ನಪ್ಪಿದ್ದಾಳೆ.

ಕಪ್ಪು ಬಣ್ಣದ ಕಾರಿನಲ್ಲಿದ್ದನು ಬಿಳಿ ಸೆಡಾನ್ ಕಾರಿನಲ್ಲಿದ್ದವರ ಮೇಲೆ ಗುಂಡು ಹಾರಿಸಿದ. ಆ ಗುಂಡು ಕೌರ್‌ಗೆ ತಗುಲಿದೆ. ಬಳಿಕ ಎರಡೂ ಕಾರುಗಳು ಸ್ಥಳದಿಂದ ಹೊರಟುಹೋದವು ಎಂದು ತಿಳಿದುಬಂದಿದೆ. ಕೌರ್, ಉನ್ನತ ವ್ಯಾಸಂಗಕ್ಕಾಗಿ ಕೆನಡಾಕ್ಕೆ ಹೋಗಿದ್ದಳು. ಬಸ್‌ಗೆ ಕಾಯುತ್ತಿದ್ದಾಗ ಗುಂಡು ತಗುಲಿ ಸಾವನ್ನಪ್ಪಿದಳು ಎಂದು ಅಜ್ಜ ಸುಖ್ವಿಂದರ್ ಸಿಂಗ್ ಕಣ್ಣೀರಾಗಿದ್ದಾರೆ. ವಿದ್ಯಾರ್ಥಿನಿ ಆಕಸ್ಮಿಕವಾಗಿ ಗುಂಡೇಟಿನಿಂದ ಮಡಿದ ಘಟನೆಯ ತನಿಖೆ ಆರಂಭಿಸಿರುವ ಪೊಲೀಸರು, ಶಂಕಿತರನ್ನು ಗುರುತು ಪತ್ತೆಗೆ ಯತ್ನಿಸುತ್ತಿದ್ದು, ಸಿಸಿಟಿವಿ ದೃಶ್ಯಾವಳಿ ಪರಿಶೀಲಿಸುತ್ತಿದ್ದಾರೆ.

ಸಮಾಚಾರ ಸಣ್ಣದಲ್ಲ

ವಕೀಲರ ಸಂಘದ ಪದಾಧಿಕಾರಿಗಳ ಆಯ್ಕೆ

ಬಸವನಬಾಗೇವಾಡಿ: ವಕೀಲರ ಸಂಘದ 2025 ರಿಂದ 2027ನೇ ಸಾಲಿನ ಅವಧಿಗಾಗಿ ನಡೆದ ಚುನಾವಣೆಯಲ್ಲಿ ಅಧ್ಯಕ್ಷರಾಗಿ ಎಚ್‌ಎಸ್ ಗುರಡ್ಡಿ, ಉಪಾಧ್ಯಕ್ಷರಾಗಿ ಎಸ್ ಎಲ್ ಗೊಳಸಂಗಿ, ಪಧಾನ ಕಾರ್ಯದರ್ಶಿಯಾಗಿ ವಾಯ್ ಎನ್ ಲಂಕೇನವರ, ಜಂಟಿ ಕಾರ್ಯದರ್ಶಿಯಾಗಿ ಶಿಲ್ಪಾ ಎಚ್ ಮುಚಖಂಡಿ, ಕಜಾಂಚಿಯಾಗಿ ಆರ್ ಬಿ ಕೆಂಬಾವಿ, ಗ್ರಂಥ ಪಾಲಕರು ವ್ಹಿ ಜೆ ಪತ್ತಾರ, ಕಾರ್ಯಕಾರಿ ಸಮಿತಿ ಸದಸ್ಯರಾಗಿ ಶ್ರೀಎ. ಜೆ.ನದಾಫ ಆಯ್ಕೆಯಾಗಿದ್ದಾರೆ ಎಂದು ಚುನಾವಣಾಧಿಕಾರಿ ಜಿ ಆರ್ ಬೀಳಗಿ ಆದೇಶಿಸಿದ್ದಾರೆ ಎಂದು ನ್ಯಾಯವಾದಿ ಸಂಘದ ಅಧ್ಯಕ್ಷ ಎಚ್‌ಎಸ್ ಗುರಡ್ಡಿ ಪ್ರಕಟನೆಯಲ್ಲಿ ತಿಳಿಸಿದ್ದಾರೆ.

ಉಚಿತ ಸಾಮೂಹಿಕ ವಿವಾಹ ಮೇ 18ರಂದು

ಮುದ್ದೇಬಿಹಾಳ: ಉಳ್ಳವರು ಮದುವೆಗಳನ್ನು ಬಹಳ ದುಂದುವೆಚ್ಚಗಳಿಂದ ಕೂಡಿರುತ್ತವೆ ಎಂಬ ಅಪವಾದಗಳ ಮಧ್ಯೆ ಸಾಮಾಜಿಕವಾಗಿಯೂ

ನಾಲ್ಕಾರು ಬಡ ಕುಟುಂಬಗಳಿಗೆ ಮದುವೆ ಭಾರ ಎನಿಸಬಾರದೆಂದು ಸದುದ್ದೇಶದಿಂದ ಇಲ್ಲಿನ ಖ್ಯಾತ ಉದ್ಯಮಿ ಅಹಿಲ್ಯಾ ಬಾಯಿ ಹೋಳ್ಕರ್ ಶಿಕ್ಷಣ ಸಂಸ್ಥೆಯ ಕಾರ್ಯದರ್ಶಿ ಹಾಗೂ ತಾಲೂಕಾ ಕುರುಬರ ಸಮಾಜದ ಅಧ್ಯಕ್ಷ, ಶಿಕ್ಷಣಪ್ರೇಮಿ ಮಲ್ಲಿಕಾರ್ಜುನ ಮದರಿ ಇವರು ತಮ್ಮ ಪುತ್ರನಾದ ಕಿರಣ ಮಲ್ಲಿಕಾರ್ಜುನ ಮದರಿ ಇವರ ವಿವಾಹ ಸಮಾರಂಭದ ಅಂಗವಾಗಿ ಮುದ್ದೇಬಿಹಾಳದಲ್ಲಿ ಉಚಿತ ಸಾಮೂಹಿಕ ವಿವಾಹಗಳನ್ನು ಅಭ್ಯುದಯ ಕಾಲೇಜಿನ ಆವರಣದಲ್ಲಿ ಮೇ 18 ರಂದು ಆಯೋಜಿಸಿದ್ದೇವೆ ಎಂದು ತಿಳಿಸಿದರು. ದಂಪತಿಗಳಿಗೆ ಕಾನೂನುಬದ್ಧ ಮದುವೆಯ ವಯಸ್ಸು ಆಗಿರಬೇಕು. ಮದುವೆ ಆಗುವ ವಧುವರರ ಜೋಡಿಗೆ ತಾಳಿ ಕಾಲುಂಗುರ, ಬಟ್ಟೆ, ನೀಡಲಾಗುತ್ತದೆ. ಜೊತೆಗೆ ದಾಸೋಹ ವ್ಯವಸ್ಥೆಯು ಕೂಡಾ ಇರುತ್ತದೆ. ಈ ಕಾರ್ಯಕ್ರಮದಲ್ಲಿ ನಾಡಿನ ಮಹಾನ್ ಶರಣರು, ಗಣ್ಯರು, ಮದುವೆಯಲ್ಲಿ ಪಾಲ್ಗೊಂಡು ಸಾಕ್ಷೀಕರಿಸಲಿದ್ದಾರೆ ಎಂದು ತಿಳಿಸಿದರು. ಎಪ್ರಿಲ್ 30ರೊಳಗಾಗಿ ಜನ್ಮ ಪ್ರಮಾಣಪತ್ರಗಳನ್ನು ಒದಗಿಸಿ ಮೋ: 9980529772, 9980354710, 9945366630, 9902263548 ಇವುಗಳನ್ನು ಸಂರ್ಕಿಸಬಹುದಾಗಿದೆ ಎಂದು ತಿಳಿಸಿದರು.

ಮೇಸನ್ ಕಿಟ್‌ಗಳಿಗಾಗಿ ಕಾರ್ಮಿಕರಿಂದ ಅರ್ಜಿ

ಸಿಂದಗಿ: ಕಾರ್ಮಿಕ ಇಲಾಖೆ ಹಾಗೂ ಕರ್ನಾಟಕ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿಯಿಂದ ನೋಂದಣಿಯಾದ ಫಲಾನುಭವಿಗಳಿಗೆ ಮೇಸನ್ ಕಿಟ್‌ಗಳನ್ನು ವಿತರಿಸಲು ಅರ್ಜಿ ಆಹ್ವಾನಿಸಲಾಗಿದೆ ಫಲಾನುಭವಿಯ ಚಾಲ್ತಿಯಲ್ಲಿರುವ ಕಾರ್ಮಿಕ ಗುರುತಿನ ಚೀಟಿ, ಆಧಾರ ಕಾರ್ಡ್ ಮತ್ತು ಫಲಾನುಭವಿಯ ಭಾವಚಿತ್ರ, ಸದರಿ ದಾಖಲೆಗಳನ್ನು ಏ.19 ರಿಂದ ಮೇ 3ರ ಒಳಗಾಗಿ ಸಲ್ಲಿಸಬೇಕು ಎಂದು ತಾಲೂಕು ಕಾರ್ಮಿಕ ನಿರೀಕ್ಷರು ತಿಳಿಸಿದ್ದಾರೆ. ಕಟ್ಟಡ ಕಾರ್ಮಿಕರು ನೋಂದಾಯಿಸಿ ಒಂದು ವರ್ಷ ಪೂರ್ಣಗೊಂಡಿರಬೇಕು. ಕಾರ್ಮಿಕ ಗುರುತಿನ ಚೀಟಿ ಚಾಲ್ತಿಯಲ್ಲಿರಬೇಕು. ಕಾರ್ಮಿಕ ಗುರುತಿನ ಚೀಟಿಯಲ್ಲಿ ನಮೂದಿಸಿದ ವೃತ್ತಿಯ ಕಿಟ್‌ಗಳನ್ನು ಮಾತ್ರ ವಿತರಿಸಲಾಗುವುದು. ಹಿಂದಿನ ಅವಧಿಯಲ್ಲಿ ಮೇಸನ್ ಕಿಟ್ ತೆಗೆದುಕೊಂಡವರಿಗೆ ಅವಕಾಶ ಇರುವುದಿಲ್ಲ. ಈ ಷರತ್ತುಗಳ ಅನ್ವಯ ಕಾರ್ಮಿಕ ನಿರೀಕ್ಷಕರ ಕಛೇರಿ, ಸಿಂದಗಿ ವೃತ್ತ, ಬಂದಾಳ ರಸ್ತೆ, ಬಮ್ಮಣ್ಣಿ ಬಿಲ್ಡಿಂಗ್ ಸಿಂದಗಿ ಕಛೇರಿಯಲ್ಲಿ ಅರ್ಜಿ ಸಲ್ಲಿಸಬೇಕು ಎಂದು ಕಟ್ಟಡ ಕಾರ್ಮಿಕರಿಗೆ ತಿಳಿಸಲಾಗಿದೆ. ಸದರಿ ಅವಧಿಯಲ್ಲಿ ಸ್ವೀಕರಿಸಲಾದ ಅರ್ಜಿಗಳನ್ನು ಪರಿಶೀಲಿಸಿ ಜೇಷ್ಠತಾ ಆಧಾರದ ಮೇರೆಗೆ ವಿತರಿಸಲಾಗುವುದು ಎಂದು ಕಾರ್ಮಿಕ ನಿರೀಕ್ಷಕರು, ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಪೆಟ್ರೋಲ್ ಪಂಪ್: ನಿಯಮ ಪಾಲಿಸಿ

ವಿಜಯಪುರ: ಜಿಲ್ಲೆಯ ತಾಲೂಕಾ ಕೇಂದ್ರಗಳಲ್ಲಿ ಹಾಗೂ ರಾಷ್ಟ್ರೀಯ ಹೆದ್ದಾರಿಗಳಲ್ಲಿರುವ ಪೆಟ್ರೋಲ್ ಪಂಪ್‌ಗಳು ಪೆಟ್ರೋಲಿಯಂ ರೂಲ್ಸ್ ಪ್ರಕಾರ ಎಲ್ಲ ನಿಯಮಗಳನ್ನು ಕಟ್ಟುನಿಟ್ಟಾಗಿ ಪಾಲಿಸುವಂತೆ ಜಿಲ್ಲಾಧಿಕಾರಿ ಟಿ.ಭೂಬಾಲನ್ ಅವರು ಸೂಚನೆ ನೀಡಿದ್ದಾರೆ.

ನಿಯಮದಂತೆ ಪೆಟ್ರೋಲ್ ಪಂಪ್‌ಗಳಲ್ಲಿ ಶುದ್ಧ ಕುಡಿಯುವ ನೀರಿನ ವ್ಯವಸ್ಥೆ, ಸುಸಜ್ಜಿತವಾದ ಶೌಚಾಲಯ, ಸ್ನಾನದ ಕೋಣೆ, ಪ್ರಥಮ ಚಿಕಿತ್ಸೆ ಪೆಟ್ಟಿಗೆ, ಅಗ್ನಿ ನಂದಿಸುವ ವಸ್ತುಗಳು, ವಾಹನಗಳಿಗೆ ಏರ ಮಷಿನ್ ಮತ್ತು ನೈಟ್ರೋಜನ್ ಸೇವೆ, ವಾಹನಗಳಿಗೆ ಅಡೆತಡೆಯಾಗದಂತೆ ಒಳಗೆ-ಹೊರಗೆ ಹೋಗಲು ರಸ್ತೆ ಸಂಪರ್ಕ, ಸೂಕ್ತ ಪಾರ್ಕಿಂಗ್ ವ್ಯವಸ್ಥೆ ಸೇರಿದಂತೆ ಗ್ರಾಹಕರಿಗೆ ಸರಿಯಾಗಿ ಅಳತೆ ಮಾಡಿ ಪೆಟ್ರೋಲ್ ಒದಗಿಸುವ ನಿಯಮವನ್ನು ಕಡ್ಡಾಯವಾಗಿ ಪಾಲಿಸುವಂತೆ ಅವರು ಸೂಚನೆ ನೀಡಿದ್ದಾರೆ.

{ಎಂ.ಬಿ.ಪಾಟೀಲ } ಸಚಿವ

ಸಿಎಸ್‌ಆರ್ ಅನುದಾನವನ್ನು ಬಳಕೆ ಮಾಡಿಕೊಂಡು ವಿವಿಧ ಸಾಮಾಜಿಕ, ಅಭಿವೃದ್ಧಿ ಕಾರ್ಯಗಳೊಂದಿಗೆ ಶಿಕ್ಷಣ ಕ್ಷೇತ್ರದಲ್ಲಿ ಬಹಳಷ್ಟು ಬದಲಾವಣೆಗೆ ಕ್ರಮ ವಹಿಸಲಾಗುತ್ತಿದೆ. ಸಮಾಜ ಪ್ರಗತಿಯತ್ತ ಸಾಗಲು ಶಿಕ್ಷಣ ಅತ್ಯವಶ್ಯಕವಾಗಿದೆ. ಈ ನಿಟ್ಟಿನಲ್ಲಿ ಶಿಕ್ಷಣಕ್ಕೆ ಒತ್ತು ನೀಡಲಾಗುತ್ತಿದೆ.

ಕೊಟ್ಯಾಳದಲ್ಲಿ ಸರಕಾರಿ ಶಾಲೆಯ 10 ಶಾಲಾ ಕೊಠಡಿಗಳ ನಿರ್ಮಾಣ | ಸಚಿವ ಎಂಬಿಪಿ

ಅಭಿವೃದ್ಧಿ ಕಾಮಗಾರಿಗೆ ಭೂಮಿಪೂಜೆ

ವಿಜಯಪುರ: ಸಿಎಸ್‌ಆರ್ ಅನುದಾನವನ್ನು ಬಳಕೆ ಮಾಡಿಕೊಂಡು ವಿವಿಧ ಸಾಮಾಜಿಕ, ಅಭಿವೃದ್ಧಿ ಕಾರ್ಯಗಳೊಂದಿಗೆ ಶಿಕ್ಷಣ ಕ್ಷೇತ್ರದಲ್ಲಿ ಆಮೂಲಾಗ್ರ ಬದಲಾವಣೆಗೆ ಕ್ರಮ ವಹಿಸಲಾಗುತ್ತಿದೆ ಎಂದು ಬೃಹತ್ ಕೈಗಾರಿಕೆ ಹಾಗೂ ವಿಜಯಪುರ ಜಿಲ್ಲಾ ಉಸ್ತುವಾರಿ ಸಚಿವ ಎಂ.ಬಿ.ಪಾಟೀಲ ಅವರು ಹೇಳಿದರು.

ಶನಿವಾರ ಕೆಂಪೇಗೌಡ ಅಂತಾಷ್ಟ್ರೀಯ ವಿಮಾನ ನಿಲ್ದಾಣ ಪ್ರತಿಷ್ಠಾನದ ಸಿಎಸ್‌ಆರ್ ಅನುದಾನದಡಿ ಬಬಲೇಶ್ವರ ಮತಕ್ಷೇತ್ರದ ಕೊಟ್ಯಾಳ ಗ್ರಾಮದಲ್ಲಿ ಸರಕಾರಿ ಶಾಲೆಯ 10 ಸುಸಜ್ಜಿತ ಶಾಲಾ ಕೊಠಡಿ ನಿರ್ಮಾಣ ಕಾಮಗಾರಿಗೆ ಭೂಮಿ ಪೂಜೆ ನೇರವೇರಿಸಿದ ನಂತರ ಕಾರ್ಯಕ್ರಮವನ್ನು ಉದ್ದೇಶಿಸಿ ಅವರು ಮಾತನಾಡಿದರು. ಸಮಾಜ ಪ್ರಗತಿಯತ್ತ ಸಾಗಲು ಶಿಕ್ಷಣ ಅತ್ಯವಶ್ಯಕವಾಗಿದೆ. ಈ ನಿಟ್ಟಿನಲ್ಲಿ ಶಿಕ್ಷಣಕ್ಕೆ ಒತ್ತು ನೀಡಿ, ಗ್ರಾಮೀಣ ಭಾಗದ ಮಕ್ಕಳು ಉತ್ತಮ ಶಿಕ್ಷಣ ಪಡೆಯಲು ಅನುಕೂಲವಾಗುವಂತೆ ಸುಸಜ್ಜಿತ ಶಾಲಾ ಕಟ್ಟಡ, ಮಕ್ಕಳಿಗಾಗಿ ಪ್ರತ್ಯೇಕ ಶೌಚಾಲಯ, ಗುಣಮಟ್ಟ ಶಿಕ್ಷಣ, ಸ್ಮಾರ್ಟ್ ಕ್ಲಾಸ್ ಸೇರಿದಂತೆ ಅಗತ್ಯ ಮೂಲಭೂತ ಸೌಲಭ್ಯ ಒದಗಿಸಿ ಶೈಕ್ಷಣಿಕ ಕ್ಷೇತ್ರಕ್ಕೆ ಪೂರಕವಾದ ವಾತಾವರಣ ನಿರ್ಮಾಣ ಮಾಡಲಾಗುತ್ತಿದೆ ಎಂದು ಅವರು ಹೇಳಿದರು.

ನಗರ ಪ್ರದೇಶದ ಮಕ್ಕಳಂತೆಯೇ ಗ್ರಾಮೀಣ ಭಾಗದ ಮಕ್ಕಳು ಸಹ ಉತ್ತಮ, ಗುಣಮಟ್ಟದ ಶಿಕ್ಷಣ ಪಡೆದು, ಸಮಾಜದಲ್ಲಿ ಅತ್ಯುನ್ನತ ಸ್ಥಾನ ಪಡೆಯಬೇಕೆಂಬ ಈ ಸದುದ್ದೇಶಕ್ಕೆ ಅಂತಾರಾಷ್ಟ್ರೀಯ ಕೆಂಪೇಗೌಡ ವಿಮಾನ ನಿಲ್ದಾಣ ಪ್ರತಿಷ್ಠಾನ ಕೈ ಜೋಡಿಸಿದೆ. ಕೇವಲ ಶಾಲಾ ಕೊಠಡಿಗಳ ನಿರ್ಮಾಣ ಮಾತ್ರವಲ್ಲದೇ ಭವಿಷ್ಯದಲ್ಲಿ ಶಿಕ್ಷಕರ ಕೊರತೆ ಎದುರಾದಲ್ಲಿ ಶಿಕ್ಷಕರನ್ನು

ಶಾಲಾ ಕೊಠಡಿ ನಿರ್ಮಾಣ ಕಾಮಗಾರಿಗೆ ಸಚಿವ ಎಂ.ಬಿ.ಪಾಟೀಲ ಅವರು ಭೂಮಿಪೂಜೆ ನೇರವೇರಿಸಿದರು.

ನಿಯೋಜಿಸಿ ಸಂಸ್ಥೆಯಿಂದಲೇ ಶಿಕ್ಷಕರ ವೇತನ ಪಾವತಿ ಮಾಡುವ ಕಾರ್ಯಕ್ಕೆ ಮುಂದಾಗಿದ್ದು, ಇದು ಸಂಸ್ಥೆಯ ಸಾಮಾಜಿಕ ಕಳಕಳಿಯನ್ನು ಪ್ರದರ್ಶಿಸಿದೆ ಎಂದು ಅವರು ಹೇಳಿದರು.

ವಿಶ್ವದಲ್ಲೇ ಅತ್ಯುನ್ನತ ವಿಮಾನ ನಿಲ್ದಾಣದ ಹೆಗ್ಗಳಿಕೆ ಪಾತ್ರವಾಗಿರುವ ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣ ಶ್ರೇಷ್ಠ ವಿಮಾನ ನಿಲ್ದಾಣವೆಂದು ಪ್ರಶಸ್ತಿ ಪಡೆದುಕೊಂಡಿದೆ. ಈ ಪ್ರತಿಷ್ಠಾನದ ಸಿಎಸ್‌ಆರ್ ಅನುದಾನದಲ್ಲಿ ಬಬಲೇಶ್ವರ ಮತಕ್ಷೇತ್ರದ ಕೋಟ್ಯಾಳ ಹಾಗೂ ಕಾತ್ರಾಳದಲ್ಲಿ ತಲಾ 2.5 ಕೋಟಿ ರೂ. ವೆಚ್ಚದಲ್ಲಿ ಅಭಿವೃದ್ಧಿ ಕಾರ್ಯಗಳನ್ನು ಕೈಗೊಳ್ಳಲಾಗುತ್ತಿದೆ. ಅದರಂತೆ, ವಿವಿಧ ಕಂಪನಿಗಳು ಹಲವು ಗ್ರಾಮಗಳನ್ನು ಆಯ್ಕೆ ಮಾಡಿಕೊಂಡು, ಸಿಎಸ್‌ಆರ್ ಅನುದಾನವನ್ನು ಬಳಸಿ, ವಿವಿಧ ರಸ್ತೆ ಅಭಿವೃದ್ಧಿ, ಶಾಲಾ ಕೊಠಡಿಗಳು, ಸ್ಮಾರ್ಟ್ ಕ್ಲಾಸ್, ಮಕ್ಕಳಿಗಾಗಿ ಪಠ್ಯೇತರ ಚಟುವಟಿಕೆ, ಆಟೋಟ, ಸುಸಜ್ಜಿತ ಗ್ರಂಥಾಲಯ, ಮಕ್ಕಳಿಗಾಗಿ ಶಾಲೆಗಳಲ್ಲಿ ಪ್ರತ್ಯೇಕ ಶೌಚಾಲಯ ಸೇರಿದಂತೆ ವಿವಿಧ ಅಭಿವೃದ್ಧಿ ಕಾರ್ಯಗಳನ್ನು ಕೈಗೊಳ್ಳಲಾಗುತ್ತಿದೆ ಎಂದು ಅವರು ಹೇಳಿದರು.

ಕೆಂಪೇಗೌಡ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣ ಪ್ರತಿಷ್ಠಾನದ ಫೈನಾನ್ಸ್ ಆಫೀಸರ್ ಭಾಸ್ಕರ್ ಆನಂದ ರಾವ್ ಮಾತನಾಡಿ, ವಿವಿಧ ಸಾಮಾಜಿಕ ಕಾರ್ಯಗಳನ್ನು ಕೈಗೊಳ್ಳುವುದೇ ನಮ್ಮ ಪ್ರತಿಷ್ಠಾನದ ಉದ್ದೇಶವಾಗಿದೆ. ಪ್ರತಿಷ್ಠಾನದ ವತಿಯಿಂದ ಜಲ, ಶಿಕ್ಷಣ, ಆರೋಗ್ಯ ಸೇರಿದಂತೆ ವಿವಿಧ ಕ್ಷೇತ್ರಗಳ

> **ಇತ್ತೀಚೆಗಷ್ಟೆ ಜಾಗತಿಕ ಬಂಡವಾಳ ಹೂಡಿಕೆದಾರರ ಸಮಾವೇಶವನ್ನು ಹಮ್ಮಿಕೊಂಡು, ಯಶಸ್ವಿಗೊಳಿಸಲಾಗಿದ್ದು, ಸಮಾವೇಶದಲ್ಲಿ ಭಾಗವಹಿಸಿದ್ದ ವಿವಿಧ ಕಂಪನಿಗಳಲ್ಲಿ ಶೇ.45ರಷ್ಟು ಉತ್ತರ ಕರ್ನಾಟಕ ಭಾಗದಲ್ಲಿ ಕೈಗಾರಿಕೆಗಳನ್ನು ಸ್ಥಾಪಿಸಲು ಮುಂದೆ ಬಂದಿವೆ. ಟೋಯೋಟಾ ಕಂಪನಿ ಮೂಲಕ ಈಗಾಗಲೇ 500ಕ್ಕೂ ಹೆಚ್ಚು ಜನರನ್ನು ನೇಮಕಾತಿ ಮಾಡಿಕೊಳ್ಳಲಾಗಿದೆ. ಫಾಕ್ಸಾನ್ ಕಂಪನಿಯಿಂದಲೂ ನೇಮಕಾತಿ ನಡೆಯಲಿದ್ದು, ಈ ಭಾಗದಲ್ಲಿ ಕೈಗಾರಿಕೆಗಳ ಸ್ಥಾಪನೆಯಿಂದ 10 ಸಾವಿರ ಜನರಿಗೆ ಉದ್ಯೋಗಾವಕಾಶ ದೊರೆಯಲಿದೆ.**
>
> -ಎಂ.ಬಿ.ಪಾಟೀಲ, ಸಚಿವ

ಅಭಿವೃದಿ ಕಾರ್ಯಗಳನ್ನು ಕೈಗೊಳ್ಳಲಾಗಿದೆ. 5 ಸರಕಾರಿ ಶಾಲೆಗಳ ಮರು ನಿರ್ಮಾಣ, 25 ಶಾಲೆಗಳ ನವೀಕರಣ ಕಾರ್ಯಗಳನ್ನು ಈಗಾಗಲೇ ಪ್ರತಿಷ್ಠಾನದ ವತಿಯಿಂದ ಕೈಗೊಳ್ಳಲಾಗಿದೆ ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ಗ್ರಾ.ಪಂ ಅಧ್ಯಕ್ಷೆ ಶೋಭಾ ಖೈರಾವ್, ಎಸ್‌ಡಿಎಂಸಿ ಅಧ್ಯಕ್ಷ ಸುಭಾಸ ಹಿಪ್ಪರಗಿ, ಕೆಂಪೇಗೌಡ ವಿಮಾನ ನಿಲ್ದಾಣ ಪ್ರತಿಷ್ಠಾನದ ಪ್ರಧಾನ ವ್ಯವಸ್ಥಾಪಕ ದಿನೇಶ ಕುಮಾರ, ಕಾರ್ಪೋರೇಟ್ ಅಸೋಸಿಯೇಟ್‌ಸ್‌ನ ಚಂದ್ರಶೇಖರ ಬಿರಾದಾರ, ಸಿಎಆರ್ ವ್ಯವಸ್ಥಾಪಕಿ ಪ್ರತಿಭಾ ಕುಲಕರ್ಣಿ, ಅಭಿಯಂತರ ರಮೇಶ, ಜಕ್ಕಪ್ಪ ಯಡವೆ, ತಾ.ಪಂ ಇಒ ಬಸವಂತ್ರಾಯಗೌಡ ಬಿರಾದಾರ, ಬಿಇಒ ಪ್ರಮೋದಿನಿ ಬಳೋಲಮಟ್ಟಿ ಸೇರಿದಂತೆ ಗ್ರಾಮದ ಹಿರಿಯರು, ಇತರರು ಉಪಸ್ಥಿತರಿದ್ದರು.

ಜನಿವಾರ ಪ್ರಕರಣ: ವಿಪ್ರ ಸಮಾಜ ಪ್ರತಿಭಟನೆ

ವಿಜಯಪುರ: ಸಿಇಟಿ ಪರೀಕ್ಷೆಯಲ್ಲಿ ವಿಪ್ರ ಸಮಾಜದ ವಿದ್ಯಾರ್ಥಿಗಳಿಗೆ ಪವಿತ್ರ ಜನಿವಾರ ತೆಗೆಸಿರುವ ಕ್ರಮ ಖಂಡಿಸಿ ಹಾಗೂ ತಪ್ಪಿತಸ್ಥರ ಮೇಲೆ ಕ್ರಮಕ್ಕೆ ಒತ್ತಾಯಿಸಿ ಅಖಿಲ ಭಾರತೀಯ ಬ್ರಾಹ್ಮಣ ಮಹಾಸಂಘ ಸೇರಿದಂತೆ ವಿವಿಧ ಬ್ರಾಹ್ಮಣ ಸಂಘಟನೆಗಳು ಜಂಟಿಯಾಗಿ ಪ್ರತಿಭಟನೆ ನಡೆಸಿದವು.

ಅಖಿಲ ಭಾರತೀಯ ಬ್ರಾಹ್ಮಣ ಮಹಾ ಸಂಘದ ರಾಷ್ಟ್ರೀಯ ಘಟಕದ ಅಧ್ಯಕ್ಷ ಗೋವಿಂದ ಕುಲಕರ್ಣಿ ಮಾತನಾಡಿ, ವಿಪ್ರ ಸಮಾಜವು ರಾಷ್ಟ್ರದ ಅಭಿವೃದ್ದಿಗಾಗಿ ಶ್ರಮಿಸುವ ಸಾತ್ವಿಕ ಸಮುದಾಯವಾಗಿದ್ದು, ಬ್ರಾಹ್ಮಣ ಸಮಾಜದ ಮೇಲೆ ಸಾರ್ವಜನಿಕವಾಗಿ ಅವಹೇಳನಕಾರಿಯಾಗುವಂತ ಅನೇಕ ಘಟನೆಗಳು ಆಗಾಗ ನಡೆಯುತ್ತಿವೆ. ಇದಕ್ಕೆ ವಿಪ್ರ ಸಮಾಜನ್ನು ಕಡೆಗಣಿಸುವಂತ ಅನೇಕ ಚಟುವಟಿಕೆಗಳು ಇತ್ತೀಚಿನ ದಿನಗಳಲ್ಲಿ ನಡೆಯುತ್ತಿವೆ ಎಂದು ಆಕ್ರೋಶ ಹೊರ ಹಾಕಿದರು.

ಧುರೀಣ ಮುಕುಂದ ಕುಲಕರ್ಣಿ ಮಾತನಾಡಿ, ಬ್ರಾಹ್ಮಣರ ಧಾರ್ಮಿಕ ಭಾವನೆಗಳನ್ನು ಕೆರಳಿಸುವಂತ ಕೆಲಸವನ್ನು ಪರೀಕ್ಷಾ ಪ್ರಾಧಿಕಾರದ ಅಧಿಕಾರಿಗಳ ಈ ಹೇಯಕೃತ್ಯ ಸರಕಾರದ ಕೆಲಸವೇ ಸರಿ ಎಂದು ಆರೋಪಿಸಿ ತಪ್ಪಿತಸ್ತರ ಮೇಲೆ ಕ್ರಮ ಕೈಗೊಳ್ಳುವಂತೆ ಆಗ್ರಹಿಸಿದರು. ನ್ಯಾಯವಾದಿ ಪ್ರಶಾಂತ ದೇಶಪಾಂಡೆ

ಸಿಇಟಿ ಪರೀಕ್ಷೆಯಲ್ಲಿ ಬ್ರಾಹ್ಮಣ ವಿದ್ಯಾರ್ಥಿಗೆ ಅಪಮಾನ ಖಂಡಿಸಿ ವಿಜಯಪುರದಲ್ಲಿ ಬ್ರಾಹ್ಮಣ ಸಮಾಜದ ಧುರೀಣರು ಪ್ರತಿಭಟನೆ ನಡೆಸಿದರು.

ಮಾತನಾಡಿ, ಜನಿವಾರವು ಒಂದು ದೀಕ್ಷೆ ಪಡೆದ ಪವಿತ್ರ ದಾರ. ಇದು ಕೇವಲ ಬ್ರಾಹ್ಮಣರಿಗೆ ಮಾತ್ರ ಸೀಮಿತವಿಲ್ಲ ಹಿಂದುಗಳಲ್ಲಿ ಅನೇಕ ಜಾತಿಯವರು ಈ ಯಜ್ಞೋಪವಿತವನ್ನು ಧರಿಸುತ್ತಾರೆ ಅವರೆಲ್ಲರ ಭಾವನೆಗಳಿಗೆ ಘಾಸಿಗೊಳಿಸುವಂತ ಕೆಲಸವನ್ನು ಸರಕಾರದ ಅಧಿಕಾರಿಗಳು ಮಾಡಿದ್ದಾರೆ. ಈ ಕುಕೃತ್ಯವೆಸಗಿದ ಅಧಿಕಾರಿಗಳನ್ನು ಅಮಾನತುಗೊಳಿಸಿ ಅವರ ಮೇಲೆ ಭಾರತೀಯ ನ್ಯಾಯ ಸಂಹಿತೆ ಕಲಂ 298, 299 ಮತ್ತು 302 ಅಡಿಯಲ್ಲಿ ಪ್ರಕರಣ ದಾಖಲಿಸಿಕೊಂಡು ಕ್ರಮ ಜರುಗಿಸಬೇಕು ಎಂದು ಆಗ್ರಹಿಸಿದರು.

ಜಿಲ್ಲಾ ಪ್ರಧಾನ ಕಾರ್ಯದರ್ಶಿ ಪವನ ಕುಲಕರ್ಣಿ ಮಾತನಾಡಿ, ರಾಜ್ಯ ಸರ್ಕಾರವು ನಮ್ಮ ಸಮುದಾಯಕ್ಕೆ ಅನ್ಯಾಯವೆಸಗುತ್ತಿದ್ದು ಇತ್ತೀಚೆಗೆ ಮಾಡಿದ ಜಾತಿಗಣತಿಯಲ್ಲಿಯೂ ನಮ್ಮ ಸಮಾಜದ ಸಂಖ್ಯೆಯ ಬಗ್ಗೆ ಅನೇಕ ಲೋಪದೋಷಗಳಿವೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಆನಂದ ಜೋಶಿ, ಉದ್ಯಮಿ ಹಾಗೂ ಸಮಾಜದ ಮುಖಂಡ ಲಕ್ಷ್ಮೀಕಾಂತ ಕುಲಕರ್ಣಿ, ಕೃಷ್ಣಾ ಗುನ್ನಾಳಕರ, ಅಖಿಲ ಭಾರತೀಯ ಬ್ರಾಹ್ಮಣ ಮಹಾ ಸಂಘದ ಯುವ ಘಟಕದ ಅಧ್ಯಕ್ಷ ರೋಹನ ಆಪ್ಟೆ, ಸಮೀರ ಕುಲಕರ್ಣಿ, ಚೇತನ ದೇಶಪಾಂಡೆ, ಸುಧೀಂದ್ರ ಇಲ್ಲಾಳ, ವೆಂಕಟೇಶ ಗುಡಿ, ಪವನ ಚಿಮ್ಮಲಗಿ, ಸತೀಶಚಂದ್ರ ಕುಲಕರ್ಣಿ ಪಾಲ್ಗೊಂಡಿದ್ದರು.

ಕಾಮಗಾರಿ ಪೂರ್ಣಕ್ಕೆ ಸೂಚನೆ

ಬಸವನಬಾಗೇವಾಡಿ: ಪುರಸಭೆ ವ್ಯಾಪ್ತಿಯಲ್ಲಿ ಕೈಗೊಂಡಿರುವ ವಿವಿಧ ಕಾಮಗಾರಿಗಳನ್ನು ನಿಗದಿತ ಅವಧಿಯಲ್ಲಿ ಗುತ್ತಿಗೆದಾರರು ಪೂರ್ಣಗೊಳಿಸಬೇಕು, ಗುಣಮಟ್ಟದ ಕಾಮಗಾರಿ ಮಾಡುವಂತೆ ಅಧಿಕಾರಿಗಳು ಗಮನ ಹರಿಸಬೇಕು ಎಂದು ಪುರಸಭೆ ಅಧ್ಯಕ್ಷೆ ಜಗದೇವಿ ಗುಂಡಳ್ಳಿ ಹೇಳಿದರು.

ಪಟ್ಟಣದ ಪುರಸಭೆ ಸಭಾಂಗಣದಲ್ಲಿ ಶನಿವಾರ ಜರುಗಿದ ಸಾಮಾನ್ಯ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಸದಸ್ಯರ ಅಭಿಪ್ರಾಯ ಮೇರೆಗೆ ಈಗಾಗಲೇ ಕರೆದ ಟೆಂಡರ್‌ಗಳಿಗೆ ಅನುಮೋದನೆ ನೀಡದೇ ಮುಂದಿನ ವಾರ ಗುತ್ತಿಗೆದಾರರ ಸಭೆ ಕರೆದು ಹಿಂದಿನ ಕಾಮಗಾರಿಗಳ ಬಗ್ಗೆ ಚರ್ಚಿಸಿ ಹೊಸ ಟೆಂಡರ್‌ಗಳ ಬಗ್ಗೆ ಅಗತ್ಯ ಕ್ರಮ ಕೈಗೊಳ್ಳಲಾಗುವುದು. ಪುರಸಭೆಯ ವ್ಯಾಪ್ತಿಯಲ್ಲಿ ಬರುವ ಎಲ್ಲ ವಾರ್ಡ್‌ಗಳಲ್ಲಿ ಕಾಮಗಾರಿಗಳು ಸಮರ್ಪಕವಾಗಿ ನಡೆಯುವಂತೆ ಅಧಿಕಾರಿಗಳು ಕ್ರಮ ವಹಿಸಬೇಕೆಂದು ಸೂಚಿಸಿದರು.

ಸದಸ್ಯ ದೇವೇಂದ್ರ ಚವ್ಹಾಣ ಅವರು, ವಾರ್ಡ್‌ಗಳಲ್ಲಿ ಕಳಪೆ ಕಾಮಗಾರಿಯಾಗಿದ್ದರೆ ಗುತ್ತಿಗೆದಾರರಿಗೆ ಬಿಲ್ ಪಾವತಿ ಮಾಡಬಾರದು ಎಂದರು. ಸದಸ್ಯ ವಿಜಯ ನಾಯಕ ಅವರು, ಹಿಂದಿನ ಕಾಮಗಾರಿ ಗುಣಮಟ್ಟದಿಂದ ಪೂರ್ಣಗೊಂಡಿರುವದನ್ನು ಖಾತರಿ ಪಡಿಸಿಕೊಂಡ ನಂತರ ಅಂತಹ ಗುತ್ತಿಗೆದಾರರಿಗೆ ಟೆಂಡರ್ ಕೊಡಬೇಕೆಂದು ಹೇಳಿದಾಗ ಉಳಿದ ಸದಸ್ಯರು ಇದಕ್ಕೆ ದನಿಗೂಡಿಸಿದರು.

ಸದಸ್ಯೆ ಗೀತಾ ಬಾಗೇವಾಡಿ ಅವರು,17ನೇ ವಾರ್ಡಿನಲ್ಲಿ ಶುದ್ಧ ಕುಡಿಯುವ ನೀರಿನ ಘಟಕ ದುರಸ್ತಿ ಮಾಡಬೇಕೆಂದು ಸಭೆಯ ಗಮನಕ್ಕೆ ತಂದರು. ಸದಸ್ಯ

ಬಸವನಬಾಗೇವಾಡಿ ಪಟ್ಟಣದಲ್ಲಿ ನಡೆದ ಪುರಸಭೆ ಸಾಮಾನ್ಯ ಸಭೆಯಲ್ಲಿ ಅಧ್ಯಕ್ಷೆ ಜಗದೇವಿ ಗುಂಡಳ್ಳಿ ಮಾತನಾಡಿದರು.

ಪ್ರವೀಣ ಪೂಜಾರಿ, ರಾಜು ಲಮಾಣಿ ಇತರರು ಪಟ್ಟಣದ ಪ್ರವೇಶ ಮುನ್ನ ಪುರಸಭೆಯಿಂದ ಸ್ವಾಗತ ಕಮಾನುಗಳನ್ನು ಪ್ರಮುಖ ರಸ್ತೆಗಳಲ್ಲಿ ನಿರ್ಮಾಣ ಮಾಡಬೇಕು ಎಂದರು.

ವ್ಯವಸ್ಥಾಪಕ ಸುರೇಶ ಬಾಗೇವಾಡಿ ಅವರು, ವಿಕಲಚೇತನರಿಗೆ ಹೊಲಿಗೆ ಯಂತ್ರ ವಿತರಣೆಗೆ ಅರ್ಜಿ ಕರೆಯಲಾಗಿದೆ. 13 ಜನರಿಗೆ ಹೊಲಿಗೆ ಯಂತ್ರ ಕೊಡಬೇಕಿದೆ. 11 ಅರ್ಜಿ ಬಂದಿವೆ ಎಂದರು. ಸಭೆಯಲ್ಲಿ ಸದಸ್ಯರಾದ ರಜಾಕಬಿ ಬಮ್ಮನಹಳ್ಳಿ, ನಜೀರ ಅಹ್ಮದ ಗಣಿ, ಅಬ್ದುಲರಹಿಮಾನ ಚೌಧರಿ, ಶೋಭಾಂಗಿಣಿ ಗಾಯಕವಾಡ, ರವಿ ನಾಯ್ಕೋಡಿ, ಅನ್ನಪೂರ್ಣ ಕಲ್ಯಾಣಿ, ಪರಜಾನ ಚೌಧರಿ, ಲಕ್ಷ್ಮೀಬಾಯಿ ಬೆಲ್ಲದ, ಸದಸ್ಯ ನೀಲಪ್ಪ ನಾಯಕ ಪುರಸಭೆ ಅಭಿಯಂತರಾದ ಮಹಾದೇವ ಜಬಂಗಿ, ಸಂತೋಷ ಗಿಡ್ಡಸಣ್ಣನವರ, ವಿಜಯಕುಮಾರ ವಂದಾಲ, ಗೀತಾಂಜಲಿ ದಾಸರ, ರೇಣುಕಾ ಭಂಡಾರಿ ಇತರರು ಇದ್ದರು.

ಜಯಂತಿ ಆಚರಣೆಗೆ ನಿರ್ಧಾರ

ತಾಳಿಕೋಟಿ: ಏಪ್ರಿಲ್ 30ರಂದು ರಾಜ್ಯಾದ್ಯಂತ ಆಚರಿಸಲಾಗುತ್ತಿರುವ ಸಂಸ್ಕೃತಿಕ ನಾಯಕ ವಿಶ್ವಗುರು ಬಸವಣ್ಣನವರ ಜಯಂತಿ ಕಾರ್ಯಕ್ರಮವನ್ನು ಅರ್ಥಪೂರ್ಣವಾಗಿ ವಿಜೃಂಭಣೆಯಿಂದ ಆಚರಿಸಲು ತಾಲೂಕಾಡಳಿತದ ನೇತೃತ್ವದಲ್ಲಿ ನಡೆದ ಪೂರ್ವಭಾವಿ ಸಭೆಯಲ್ಲಿ ನಿರ್ಧರಿಸಲಾಯಿತು.

ಪಟ್ಟಣದ ತಹಸೀಲ್ದಾರ್ ಕಾರ್ಯಾಲಯ ಸಭಾಂಗಣದಲ್ಲಿ ಶನಿವಾರ ತಾಲೂಕಾಡಳಿತದ ವಿವಿಧ ಇಲಾಖೆ ಅಧಿಕಾರಿಗಳ, ಸಮಾಜ ಬಾಂಧವರ ಹಾಗೂ ಬಸವ ಜಯಂತಿ ಉತ್ಸವ ಸಮಿತಿ ಪದಾಧಿಕಾರಿಗಳ ನೇತೃತ್ವದಲ್ಲಿ ನಡೆದ ಪೂರ್ವಭಾವಿ ಸಭೆಯಲ್ಲಿ ನಿರ್ಧಾರ ತೆಗೆದುಕೊಳ್ಳಲಾಯಿತು. ಪೂರ್ವಭಾವಿ ಸಭೆಯ ಅಧ್ಯಕ್ಷತೆ ವಹಿಸಿದ ತಹಸೀಲ್ದಾರ್ ಡಾ.ವಿನಯಾ ಹೂಗಾರ ಮಾತನಾಡಿ ಮಹಾಪುರುಷರ,ಶರಣರ ಜಯಂತಿ ಆಚರಣೆ ಕಾರ್ಯಕ್ರಮಗಳಲ್ಲಿ ಯಾವುದೇ ರೀತಿಯ ಲೋಪಗಳು ಆಗದಂತೆ ಅಧಿಕಾರಿಗಳು ನೋಡಿಕೊಳ್ಳಬೇಕು. ಈ ಸಭೆಯಲ್ಲಿ ತೆಗೆದುಕೊಂಡ ನಿರ್ಧಾರಗಳನ್ನು ಹಾಗೂ ವಹಿಸಿಕೊಟ್ಟ ಜವಾಬ್ದಾರಿಗಳನ್ನು

ಆಸಕ್ತಿಯಿಂದ ನಿರ್ವಹಿಸಬೇಕು ಎಂದು ಸೂಚನೆ ನೀಡಿದ ಅವರು ಏಪ್ರಿಲ್ 30 ರಂದು ಆಚರಿಸಲಿರುವ ಜಯಂತಿ ಕಾರ್ಯಕ್ರಮದಲ್ಲಿ ಅಂದು ಬೆಳಗ್ಗೆ 8 ಗಂಟೆಗೆ ತಾಲೂಕಿನ ಎಲ್ಲ ಸರಕಾರಿ ಕಚೇರಿಗಳಲ್ಲಿ ಹಾಗೂ ತಾಲೂಕಾಡಳಿತದ ವತಿಯಿಂದ ತಹಸೀಲ್ದಾರ್ ಕಾರ್ಯಾಲಯದಲ್ಲಿ ಜಗದ್ಗುರು ಬಸವಣ್ಣನವರ ಭಾವಚಿತ್ರಕ್ಕೆ ಪೂಜೆ ಸಲ್ಲಿಸಿ, ಪುಷ್ಪ ನಮನದೊಂದಿಗೆ ಗೌರವ ಸಲ್ಲಿಸಲಾಗುವುದು. ಬೆಳಿಗ್ಗೆ 8.30 ಕ್ಕೆ ಪಟ್ಟಣದ ರಾಜವಾಡೆಯಿಂದ ಬಸವಣ್ಣನವರ ಭಾವಚಿತ್ರದ ಭವ್ಯ ಮೆರವಣಿಗೆ ಸಕಲವಾದ್ಯ ಮೇಳಗಳೊಂದಿಗೆ ಆರಂಭವಾಗಿ ಕತ್ರಿ ಬಜಾರ್ ಶಿವಾಜಿ ಸರ್ಕಲ್ ಮಹಾರಾಣಾ ಪ್ರತಾಪ್ ಬಸ್ ನಿಲ್ದಾಣ ಮಾರ್ಗವಾಗಿ ಬಸವೇಶ್ವರ ವೃತ್ತಕ್ಕೆ ತಲುಪುವುದು. ಅಲ್ಲಿ ವೇದಿಕೆ ಕಾರ್ಯಕ್ರಮ ಜರುಗುವುದು.

ಬಬಲೇಶ್ವರ ಕೆರೆಗೆ ನೀರು ತುಂಬಿಸುವ ಕಾಮಗಾರಿಗೆ ಪೂಜೆ

ಸಿಂದಗಿ: ಕಳೆದ ಬೇಸಿಗೆಯಲ್ಲಿ ಬಬಲೇಶ್ವರ, ಬೆನಕೊಟಗಿ, ಕಲಹಳ್ಳಿ, ರಾಂಪೂರ, ಮಂಗಳೂರ, ಆಹೇರಿ ಹಾಗೂ ಸುತ್ತಮುತ್ತಲಿನ ಗ್ರಾಮಸ್ಥರು ಬಬಲೇಶ್ವರ ಕರೆಗೆ ನೀರು ತುಂಬಿಸುವಂತೆ ಸಾಕಷ್ಟು ಬಾರಿ ಒತ್ತಾಯ ಮಾಡಿದಾಗ ಕಾಲುವೆಯನ್ನು ಅಗೆದು ನೀರು ತುಂಬಿಸುವ ಪ್ರಯತ್ನ ಮಾಡಲಾಗಿತ್ತು. ಆದರೆ ಏನೆ ಮಾಡಿದರು ನೀರು ತುಂಬಿಸುವಲ್ಲಿ ಸಫಲತೆ ಸಿಗಲಿಲ್ಲ. ಆಗ ಸ್ಥಳ ಪರಿಶೀಲನೆ ಮಾಡಲಾಗಿ ಬೆನಕೊಟಗಿ ಹಳ್ಳದಿಂದ ಬಬಲೇಶ್ವರ ಕೆರೆಗೆ ನೀರು ತುಂಬಿಸುವ ನಿಟ್ಟಿನಲ್ಲಿ ಅಧಿಕಾರಿಗಳ ಜೊತೆ ಚರ್ಚಿಸಿ ಯೋಜನೆಯನ್ನು ರೂಪಿಸಲಾಯಿತು ಎಂದು ಶಾಸಕ ಅಶೋಕ ಮನಗೂಳಿ ಹೇಳಿದರು.

ಪಟ್ಟಣದ ರಾಂಪುರ ರಸ್ತೆಯ ಕಾಲುವೆ ಬಳಿ ನೀರಾವರಿ ಇಲಾಖೆಯ ಕಾರ್ಯ ನಿರ್ವಾಹಕ ಅಭಿಯಂತರರು, ಕೃಷ್ಣಾ ಭಾಗ್ಯ ಜಲ ನಿಗಮ ನಿಯಮಿತ ಆಯ್.ಬಿ.ಎಸ್ ವಿಭಾಗ 02 ಇಂಡಿ ಏತ ನೀರಾವರಿ ಕಾಲುವೆಯ ವಿತರಣಾ ಕಾಲುವೆ ಸಂಖ್ಯೆ 31ಎ ಮೂಲಕ ಬಬಲೇಶ್ವರ ಕೆರೆಗೆ 1 ಕೋಟಿ 30ಲಕ್ಷ ರು. ಮೊತ್ತದ ನೀರು ತುಂಬುವ ಕಾಮಗಾರಿ ಪ್ರಾರಂಭದ ಪೂಜೆಯನ್ನು ನೇರವೇರಿಸ ಮಾತನಾಡಿದ ಅವರು, ಈ ಕಾರ್ಯಕ್ಕೆ ಸಿಎಂ, ಡಿಸಿಎಂ ಅವರ ಸಹಕಾರವು ಇದೆ. ಮೋರಟಗಿ, ಹಂದಿಗನೂರ, ಪುರದಾಳ, ಆಲಮೇಲ, ಬಬಲೇಶ್ವರ ಹಾಗೂ ಯಂಕಂಚಿ

ನೀರು ತುಂಬುವ ಕಾಮಗಾರಿ ಪ್ರಾರಂಭಕ್ಕೆ ಅವರು ಪೂಜೆಯನ್ನು ಸಲ್ಲಿಸಿದ ಬಳಿಕ ಶಾಸಕ ಅಶೋಕ ಮನಗೂಳಿ ಅವರು ಮಾತನಾಡಿದರು.

ಗ್ರಾಮಗಳ ಕೆರೆಗಳ ಪುನರುತ್ಥಾನ ಹಾಗೂ ನೀರು ತುಂಬಿಸುವ ಕಾರ್ಯಕ್ಕೆ ಶೀಘ್ರ ಚಾಲನೆ ನೀಡಲಾಗುವುದು. ಗುತ್ತಿಗೆದಾರರು ಹಾಗೂ ಸಂಬಂಧಿಸಿದ ಅಧಿಕಾರಿಗಳು ಪ್ರಾಮಾಣಿಕವಾಗಿ ಗುಣಮಟ್ಟದ ಕಾಮಗಾರಿಯನ್ನು ನಿರ್ವಹಿಸಬೇಕು ಎಂದರು. ಮಾಜಿ ಶಾಸಕ ರಮೇಶ ಭೂಸನೂರ, ದಸಂಸ ಜಿಲ್ಲಾ ಸಂಚಾಲಕ ವಾಯ್.ಸಿ.ಮಯೂರ ಹಾಗೂ ಬುದ್ದು ನಾಯಕ್ ಅವರು ಮಾತನಾಡಿದರು. ಇದೇ ಸಂದರ್ಭದಲ್ಲಿ ಭಾಗಪ್ಪಗೌಡ ಬಿರಾದಾರ, ರಾಚಯ್ಯ, ನಬಿಸಾಬ್, ದವಲತ ದೊಡಮನಿ, ಈರಣ್ಣ ನಾಯ್ಕೋಡಿ, ಶ್ರೀಶೈಲ ದೇಸಾಯಿ, ಗಂಗಾಧರ ಚಿಂಚೋಳ್ಳಿ, ಎಇಇ ಭಾಸ್ಕರ್, ಫಾರೂಕ್, ಜೈಭೀಮ ತಳಕೇರಿ, ಕುಮಾರ ವರ್ಕಾನಳ್ಳಿ, ಅನಿಲ ಪಾಟೀಲ, ಅನೀಲಗೌಡ ಪಾಟೀಲ, ಸಂತೋಷ ಪಾಟೀಲ, ಶರಣಗೌಡ ಪಾಟೀಲ, ಶರಣು ನಾಯ್ಕೋಡಿ, ಬಸವರಾಜ ಪಾಟೀಲ ಸೇರಿದಂತೆ ಹಲವರಿದ್ದರು.

ಏ.26ರಿಂದ ಕಾಲುಬಾಯಿ ರೋಗ ಲಸಿಕೆ ಅಭಿಯಾನ

ದೇವರಹಿಪ್ಪರಗಿ: ತಾಲೂಕಿನಾದ್ಯಂತ 7ನೇ ಸುತ್ತಿನ ಕಾಲು ಬಾಯಿ ರೋಗ ಲಸಿಕಾ ಅಭಿಯಾನ ಏಪ್ರಿಲ್ 26ರಿಂದ ಜೂನ್ 4 ರವರೆಗೆ ನಡೆಯಲಿದ್ದು, ಲಸಿಕಾ ಅಭಿಯಾನವನ್ನು ಯಶಸ್ವಿಗೊಳಿಸಲು ಎಲ್ಲಾ ಪಶು ವೈದ್ಯಾಧಿಕಾರಿಗಳು ಶ್ರಮವಹಿಸಬೇಕು ಎಂದು ತಹಸೀಲ್ದಾರ್ ಪ್ರಕಾಶ ಸಿಂದಗಿ ಸೂಚಿಸಿದರು.

ಪಟ್ಟಣದ ಪಶುಪಾಲನಾ ಮತ್ತು ಪಶು ವೈದ್ಯಕೀಯ ಕಚೇರಿಯಲ್ಲಿ ಗುರುವಾರ ನಡೆದ ರಾಷ್ಟ್ರೀಯ ಜಾನುವಾರು ರೋಗ ನಿಯಂತ್ರಣ ಕಾರ್ಯಕ್ರಮದಡಿ 7ನೇ ಸುತ್ತಿನ ಕಾಲು ಬಾಯಿ ರೋಗ ಲಸಿಕಾ ಅಭಿಯಾನದ ಪೂರ್ವ ಸಿದ್ದತೆ ಕಾರ್ಯಕ್ರಮದ ಉಸ್ತುವಾರಿ ಸಮಿತಿ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು. ಮನೆ ಮನೆಗೆ ತೆರಳಿ ಜಾನುವಾರುಗಳಿಗೆ ಉಚಿತ ಲಸಿಕೆ ಅಭಿಯಾನ ಹಮ್ಮಿಕೊಂಡಿರುವ ಕುರಿತು ಸ್ಥಳೀಯ ಮಟ್ಟದಲ್ಲಿ ಸಾರ್ವಜನಿಕರಿಗೆ ಮುಂಚಿತವಾಗಿ ಯೇ ಮಾಹಿತಿ ನೀಡಬೇಕು ಎಂದು ರಾಷ್ಟ್ರೀಯ ಜಾನುವಾರು ರೋಗ ನಿಯಂತ್ರಣ ಕಾರ್ಯಕ್ರಮದಡಿ 7ನೇ ಸುತ್ತಿನ ಕಾಲು ಬಾಯಿ ರೋಗ ಲಸಿಕಾ ಅಭಿಯಾನದ ಪೋಸ್ಟರ್ ಬಿಡುಗಡೆಗೊಳಿ

ಲಸಿಕಾ ಅಭಿಯಾನದ ಪೋಸ್ಟರ್ ಅನ್ನು ತಹಸೀಲ್ದಾರ್ ಪ್ರಕಾಶ ಸಿಂದಗಿ ಅವರು ಬಿಡುಗಡೆಗೊಳಿಸಿದರು

ಸಿದರು. ದೇವರಹಿಪ್ಪರಗಿ ಪಶು ವೈದ್ಯಕೀಯ ಆಸ್ಪತ್ರೆಯ ಸಹಾಯಕ ನಿರ್ದೇಶಕರಾದ ಡಾ.ಬಿ.ಎಚ್.ಕನ್ನೂರ ಅವರ ಮಾತನಾಡಿ , 7ನೇ ಸುತ್ತಿನ ಕಾಲು ಬಾಯಿ ರೋಗದ ಲಸಿಕೆ ಕಾರ್ಯಕ್ರಮ ಅನುಷ್ಠಾನಕ್ಕಾಗಿ ತಾಲೂಕಿನಲ್ಲಿ ಲಸಿಕೆ ಲಭ್ಯವಿದ್ದು, ತಾಲೂಕಿನಲ್ಲಿ ಸುಮಾರು 12500 ಜಾನುವಾರಗಳಿದ್ದು, 21ಸಿಬ್ಬಂದಿಗಳ ತಂಡ ರಚಿಸಲಾಗಿದೆ, ಲಸಿಕೆ ಉಚಿತವಾಗಿ ನೀಡುವುದರಿಂದ ಈವರೆಗೆ ಯಾವುದೇ ಅಡ್ಡ ಪರಿಣಾಮ ತೊಂದರೆಯಾಗಿಲ್ಲ ಎಂದು ಲಸಿಕಾ ಅಭಿಯಾನದ ಕುರಿತು ವಿವರಿಸಿದರು.

ಲಸಿಕಾ ಕಾರ್ಯಕ್ರಮದ ಪೂರ್ವ ಸಿದ್ದತೆ ಸಭೆ ನಂತರ 2024-25ನೇ ಸಾಲಿನ ವಾರ್ಷಿಕ ಕೆಡಿಪಿ ಸಭೆ ನಡೆಸಲಾಯಿತು. ಇದೇ ಸಂದರ್ಭದಲ್ಲಿ ಡಾ.ಪ್ರಶಾಂತ ತಳವಾರ, ಡಾ.ರಾಮನಗೌಡ ಪಾಟೀಲ, ಡಾ. ವಿದ್ಯಾಭೂಷಣ ಸೇರಿದಂತೆ ಪಶುಸಂಜೀವಿನಿ ವಾಹನದ ಅಧಿಕಾರಿ, ಸಿಬ್ಬಂದಿ ವರ್ಗ, ಇಲಾಖೆಯ ಸಿಬ್ಬಂದಿ ವರ್ಗ, ಪಶು ಸಖಿಯರು ಹಾಗೂ ಮೈತ್ರಿ ಕಾರ್ಯಕರ್ತರು ಉಪಸ್ಥಿತರಿದ್ದರು.

ಲಚ್ಯಾಣದಲ್ಲಿ ಬಂಥನಾಳ ಶ್ರೀಗಳ ಅಡ್ಡಪಲ್ಲಕ್ಕಿ ಉತ್ಸವ

ಇಂಡಿ: ತಾಲೂಕಿನ ಸುಕ್ಷೇತ್ರ, ಲಚ್ಯಾಣದಲ್ಲಿ ಸುಕ್ಷೇತ್ರ, ಲಚ್ಯಾಣದಲ್ಲಿ ಕ್ಷೇತ್ರದ ಅಧಿಪತಿ ಲಿಂಗೈಕ್ಯ ಶ್ರೀ ಸಿದ್ಧಲಿಂಗ ಮಹಾರಾಜರ ಗುರು ಶ್ರೀ ಶಂಕರಲಿಂಶ್ವರ ಮಹಾರಥೋತ್ಸವ ಅಂಗವಾಗಿ ಶನಿವಾರದಂದು ಬಂಥನಾಳ ಶೀಗಳ ಅಡ್ಡಪಲ್ಲಕ್ಕಿ, ನಂದಿಕೋಲು ಉತ್ಸವ ಹಾಗೂ ಅಗ್ನಿ ಶಮನ ಕಾರ್ಯಕ್ರಮ ವಿಜ್ರಂಭಣೆಯಿಂದ ಜರುಗಿತು.

ಅತ್ಯಂತ ಶ್ರದ್ಧಾಭಕ್ತಿಯಿಂದ ಸಂಪ್ರದಾಯದಂತೆ ಇಲ್ಲಿನ ಕಮರಿಮಠದ ಒಳ ಆವರಣದಿಂದ ವಾದ್ಯಮೇಳ, ಜಯಘೋಷಗಳೊಂದಿಗೆ ಕಮರಿಮಠದ ಒಳ ಆವರಣದಿಂದ ಆರಂಭವಾದ ಬಂಥನಾಳದ ಶ್ರೀ ಸಂಗನಬಸವ ಮಹಾಶಿವಯೋಗಿಗಳ ಭಾವಚಿತ್ರ, ಹೊತ್ತ ಅಡ್ಡ ಪಲ್ಲಕ್ಕಿ ಮೆರವಣಿಗೆ ನಡೆಯಿತು.

ಈ ಮೆರವಣಿಗೆಯಲ್ಲಿ ವೀರಗಾಸೆ, ಸಂಬಾಳ, ಬ್ಯಾಂಕ್ ಡಸೆಟ್ ಕಲಾವಿದರು ಭಾಗವಹಿಸಿ ತಮ್ಮ ಕಲೆ ಪ್ರದರ್ಶಿಸಿದರು. ನಂತರ ಈ ಮೆರವಣಿಗೆಯು ಕಮರಿಮಠದ ಮುಂಭಾಗದ ಹೊರ ಆವರಣದ ಅಗ್ಗಿ ಕಟ್ಟೆಯತ್ತ ಸಾಗುತ್ತಿದ್ದಂತೆ ಭಕ್ತರ ಸಂಭ್ರಮ ಮುಗಿಲು ಮುಟ್ಟಿತು. ಈ ವೇಳೆ ಯುವಕರು ನಂದಿಕೋಲು ಎತ್ತಿ ಸೇವೆ ಸಲ್ಲಿಸಿದರೆ, ಮತ್ತೆ ಕೆಲವರು ಪಾಲಕಿ ಹೊತ್ತು ಭಕ್ತಿ ಸಮರ್ಪಿಸಿದರು.

ನೋಡ ನೋಡುವದರೊಳಗೆ ಈ ಮೆರವಣಿಗೆ ಅಗ್ಗಿ ಕಟ್ಟೆ ಸಮೀಪಿಸುತ್ತಿದ್ದಂತೆ ಬಿರು ಬಿಸಲನ್ನು ಲೆಕ್ಕಿದೆ ನೆರೆದ ಸಹಸ್ರಾರು ಭಕ್ತರ ಮನದಲ್ಲಿ ಸಂತಸದ ಭಾವ ಮೂಡಿತು. ಅಷ್ಟರಲ್ಲೆ ಬಂಥನಾಳ ಶ್ರೀಗಳ ಪಾಲಕಿ ಅಗ್ಗಿ ಪ್ರವೇಶ ಕಾರ್ಯಕ್ರಮ ವಿಜ್ರಂಭಣೆಯಿಂದ ನೆರವೇರಿತು. ಬಳಿಕ ವೀರಗಾಸೆ ಕಲಾವಿದರು, ಹರಕೆ ಹೊತ್ತ ಭಕ್ತರು ನಿಗಿ ನಿಗಿ ಕೆಂಡದಲ್ಲಿ ಭಕ್ತಿ ಭಾವದಿಂದ ಅಗ್ಗಿ ಹಾಯ್ದು ಭಕ್ತಿ ಸಮರ್ಪಿಸುವದರೊಂದಿಗೆ ಅಗ್ನಿ ಶಮನ ಕಾರ್ಯಕ್ರಮ

ಶ್ರೀಗಳ ಅಡ್ಡ ಪಲ್ಲಕ್ಕಿ ಉತ್ಸವ ವಿಜ್ರಂಭಣೆಯಿಂದ ಜರುಗಿತು.

ಯಶಸ್ವಿಯಾಯಿತು.

ಈ ಸಂದರ್ಭದಲ್ಲಿ ಅಹಿತಕರ ಘಟನೆಗಳು ನಡೆಯದಂತೆ ಶಾಂತಿ ಸುವ್ಯವಸ್ಥೆ ಕಾಪಾಡಲು ಮುಂಜಾಗೃತಾ ಕ್ರಮವಾಗಿ ಜಿಲ್ಲಾ ಪೊಲೀಸ್ ಇಲಾಖೆಯ ವತಿಯಿಂದ 9 ಜನ ಪಿಎಸ್‌ಐ ಸೆರಿದಂತೆ ಒಟ್ಟು 90 ಜನ ಜನ ಪೊಲೀಸರನ್ನು ನಿಯೋಜಿಸಲಾಗಿತ್ತು. ಇದಲ್ಲದೆ ಹಲವು ಭಕ್ತರು ಸ್ವಯಂ ಸೇವಕರಾಗಿ ಸೇವೆ ಸಲ್ಲಿಸಿದರು.

ದಕ್ಷಿಣ ಸೋಲಾಪುರ ತಾಲೂಕಿನ ಶಿರವಾಳದ ಸೋಮಲಿಂಗ ಮಹಾರಾಜರು, ರೇವಣಸಿದ್ದ ಮಹಾರಾಜರು, ಹೂವಿನ ಹಿಪ್ಪರಗಿಯ ಮಾತೋಶ್ರೀ ದ್ರಾಕ್ಷಾಯಣಿ ಅಮ್ಮನವರು ಈ ಕಾರ್ಯಕ್ರಮದ ಸಾನಿಧ್ಯವಹಿಸಿದ್ದರು. ಈ ಉತ್ಸವ ನೋಡಲು ನೆರೆಯ ಮಹಾರಾಷ್ಟ್ರ, ಆಂಧ್ರಪ್ರದೇಶ, ತೆಲಂಗಾಣ ಸೆರಿದಂತೆ ಸಹಸ್ರಾರು ಭಕ್ತರು ಪಾಲ್ಗೊಂಡಿದ್ದರು.

vishwavani.news

ಅಂಕ ಪಟ್ಟಿ

	ಪಂದ್ಯ	ಗೆಲುವು	ಸೋಲು	ಅಂಕ
ಡೆಲ್ಲಿ	06	05	01	10
ಪಂಜಾಬ್	07	05	02	10
ಗುಜರಾತ್	06	04	02	08
ಬೆಂಗಳೂರು	07	04	03	08
ಲಖನೌ	07	04	03	08
ಕೋಲ್ಕತ್ತಾ	07	03	04	06
ಮುಂಬೈ	07	03	04	05
ರಾಜಸ್ಥಾನ್	07	02	05	04
ಹೈದರಾಬಾದ್	06	02	04	04
ಚೆನ್ನೈ	07	02	05	04

ಇಂದಿನ ಪಂದ್ಯ

3.30 PM
ರಾಯಲ್ ಚಾಲೆಂಜರ್ಸ್ ಬೆಂಗಳೂರು VS ಪಂಜಾಬ್ ಕಿಂಗ್ಸ್
ಮಹಾರಾಜ ಯಾದವೀಂದ್ರ ಸ್ಟೇಡಿಯಂ, ಚಂಡೀಗಢ

7.30 PM
ಮುಂಬೈ ಇಂಡಿಯನ್ಸ್ VS ಚೆನ್ನೈ ಸೂಪರ್ ಕಿಂಗ್ಸ್
ವಾಂಖೆಡೆ ಸ್ಟೇಡಿಯಂ, ಮುಂಬೈ



ಸಂಜು ಜೊತೆ ಮನಸ್ತಾಪ ಇಲ್ಲ...

'ಸಂಜು ಸ್ಯಾಮ್ಸನ್ ನಮ್ಮ ರಾಜಸ್ಥಾನ ನಿರ್ಧಾರ ತೆಗೆದುಕೊಳ್ಳುವ ಪ್ರಕ್ರಿಯೆಯ ಅವಿಭಾಜ್ಯ ಅಂಗವಾಗಿದ್ದಾರೆ. ನಾನು ಅವರೊಂದಿಗೆ ಉತ್ತಮ ಸಂಬಂಧ ಹೊಂದಿದ್ದೇನೆ. ತಂಡದ ಪ್ರತಿಯೊಂದು ಚರ್ಚೆ ಮತ್ತು ತೆಗೆದುಕೊಳ್ಳುವ ಪ್ರತಿಯೊಂದು ನಿರ್ಧಾರದಲ್ಲೂ ಅವರು ಭಾಗಿಯಾಗುತ್ತಾರೆ. ಪಂದ್ಯಗಳನ್ನು ಸೋಲುವಾಗ ಮತ್ತು ಪರಿಸ್ಥಿತಿ ನಿರೀಕ್ಷೆಯಂತೆ ಸಾಗದೇ ಇರುವಾಗ ನಾವು ಟೀಕೆಗಳನ್ನು ಎದುರಿಸುವುದು ಸಾಮಾನ್ಯ. ನಮ್ಮ ನಿರ್ವಹಣೆ ಚೆನ್ನಾಗಿಲ್ಲ ಎನ್ನುವ ಟೀಕೆಗಳನ್ನು ನಾವು ಸಂತೋಷದಿಂದ ಸ್ವೀಕರಿಸುತ್ತೇವೆ. ಆದರೆ ಆಧಾರರಹಿತ ವರದಿಗಳ ಬಗ್ಗೆ ನಾವು ಏನೂ ಮಾಡುವಂತಿಲ್ಲ. ಸಂಜು ಸ್ಯಾಮ್ಸನ್‌ಗೆ ಹೊಟ್ಟೆಯ ಭಾಗದಲ್ಲಿ ನೋವಿನ ಅನುಭವವಾಗಿದೆ. ಹೀಗಾಗಿ ಸ್ಕ್ಯಾನಿಂಗ್ ಮೊರೆ ಹೋಗಿದ್ದು, ಆ ಗಾಯದ ಗಂಭೀರತೆ ಕುರಿತು ನಮಗೆ ಸ್ಪಷ್ಟತೆ ಸಿಕ್ಕ ನಂತರ ಮುಂದಿನ ಪಂದ್ಯಗಳಲ್ಲಿ ಆಡುವ ನಿರ್ಧಾರ ತೆಗೆದುಕೊಳ್ಳುತ್ತೇವೆ'

-ರಾಹುಲ್ ದ್ರಾವಿಡ್, ಮುಖ್ಯ ಕೋಚ್, ರಾಜಸ್ಥಾನ್ ರಾಯಲ್ಸ್

ಸ್ಕೋರ್ ಬೋರ್ಡ್

ಡೆಲ್ಲಿ ಕ್ಯಾಪಿಟಲ್ಸ್ 203/8 (20 ಓವರ್)

ಡೆಲ್ಲಿ ಕ್ಯಾಪಿಟಲ್ಸ್		ರನ್	ಬಾಲ್
ಪೊರೆಲ್	ಬೌಲರ್ ▸ ಅರ್ಷದ್, ಕ್ಯಾಚ್ ▸ ಸಿರಾಜ್	18	9
ಕರುಣ್	ಬೌಲರ್ ▸ ಪ್ರಸಿದ್ಧ್, ಕ್ಯಾಚ್ ▸ ಅರ್ಷದ್	31	18
ರಾಹುಲ್	ಎಲ್‌ಬಿಡಬ್ಲ್ಯು-ಬೌಲರ್ ▸ ಪ್ರಸಿದ್ಧ್	28	14
ಅಕ್ಷರ್	ಬೌಲರ್ ▸ ಪ್ರಸಿದ್ಧ್, ಕ್ಯಾಚ್ ▸ ಬಟ್ಲರ್	39	32
ಸ್ಟಬ್ಸ್	ಬೌಲರ್ ▸ ಸಿರಾಜ್, ಕ್ಯಾಚ್ ▸ ಪ್ರಸಿದ್ಧ್	31	21
ಅಶುತೋಷ್	ಬೌಲರ್ ▸ ಕಿಶೋರ್, ಕ್ಯಾಚ್ ▸ (ಸಬ್)	37	19
ವಿಪ್ರಜ್	ಬೌಲರ್ ▸ ಪ್ರಸಿದ್ಧ್, ಕ್ಯಾಚ್ ▸ ಬಟ್ಲರ್	0	1
ಫೆರೇರಾ	ಬೌಲರ್ ▸ ಇಶಾಂತ್, ಕ್ಯಾಚ್ ▸ ಕಿಶೋರ್	1	3
ಸ್ಟಾರ್ಕ್	ನಾಟೌಟ್	2	2
ಕುಲದೀಪ್	ನಾಟೌಟ್	4	1

ಗುಜರಾತ್ ಟೈಟಾನ್ಸ್	ಓವರ್	ರನ್	ವಿಕೆಟ್
ಸಿರಾಜ್	4	47	1
ಅರ್ಷದ್	4	46	1
ಪ್ರಸಿದ್ಧ್	4	41	4
ರಶೀದ್	4	38	0
ಇಶಾಂತ್	3	19	1
ಕಿಶೋರ್	1	9	1

ಡೆಲ್ಲಿ ಕ್ಯಾಪಿಟಲ್ಸ್	ಓವರ್	ರನ್	ವಿಕೆಟ್
ಸ್ಟಾರ್ಕ್	3.2	49	0
ಮುಖೇಶ್	4	40	1
ಅಕ್ಷರ್	2	18	0
ವಿಪ್ರಜ್	4	34	0
ಕುಲದೀಪ್	4	30	1
ಮೋಹಿತ್	2	28	0

ಗುಜರಾತ್ ಟೈಟಾನ್ಸ್ 204/3 (19.2 ಓವರ್)

ಪಂಜಾಬ್ ಕಿಂಗ್ಸ್		ರನ್	ಬಾಲ್
ಸುದರ್ಶನ್	ಬೌಲರ್ ▸ ಕುಲ್‌ದೀಪ್, ಕ್ಯಾಚ್ ▸ ಸ್ಟಬ್ಸ್	36	21
ಗಿಲ್	ರನೌಟ್ (ಕರುಣ್)	7	5
ಬಟ್ಲರ್	ನಾಟೌಟ್	97	54
ರುದರ್‌ಫೋರ್ಡ್	ಬೌಲರ್ ▸ ಮುಖೇಶ್, ಕ್ಯಾಚ್ ▸ ಸ್ಟಾರ್ಕ್	43	34
ತೆವಾಟಿಯಾ	ನಾಟೌಟ್	11	3

ಕೆಕೆಆರ್ ತಂಡಕ್ಕೆ ನಾಯರ್ ವಾಪಸ್

ಕೋಲ್ಕತ್ತ: ಭಾರತ ಕ್ರಿಕೆಟ್ ತಂಡದ ಸಹಾಯಕ ಕೋಚ್ ಹುದ್ದೆಯಿಂದ ವಜಾಗೊಂಡಿರುವ ಅಭಿಷೇಕ್ ನಾಯರ್ ಅವರು ಕೋಲ್ಕತ್ತ ನೈಟ್ ರೈಡರ್ಸ್‌ನ ನೆರವು ಸಿಬ್ಬಂದಿ ತಂಡವನ್ನು ಮರಳಿ ಸೇರಿಕೊಂಡಿದ್ದಾರೆ. ಆದರೆ ತಂಡದಲ್ಲಿ ಅವರ ಪಾತ್ರದ ಕುರಿತು ಇನ್ನೂ ಬಹಿರಂಗವಾಗಿಲ್ಲ.

'ಮರಳಿ ಮನೆಗೆ ಸ್ವಾಗತ, ಅಭಿಷೇಕ್ ನಾಯರ್' ಎಂದು ಕೆಕೆಆರ್ ತನ್ನ 'ಎಕ್ಸ್' ಖಾತೆಯಲ್ಲಿ ಶನಿವಾರ ಪೋಸ್ಟ್ ಮಾಡಿದೆ, ಆ ಮೂಲಕ ನಾಯರ್ ಅವರು ತಂಡಕ್ಕೆ ಮರಳಿರುವುದನ್ನು ದೃಢಪಡಿಸಿದೆ. ಇದಕ್ಕೂ ಮೊದಲು ಪೋಸ್ಟ್ ಮಾಡಿ, ನಾಯರ್ ಅವರು ಸಹಾಯಕ ಕೋಚ್ ಆಗಿ ತಂಡಕ್ಕೆ ಮರಳಿದ್ದಾರೆ ಎಂದು ಬರೆದುಕೊಂಡಿತ್ತು, ಆದರೆ ಕೆಲವೇ ಹೊತ್ತಿನಲ್ಲಿ ಆ ಪೋಸ್ಟ್ ಅನ್ನು ಡಿಲೀಟ್ ಮಾಡಲಾಗಿತ್ತು. 2024ರಲ್ಲಿ ಕೋಲ್ಕತ್ತ ತಂಡವು ಐಪಿಎಲ್‌ನಲ್ಲಿ ಮೂರನೇ ಬಾರಿ ಪ್ರಶಸ್ತಿ ಗೆದ್ದಾಗ 41 ವರ್ಷ ವಯಸ್ಸಿನ ನಾಯರ್ ಅವರು ತಂಡದ ಸಹಾಯಕ ಕೋಚ್ ಮತ್ತು ಮೆಂಟರ್ ಆಗಿದ್ದರು. ದಶಕಗಳ ಕಾಲ ಕೆಕೆಆರ್ ಅಕಾಡೆಮಿಯಲ್ಲಿ ಆಟಗಾರರ ತರಬೇತಿಯಲ್ಲಿ ಅವರು ಪ್ರಮುಖ ಪಾತ್ರ ವಹಿಸಿದ್ದರು. ಭಾರತ ತಂಡದ ಮುಖ್ಯ ಕೋಚ್ ಗೌತಮ್ ಗಂಭೀರ್ ಅವರ ಆಪ್ತ ಬಳಗದಲ್ಲಿ ಗುರುತಿಸಿಕೊಂಡಿದ್ದ ನಾಯರ್ 2024ರಲ್ಲಿ ರಾಷ್ಟ್ರೀಯ ತಂಡ ಸೇರಿದ್ದರು. ಕಳೆದ ವರ್ಷಾಂತ್ಯದಲ್ಲಿ ನ್ಯೂಜಿಲೆಂಡ್ ಮತ್ತು ಆಸ್ಟ್ರೇಲಿಯಾ ವಿರುದ್ಧ ಭಾರತ ತಂಡವು ಟೆಸ್ಟ್ ಸರಣಿಗಳಲ್ಲಿ ಅನುಭವಿಸಿದ ಹಿನ್ನಡೆಯ ಕಾರಣಕ್ಕಾಗಿ ಬಿಸಿಸಿಐ ನಡೆಸಿದ ಮೌಲ್ಯಮಾಪನದ ಬಳಿಕ ನಾಯರ್ ಅವರನ್ನು ತೆಗೆದುಹಾಕಲಾಗಿತ್ತು.

ಐಪಿಎಲ್‌ನಲ್ಲಿ ಮಾತಿನ ಚಕಮಕಿ

ಅಹಮದಾಬಾದ್: ಈ ಐಪಿಎಲ್ ಟೂರ್ನಿಯಲ್ಲಿ ಆಟಗಾರರ ವಿರುದ್ಧ ಮೈದಾನದಲ್ಲಿ ಆಕ್ರೋಶ ವ್ಯಕ್ತಪಡಿಸುವುದು ಸಾಮಾನ್ಯವಾಗಿದೆ. ಶನಿವಾರ ಇಲ್ಲಿನ ನರೇಂದ್ರ ಮೋದಿ ಕ್ರೀಡಾಂಗಣದಲ್ಲಿ ನಡೆದಿದ್ದ ಗುಜರಾತ್ ಟೈಟನ್ಸ್ ಹಾಗೂ ಡೆಲ್ಲಿ ಕ್ಯಾಪಿಟಲ್ಸ್ ತಂಡಗಳ ನಡುವಿನ ಪಂದ್ಯದಲ್ಲಿಯೂ ಒಂದು ಅಪರೂಪದ ಘಟನೆ ನಡೆಯಿತು. ಟೈಟನ್ಸ್ ಹಿರಿಯ ವೇಗಿ ಇಶಾಂತ್ ಶರ್ಮಾ ಬೌಲಿಂಗ್ ವೇಳೆ ಎದುರಾಳಿ ತಂಡದ ಆಶುತೋಷ್ ಶರ್ಮಾಗೆ ದಮಕಿ ಹಾಕಿದರು. ಈ ವಿಡಿಯೊ ಸೋಶಿಯಲ್ ಮೀಡಿಯಾದಲ್ಲಿ ಸಿಕ್ಕಾಪಟ್ಟೆ ವೈರಲ್ ಆಗಿದೆ. ಆಶುತೋಷ್ ಶರ್ಮಾ ಬೌಲಿಂಗ್ ತುದಿಯನ್ನು ತಲುಪಿದಾಗ ಅವರ ಮತ್ತು ಇಶಾಂತ್ ಶರ್ಮಾ ನಡುವೆ ವಾಗ್ವಾದ ನಡೆಯಿತು. ಇಬ್ಬರೂ ಒಬ್ಬರಿಗೊಬ್ಬರು ಏನೋ ಹೇಳಿಕೊಳ್ಳುತ್ತಿರುವುದು ಕಂಡುಬಂತು. ಆದರೆ ಇಬ್ಬರೂ ಪರಸ್ಪರ ಏನು ಮಾತನಾಡುತ್ತಿದ್ದರು ಎಂಬುದು ರಿವೀಲ್ ಆಗಿಲ್ಲ. ಇಶಾಂತ್ ಶರ್ಮಾ, ಎದುರಾಳಿ ಬ್ಯಾಟರ್ ಆಶುತೋಷ್ ಶರ್ಮಾ ಮೇಲೆ ಕಿಡಿ ಕಾರಿದದ್ದರು. ಆ ವೇಳೆ ಆಕ್ರೋಶಭರಿತರಾಗಿದ್ದ ಇಶಾಂತ್ ಶರ್ಮಾ ತಮ್ಮ ಕೈ ಬೆರಳು ತೋರಿಸುವ ಮೂಲಕ ಡೆಲ್ಲಿ ಬ್ಯಾಟ್ಸ್‌ಮನ್‌ಗೆ ಅವಾಜ್ ಹಾಕಿದರು.

ವಿರಾಮ
ಪ್ರತಿ ಭಾನುವಾರ

ಡೆಲ್ಲಿ ವೇಗಿ ಕನ್ನಡಿಗ ಪ್ರಸಿದ್ಧ್ ಕೃಷ್ಣಗೆ 4 ವಿಕೆಟ್ | ಜೋಸ್ ಬಟ್ಲರ್ ಅಬ್ಬರದ ಬ್ಯಾಟಿಂಗ್

ಗುಜರಾತ್‌ಗೆ 7 ವಿಕೆಟ್‌ಗಳ ಜಯ

ಅಹಮದಾಬಾದ್: ಇಲ್ಲಿನ ನರೇಂದ್ರ ಮೋದಿ ಕ್ರೀಡಾಂಗಣದಲ್ಲಿ ಶನಿವಾರ ನಡೆದ ಐಪಿಎಲ್ ಪಂದ್ಯದಲ್ಲಿ ಡೆಲ್ಲಿ ಕ್ಯಾಪಿಟಲ್ಸ್ ವಿರುದ್ಧ ಗುಜರಾತ್ ಟೈಟನ್ಸ್ ತಂಡವು ಭರ್ಜರಿ ಜಯ ಸಾಧಿಸಿದೆ. ಡೆಲ್ಲಿ ತಂಡ ನೀಡಿದ್ದ 204 ರನ್‌ಗಳ ಗುರಿಯನ್ನು ಬೆನ್ನಟ್ಟಿದ ಗುಜರಾತ್ ತಂಡವು ಜೋಸ್ ಬಟ್ಲರ್ ಸಿಡಿಸಿದ 97 ರನ್‌ಗಳ ನೆರವಿನಿಂದ, 19.2 ಓವರ್‌ಗಳಲ್ಲಿ ಕೇವಲ 3 ವಿಕೆಟ್ ಕಳೆದುಕೊಂಡು 7 ವಿಕೆಟ್‌ಗಳ ಸುಲಭ ಗೆಲುವನ್ನು ಸಾಧಿಸಿತು.

204ರನ್‌ಗಳ ಸವಾಲಿನ ಗುರಿ ಪಡೆದಿದ್ದ ಗುಜರಾತ್ ಟೈಟನ್ಸ್ ತಂಡದ ಆರಂಭ ಉತ್ತಮವಾಗಿರಲಿಲ್ಲ. ನಾಯಕ ಶುಭ್‌ಮನ್ ಗಿಲ್ (7) ರನ್ ಕದಿಯುವ ಆತುರದಲ್ಲಿ ಕರುಣ್ ನಾಯರ್‌ರವರ ರನೌಟ್‌ಗೆ ಬಲಿಯಾದರು. ಉತ್ತಮ ಫಾರ್ಮ್‌ನಲ್ಲಿರುವ ಸಾಯಿ ಸುದರ್ಶನ್ 2ನೇ ವಿಕೆಟ್‌ಗೆ ಬಟ್ಲರ್ ಜತೆ ಸೇರಿ 35 ಎಸೆತಗಳಲ್ಲಿ 60 ರನ್ ಜತೆಯಾಟ ಪ್ರದರ್ಶಿಸಿದರು. ಸುದರ್ಶನ್ 21 ಎಸೆತಗಳಲ್ಲಿ 5 ಬೌಂಡರಿ, 1 ಸಿಕ್ಸರ್ ಸಹಿತ 36 ರನ್ ಗಳಿಸಿ ಕುಲ್‌ದೀಪ್ ಯಾದವ್ ಬೌಲಿಂಗ್‌ನಲ್ಲಿ ಔಟ್ ಆದರು.

3ನೇ ವಿಕೆಟ್‌ಗೆ ಬಟ್ಲರ್ ಜತೆಗೂಡಿದ ಶೆರ್ಫಾನ್ ರುದರ್‌ಫೋರ್ಡ್ 119 ರನ್‌ಗಳ ಜತೆಯಾಟ ಪ್ರದರ್ಶಿಸಿದರು. 19ನೇ ಓವರ್‌ನಲ್ಲಿ ರುದರ್‌ಫೋರ್ಡ್ ಔಟ್ ಆಗುವ ಮುನ್ನ 34 ಎಸೆತಗಳಲ್ಲಿ 1 ಬೌಂಡರಿ, 3 ಸಿಕ್ಸರ್‌ಗಳ ಸಹಿತ 42 ರನ್ ಗಳಿಸಿದರು. ಕೊನೆಯ ಓವರ್‌ನಲ್ಲಿ ಗೆಲ್ಲಲು 10 ರನ್‌ಗಳ ಅವಶ್ಯಕತೆಯಿತ್ತು.

ರಾಹುಲ್: 200 ಸಿಕ್ಸರ್

ಡೆಲ್ಲಿ ಕ್ಯಾಪಿಟಲ್ಸ್ ಪರ ಐಪಿಎಲ್ ಆಡುತ್ತಿರುವ ಕನ್ನಡಿಗ ಕೆಎಲ್ ರಾಹುಲ್ ಈ ಆವೃತ್ತಿಯಲ್ಲಿ ಇದುವರೆಗೆ ಅಮೋಘ ಪ್ರದರ್ಶನ ನೀಡುತ್ತಾ ಬಂದಿದ್ದಾರೆ. ಶನಿವಾರ ಗುಜರಾತ್ ಟೈಟನ್ಸ್ ತಂಡದ ವಿರುದ್ಧ ನಡೆದ ಪಂದ್ಯದಲ್ಲಿ ಏಕೈಕ ಸಿಕ್ಸರ್ ಬಾರಿಸುವ ಮೂಲಕ ದಾಖಲೆಯೊಂದನ್ನು ಕೂಡ ಅವರು ನಿರ್ಮಿಸಿದ್ದಾರೆ. ಗುಜರಾತ್ ವೇಗಿ ಮೊಹಮದ್ ಸಿರಾಜ್ ಎಸೆತದಲ್ಲಿ ಭರ್ಜರಿ ಸಿಕ್ಸರ್ ಬಾರಿಸುವ ಮೂಲಕ ಐಪಿಎಲ್‌ನಲ್ಲಿ 200 ಸಿಕ್ಸರ್‌ಗಳನ್ನು ರಾಹುಲ್ ಪೂರ್ಣಗೊಳಿಸಿದರು. ಐಪಿಎಲ್‌ನಲ್ಲಿ ಈ ಸಾಧನೆ ಮಾಡಿದ ಆರನೇ ಭಾರತೀಯ ಆಟಗಾರ ಎಂಬ ಹೆಗ್ಗಳಿಕೆಗೆ ಅವರು ಪಾತ್ರರಾಗಿದ್ದಾರೆ. ರಾಹುಲ್‌ಗಿಂತ ಮೊದಲು ರೋಹಿತ್ ಶರ್ಮಾ, ಎಂಎಸ್ ಧೋನಿ, ವಿರಾಟ್ ಕೊಹ್ಲಿ, ಸುರೇಶ್ ರೈನಾ ಮತ್ತು ಯುವರಾಜ್ ಸಿಂಗ್ ಈ ದಾಖಲೆಯನ್ನು ಮಾಡಿದ್ದಾರೆ.

ತೆವಾಟಿಯಾ ಒಂದು ಸಿಕ್ಸರ್ ಹಾಗೂ ಬೌಂಡರಿ ಸಿಡಿಸಿ ತಂಡವನ್ನು ಗೆಲುವಿನ ಗಡಿ ದಾಟಿಸಿದರು. ಬಟ್ಲರ್ 54 ಎಸೆತಗಳಲ್ಲಿ 11 ಬೌಂಡರಿ ಹಾಗೂ 4 ಸಿಕ್ಸರ್‌ಗಳ ಸಹಿತ ಅಜೇಯ 97 ರನ್ ಗಳಿಸಿದರು. ಬಟ್ಲರ್‌ಗೆ ಶತಕ ಸಿಡಿಸಲು ಅವಕಾಶ ಇತ್ತಾದರೂ, ಸ್ಟಾರ್ಕ್ ಬೌಲಿಂಗ್ ಮಾಡುತ್ತಿದ್ದುದರಿಂದ ತಂಡಕ್ಕೆ ಹಿನ್ನಡೆಯಾಗಬಾರದೆಂಬ ಉದ್ದೇಶದಿಂದ ತೆವಾಟಿಯಾಗೆ ಪಂದ್ಯ ಮುಗಿಸಲು ಅವಕಾಶ ನೀಡಿದರು.

ಇದಕ್ಕೂ ಮುನ್ನ ಟಾಸ್ ಸೋತು ಮೊದಲು ಬ್ಯಾಟಿಂಗ್ ಆಯ್ದುಕೊಂಡ ಡೆಲ್ಲಿ ಕ್ಯಾಪಿಟಲ್ಸ್ ತಂಡವು ಗುಜರಾತ್ ಟೈಟಾನ್ಸ್ ಗೆಲುವಿಗೆ 204 ರನ್‌ಗಳ ಗುರಿಯನ್ನು ನೀಡಿತ್ತು. ದೆಹಲಿ ಪರ ಯಾವೊಬ್ಬ ಆಟಗಾರ ಕೂಡ ಅರ್ಧಶತಕ ಸಿಡಿಸಲಿಲ್ಲ. ನಾಯಕ ಅಕ್ಷರ್ ಪಟೇಲ್ 32 ಬಾಲ್‌ಗಳಲ್ಲಿ 39 ರನ್ ಗಳಿಸಿ ಟಾಪ್ ಸ್ಕೋರರ್ ಎನಿಸಿಕೊಂಡರು. ಅವರ ಇನ್ನಿಂಗ್ಸ್‌ನಲ್ಲಿ 2 ಸಿಕ್ಸರ್ ಮತ್ತು 1 ಬೌಂಡರಿ ಇತ್ತು.

ಕೆಎಲ್ ರಾಹುಲ್ ಕೇವಲ 14 ಬಾಲ್‌ಗಳಲ್ಲಿ 28 ರನ್ ಗಳಿಸಿ ಪ್ರಸಿದ್ಧ್ ಕೃಷ್ಣ ಬೌಲಿಂಗ್‌ನಲ್ಲಿ ಎಲ್‌ಬಿಡಬ್ಲ್ಯು ಬಲೆಗೆ ಸಿಲುಕಿ ಔಟ್ ಆದರು. ಅವರು 4 ಬೌಂಡರಿ ಹಾಗೂ 1 ಸಿಕ್ಸರ್ ಬಾರಿಸಿದ್ದರು. ಕರುಣ್ ನಾಯರ್ ಕೇವಲ 18 ಬಾಲ್‌ಗಳಲ್ಲಿ 31 ರನ್ ಗಳಿಸಿದ್ದರು. ಸ್ಟಬ್ಸ್ 31 ರನ್, ಅಶುತೋಷ್ ಶರ್ಮಾ 19 ಬಾಲ್‌ಗಳಲ್ಲಿ 37 ರನ್ ಗಳಿಸಿ ತಂಡದ ಮೊತ್ತವನ್ನು 200ರ ಗಡಿ ದಾಟಲು ನೆರವಾಗಿದ್ದರು.

ಪ್ರಸಿದ್ಧ್ ಕೃಷ್ಣ 4 ವಿಕೆಟ್‌ಗಳನ್ನು ಕಬಳಿಸಿ ಗುಜರಾತ್ ಟೈಟಾನ್ಸ್ ಪರ ಅತ್ಯಂತ ಯಶಸ್ವಿ ಬೌಲರ್ ಎನಿಸಿದರು.

ಮರ್ಕ್ರಮ್, ಬಧೋನಿ ಅರ್ಧ ಶತಕ | ಲಖನೌ ಸಾಧಾರಣ ಮೊತ್ತ

ರಾಜಸ್ಥಾನಕ್ಕೆ 181 ರನ್‌ಗಳ ಗುರಿ

ಜೈಪುರ: ಇಲ್ಲಿನ ಸವಾಯ್‌ಮಾನ್ ಸಿಂಗ್ ಸ್ಟೇಡಿಯಂನಲ್ಲಿ ಶನಿವಾರ ನಡೆದ ಐಪಿಎಲ್ ಟೂರ್ನಿಯಲ್ಲಿ ರಿಷಬ್ ಪಂತ್ ನಾಯಕತ್ವದ ಲಖನೌ ಸೂಪರ್‌ಜೈಂಟ್ಸ್ ತಂಡವು ರಿಯಾನ್ ಪರಾಗ್ ನಾಯಕತ್ವದ ರಾಜಸ್ಥಾನ ರಾಯಲ್ಸ್ ತಂಡಕ್ಕೆ 181 ರನ್‌ಗಳ ಗೆಲುವಿನ ಗುರಿ ನೀಡಿದೆ.

ಪಂದ್ಯದಲ್ಲಿ ಟಾಸ್ ಗೆದ್ದ ಪಂತ್ ಬಳಗವು ಮೊದಲು ಬ್ಯಾಟಿಂಗ್ ಆಯ್ದುಕೊಂಡಿತು. ಆರಂಭಿಕ ಆಟಗಾರರಾದ ಮಾರ್ಷ್ ಮತ್ತು ಮರ್ಕ್ರಮ್ ಮೊದಲ ವಿಕೆಟ್‌ಗೆ 16 ರನ್‌ಗಳನ್ನಷ್ಟೇ ಪೇರಿಸಲು ಶಕ್ತರಾದರು. ಮಾರ್ಷ್ 6 ಬಾಲ್‌ಗಳಲ್ಲಿ ಕೇವಲ 4 ರನ್ ಗಳಿಸಿ ಆರ್ಚರ್‌ಗೆ ತಮ್ಮ ವಿಕೆಟ್ ಒಪ್ಪಿಸಿದರು. ಆ ಬಳಿಕ ಮರ್ಕ್ರಮ್ ಮತ್ತು ಪೂರನ್ ನಡುವೆ ಜತೆಯಾಟ ಮುಮದುವರಿಯಿತು. ಪೂರನ್ 8 ಬಾಲ್‌ಗಳಲ್ಲಿ 11 ರನ್ ಗಳಿಸಿ ಸಂದೀಪ್ ಶರ್ಮಾ ಬೌಲಿಂಗ್ ನಲ್ಲಿ ಎಲ್‌ಬಿಡಬ್ಲ್ಯು ಔಟ್ ಆಗಿ ಪೆವಿಲಿಯನ್‌ಗೆ ತೆರಳಿದರು.



ಆ ಬಳಿಕ ಬಂದ ತಂಡದ ನಾಯಕ ರಿಷಬ್ ಪಂತ್ ಕೂಡಾ ಹೆಚ್ಚು ಹೊತ್ತು ಕ್ರೀಸ್‌ನಲ್ಲಿ ಇರಲಿಲ್ಲ. 9 ಬಾಲ್‌ಗಳನ್ನು ಎದುರಿಸಿ ಕೇವಲ 3 ರನ್ ಗಳಿಸಿ ಅವರು ಹಸರಂಗ ಬೌಲಿಂಗ್‌ನಲ್ಲಿ ಧ್ರುವ್ ಜ್ಯುರೆಲ್‌ಗೆ ಕ್ಯಾಚ್ ನೀಡಿ ಔಟ್ ಆಡಿದರು. ಬಳಿಕ 45 ಬಾಲ್‌ಗಳಲ್ಲಿ 66 ರನ್ ಗಳಿಸಿದ್ದ ಮರ್ಕ್ರಮ್ ಹಸರಂಗ ಬೌಲಿಂಗ್‌ನಲ್ಲಿ ರಿಯಾನ್ ಪರಾಗ್‌ಗೆ ಕ್ಯಾಚ್ ನೀಡುವ ಮೂಲಕ ಔಟ್ ಆದರು. ಬಳಿಕ ಬಂದ ಬಧೋನಿ ಉತ್ತಮ ಬ್ಯಾಟಿಂಗ್ ಪ್ರದರ್ಶನ ನೀಡಿದರು. 34 ಬಾಲ್‌ಗಳಲ್ಲಿ ಅವರು 50 ರನ್ ಸಿಡಿಸಿ ತುಷಾರ್ ದೇಶ್‌ಪಾಂಡೆ ಬೌಲಿಂಗ್‌ನಲ್ಲಿ ಶುಭಂ ದುಬೆಗೆ ಕ್ಯಾಚ್ ನೀಡುವ ಮೂಲಕ ತಮ್ಮ ವಿಕೆಟ್ ಕಳೆದುಕೊಂಡರು. 4 ಸಿಕ್ಸರ್ ಮೂಲಕ ತಂಡದ ಅಂತಿಮ ಓವರ್‌ನಲ್ಲಿ 27 ರನ್ ಸಿಡಿಸುವ ಮೂಲಕ ಅಬ್ದುಲ್ ಸಮದ್ ತಂಡದ ಮೊತ್ತವನ್ನು 180ಕ್ಕೆ ತಲುಪಿಸಿದರು. 10 ಬಾಲ್‌ಗಳನ್ನು ಎದುರಿಸಿ ಅವರು 30 ರನ್ ಗಳಿಸಿ ಅಜೇಯರಾಗಿ ಉಳಿದರು. ಮಿಲ್ಲರ್ 8 ಎಸೆತಗಳನ್ನು ಎದುರಿಸಿ 7 ರನ್ ಗಳಿಸಿ ಅಜೇಯರಾಗಿ ಉಳಿದರು.

ಲಖನೌ ತಂಡ ನಿಗದಿತ 20 ಓವರ್‌ಗಳಲ್ಲಿ 180 ರನ್ ಕಲೆಹಾಕಿ, ರಾಜಸ್ಥಾನದ ಗೆಲುವಿಗೆ 181 ರನ್‌ಗಳ ಗುರಿ ನೀಡಿದರು. ರಾಜಸ್ಥಾನ ಪರವಾಗಿ ವನಿಂದು ಹಸರಂಗ 2, ಜೋಫ್ರಾ ಆರ್ಚರ್, ಸಂದೀಪ್ ಶರ್ಮಾ ಹಾಗೂ ತುಷಾರ್ ದೇಶಪಾಂಡೆ ತಲಾ ಒಂದೊಂದು ವಿಕೆಟ್ ಪಡೆದು ಮಿಂಚಿದರು.

ಐಪಿಎಲ್: ವೈಭವ ಸೂರ್ಯವಂಶಿ ದಾಖಲೆ

ಜೈಪುರ: ಲಖನೌ ಸೂಪರ್ ಜಯಂಟ್ಸ್ ವಿರುದ್ಧದ ಪಂದ್ಯದಲ್ಲಿ ರಾಜಸ್ಥಾನ್ ರಾಯಲ್ ಪರ ಇಂಪ್ಯಾಕ್ಟ್ ಪ್ಲೇಯರ್ ಆಗಿ ಕಣಕ್ಕೆ ಇಳಿಯುವ ಮೂಲಕ 14ರ ವಯಸ್ಸಿನ ವೈಭವ್ ಸೂರ್ಯವಂಶಿ ಐಪಿಎಲ್ ಟೂರ್ನಿಗೆ ಪದಾರ್ಪಣೆ ಮಾಡಿದ ಅತ್ಯಂತ ಕಿರಿಯ ಆಟಗಾರ ಎಂಬ ನೂತನ ಮೈಲುಗಲ್ಲು ಸ್ಥಾಪಿಸಿದ್ದಾರೆ. ಅದರಲ್ಲಿಯೂ ವಿಶೇಷವಾಗಿ ಯಶಸ್ವಿ ಜೈಸ್ವಾಲ್ ಅವರ ಜೊತೆ ಇನಿಂಗ್ಸ್ ಆರಂಭಿಸಿದ ವೈಭವ್, ತಾವು ಎದುರುಸಿದ ಮೊದಲನೇ ಎಸೆತದಲ್ಲಿ ಸಿಕ್ಸರ್ ಬಾರಿಸಿ ತಮ್ಮ ಐಪಿಎಲ್ ವೃತ್ತಿ ಜೀವನವನ್ನು ಅದ್ದೂರಿಯಾಗಿ ಆರಂಭಿಸಿದ್ದಾರೆ.

ವೈಭವ್ ಸೂರ್ಯವಂಶಿ ಅವರು 2011ರಲ್ಲಿ ಜನಿಸಿದ್ದರು, ಐಪಿಎಲ್ ಟೂರ್ನಿ ಆರಂಭವಾದ ಬಳಿಕ ವಿಶ್ವದ ಅತ್ಯಂತ ಶ್ರೀಮಂತ ಫ್ರಾಂಚೈಸಿ ಲೀಗ್‌ಗೆ ಪದಾರ್ಪಣೆ ಮಾಡಿದ ಮೊದಲ ಆಟಗಾರ ಎಂಬ ದಾಖಲೆಯನ್ನು ವೈಭವ್ ಬರೆದಿದ್ದಾರೆ.

ವೇಗಿ ಸಂದೀಪ್ ಶರ್ಮಾ ಬದಲಿಗೆ ಬ್ಯಾಟಿಂಗ್‌ಗೆ ಬಂದ ವೈಭವ್ ಸೂರ್ಯವಂಶಿ, ಮೊದಲ ಓವರ್‌ನ ನಾಲ್ಕನೇ ಎಸೆತದಲ್ಲಿ ಸ್ಟ್ರೈಕ್ ಪಡೆದರು. ಲಖನೌ ಪರ ಶಾರ್ದೂಲ್ ಠಾಕೂರ್ ಮೊದಲ ಓವರ್ ಬೌಲ್ ಮಾಡಿದರು. ಮೊದಲ ಎಸೆತದಲ್ಲಿ ಯಶಸ್ವಿ ಜೈಸ್ವಾಲ್ ಸ್ಟ್ರೈಕ್ ಪಡೆದರು ಮತ್ತು ಅದರಲ್ಲಿ ಯಾವುದೇ ರನ್ ಗಳಿಸಲಿಲ್ಲ, ಎರಡನೇ ಎಸೆತದಲ್ಲಿ ಜೈಸ್ವಾಲ್, ಅದ್ಭುತವಾಗಿ ಬೌಂಡರಿ ಬಾರಿಸಿದರು. ಮೂರನೇ ಎಸೆತದಲ್ಲಿ ಅವರು ಒಂದು ರನ್ ತೆಗೆದುಕೊಂಡು ವೈಭವ್‌ಗೆ ಸ್ಟ್ರೈಕ್ ನೀಡಿದರು. ಭಯವಿಲ್ಲದೆ ಆಡಿ ತಮ್ಮ ಐಪಿಎಲ್ ವೃತ್ತಿಜೀವನದ ಮೊದಲ ಎಸೆತದಲ್ಲೇ ಸಿಕ್ಸರ್ ಬಾರಿಸಿ ವೈಭವ್ ಸೂರ್ಯವಂಶಿ ತಮ್ಮ ಖಾತೆ ತೆರೆಯುವ ಮೂಲಕ ಎಲ್ಲರನ್ನೂ ಅಚ್ಚರಿ ಮೂಡಿಸಿದರು.

ಆರ್‌ಸಿಬಿಯನ್ನು ಮತ್ತೆ ಕುಟುಕಿದ ಸೆಹ್ವಾಗ್

ಬೆಂಗಳೂರು: ಶುಕ್ರವಾರ ಚಿನ್ನಸ್ವಾಮಿ ಮೈದಾನದಲ್ಲಿ ಆರ್‌ಸಿಬಿ ತಂಡದ ಕಳಪೆ ಬ್ಯಾಟಿಂಗ್ ಪ್ರದರ್ಶನವನ್ನು ನೋಡಿದ ಭಾರತದ ಮಾಜಿ ಕ್ರಿಕೆಟಿಗ ವೀರೇಂದ್ರ ಸೆಹ್ವಾಗ್ ಬೆಂಗಳೂರು ಬ್ಯಾಟ್ಸ್‌ಮನ್‌ಗಳನ್ನು ಗುರಿಯಾಗಿಸಿಕೊಂಡು ಮಧ್ಯಮ ಕ್ರಮಾಂಕವನ್ನು ತಂಡದ ದೊಡ್ಡ ದೌರ್ಬಲ್ಯ ಎಂದು ಬಣ್ಣಿಸಿದ್ದಾರೆ.

ಪಂದ್ಯದ ಬಗ್ಗೆ ವಿಶ್ಲೇಷಿಸಿ ಮಾತನಾಡಿದ ವೀರೇಂದ್ರ ಸೆಹ್ವಾಗ್, ಆರ್‌ಸಿಬಿಯ ಮಧ್ಯಮ ಕ್ರಮಾಂಕ ದೊಡ್ಡ ದೌರ್ಬಲ್ಯವಾಗಿದೆ. ಜಿತೇಶ್ ಶರ್ಮಾ, ಲಿಯಾಮ್ ಲಿವಿಂಗ್‌ಸ್ಟೋನ್ ಮತ್ತು ಕೃನಾಲ್ ಪಾಂಡ್ಯ ಅವರ ಬ್ಯಾಟಿಂಗ್ ಸಾಕಷ್ಟು ನಿರಾಶೆಗೊಳಿಸಿದೆ. ಈ ಮೂವರು ಯಾವುದೇ ಪಂದ್ಯದಲ್ಲೂ ಸರಿಯಾಗಿ ಕೊಡುಗೆ ನೀಡುತ್ತಿಲ್ಲ, ಇದರಿಂದಾಗಿ ಬೆಂಗಳೂರು ಈ ಸ್ಥಿತಿಗೆ ತಲುಪಿದೆ. ಆರ್‌ಸಿಬಿ ತಂಡವು ವಿರಾಟ್ ಕೊಹ್ಲಿ, ಫಿಲ್ ಸಾಲ್ಟ್ ಮತ್ತು ರಜತ್ ಪಾಟಿದಾರ್ ಅವರ ಮೇಲೆ ಅತಿಯಾಗಿ ಅವಲಂಬಿತವಾಗಿದೆ ಎಂದು ಸೆಹ್ವಾಗ್ ಹೇಳಿದ್ದಾರೆ.

200 ಸಿಕ್ಸರ್ ಬಾರಿಸಿದ ಟಾಪ್ 5 ಬ್ಯಾಟ್ಸ್‌ಮನ್‌ಗಳು

ದೆಹಲಿ: ಐಪಿಎಲ್ ಟೂರ್ನಿಯಲ್ಲಿ ಅತಿ ವೇಗವಾಗಿ 200 ಸಿಕ್ಸರ್‌ಗಳನ್ನು ಸಿಡಿಸಿದ ಅಗ್ರ ಐವರು ಬ್ಯಾಟ್ಸ್‌ಮನ್‌ಗಳ ಪಟ್ಟಿಯಲ್ಲಿ ವೆಸ್ಟ್ ಇಂಡೀಸ್ ಆಟಗಾರರು ಪ್ರಾಬಲ್ಯ ಸಾಧಿಸಿದ್ದಾರೆ. ದಿಗ್ಗಜ ಕ್ರಿಸ್ ಗೇಲ್ ಅಗ್ರ ಸ್ಥಾನದಲ್ಲಿದ್ದರೆ, ಕೈರೊನ್ ಪೊಲಾರ್ಡ್ ಐದನೇ ಸ್ಥಾನವನ್ನು ಅಲಂಕರಿಸಿದ್ದಾರೆ.



ಕ್ರಿಸ್ ಗೇಲ್: ವೆಸ್ಟ್ ಇಂಡೀಸ್ ದಿಗ್ಗಜ ಹಾಗೂ ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡದ ಮಾಜಿ ಆರಂಭಿಕ ಬ್ಯಾಟ್ಸ್‌ಮನ್ ಕ್ರಿಸ್ ಗೇಲ್ ಐಪಿಎಲ್ ಇತಿಹಾಸದಲ್ಲಿಯೇ ಅತ್ಯಂತ ವೇಗವಾಗಿ 200 ಸಿಕ್ಸರ್‌ಗಳನ್ನು ಪೂರ್ಣಗೊಳಿಸಿದ ಮೊದಲ ಬ್ಯಾಟ್ಸ್‌ಮನ್ ಎನಿಸಿಕೊಂಡಿದ್ದಾರೆ. ತಮ್ಮ 69ನೇ ಐಪಿಎಲ್ ಇನಿಂಗ್ಸ್‌ನಲ್ಲಿ ಗೇಲ್ ಈ ಸಾಧನೆ ಮಾಡಿದ್ದರು.

ಆ್ಯಂಡ್ರೆ ರಸೆಲ್: ವೆಸ್ಟ್ ಇಂಡೀಸ್ ಹಾಗೂ ಕೋಲ್ಕತಾ ನೈಟ್ ರೈಡರ್ಸ್ ತಂಡದ ಸ್ಟಾರ್ ಆಲ್‌ರೌಂಡರ್ ಆ್ಯಂಡ್ರೆ ರಸೆಲ್ ಅವರು ಈ ಪಟ್ಟಿಯಲ್ಲಿ ಎರಡನೇ ಸ್ಥಾನದಲ್ಲಿದ್ದಾರೆ. ಇವರು ಐಪಿಎಲ್ ಟೂರ್ನಿಯಲ್ಲಿ 200 ಸಿಕ್ಸರ್‌ಗಳನ್ನು ಪೂರ್ಣಗೊಳಿಸಲು 97 ಇನಿಂಗ್ಸ್‌ಗಳನ್ನು ತೆಗೆದುಕೊಂಡಿದ್ದಾರೆ. ಆ್ಯಂಡ್ರೆ ರಸೆಲ್ ತಮ್ಮ ಐಪಿಎಲ್ ವೃತ್ತಿ ಜೀವನವನ್ನು ಬಹುತೇಕ ಕೆಕೆಆರ್ ಪರ ಹೊಂದಿದ್ದಾರೆ.

ಎಬಿ ಡಿ ವಿಲಿಯರ್ಸ್: ದಕ್ಷಿಣ ಆಫ್ರಿಕಾ ಮಾಜಿ ನಾಯಕ ಹಾಗೂ ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡದ ಮಾಜಿ ಆಟಗಾರ ಎಬಿ ಡಿವಿಲಿಯರ್ಸ್ ಈ ಪಟ್ಟಿಯಲ್ಲಿ ಮೂರನೇ ಸ್ಥಾನವನ್ನು ಅಲಂಕರಿಸಿ ದ್ದಾರೆ. ಅವರು ತಮ್ಮ ಐಪಿಎಲ್ ವೃತ್ತಿ ಜೀವನದಲ್ಲಿ 137 ಇನಿಂಗ್ಸ್‌ಗಳಲ್ಲಿ 200 ಸಿಕ್ಸರ್‌ಗಳನ್ನು ಪೂರ್ಣ ಗೊಳಿಸಿದ್ದು, ಅವರು 2021ರಲ್ಲಿ ಐಪಿಎಲ್ ವೃತ್ತಿ ಜೀವನಕ್ಕೆ ವಿದಾಯ ಹೇಳಿದ್ದರು.

ಡೇವಿಡ್ ವಾರ್ನರ್: ಆಸ್ಟ್ರೇಲಿಯಾ ಮಾಜಿ ಆರಂಭಿಕ ಬ್ಯಾಟ್ಸ್‌ಮನ್ ಡೇವಿಡ್ ವಾರ್ನರ್ ಕೂಡ ಈ ಸಾಲಿನಲ್ಲಿ ನಾಲ್ಕನೇ ಸ್ಥಾನವನ್ನು ಅಲಂಕರಿಸಿದ್ದಾರೆ. ಇವರು ತಮ್ಮ ಐಪಿಎಲ್ ವೃತ್ತಿ ಜೀವನದಲ್ಲಿ 148 ಇನಿಂಗ್ಸ್‌ಗಳ ಮೂಲಕ 200 ಸಿಕ್ಸರ್‌ಗಳನ್ನು ಪೂರ್ಣಗೊಳಿ ಸಿದ್ದಾರೆ. ಕಳೆದ ವರ್ಷ ನಡೆದಿದ್ದ 2025ರ ಐಪಿಎಲ್ ಟೂರ್ನಿಯ ಮೆಗಾ ಹರಾಜಿನಲ್ಲಿ ವಾರ್ನರ್ ಅನ್‌ಸೋಲ್ಡ್ ಆಗಿದ್ದರು.

ಕೈರೊನ್ ಪೊಲಾರ್ಡ್: ವೆಸ್ಟ್ ಇಂಡೀಸ್ ಹಾಗೂ ಮುಂಬೈ ಇಂಡಿಯನ್ಸ್ ಮಾಜಿ ಆಲ್‌ರೌಂಡರ್ ಕೈರೊನ್ ಪೊಲಾರ್ಡ್ ಅವರು ತಮ್ಮ ಐಪಿಎಲ್ ವೃತ್ತಿ ಜೀವನದಲ್ಲಿ 150 ಇನಿಂಗ್ಸ್‌ಗಳ ಮೂಲಕ 200 ಸಿಕ್ಸರ್‌ಗಳನ್ನು ಪೂರ್ಣಗೊಳಿಸಿದ್ದರು, ಆ ಮೂಲಕ ಪಟ್ಟಿಯಲ್ಲಿ ಐದನೇ ಸ್ಥಾನವನ್ನು ಅಲಂಕರಿಸಿದ್ದಾರೆ.

ಪಾಂಡ್ಯ ಪಡೆಗೆ ತವರಲ್ಲಿ ಗೆಲ್ಲುವ ಛಲ | ಧೋನಿಗೆ ತಂಡವನ್ನು ಜಯದ ದಡ ದಾಟಿಸುವಾಸೆ

ಇಂದು ಮುಂಬೈ-ಚೆನ್ನೈ ಹಣಾಹಣಿ

ಮುಂಬೈ: ಇಲ್ಲಿನ ವಾಂಖೆಡೆ ಸ್ಟೇಡಿಯಂನಲ್ಲಿ ಐಪಿಎಲ್ ಟೂರ್ನಿಯ ಭಾನುವಾರದ ಎರಡನೇ ಪಂದ್ಯದಲ್ಲಿ ಮುಂಬೈ ಮತ್ತು ಚೆನ್ನೈ ತಂಡಗಳು ಪರಸ್ಪರ ಮುಖಾಮುಖಿಯಾಗಲಿವೆ. ಈಗಾಗಲೇ 7 ಪಂದ್ಯಗಳಿಂದ 6 ಅಂಕಗಳನ್ನು ಸಂಪಾದಿಸಿರುವ ಹಾರ್ದಿಕ್ ಪಾಂಡ್ಯ ಪಡೆಯು 4 ಅಂಕಗಳನ್ನು ಗಳಿಸಿರುವ ಮಹೇಂದ್ರ ಸಿಂಗ್ ಧೋನಿ ನಾಯಕತ್ವದ ಚೆನ್ನೈ ಪಡೆಯನ್ನು ಹೇಗೆ ಎದುರಿಸಲಿದೆ ಎಂಬುದು ನಿಜಕ್ಕೂ ಕುತೂಹಲಕಾರಿ.

ಮಾರ್ಚ್-23ರಂದು ನಡೆದಿದ್ದ ಈ ಐಪಿಎಲ್ ಆವೃತ್ತಿಯ ತನ್ನ ಮೊದಲ ಪಂದ್ಯದಲ್ಲಿ ಮುಂಬೈ ಪಡೆಯು ಚೆನ್ನೈ ವಿರುದ್ಧ ಸೋಲನ್ನುಂಡಿತ್ತು. ಮಾರ್ಚ್-29ರಂದು ನಡೆದಿದ್ದ ಪಂದ್ಯದಲ್ಲೂ ಮುಂಬೈ ತಂಡವನ್ನು ಗುಜರಾತ್ 36 ರನ್‌ಗಳಿಂದ ಸೋಲಿಸಿತ್ತು. ಆದರೆ ಮಾರ್ಚ್-31ರಂದು ಆಯೋಜಿಸಿದ್ದ ಪಂದ್ಯದಲ್ಲಿ ಕೊಲ್ಕತ್ತಾ ತಂಡಗಳಿಸಿದ್ದ 116 ರನ್‌ಗಳನ್ನು ಬೆಂಬತ್ತಿದ್ದ ಮುಂಬೈ 8 ವಿಕೆಟ್‌ಗಳ ಭರ್ಜರಿ ಜಯಗಳಿಸಿ, ಗೆಲುವಿನ ನಗೆ ಬೀರಿತ್ತು. ಏಪ್ರಿಲ್-4ರಂದು ನಡೆದ ಪಂದ್ಯದಲ್ಲಿ ಲಖನೌ ತಂಡವು ಮುಂಬೈಯನ್ನು 12 ರನ್‌ಗಳಿಂದ ಸೋಲಿಸಿತ್ತು.

ಏಪ್ರಿಲ್-7ರಂದು ತನ್ನ ತವರು ನೆಲದಲ್ಲಿ ನಡೆದ ಪಂದ್ಯದಲ್ಲಿ ಮುಂಬೈ ತಂಡವು ಆರ್‌ಸಿಬಿ ವಿರುದ್ಧ ಸೋಲನ್ನೊಪ್ಪಿತ್ತು. ಆದರೆ ಏಪ್ರಿಲ್-13ರಂದು ಪಂದ್ಯದಲ್ಲಿ 205 ರನ್ ಪೇರಿಸಿದ್ದ ಮುಂಬೈ ತಂಡವು ಡೆಲ್ಲಿ ತಂಡವನ್ನು 193 ರನ್‌ಗಳಿಗೆ ಕಟ್ಟಿ ಹಾಕಿ, 12 ರನ್‌ಗಳ ಗೆಲುವನ್ನೂ ಪಡೆದಿತ್ತು. ಏಪ್ರಿಲ್-17ರಂದು ನಡೆದ ಪಂದ್ಯದಲ್ಲಿ ಹೈದರಾಬಾದ್ ನೀಡಿದ್ದ 183 ರನ್‌ಗಳ ಗೆಲುವಿನ ಗುರಿಯನ್ನು ಕೇವಲ 6 ವಿಕೆಟ್ ಕಳೆದುಕೊಂಡು ಮುಂಬೈ ಗೆದ್ದುಕೊಂಡಿತ್ತು. ಈ ಸಲದ ಐಪಿಎಲ್‌ನಲ್ಲಿ ತಾನು ಆಡಿರುವ 7 ಪಂದ್ಯಗಳ ಪೈಕಿ ಕೇವಲ 2 ಪಂದ್ಯಗಳಲ್ಲಿ ಮಾತ್ರ ಗೆದ್ದಿರುವ ಚೆನ್ನೈ ತಂಡವು ಈ ಸಲ ತನ್ನ ಮೊದಲ ಪಂದ್ಯದಲ್ಲಿ ಮುಂಬೈ ವಿರುದ್ಧ 4 ವಿಕೆಟ್ ಅಂತರದಲ್ಲಿ ಗೆದ್ದಿತ್ತು. ಆದರೆ ಮಾರ್ಚ್-28ರಂದು ನಡೆದ ಪಂದ್ಯದಲ್ಲಿ ತನ್ನ ತವರು ನೆಲದಲ್ಲಿ ಚೆನ್ನೈ ತಂಡವು ಆರ್‌ಸಿಬಿ ಎದುರು ಮಂಡಿಯೂರಿತ್ತು. ಮಾರ್ಚ್-30ರಂದು ನಡೆದ ಪಂದ್ಯದಲ್ಲಿ ರಾಜಸ್ಥಾನ ವಿರುದ್ಧವೂ ಚೆನ್ನೈ ಸೋತಿತ್ತು.

ಏಪ್ರಿಲ್-5ರಂದು ನಡೆದ ಪಂದ್ಯದಲ್ಲಿ ಡೆಲ್ಲಿ ವಿರುದ್ಧ ಸೋಲುವ ಮೂಲಕ ಚೆನ್ನೈ ಈ ಆವೃತ್ತಿಯಲ್ಲಿ ಹ್ಯಾಟ್ರಿಕ್ ಸೋಲಿನ ಕಹಿಯನ್ನುಂಡಿತ್ತು. ಆ ಬಳಿಕ ಏಪ್ರಿಲ್-8ರಂದು ನಡೆದ ಪಂದ್ಯದಲ್ಲಿ ಪಂಜಾಬ್ ವಿರುದ್ಧವೂ ಚೆನ್ನೈ ತಂಡ ಸೋತು ತೀವ್ರ ಮುಖಭಂಗಕ್ಕೀಡಾಯಿತು. ಏಪ್ರಿಲ್-11ರಂದು ನಡೆದ ಪಂದ್ಯದಲ್ಲಿ ಮತ್ತೆ ಚೆನ್ನೈ ಕೋಲ್ಕತ್ತಾ ವಿರುದ್ಧವೂ ಶರಣಾಯಿತು.

ಆದರೆ ಧೋನಿ ನಾಯಕತ್ವದಲ್ಲಿ ಏಪ್ರಿಲ್-14ರಂದು ಲಖನೌ ವಿರುದ್ಧ ಆಡಿದ ಪಂದ್ಯದಲ್ಲಿ ಚೆನ್ನೈ ತಂಡವು 5 ವಿಕೆಟ್‌ಗಳಿಂದ ಪಂದ್ಯವನ್ನು ಗೆದ್ದು, ತನ್ನ ಸೋಲಿನ ಸರಪಳಿಯನ್ನು ಕಳಚಿಕೊಂಡಿತ್ತು.

ಮುಂಬೈ ವಿರುದ್ಧ ಮತ್ತೊಂದು ಜಯದ ತವಕದಲ್ಲಿರುವ ಧೋನಿ ಪಡೆಯು ವಾಂಖೆಡೆ ಸ್ಟೇಡಿಯಂನಲ್ಲಿ ಹೇಗೆ ಪೈಪೋಟಿ ನೀಡಲಿದೆ ಎಂಬುದೇ ಕ್ರಿಕೆಟ್ ವಿಶ್ಲೇಷಕರ ಸದ್ಯದ ಕುತೂಹಲ.

ಮುಂಬೈ ತಂಡ: ಹಾರ್ದಿಕ್ ಪಾಂಡ್ಯ (ನಾಯಕ), ರೋಹಿತ್ ಶರ್ಮಾ, ವಿಲ್ ಜ್ಯಾಕ್ಸ್, ಸೂರ್ಯಕುಮಾರ್, ತಿಲಕ್ ವರ್ಮಾ, ನಮನ್ ಧಿರ್, ಮಿಚೆಲ್ ಸ್ಯಾಂಟ್ನರ್, ದೀಪಕ್ ಚಹರ್, ಟ್ರೆಂಟ್ ಬೌಲ್ಟ್, ಅಶ್ವಿನಿ ಕುಮಾರ್, ವಿಘ್ನೇಶ್ ಪುತ್ತೂರು, ರಿಯಾನ್ ರಿಕೆಲ್ಟನ್, ಸತ್ಯನಾರಾಯಣ ರಾಜು, ಅರ್ಜುನ್ ತೆಂಡೂಲ್ಕರ್

ಚೆನ್ನೈ ತಂಡ: ಎಂಎಸ್ ಧೋನಿ, ಮಥೀಶ ಪತಿರಾನ, ಶಿವಂ ದುಬೆ, ರವೀಂದ್ರ ಜಡೇಜಾ, ಡೆವೊನ್ ಕಾನ್ವೆ, ರಾಹುಲ್ ತ್ರಿಪಾಠಿ, ರಚಿನ್ ರವೀಂದ್ರ, ರವಿಚಂದ್ರನ್ ಅಶ್ವಿನ್, ನೂರ್ ಅಹ್ಮದ್, ಶೇಕ್ ರಶೀದ್, ನಾಥನ್ ಎಲ್ಲಿಸ್, ಕಮಲೇಶ್ ನಾಗರಕೋಟಿ, ಶ್ರೇಯಸ್ ಗೋಪಾಲ್, ಎ. ಸಿದ್ದಾರ್ಥ್

ಇಂದು ಚಂಡೀಗಢದಲ್ಲಿ ಬೆಂಗಳೂರು-ಪಂಜಾಬ್ ಪಂದ್ಯ| ಎರಡೇ ದಿನದೊಳಗೆ ಮತ್ತೆ ಪರಸ್ಪರ ಮುಖಾಮುಖಿ

ಆರ್‌ಸಿಬಿಗೆ ಸೇಡು ತೀರಿಸುವ ತವಕ

ಚಂಡೀಗಢ: ಬೆಂಗಳೂರಿನ ಚಿನ್ನಸ್ವಾಮಿ ಸ್ಟೇಡಿಯಂನಲ್ಲಿ ಶುಕ್ರವಾರ ಪಂಜಾಬ್ ವಿರುದ್ಧ ಸೋಲುಂಡಿದ್ದ ಆರ್‌ಸಿಬಿ ತಂಡವು ಇಂದು ಇಲ್ಲಿನ ಮಹಾರಾಜ ಯಾದವೀಂದ್ರ ಸಿಂಗ್ ಸ್ಟೇಡಿಯಂನಲ್ಲಿ ನಡೆಯಲಿರುವ ಐಪಿಎಲ್ ಕ್ರಿಕೆಟ್ ಟೂರ್ನಿಯಲ್ಲಿ ಮತ್ತೆ ಪಂಜಾಬ್ ತಂಡವನ್ನೇ ಎದುರಿಸಲಿದೆ. ಕೇವಲ ಎರಡು ದಿನದೊಳಗೆ ಎರಡೂ ತಂಡಗಳು ಮತ್ತೊಮ್ಮೆ ಮುಖಾಮುಖಿಯಾಗುತ್ತಿರುವುದು ಈ ಪಂದ್ಯದ ವಿಶೇಷ.

ತವರಿನ ಪಂದ್ಯದಲ್ಲಿ ಮಳೆ ಬಂದ ಕಾರಣಕ್ಕೆ ಓವರ್ ಕಡಿತಗೊಂಡು ಮೊದಲು ಬ್ಯಾಟಿಂಗ್ ಮಾಡಿದ್ದ ಬೆಂಗಳೂರು ತಂಡವು ಪಂಜಾಬ್ ಎದುರು ಮುಗ್ಗರಿಸಿ ಸೋತಿರುವ ಕಾರಣ, ಭಾನುವಾರ ಚಂಡೀಗಢದಲ್ಲಿ ಅದರ ವಿರುದ್ಧ ಸೇಡು ತೀರಿಸುವ ಕಾತರದಲ್ಲಿದೆ.

ಮಾರ್ಚ್-22ರಂದು ನಡೆದಿದ್ದ ಮೊದಲ ಪಂದ್ಯದಲ್ಲಿ ಆರ್‌ಸಿಬಿ ತಂಡವು ಕೋಲ್ಕತ್ತಾವನ್ನು ಅವರ ತವರು ಅಂಗಳದಲ್ಲಿ ಸೋಲಿಸಿ ಟೂರ್ನಿಯಲ್ಲಿ ಶುಭಾರಂಭ ಮಾಡಿತ್ತು. ಆ ಬಳಿಕ ಮಾರ್ಚ್-28ರಂದು ಆಯೋಜಿಸಲಾಗಿದ್ದ ಪಂದ್ಯದಲ್ಲಿ ಚೆನ್ನೈ ವಿರುದ್ಧವೂ ಆರ್‌ಸಿಬಿ ಅವರ ತವರು ನೆಲದಲ್ಲಿ ಪರಾಭವಗೊಳಿಸಿತ್ತು.

ಆದರೆ ಚಿನ್ನಸ್ವಾಮಿ ಸ್ಟೇಡಿಯಂನಲ್ಲಿ ಏಪ್ರಿಲ್-2ರಂದು ನಡೆದಿದ್ದ ಪಂದ್ಯದಲ್ಲಿ ಗುಜರಾತ್ ವಿರುದ್ಧ ಆರ್‌ಸಿಬಿ ಸೋಲನ್ನು ಕಂಡಿತ್ತು. ಏಪ್ರಿಲ್-7ರಂದು ಮುಂಬೈ ವಿರುದ್ಧ ಆರ್‌ಸಿಬಿ 12 ರನ್‌ಗಳಿಂದ ಗೆದ್ದು ಗೆಲುವಿನ ನಗೆ ಬೀರಿತ್ತು. ಏಪ್ರಿಲ್-10ರಂದು ಬೆಂಗಳೂರಿನಲ್ಲಿ ನಡೆದ ಪಂದ್ಯದಲ್ಲಿ ಆರ್‌ಸಿಬಿ ತಂಡವು ಡೆಲ್ಲಿ ವಿರುದ್ಧ ಪರಾಭವಗೊಂಡಿತ್ತು.

ಏಪ್ರಿಲ್-13ರಂದು ಜೈಪುರದಲ್ಲಿ ನಡೆದ ಪಂದ್ಯದಲ್ಲಿ ರಾಜಸ್ಥಾನ ಗಳಿಸಿದ್ದ 173 ರನ್‌ಗಳ ಗುರಿ ಬೆಂಬತ್ತಿದ್ದ ಆರ್‌ಸಿಬಿ, 9 ವಿಕೆಟ್‌ಗಳಿಂದ ಗೆಲುವನ್ನು ಸಂಭ್ರಮಿಸಿತ್ತು. ಮೊನ್ನೆ ಶುಕ್ರವಾರ ಆರ್‌ಸಿಬಿ ತನ್ನ ತವರಲ್ಲಿ ಸೋತಿರುವುದರಿಂದ ಮತ್ತೆ ಚಂಡೀಗಢದಲ್ಲಿ ಪಂಜಾಬ್ ವಿರುದ್ಧ ಭಾನುವಾರ ಗೆಲುವು ದಕ್ಕಿಸಿಕೊಳ್ಳಲು ತವಕಿಸುತ್ತಿದೆ.

ಆರ್‌ಸಿಬಿಯನ್ನು ತನ್ನ ತವರಲ್ಲೂ ಭಾನುವಾರ ಮಣಿಸಬೇಕೆಂಬ ಉತ್ಸಾಹದಲ್ಲಿರುವ ಪಂಜಾಬ್ ತಂಡವು ಈ ಆವೃತ್ತಿಯ ಮೊದಲ ಪಂದ್ಯದಲ್ಲಿ ಗುಜರಾತ್ ವಿರುದ್ಧ ಗೆದ್ದಿತ್ತು. ಏಪ್ರಿಲ್-1ರಂದು ನಡೆದ ಎರಡನೇ ಪಂದ್ಯದಲ್ಲಿ ಪಂಜಾಬ್ ತಂಡವು ಲಖನೌ ತಂಡವನ್ನು 8 ವಿಕೆಟ್‌ಗಳಿಂದ ಮಣಿಸಿತ್ತು. ಆದರೆ ಮೂರನೇ ಪಂದ್ಯದಲ್ಲಿ ಅದು ರಾಜಸ್ಥಾನದ ವಿರುದ್ಧ ಶರಣಾಯಿತು. ಏಪ್ರಿಲ್-8ರಂದು ಆಯೋಜಿಸಲಾಗಿದ್ದ ಪಂದ್ಯದಲ್ಲಿ ಚೆನ್ನೈಯನ್ನು 18 ರನ್‌ಗಳಿಂದ ಸೋಲಿಸಿದ ಪಂಜಾಬ್ ತಂಡವು ಗೆಲುವಿನ ನಗೆ ಬೀರಿತ್ತು. ಅದಾದ ಬಳಿಕ ಪಂಜಾಬ್ ತಂಡವು ಹೈದರಾಬಾದ್ ವಿರುದ್ಧದ ಸೆಣಸಾಟದಲ್ಲಿ ಸೋಲನ್ನು ಕಂಡಿತ್ತು. ಆದರೆ ಏಪ್ರಿಲ್-15ರಂದು ಕೋಲ್ಕತ್ತಾ ವಿರುದ್ಧ ಪಂಜಾಬ್ ತಂಡವು 16 ರನ್‌ಗಳ ಗೆಲುವು ಪಡೆದಿತ್ತು. ಶುಕ್ರವಾರ ಬೆಂಗಳೂರಿನಲ್ಲಿ ನಡೆದ ಪಂದ್ಯದಲ್ಲಿ ಪಂಜಾಬ್ ತಂಡವು ಆರ್‌ಸಿಬಿಯನ್ನು ಮಣಿಸಿ ಅಂಕಪಟ್ಟಿಯಲ್ಲಿ ತನ್ನ ಅಂಕವನ್ನು 10ಕ್ಕೆ ಏರಿಸಿಕೊಂಡಿದೆ.

ಆರ್‌ಸಿಬಿ ತಂಡ: ರಜತ್ ಪಾಟೀದಾರ್ (ನಾಯಕ), ವಿರಾಟ್ ಕೊಹ್ಲಿ, ಯಶ್ ದಯಾಳ್, ಹ್ಯಾಝಲ್‌ವುಡ್, ಫಿಲ್ ಸಾಲ್ಟ್, ಜಿತೇಶ್ ಶರ್ಮ, ಲಿವಿಂಗ್‌ಸ್ಟೋನ್, ಸುಯಶ್ ಶರ್ಮ, ಭುವನೇಶ್ವರ್ ಕುಮಾರ್, ಕೃನಾಲ್ ಪಾಂಡ್ಯ, ಜೇಕಬ್ ಬೆಥೆಲ್, ದೇವದತ್ ಪಡಿಕ್ಕಲ್, ನುವಾನ್ ತುಷಾರ, ಅಭಿನಂದನ್ ಸಿಂಗ್

ಪಂಜಾಬ್ ತಂಡ: ಶ್ರೇಯಸ್ ಅಯ್ಯರ್ (ನಾಯಕ), ಪ್ರಭ್‌ಸಿಮ್ರಾನ್ ಸಿಂಗ್, ಪ್ರಿಯಾಂಶ್ ಆರ್ಯ, ಶಶಾಂಕ್ ಸಿಂಗ್, ಮಾರ್ಕಸ್ ಸ್ಟೊಯಿನಿಸ್, ಸೂರ್ಯಾಂಶ್ ಶೆಡ್ಜ್, ಗ್ಲೆನ್ ಮ್ಯಾಕ್ಸ್‌ವೆಲ್, ಮಾರ್ಕೊ ಜಾನ್ಸೆನ್, ಯುಜುವೇಂದ್ರ ಚಹಾಲ್, ಲಾಕಿ ಫರ್ಗುಸನ್, ಅರ್ಷದೀಪ್ ಸಿಂಗ್, ನೇಹಲ್ ವದೇರಾ, ಮುಶೀರ್ ಖಾನ್, ಕುಲ್‌ದೀಪ್ ಸೇನ್

ಒಡುವ ಲೋಕಕ್ಕೆ ಒದುವ ನಿಲ್ದಾಣ

ವಿರಾಮ

ವಿಶ್ವವಾಣಿ
ಭಾನುವಾರ
20-04-2025

ಶಾಂತ ಸಾಗರದಲ್ಲಿ ಮ್ಯಾರಥಾನ್ ಈಜು!

ಸಮುದ್ರದಲ್ಲಿ ಈಜುವುದು ಒಂದು ವಿಭಿನ್ನ ಮತ್ತು ಅನನ್ಯ ಎನಿಸುವ ಸಾಹಸ. ಹಲವು ಚಾನೆಲ್‌ಗಳನ್ನು ಸಮುದ್ರ ಭಾಗಗಳನ್ನು ಈಜುವುದು, ಆ ಸಾಹಸಕ್ಕಾಗಿ ಪ್ರಶಸ್ತಿ ಪತ್ರಗಳನ್ನು ಪಡೆಯುವುದು ಮೊದಲಾದ ಚಟುವಟಿಕೆಗಳು ಪಾಶ್ಚಾತ್ಯ ದೇಶಗಳಲ್ಲಿ ಜನಪ್ರಿಯ. ಅಮೆರಿಕದ ಒಂದು ಕಷ್ಟಕರ ಈಜು ಸಾಹಸವನ್ನು ಯಶಸ್ವಿಯಾಗಿ ಪೂರೈಸಿದ, ಕರ್ನಾಟಕದ ಒಬ್ಬ ಸಾಹಸಿ ಈಜುಗಾರರ ಅನುಭವ ಇಲ್ಲಿದೆ.

» ಪ್ರಕಾಶ್ ಹೆಗಡೆ

ಕ್ಯಾಟಲಿನಾ ಚಾನೆಲ್ ಎನ್ನುವುದು ಅಮೆರಿಕದ ಲಾಸೇಂಜಲೀಸ್ ಮತ್ತು ಕ್ಯಾಟ ಲಿನಾ ದ್ವೀಪದ ನಡುವಿನ ಪೆಸಿಫಿಕ್ ಮಹಾಸಾಗರದ 32ಕಿಮಿ ಅಂತರದ ಕೊಲ್ಲಿ. ಈ ಕೊಲ್ಲಿಯಲ್ಲಿ ಈಜುವುದು ಒಂದು ಅತೀವ ಸಾಹಸದ ಕ್ರೀಡೆ ಎಂದೇ ಗುರುತಿಸಲ್ಪಟ್ಟಿದೆ. ಜಗತ್ತಿನ ಏಳು ಮಹಾ ಸಾಗರದ ಕಠಿಣ ಮ್ಯಾರಥಾನ್ ಈಜುಗಳ ಸವಾಲುಗಳಲ್ಲಿ ಇದು ಒಂದಾಗಿದೆ. ಕ್ಯಾಟಲೀನಾ ಕೊಲ್ಲಿಯ ಈಜು ರಾತ್ರಿ ಆರಂಭವಾಗುವುದರಿಂದ, ಇದು ಇಂಗ್ಲಿಷ್ ಚಾನೆಲ್ ಈಜಿಗಿಂತ ಕಷ್ಟಕರವಾದುದೆಂದು ಅಮೆರಿಕನ್ನರವಾದ. ಭಾರತದ ಸ್ವಿಮ್‌ಲೈಫ್ ಆಲ್ಬಟ್ರೋಸ್ ತಂಡ ಈ ಚಾನೆಲ್ಲನ್ನು ಕಳೆದ ಅಗಸ್ಟ 8ರಂದು ಈಜಿದ ಮೊದಲ ಭಾರತದ ತಂಡ ಎಂಬ ಹೆಗ್ಗಳಿಕೆಗೆ ಭಾಜನವಾಯಿತು. ಈ ತಂಡದ ಕ್ಯಾಪ್ಟನ್ ಹಾಗೂ ಮುಖ್ಯ ಈಜುಗಾರನಾಗಿದ್ದ ನನ್ನ ಅನುಭವ ವಿಶಿಷ್ಟ ಎನಿಸಿದೆ.

ಕಳೆದ ವರ್ಷ, ನಾನು ಇಂಗ್ಲಿಷ್ ಚಾನೆಲ್ ಈಜಿನ ಸಾಧನೆ ಮುಗಿಸಿ ಆ ಸಾಹಸದ ಗುಂಗಿನಲ್ಲಿರುವಾಗಲೇ ಕ್ಯಾಟಲೀನಾ ಚಾನೆಲ್ ಈಜುವ ಅವಕಾಶ ಒದಗಿ ಬಂದಿತ್ತು. 1981ರಲ್ಲಿ ಸ್ಥಾಪಿಸಲಾದ ಕ್ಯಾಟೆಲಿನಾ ಚಾನೆಲ್ ಸ್ವಿಮಿಂಗ್ ಫೆಡರೇಷನ್ (ಸಿಸಿಎಸ್‌ಎಫ್), ಈ ಒಂದು ಈಜನ್ನು ಯೋಜಿಸುತ್ತದೆ. ಈಜುಗಾರರ ಸುರಕ್ಷತೆಯನ್ನು ಗಮನದಲ್ಲಿರಿಸಿಕೊಂಡು, ಅದಕ್ಕೆ ತಕ್ಕ ನಿಯಮಾವಳಿಯನ್ನು ರೂಪಿಸಿ, ಮೇಲ್ವಿಚಾರಣೆ ನಡೆಸಿ, ಇಂತಹದೊಂದುಇ ಸಾಹಸ ಕ್ರೀಡೆಯನ್ನು ಪ್ರೋತ್ಸಾಹಿಸುವುದೇ ಈ ಸಂಸ್ಥೆಯ ಧ್ಯೇಯ.

ಶೇ 30 ಜನ ಮಾತ್ರ ಪೂರೈಸುವ ಈಜು

ಪ್ರತೀ ವರ್ಷ ಸುಮಾರು ಇನ್ನೂರು ಸಾಹಸಿಗರು ಚಾನಲ್ ಈಜಿ ದಾಟಲು ಪ್ರಯತ್ನಿಸಿ, ಶೇ.30ರಷ್ಟು ಈಜುಗಾರರು ಮಾತ್ರ ಯಶಸ್ವಿಯಾಗಿ ಪೂರ್ಣಗೊಳಿಸುತ್ತಾರೆ. ನಾವು ಲಾಸೇಂಜಲೀಸ್‌ನಲ್ಲಿರುವ ಮೇಲ್ಕಂಡ ಫೆಡರೇಶನ್ ಮೂಲಕ ಒಂದು ವರ್ಷದ ಹಿಂದೆಯೇ ಹೆಸರು ನೊಂದಾಯಿಸಿದ್ದೆವು.

ಸಾಂಟಾ ಕ್ಯಾಟಲಿನಾ ಎಂಟು ದ್ವೀಪಗಳನ್ನೊಳಗೊಂಡಿರುವ, ಜಲ ಕ್ರೀಡೆಗಳು ಮತ್ತು ಚಾರಣಗಳಿಗೆ ಹೆಸರಾದ ಸ್ಥಳ. ಕ್ಯಾಟಲಿನಾ ದ್ವೀಪವು ಸುಮಾರು 35ಕಿ.ಮೀ. ಉದ್ದ, 13ಕಿ.ಮೀ. ಅಗಲವಿದ್ದು, ಅವಲೋನ್ ಮತ್ತು ಟುಹಾರ್‌ಬರ್ ಎಂಬ ಎರಡು ಜನವಸತಿ ಹೊಂದಿರುವ ಬಂದರುಗಳನ್ನು ಹೊಂದಿದೆ. ಇಲ್ಲಿ ಸುಮಾರು ನಾಲ್ಕು ಸಾವಿರ ಜನರು ವಾಸಿಸುತ್ತಿ ದ್ದಾರೆ. 1927ರ ಜನವರಿಯಲ್ಲಿ ಕ್ಯಾಟಲಿನಾ ಚಾನೆಲ್ ಈಜಿನ ಸಾಹಸ ಆರಂಭವಾಯಿತು. ಈ ಚಾನೆಲ್ ಗರಿಷ್ಠ ಆಳ ಸುಮಾರು 3000 ಅಡಿ ಗಳು. ನೀರಿನ ತಾಪಮಾನವು 5 ಡಿಗ್ರಿಯಿಂದ 21 ಡಿಗ್ರಿ ಸೆಲ್ಸಿಯಸ್. ಡಾಲ್ಫಿನ್, ಸಮುದ್ರ ಸಿಂಹಗಳು ಮತ್ತು ಹಲವು ಜಲ ಪಕ್ಷಿಗಳು ಇಲ್ಲಿವೆ. ಈ ಕೊಲ್ಲಿಯಲ್ಲಿ ದಿನಪ್ರತಿ ನೂರಾರು ಭಾರೀ ಹಡಗುಗಳು ಹಾದುಹೋಗುತ್ತವೆ.

ಸಿಸಿಎಸ್‌ಎಫ್ ನಲ್ಲಿ ನೋಂದಾಯಿಸಲಾದ ಬಾಟಮ್ ಸ್ಕ್ರಾಚರ್ ಎಂಬ ಬೋಟನ್ನು ನಿಗದಿತ ದಿನಾಂಕಕ್ಕೆ ಕಾಯ್ದಿರಿಸಿದೆವು. ಬೋಟಿನೊಟ್ಟಿಗೆ ಇಬ್ಬರು ಕಯಾಕರ್‌ಗಳನ್ನು ನೇಮಿಸಿಕೊಳ್ಳುವ ಅವಶ್ಯಕತೆಯಿದೆ. ಕಯಾಕರ್, ಈಜುಗಾರನಿಗೆ ಸೂಕ್ತ ಮಾರ್ಗದರ್ಶನ ಮಾಡುತ್ತಾರೆ. ಅವರು ಪ್ರತಿ ಮೂರುಗಂಟೆಗಳ ಸರದಿಯಲ್ಲಿ ಈಜುಗಾರರಿಗೆ ಮಾರ್ಗದರ್ಶನ ನೀಡುತ್ತಾ, ಸುರಕ್ಷಿತ ಈಜು ನಡೆಯುವಂತೆ ನೋಡಿಕೊಳ್ಳುತ್ತಾರೆ.

ನಾವು 30 ಜುಲೈಯಂದು ಲಾಸೇಂಜಲೀಸ್ ತಲುಪಿ, ದಿನಕ್ಕೆರಡು ಬಾರಿ, ಬೆಳಿಗ್ಗೆ 9 ಗಂಟೆಗೊಮ್ಮೆ ಹಾಗೂ ಕತ್ತಲಿನಲ್ಲಿ ಈಜಿ, ಅಭ್ಯಾಸ ಮಾಡಿದೆವು. ಇದಕ್ಕೂ ಮುಂಚೆ ಬೆಂಗಳೂರು ಮತ್ತು ಮಂಗಳೂರು ಮತ್ತು ಗೋವಾ ಸನಿಹದ ಸಮುದ್ರದಲ್ಲಿ ಹಲವಾರು ಈಜಾಡಿದ್ದ ಅನುಭವವೂ ಇತ್ತು.

ಈಜಿಗೆ ಪೂರಕವಾದ ಆಹಾರವಾದ ಬರ್ಗರ್ಗಳು, ಸ್ಯಾಂಡ್ವಿಚ್, ನ್ಯೂಟ್ರಿಷನ್ ಬಾರ್ ಹಾಗೂ ರಾತ್ರಿ ಈಜಿಗೆ ಉಪಯುಕ್ತವಾಗುವಂತಹ ಗ್ಲೋಸ್ಟಿಕ್‌ಗಳು, ಮತ್ತು ಡಿಸ್ಕ್ ದೀಪಗಳನ್ನು ಇರಿಸಿಕೊಂಡಿದ್ದೆವು. ನಮ್ಮ ತಂಡ ಲಾಸ್‌ಏಂಜಲೀಸ್ ಬಂದರಿನಿಂದ ಕ್ರೂಸ್‌ನಲ್ಲಿ ಕ್ಯಾಟಲಿನಾ ದ್ವೀಪದ ಟುಹಾರ್‌ಬರ್‌ಗೆ ಸಾಗಿದೆವು. ಹಿಂದಿನ ರಾತ್ರಿ ಇದೇ ಈಜನ್ನು ಪ್ರಯತ್ನಿಸಿದ ಒಂದುಇ ತಂಡ ಈಜು ಮುಗಿಸಲಾಗದೆ, ಹಿಂತಿರುಗಿತ್ತು. ಆದ್ದರಿಂದ ನಮಗೆಲ್ಲಾ ಸಣ್ಣ ಆತಂಕ ಇತ್ತು. ರಾತ್ರಿ 10 ಗಂಟೆಗೆ ಬಾಟಮ್ ಸ್ಕ್ರಾಚರ್ ದೋಣಿಯು ವೀಕ್ಷಕರಾದ ಡಾನ್ ವ್ಯಾನ್ ಕ್ಲೆವ್ ಮತ್ತು ಲಿಂಡಾ ಬ್ಯಾಮ್ಫೋರ್ಡ್ ಅವರೊಂದಿಗೆ ಟುಹಾರ್‌ಬರ್ ಬಂದರಿಗೆ ನಮ್ಮ ತಂಡ ತಲುಪಿತು. ಈಜಿಗಾಗಿ ಫೆಡರೇಷನ್ ಕಟ್ಟುನಿಟ್ಟಾದ ಡ್ರೆಸ್ ಕೋಡ್ ನಿಯಮಾವಳಿಗಳನ್ನು ರೂಪಿಸಿದೆ.

ಕತ್ತಲಿನಲ್ಲಿ ಈಜು

ಬಾಟಮ್ ಸ್ಕ್ರಾಚರ್ ಲಂಗರಿದ್ದ ಇನ್ನೂರು ಮೀಟರ್ ದೂರದಿಂದ ನಾನು ಈಜು ಪ್ರಾರಂಭಿಸುವ ದಡಕ್ಕೆ ತಲುಪಿ ಪ್ರಾರಂಭದ ಆದೇಶ ಮತ್ತುಸೂಚನೆಗೆ ಕಾಯುತ್ತಿದ್ದೆ. ವೀಕ್ಷಕರು ಮತ್ತು ಕಯಾಕರ್ ನನಗೆ ಈಜು ಪ್ರಾರಂಭಿಸಲು ಸಂಕೇತ ನೀಡಿದರು. ನನ್ನ ಐತಿಹಾಸಿಕ ಈಜು ಪ್ರಾರಂಭವಾಯಿತು. ಆಗ ರಾತ್ರಿ 11 ಗಂಟೆ. ಸುತ್ತಲೂ ಕಗ್ಗತ್ತಲು. ನನ್ನ ಕ್ಯಾಪ್ ಹಿಂಭಾಗದಲ್ಲಿ ಹಸಿರು ಡಿಸ್ಕ್-ಲೈಟ್ ಮತ್ತು ಸ್ವಿಮ್-ಟ್ರಂಕ್‌ಗೆ ಕೆಂಪು ಡಿಸ್ಕ್-ಲೈಟ್ ಜೋಡಿಸಲಾಗಿತ್ತು. ಹಸಿರು ಬೆಳಕು ಕಯಾಕರನಿಗೆ ಈಜುಗಾರನ ಚಲನೆಯ ದಿಕ್ಕನ್ನು ತಿಳಿಸುತ್ತಿತ್ತು. ಕಯಾಕ್‌ನ ಅಂಚಿಗೆ ಜೋಡಿಸಲಾದ ಹೊಳಪು ದೀಪಗಳು ದೋಣಿಯ ಚಲನವನ್ನು ಈಜುಗಾರನಿಗೆ ತಿಳಿಸುತ್ತಿತ್ತು. ಈಜುಗಾರನು ಕಯಾಕ್ ಅಂಚಿಗೆ ಲಗತ್ತಿಸಿದ್ದ ಹೊಳೆಯುವ ಗ್ಲೋಸ್ಟಿಕ್ಸ್ ಮೂಲಕ ತನ್ನ ಮತ್ತು ಕಯಾಕ್ ನಡುವಿನ ಸುರಕ್ಷಿತ ಅಂತರವನ್ನು ಕಾಯ್ದುಕೊಂಡು ದೋಣಿ ಮತ್ತು ಕಯಾಕ್ ನಡುವೆ ಈಜಬೇಕಾಗಿತ್ತು. ಕಯಾಕ್‌ನ ಎಡಬದಿಯಲ್ಲಿ ಸುಮಾರು ಎರಡು ಮೀಟರ್ ದೂರದಲ್ಲಿ ನಾನು ಈಜಲಾರಂಭಿಸಿದೆ. ಶುರುವಿನಲ್ಲಿ ಸಮುದ್ರದ ಕಳೆಗಳು ಅಡ್ಡಿಯಾಗುತ್ತಿದ್ದವು. ರಾತ್ರಿ ಹೊತ್ತು ಆ ಸಮುದ್ರದಲ್ಲಿ ಈಜುವುದು ನಿಜಕ್ಕೂ ಒಂದು ಸವಾಲು.

ಮಿನುಗುವ ಕಡಲು

ಕತ್ತಲಿನಲ್ಲಿ ನೀರಿನ ಅಲೆಗಳಿಂದುಟಾದ ಬಯೋಲುಮಿನೆಸೆನ್ಸ್ ನೋಟ ಮನಮೋಹಕವಾಗಿತ್ತು. ಆಕಾಶದಲ್ಲಿ ನಕ್ಷತ್ರಗಳ ಪುಂಜ ಮತ್ತು ದೂರದ ತೀರದ ಮಿನುಗುವ ದೀಪಗಳು ಈಜಿಗೆ ವರ್ಣರಂಜಿತ ಆಯಾಮವನ್ನು ನೀಡುತ್ತಿದ್ದವು. ಒಂದು ಗಂಟೆಯ ಈಜಿನ ನಂತರ, ವೀಕ್ಷಕರು, ಮುಂದಿನ ಈಜುಗಾರನಿಗೆ ನೀರಿಗೆ ಧುಮುಕಿ ಕಡ್ಡಾಯವಾಗಿ ಹೈ-ಫೈವ್ ಮಾಡಲು ಸಂಕೇತ ನೀಡುತ್ತಾರೆ. ಈಜು ಮುಂದುವರಿದಂತೆ ಹಲವೆಡೆ ಸಮುದ್ರದ ಪ್ರತಿಕೂಲ ಅಲೆಗಳು ಹಾಗೂ ಉಬ್ಬರಗಳು ನಮ್ಮ ಈಜಿನ ಗತಿಯನ್ನು ಮಂದಗೊಳಿಸಿತ್ತು. ನಾನು ನಿರಂತರವಾಗಿ ಈಜುತ್ತಾ ಸಾಗಿದೆ; ಕೈಗಳನ್ನು ರಭಸವಾಗಿ ಬೀಸತೊಡಗಿದೆ; ನಿಧಾನವಾಗಿ ಬೆಳಗಾಗತೊಡಗಿತು.ರಾತ್ರಿಯ ನಿಗೂಢತೆ ಮುಂಜಾನೆಯ ಸೌಂದರ್ಯವಾಗಿ ಬದಲಾಗುವುದನ್ನು ನಾನು ಪೆಸಿಫಿಕ್ ಸಾಗರದ ನಡುವೆ ಗಮನಿಸಿದೆ! ಅಲ್ಲಲ್ಲಿ ಡಾಲ್ಫಿನ್‌ಗಳ ಗುಂಪು ಕಾಣುತ್ತಿದ್ದವು. ಕೆಲ ತುಂಟ ಡಾಲ್ಫಿನ್‌ಗಳು ನಮ್ಮೊಟ್ಟಿಗೆ ಈಜುತ್ತ ಮುದ ನೀಡುತ್ತಿದ್ದವು. ಹನ್ನೆರಡು ಗಂಟೆಯಲ್ಲಿ ನಾವು ಅಂತರರಾಷ್ಟ್ರೀಯ ಹಡಗಿನ ರೇಖೆಯನ್ನು ದಾಟಿದಾಗ ಲಾಸ್‌ಏಂಜಲೀಸ್‌ನ ಭೂಭಾಗ ಗೋಚರಿಸಲಾರಂಭಿಸಿತು. ಸಮುದ್ರವು ಪ್ರಕ್ಷುಬ್ದವಾಗುತ್ತಿತ್ತು. ಉಬ್ಬರ ವಿಳಿತದ ವಿರುದ್ಧ ನಾವು ಪ್ರಗತಿ ಸಾಧಿಸಲು ಹರಸಾಹಸ ಪಡುತ್ತಿದ್ದೆವು. ಹದಿನಾರು ಗಂಟೆಗಳ ನಂತರವೂ, ನಾವು ಲಾಸ್‌ಏಂಜಲೀಸ್ ದಡದಿಂದ ಸುಮಾರು 1500 ಮೀಟರ್ ದೂರದಲ್ಲಿದ್ದೆವು. ಮುಂದಿನ ಒಂದು ಗಂಟೆ ತುಸು ಕಷ್ಟದ ಅನುಭವ. ಎಷ್ಟು ಈಜಿದರೂ ಅಲೆಗಳ ರಭಸದಿಂದಾಗಿ, ದಡ ತಲುಪುವುದು ದುಸ್ತರವೆನಿಸುತ್ತಿತ್ತು. ಅಂತೂ ನಾವು ಸಂಜೆ 4.15ಕ್ಕೆ ದಡವನ್ನು ತಲುಪಿದ್ದೆವು.

ಹದಿನೇಳು ಗಂಟೆಗೂ ಅಧಿಕ ಈಜು

ನಾವು ಕಾಲುವೆಯನ್ನು ದಾಟಲು ಹದಿನೇಳೂ ಕಾಲು ಗಂಟೆ ತೆಗೆದುಕೊಂಡಿದ್ದೆವು. ನಮ್ಮ ತಂಡದವರ ಸಂತಸಕ್ಕೆ ಪಾರವೇ ಇರಲಿಲ್ಲ. ಸ್ವಿಮ್ ಲೈಫ್ ಆಲ್ಬಾಟ್ರೋಸ್ ಕ್ಯಾಟಲಿನಾ ಕಾಲುವೆಯನ್ನು ದಾಟಿದ ಮೊದಲ ಭಾರತೀಯ ರಿಲೇ ತಂಡ! ಆ ಮೂಲಕ ಹೊಸ ಇತಿಹಾಸ ರಚಿಸಿದ ಹೆಮ್ಮೆ ನಮ್ಮ ತಂಡಕ್ಕಿದೆ. ನಮ್ಮ ಯಶಸ್ವಿ ಈಜಿನೊಂದಿಗೆ, ಅಲ್ಲಿ ಭಾರತದ ಬಾವುಟ ಅಮೆರಿಕದ ಬಾವುಟದೊಂದಿಗೆ ಹಾರಾಡಿತು. ಬಾಟಮ್ ಸ್ಕ್ರಾಚರ್ ಸಿಬ್ಬಂದಿ ಹರ್ಷೋದ್ಗಾರ ಮಾಡಿದರು. ಎಲ್ಲೆಡೆಯಿಂದಲೂ ಪ್ರಶಂಸೆಯ ಮಹಾಪೂರವೇ ಹರಿದು ಬಂತು. ಲಾಸ್‌ಏಂಜಲೀಸ್‌ನ ಭಾರತೀಯ ಡಯಾಸ್ಪೊರಾ ಅಸೋಸಿಯೇಷನ್ ನಮ್ಮನ್ನು ಸಂದರ್ಶಿಸಿತು. ನಮ್ಮ ಈ ಅಪರೂಪದ ಸಾಹಸವು, ಸ್ಥಳೀಯ ಪತ್ರಿಕೆಗಳಲ್ಲಿ ಪ್ರಕಟಗೊಂಡವು. ಸಾಕಷ್ಟು ಕಷ್ಟ ಎನಿಸಿರುವ, ಸಮುದ್ರದಲ್ಲಿ ಸಾಗುವ, ಹದಿನೇಳು ಗಂಟೆಗಳ ಈ ಈಜು ಸಾಹಸವನ್ನು ಪೂರೈಸಿದ ತೃಪ್ತಿ ನನಗಿದೆ.

ತಂಪುನಾಡಿನಲ್ಲಿ ಒಂದು ಸುತ್ತು

ಈ ಊರಿನಲ್ಲಿ ಈಗ ಬಿಸಿ ಇಲ್ಲ, ಸೆಕೆ ಇಲ್ಲ, ತಾಪವೂ ಇಲ್ಲ! ಪ್ರಶಾಂತವಾಗಿದೆ, ತಂಪಾಗಿದೆ! ಒಂದೆರಡು ದಶಕಗಳ ಹಿಂದೆ ಹಲವು ರೀತಿಯ ಬೇಗೆ, ತಾಪಕ್ಕೆ ಒಳಗಾಗಿದ್ದ ಶ್ರೀನಗರ, ಇಂದು ಪ್ರವಾಸಿಗರನ್ನು ಸ್ವಾಗತಿಸುತ್ತಿದೆ. ಇಲ್ಲಿನ ತಂಪು ಹವೆ ದೇಹಕ್ಕೆ ಬಲು ಸೊಂಪು! ಎಪ್ರಿಲ್ ತಿಂಗಳಿನಲ್ಲಿ ಅಲ್ಲೊಂದು ಹೂವುಗಳ ಮೆರವಣಿಗೆ ನಡೆಯುತ್ತದೆ; ಅದೇನೆಂದರೆ, ಸಾಲು ಸಾಲು ಟ್ಯುಲಪ್ ಹೂವುಗಳ ಮೆರವಣಿಗೆ. ಅದನ್ನು ನೋಡಲೆಂದು ಸಾಕಷ್ಟು ಪ್ರವಾಸಿಗರು ಎಪ್ರಿಲ್ ತಿಂಗಳಲ್ಲಿ ಶ್ರೀನಗರಕ್ಕೆ ಹೋಗುವುದುಂಟು; ಜತೆಯಲ್ಲೇ ಅಲ್ಲಿನ ಇತರ ಪ್ರವಾಸಿ ತಾಣಗಳನ್ನೂ ನೋಡಬಹುದು.

» ಸಿ.ಎ. ವಿಲಾಸ ನಾ ಹುದ್ದಾರ

ನಾವು 15 ಜನರು ಬೆಂಗಳೂರಿನಿಂದ ನಸುಕಿನ 3.30 ಗಂಟೆಗೆ ಹೊರಟು ಶ್ರೀನಗರಲ್ಲಿ ಕಾಲಿಟ್ಟಾಗ ಗಡಿಯಾರ 9.30 ತೋರಿಸುತ್ತಿತ್ತು. ಸಮಯದ ಅಭಾವ ಮತ್ತು ಟ್ಯುಲಪ್ ಉದ್ಯಾನದಲ್ಲಿ ಜನಸಂದಣಿ ಹೆಚ್ಚಾಗುವ ಭಯದಿಂದ ನಮ್ಮ ಟೆಂಪೋದ ಚಾಲಕ ನಮ್ಮನ್ನು ನೇರವಾಗಿ ಟ್ಯುಲಪ್(ಟುಲಿಪ್ ಎಂದೂ ಕರೆಯುವ ರೂಢಿ ಇದೆ) ಉದ್ಯಾನಕ್ಕೆ ಕರೆದುಕೊಂಡು ಹೋದ. ಅದಾಗಲೇ ಸಾಕಷ್ಟು ಜನಸಂದಣಿ ಅಲ್ಲಿ ಇತ್ತು. ಅಲ್ಲಿಯೇ ಬಿಸಿ ಬಿಸಿ ಪರೋಟಾ, ಛೋಲೆ ತಿಂದು ಸ್ವಲ್ಪ ಮಟ್ಟಿಗೆ ಅಲ್ಲಿನ ತಂಪಾದ ಹವಾಮಾನಕ್ಕೆ ಹೊಂದಿಕೊಳ್ಳುವ ಪ್ರಯತ್ನ ಮಾಡಿದೆವು. ಆಮೇಲೆ ಇಂದಿರಾ ಗಾಂಧಿ ಮೆಮೋರಿಯಲ್ ಟ್ಯುಲಪ್ ಉದ್ಯಾನದ ಕಡೆಗೆ ನಡೆದೆವು.



ಅಗತ್ಯವಾದ ಚೀಟಿ ಪಡೆದುಕೊಂಡು ಒಳಗೆ ಕಾಲಿಟ್ಟಾಗ ನಾವು ಅಲ್ಲಿ ಕಂಡ ಸೌಂದರ್ಯ ನಿಜಕ್ಕೂ ಸುಂದರ, ಮನಮೋಹಕ. ಆ ದೃಶ್ಯ ವೈಭವ ನಮ್ಮ ಪ್ರಯಾಣದ ಆಯಾಸವನ್ನು ಮಂಗಮಾಯ ಮಾಡಿತು. ಶಿಸ್ತಾಗಿ ಒಂದೊಂದು ಸಾಲಿನಲ್ಲಿ ಒಂದೇ ವರ್ಣದ ಟ್ಯುಲಪ್ ಪುಷ್ಪಗಳನ್ನು ಬೆಳೆಸಿದ್ದಾರೆ. ಒಂದು ವಿಭಾಗದಲ್ಲಿ ಸುಮಾರು 8 ಸಾಲುಗಳಿದ್ದು ಈ ತರಹದ ವಿಭಾಗಗಳು ಸುಮಾರು 74 ಎಕರೆ ಪ್ರದೇಶದಲ್ಲಿ ಹರಡಿಕೊಂಡಿದೆ. ಬಿಳಿ, ಕೆಂಪು, ಗುಲಾಬಿ, ಹಳದಿ, ಕಿತ್ತಳೆ ಬಣ್ಣಗಳಿಂದ ಟ್ಯುಲಪ್ ಹೂಗಳು ರಾರಾಜಿಸುತ್ತಿದ್ದವು. ಕೆಲವು ಪುಷ್ಪಗಳ ವರ್ಣವು ಮಿಶ್ರ ವರ್ಣದ್ದೂ ಆಗಿದ್ದು ಕಂಡು ಬಂದಿತು. ಈ ಉದ್ಯಾನ ಏಶಿಯಾದ ಅತೀ ದೊಡ್ಡ ಟ್ಯುಲಪ್ ಉದ್ಯಾನವಾಗಿದೆ. ಉದ್ಯಾನದ ಮಧ್ಯದಲ್ಲಿ ಉದ್ಯಾನವನ್ನು ವಿಭಾಗಿಸುವಂತೆ ಸಾಲಾಗಿ ಕಾರಂಜಿಗಳು ಕಂಗೊಳಿಸುತ್ತಿವೆ. ಮಧ್ಯದಲ್ಲಿ ವರ್ತುಲಾಕಾರದ ಕಾರಂಜಿ ಇದ್ದು ಉದ್ಯಾನದ ಮೆರಗನ್ನು ಮತ್ತಷ್ಟು ಇಮ್ಮಡಿಸಿದೆ. ಟ್ಯುಲಪ್ ಪುಷ್ಪದ ಪ್ರತಿ ವಿಭಾಗದ ನಡುವೆ ನಡೆದಾಡಲು ದಾರಿ ಇದ್ದು ಅಲ್ಲಲ್ಲಿ ಚಿನಾರ, ವೀಪಿಂಗ್ ವಿಲ್ಲೋ, ಚೈನೀಸ್ ವಿಂಡ್ ಮಿಲ್ ಪಾಮ್, ಪರ್ಶಿಮೊನ್, ಇಟ್ಯಾಲಿಯನ್ ಸ್ಪ್ರೆಸ್, ದೇವಧರ್ ಮುಂತಾದ ಮರ, ಬಳ್ಳಿಗಳಿದ್ದು ನಮ್ಮ ಕಣ್ಣುಗಳಿಗೆ ತಂಪನ್ನೀಯುತ್ತವೆ.

ಸಂಪೂರ್ಣವಾಗಿ ಅರಳಿದ ಟ್ಯುಲಪ್ ಪುಷ್ಪವನ್ನು ಪ್ರತಿ ವರ್ಷ ಮಾರ್ಚ ಕೊನೆಯ ವಾರದಿಂದ ಏಪ್ರಿಲ್ ಮಧ್ಯದವರೆಗೆ ಮಾತ್ರ ವೀಕ್ಷಿಸಬಹುದು. ಈ ಪುಷ್ಪ ಸುಮಾರು 25 ದಿನ ಅರಳಿರುತ್ತದೆ!

ಮೊಘಲ್ ಉದ್ಯಾನ ನಿಶಾತ್

ಶ್ರೀನಗರದಲ್ಲಿರುವ ಇನ್ನೊಂದು ಉದ್ಯಾನವಿದು. ಈ ಉದ್ಯಾನವು ದಾಲ್ ಸರೋವರದ ಕಡೆಗೆ ಮುಖ ಮಾಡಿದ್ದು ಪರ್ವತದ ತಪ್ಪಲಿನ ಇಳಿಜಾರಿನ ಪ್ರದೇಶದಲ್ಲಿದೆ. ಮೇಲಿನಿಂದ ನೀರು ಹರಿದು ಬರಲು ವ್ಯವಸ್ಥೆ ಮಾಡಿದ್ದಾರೆ. ಆ ನೀರು ಉದ್ಯಾನದ ಎತ್ತರದ ಗೋಡೆಯವರೆಗೆ ಹರಿದು ಅಲ್ಲಿ ಹೊರಕ್ಕೆ ಚಿಕ್ಕ ಜಲಪಾತದಂತೆ ಧುಮುಕಿ ನಮ್ಮನ್ನು ಸ್ವಾಗತಿಸುತ್ತದೆ. ಇದರ ವಿಶೇಷವೇನೆಂದರೆ ನೀರು ಹರಿದು ಬರುವ ಮಾರ್ಗದಲ್ಲಿ ಅಲ್ಲಲ್ಲಿ ಕಾರಂಜಿಗಳಿವೆ. ಈ ಕಾರಂಜಿಗಳು ನೈಸರ್ಗಿಕ ಕಾರಂಜಿಗಳು. ಅಲ್ಲಿಯೇ ಕೆಲವು ಛಾಯಾಗ್ರಾಹಕರು, ಕಾಶ್ಮೀರ ಪ್ರದೇಶದ ಉಡುಗೆ ತೊಡುಗೆಗಳನ್ನು ಇಟ್ಟುಕೊಂಡು ಪ್ರವಾಸಿಗರಿಗೆ ಬೇಕೆಂದರೆ ತೊಡಿಸಿ ಭಾವಚಿತ್ರವನ್ನು ನಾನಾ ಭಂಗಿಯಲ್ಲಿ ಸೆರೆ ಹಿಡಿಯುತ್ತಾರೆ.

ಶಂಕರಾಚಾರ್ಯರ ದೇವಸ್ಥಾನ

ದೇಹ, ಮನಸ್ಸು ಬಾಹ್ಯ ಸೌಂದರ್ಯವನ್ನು ಸವಿದು ಉಲ್ಲಸಿತವಾಗಿತ್ತು. ಅಂತರಾಳದ ಮನಸ್ಸಿಗೆ 'ಓ' ಗೊಟ್ಟು ಸುಂದರ ಪರಿಸರದಿಂದ ಸುತ್ತುವರೆದ ಗೋಪಾದ್ರಿ ಬೆಟ್ಟದ ಮೇಲೆ ಇರುವ (1000 ಅಡಿ ಎತ್ತರ) ಶಂಕರಾಚಾರ್ಯರ ದೇವಸ್ಥಾನಕ್ಕೆ ಹೋದೆವು. ನಮ್ಮ ವಾಹನವು ಬೆಟ್ಟದ ಒಂದು ಹಂತದವರೆಗೆ ಹೋಗಿ, ಅಲ್ಲಿಂದ ಮುಂದೆ ನಾವು ರಿಕ್ಷಾದ ಮೂಲಕ ದೇವಸ್ಥಾನದ ಮೆಟ್ಟಲಿನವರೆಗೆ ಹೋದೆವು. 240 ಮೆಟ್ಟಿಲುಗಳನ್ನು ಹತ್ತಿದಾಗ ದೇವಸ್ಥಾನ ಕೆಳಗಿನ ಪ್ರಾಂಗಣ ಪ್ರವೇಶಿಸಿದೆವು. ಮೊದಲಿಗೆ ಆದಿ ಶಂಕರಾಚಾರ್ಯರ ಮೂರ್ತಿ ಇದೆ. ಈ ಸ್ಥಳದಲ್ಲಿಯೇ ಶ್ರೀ ಆದಿ ಶಂಕರರು ತಪಸ್ಸನ್ನು ಆಚರಿಸಿ, ಸೌಂದರ್ಯ ಲಹರಿಯನ್ನು ರಚಿಸಿದರೆಂದು ನಂಬಿಕೆ. ಅದಕ್ಕಾಗಿಯೇ ಈ ದೇವಸ್ಥಾನಕ್ಕೆ ಶಂಕರಾಚಾರ್ಯರ ದೇವಸ್ಥಾನ ಎಂದು ಹೆಸರಿಸಿದ್ದಾರೆ. ಮುಂದೆ ಹೋದರೆ ಗರ್ಭಗುಡಿಗೆ ಹೋಗಲು ಮೆಟ್ಟಿಲುಗಳಿವೆ. ಈ ದೇವಸ್ಥಾನವು ಅಷ್ಟಭುಜಾಕೃತಿಯ ಎತ್ತರದ ಬುನಾದಿಯ ಮೇಲೆ ಕಟ್ಟಲ್ಪಟ್ಟಿದೆ. ಇದನ್ನು ರಾಜಾ ಗೋಪಾದಿತ್ಯಾ ಕಟ್ಟಿಸಿದನೆಂದು ಪ್ರತೀತಿ. ಇದನ್ನು ಆರನೇ ಅಥವಾ ಏಳನೇ ಶತಮಾನದಲ್ಲಿ ನಿರ್ಮಿಸಲಾಗಿದೆ. ಮತ್ತೆ 43 ಮೆಟ್ಟಿಲುಗಳನ್ನು ಹತ್ತಿ ಹೋದಾಗ ಗರ್ಭಗುಡಿಯ ಪ್ರವೇಶ ಮಾಡು ತ್ತೇವೆ. ಗರ್ಭಗುಡಿಯಲ್ಲಿ 3-4 ಅಡಿ ಎತ್ತರದ ಲಿಂಗ, ತ್ರಿಶೂಲ, ಡಮರು,ಲಿಂಗವನ್ನು ಸುತ್ತು ವರೆದು ಲಿಂಗದ ಮೇಲೆ ಕಂಡು ಬರುವ ನಾಗ ದೇವತಾ, ಲಿಂಗದ ಎದುರಿಗೆ ಶ್ರೀ ಆದಿ ಶಂಕರ ಮತ್ತು ನಂದಿ ಎಲ್ಲವೂ ಇವೆ.



ದೇಗುಲದಿಂದ ಇಳಿದು ಬಂದು ಶ್ರೀ ಆದಿ ಶಂಕರರು ತಪಸ್ಸು ಕೈಗೊಂಡ ಸ್ಥಳದ ದರ್ಶನ ತೆಗೆದುಕೊಂಡೆವು. ಧನ್ಯತಾಭಾವವನ್ನು ಅನುಭವಿಸಿ ಮತ್ತೆ ಪ್ರಾಪಂಚಿಕ ಜಗತ್ತಿಗೆ ಮರಳಿ ಶಿಕಾರದ ಅನುಭವ ಪಡೆಯಲು ದಾಲ್ ಸರೋವರಕ್ಕೆ ಬಂದೆವು.

ತೇಲುವ ಪೋಸ್ಟ್ ಆಫೀಸ್

ದಾಲ್ ಸರೋವರದ ವಿಸ್ತಾರ 18.5 ಕಿ.ಮೀ. ಚದರ ಅಡಿ ಇದ್ದು 15.5 ಕಿ.ಮೀ. ಉದ್ದವಿದೆ. ಇದರ ಸುತ್ತಲೂ ಚೆಂದ ಚೆಂದದ ಉದ್ಯಾನಗಳು, ಹೌಸ್ ಬೋಟ್‌ಗಳು ಇರುತ್ತವೆ. ಪ್ರಶಾಂತವಾದ ನೀರಿನಲ್ಲಿ ಮನುಷ್ಯರೇ ಹುಟ್ಟು ಹಾಕಿ ನಡೆಸುವ ದೋಣಿಯಲ್ಲಿ ನಮ್ಮ ನೌಕಾವಿಹಾರ ಪ್ರಾರಂಭಿಸಿದೆವು. ಮೊದಲಿಗೇ ಕಣ್ಣಿಗೆ ಬಿದ್ದದ್ದು ತೇಲುವ ಪೋಸ್ಟ್ ಆಫೀಸ್. ಬಹುಶಃ ಇಂತಹ ಪೋಸ್ಟ ಆಫೀಸ್ ದೇಶದಲ್ಲಿ ಇದು ಒಂದೇ ಇರಬಹುದೇನೋ. ನಮ್ಮ ದೋಣಿಯ ಪಕ್ಕದಲ್ಲಿಯೇ ವಿವಿಧ ಚಿಕ್ಕ ಚಿಕ್ಕ ದೋಣಿಗಳಲ್ಲಿ ಚಹಾ, ಮಿಲ್ಕ ಶೇಕ್, ಕಾವಾ, ಹೂ, ಹಣ್ಣು ಮಾರುತ್ತ ಬರುತ್ತಿದ್ದರು.

ಅಪ್ಯಾಯಮಾನವಾದ, ತಂಪಾದ ವಾತಾವರಣದಲ್ಲಿ ಬಿಸಿ ಬಿಸಿ ಚಹಾ ಸೇವಿಸುತ್ತ ಸುತ್ತಲಿನ ಸೌಂದರ್ಯ ವನ್ನು ಆಸ್ವಾದಿಸಿದೆವು. ಮುಂದುವರೆದಂತೆ ದೋಣಿಯಲ್ಲೇ ಎಲ್ಲ ಪ್ರಕಾರದ ವಿವಿಧ ಅಂಗಡಿಗಳು ಕಂಡು ಬಂದವು. ಐಸ್ ಕ್ರೀಮ್ ಅಂಗಡಿ, ಹೋಟೆಲ್‌ಗಳೂ ಕಂಡವು. ಕೆಲವೊಬ್ಬರು ಆ ಅಂಗಡಿಗಳಿಗೆ ಹೋಗಿ ಕಾಶ್ಮೀರಿ ಶಾಲು ಮುಂತಾದವುಗಳನ್ನು ಖರೀದಿಸಿದರು. ದಾಲ್ ಸರೋವರದಲ್ಲಿ ಒಂದು ಪುಟ್ಟ ಮಾರುಕಟ್ಟೆಯನ್ನೇ ಸೃಷ್ಟಿಸಲಾಗಿದೆ! ನಾವು ಹೌಸ್ ಬೋಟ್‌ನಲ್ಲಿ ಒಂದು ರಾತ್ರಿ ಕಳೆದೆವು; ಮರುದಿನ ಮುಂಜಾನೆ ಮಕ್ಕಳು ದೋಣಿಯಲ್ಲಿ ಶಾಲೆಗೆ ಹೋಗುವದು ಕಾಣಿಸಿತು! ಆ ಸರೋವರದ ಸುತ್ತಲೂ ವಾಸಿಸುವ ಜನರಿಗೆ ದೋಣಿ ಪ್ರಯಾಣ ಎಂದರೆ ಸಲೀಸು, ಅಗತ್ಯ, ಅನಿವಾರ್ಯ, ಸಹಜ. ಅಲ್ಲಿ ನೀರಿನ ಮೇಲೆ ಓಡಾಡುವ ಅಂಬ್ಯುಲೆನ್ಸ್ ಕಂಡೆವು. ಶ್ರೀನಗರದಲ್ಲಿ ಈಗ ಬಿಸಿ ಇಲ್ಲ, ಸೆಕೆ ಇಲ್ಲ, ತಾಪವೂ ಇಲ್ಲ! ಪ್ರಶಾಂತವಾಗಿದೆ, ತಂಪಾಗಿದೆ! ಒಮ್ಮೆ ಹೋಗಿಬನ್ನಿ!



ಪುಸ್ತಕ ವಿಮಾನ

» ಡಾ. ಕೆ. ಅನಂತರಾಮು

ಪ್ರಣತಾರ್ತಿಹರನ್ ಸಮಗ್ರ ಸಾಹಿತ್ಯ

ಡಾ. ಪ್ರಣತಾರ್ತಿಹರನ್‌ರವರು ಕನ್ನಡ ಪ್ರಾಧ್ಯಾಪಕರಾಗಿ ಸೇವೆ ಸಲ್ಲಿಸಿ ನಿವೃತ್ತರಾಗಿದ್ದಾರೆ. ತಮ್ಮ ಸಾಹಿತ್ಯ ಸಾಧನೆಯಿಂದಾಗಿ ಕನ್ನಡ ಸಾಹಿತ್ಯರಂಗದಲ್ಲಿ ಅಳಿಸಲಾರದಂತಹ ಹೆಜ್ಜೆಗುರುತುಗಳನ್ನು ಮೂಡಿಸಿದ್ದಾರೆ. ಅವರ ಸಂಶೋಧನ ಸಾಮರ್ಥ್ಯ ಮತ್ತು ಅದಕ್ಕೆ ಬೆಂಬಲವಾಗಿ ನಿಲ್ಲುವ ಅವರ ಕ್ಷೇತ್ರಕಾರ್ಯಕೌಶಲ ಅತ್ಯಂತ ಹಿರಿದಾದುದಾದರೂ, ಹರನ್ ಅವರಲ್ಲಿ ಅತ್ಯಂತ ಜಾಗೃತನಾದ, ಚೈತನ್ಯಶೀಲನಾದ ಕವಿಯೊಬ್ಬನು, ನಿರಂತರವಾದ ಸಾಧನೆಗೆ ತನ್ನನ್ನು ಒಡ್ಡಿಕೊಂಡು ಕುಳಿತಿದ್ದಾನೆ. ಸೃಜನಶೀಲ ಸಾಹಿತ್ಯಪ್ರಕಾರಗಳೆನಿಸುವ ಕವಿತೆ, ನಾಟಕ, ಸಣ್ಣಕತೆ, ಕಾದಂಬರಿ, ಪ್ರವಾಸ ಕಥನ, ಜೀವನಚರಿತ್ರೆ, ಆತ್ಮಕಥೆ, ಲಲಿತಪ್ರಬಂಧ, ವ್ಯಕ್ತಿಚಿತ್ರ, ಪತ್ರಸಾಹಿತ್ಯ, ವಿಚಾರ ಸಾಹಿತ್ಯ, ಸಾಹಿತ್ಯ ವಿಮರ್ಶೆ, ಶಿಶುಸಾಹಿತ್ಯ, ಅನುವಾದ – ಎಂಬಿವುಗಳಲ್ಲಿ ನಾಣ್ಯವಾದ ಸುಮಾರು 40 ಕೃತಿಗಳನ್ನು ರಚಿಸಿ, ತಮ್ಮ ನವನವೋನ್ಮೇಷಶಾಲಿನಿಯಾದ ಪ್ರತಿಭಾವಿಲಾಸವನ್ನು ಮೆರೆದಿದ್ದಾರೆ. ಕನ್ನಡ ಜನಪದ ಕಥಾಸಾಹಿತ್ಯಕ್ಕೂ ಅವರು ಅವಿಸ್ಮರಣೀಯವಾದ ಕೊಡುಗೆಗಳನ್ನು ನೀಡಿದ್ದಾರೆ.

ನಮ್ಮಲ್ಲಿ ಕೆಲವರು ಸಾಹಿತ್ಯ ರಚನೆಯನ್ನು ಒಂದು ಹವ್ಯಾಸವನ್ನಾಗಿ ಮಾಡಿಕೊಂಡಿರುತ್ತೇವೆ. ಪುರಸ್ಕಾರಗಳನ್ನಾಗಲಿ, ಪ್ರಶಸ್ತಿಗಳನ್ನಾಗಲಿ ನಿರೀಕ್ಷೆ ಮಾಡಿಕೊಂಡು ಕಾರ್ಯಪ್ರವೃತ್ತರಾಗುವುದೂ ಉಂಟು. ಆದರೆ ಹರನ್‌ರವರು ಮಾತ್ರ ಹಾಗಲ್ಲ. ನಾನು ಸಾಹಿತ್ಯ ರಚನೆಮಾಡಲೆಂದೇ ಹುಟ್ಟಿ ಬಂದಿದ್ದೇನೆ, ನಾನು ಸಂಶೋಧನೆ ಮಾಡಲೆಂದೇ ಜನ್ಮ ತಳೆದಿದ್ದೇನೆ ಎನ್ನುವಂತಹ ಸಂಕಲ್ಪಕ್ಕೆ ಬದ್ಧರಾಗಿದ್ದಾರೆ. ಅಡೆತಡೆಗಳು ಬಂದಾಗ, ಪ್ರತಿಕೂಲ ಪರಿಸ್ಥಿತಿಗಳು ನಿರ್ಮಾಣವಾದಾಗ, ಲೋಕವು ನಮ್ಮ ಕಾರ್ಯವನ್ನು ಅನುಮಾನದ ಕಣ್ಣಿನಿಂದ ನೋಡಲು ತೊಡಗಿದಾಗ, ನಾವು ಸಹಜವಾಗಿಯೇ ಈ ಸಾಹಿತ್ಯದ ಗೊಡವೆಯೇ ಬೇಡ ಎಂದು ಕೈಮುಗಿದು ಹಿಂದಕ್ಕೆ ಸರಿದುಬಿಡುತ್ತೇವೆ. ಹರನ್‌ರವರು ಅಂಥವುಗಳಿಂದ ಎದೆಗೆಡುವವರಲ್ಲ. ಕೀರ್ತಿಬೇಡ, ಪ್ರಶಸ್ತಿ ಬೇಡ,

ಪ್ರಣತಾರ್ತಿಹರನ್ ಅವರ ಎಲ್ಲಾ ಸಾಹಿತ್ಯಕ ರಚನೆಗಳು ಈಗ ಒಂಬತ್ತು ಸಂಪುಟಗಳಲ್ಲಿ ಪ್ರಕಟಗೊಂಡಿವೆ.

ದ್ರವ್ಯಲಾಭ ಬೇಡವೇ ಬೇಡ. ಯಾವುದೋ ದಿವ್ಯವಾದ ಶಕ್ತಿಯೊಂದು ನನ್ನೊಳಗೆ ಆವಾಹನೆಗೊಂಡು ಎಲ್ಲವನ್ನೂ ಮಾಡಿಸುತ್ತಿದೆ ಎಂಬ ನಿರ್ಮಮಭಾವದಿಂದ ಪವಿತ್ರಭಾವದಿಂದ ತಮ್ಮ ಮಾರ್ಗದಲ್ಲಿ ಸಾಗುತ್ತಿದ್ದಾರೆ.

ಪ್ರಣತಾರ್ತಿಹರನ್ ತಾವು ರಚಿಸಿದ ಸಾಹಿತ್ಯವನ್ನು, ನವಸಂಪುಟಗಳ ಮೂಲಕ ಲೋಕಾರ್ಪಣಮಾಡಿದ್ದಾರೆ. ಆ ಎಲ್ಲ ಸಂಪುಟಗಳ ಒಟ್ಟು ಪುಟಸಂಖ್ಯೆ, ಕ್ರೌನ್ 1/4 ಎಂದು ಕರೆಯುವ ವಿಶಾಲವಾದ ಪುಟಗಳಲ್ಲಿ 5784



ಪುಟಗಳಷ್ಟಾಗಿದೆ. ಡೆಮಿ 1/8 ಎಂದು ಕರೆಯುವ ಪ್ರಟಟಿತ ಪುಸ್ತಕಗಳಿಗೆ ಮುದ್ರಿಸಿದರೆ ಒಂದಕ್ಕೆರಡಾಗಿ 11568 ಪುಟಗಳಾಗುತ್ತದೆ. ಇದೆಲ್ಲಾ ಹರನ್ ಸಾಹಸವಲ್ಲದೆ ಮತ್ತೇನು!

ರತ್ನಪ್ರಾಯವಾದ ಈ ನವಸಂಪುಟಗಳನ್ನು ಈ ರೂಪಕ್ಕೆ ತಂದವರು ಹರನ್ ಅವರ ಮಡದಿ ಡಾ. ಎಂ.ಎಸ್. ವಿಜಯಾ ಅವರೇ ಆಗಿದ್ದಾರೆ. ವಿಜಯಾರವರು ಕನ್ನಡದಲ್ಲಿ ಮಾಸ್ಟರ್ ಪದವೀಧರೆಯಾಗಿ 'ಆನಂದರ ಬದುಕು ಬರೆಹ' ಎಂಬ ಮಹಾಪ್ರಬಂಧಕ್ಕೆ ಡಾಕ್ಟರೇಟ್ ಪದವಿಯನ್ನು ಕೂಡ ಪಡೆದುಕೊಂಡಿದ್ದಾರೆ. ಮೈಸೂರು ಆಕಾಶವಾಣಿಯ ನಿರ್ದೇಶಕರಾಗಿದ್ದರು. ಸಂಪಾದಕರ ಮಾತು ಎಂಬ ಶೀರ್ಷಿಕೆಯಲ್ಲಿ ವಿಜಯಾರವರು ಈ ಒಂಭತ್ತೂ ಸಂಪುಟಗಳ ವಸ್ತುವನ್ನು ವಿಮರ್ಶೆ ಮಾಡಿರುವುದಲ್ಲದೆ, ಹರನ್‌ರವರು ಸಾಹಿತ್ಯಮಾರ್ಗದಲ್ಲಿ ನಡೆದುಬಂದ ಪರಿಯನ್ನೂ, ಅವರ ಸಂಶೋಧನೆಯ ಮತ್ತು ಕ್ಷೇತ್ರಕಾರ್ಯದ ಕಳಕಳಿಯನ್ನೂ ಧಾವಂತವನ್ನೂ ಇಕ್ಕಟ್ಟುಗಳನ್ನೂ ಕಣ್ಣಿಗೆ ಕಟ್ಟುವಂತೆ ಚಿತ್ರಿಸಿದ್ದಾರೆ. ಅಮೆರಿಕೆಯಲ್ಲಿ ನೆಲೆಸಿರುವ ಈ ದಂಪತಿಗಳ ಸುಪುತ್ರಿ ಶರ್ವಾಣಿ ಹರನ್ ಅವರು ಈ ಮಹೋನ್ನತ ಕಾರ್ಯಕ್ಕೆ ನೀಡಿರುವ ಒತ್ತಾಸೆಯನ್ನು ಕೂಡ ಈ ಸಂದರ್ಭದಲ್ಲಿ ಉಲ್ಲೇಖಿಸಲೇಬೇಕು.

ಈ ಒಂಬತ್ತು ಸಂಪುಟಗಳಲ್ಲಿ ಮೊದಲ ಎರಡು ಸಂಪುಟಗಳಿಗೆ 'ಪ್ರವಾಸಕಥನ' ಎಂದು ನಾಮಕರಣ ಮಾಡಿದ್ದಾರೆ. ಎಲ್ಲವೂ ಅಮೆರಿಕದ ಪ್ರವಾಸಕಥನಗಳಾಗಿವೆ. ಮೂರನೆಯ ಸಂಪುಟಕ್ಕೆ 'ಜೀವನಚರಿತ್ರೆ' ಎಂದೂ, ನಾಲ್ಕನೆಯ ಸಂಪುಟಕ್ಕೆ 'ಜೀವನಚರಿತ್ರೆ–ಪುಸ್ತಕ ವಿಮರ್ಶೆ' ಎಂದೂ ಹೆಸರಿಟ್ಟಿದ್ದಾರೆ. ಆಡಳಿತಗಾರರು, ವೈದಿಕರು ಎಂಬಂತೆ ವಿಂಗಡಣೆ ಮಾಡಿ, ಗಣ್ಯ ಪುರುಷರ ಜೀವನಚಿತ್ರಗಳನ್ನೊಳಗೊಂಡ ಬಿಡಿಬಿಡಿ ಲೇಖನಗಳನ್ನು ಇಲ್ಲಿ ಒಗ್ಗೂಡಿಸಿಕೊಟ್ಟಿದ್ದಾರೆ. ಐದನೆಯ ಸಂಪುಟಕ್ಕೆ 'ಅನುವಾದ' ಎಂದು ನಾಮಕರಣಮಾಡಿದ್ದಾರೆ. ಕನ್ನಡನಾಡಿನ ಸ್ಮಾರ್ತಬ್ರಾಹ್ಮಣ ಸಮುದಾಯದಲ್ಲಿ 'ಸಂಕೇತಿ' ಎಂಬ ಹೆಸರಿನವರಿದ್ದಾರೆ. ಅವರಾಡುವ ಭಾಷೆಯೂ 'ಸಂಕೇತಿ' ಎನಿಸಿದೆ. ಅದಕ್ಕೆ ಲಿಪಿ ಇಲ್ಲ. ಭಾಷೆಯೊಂದು ಉಳಿದು ಬೆಳೆಯಬೇಕಾದರೆ ಅದರಲ್ಲಿ ಏನಾದರೂ ಸಾಹಿತ್ಯ ರಚನೆಯಾಗಿರಬೇಕು ಎಂಬ ಹಂಬಲದಿಂದ ಪ್ರೇರಿತರಾಗಿ ಹರನ್‌ರವರು ಕನ್ನಡದ ಶ್ರೇಷ್ಠ ಕಾದಂಬರಿಕಾರರಾದ ಡಾ. ಎಸ್.ಎಲ್. ಭೈರಪ್ಪನವರ ಸಾರ್ಥ, ಧರ್ಮಶ್ರೀ ಎಂಬೆರಡು ಕಾದಂಬರಿಗಳನ್ನು ಕನ್ನಡ ಲಿಪಿಯಲ್ಲಿ ಸಂಕೇತಿ ಭಾಷೆಗೆ ನಿರ್ದುಷ್ಟವಾಗಿ ಅನುವಾದಿಸಿದ್ದಾರೆ. ಆರನೆಯ ಸಂಪುಟವು 'ಆತ್ಮಕಥನ' ಎಂಬುದಾಗಿದೆ. ತಮ್ಮ ಬದುಕಿನ ಸಾರಸರ್ವಸ್ವವನ್ನೆಲ್ಲಾ, ತಮ್ಮ ಜೀವನೋದ್ದೇಶವನ್ನೆಲ್ಲಾ, ತಮ್ಮ ಸಾಧನೆಸಿದ್ಧಿಗಳನ್ನೆಲ್ಲಾ ಹರನ್‌ರವರು ಈ ಮಹಾಸಂಪುಟದಲ್ಲಿ ಪಾರದರ್ಶಕವಾಗಿ ತೆರೆದಿಟ್ಟಿದ್ದಾರೆ. ಏಳನೆಯ ಸಂಪುಟವನ್ನು 'ಪ್ರಬಂಧ' ಎಂದು ನಿರ್ದೇಶಿಸಿದ್ದಾರೆ. ತಾವು ಕೈಗೊಂಡ ತೀಕ್ಷ್ಣವಾದ ಕ್ಷೇತ್ರಕಾರ್ಯಗಳ ಅನುಭವ ಗ್ರಂಥಗಳೂ, ಲೇಖನಗಳೂ ಇಲ್ಲಿ ಒಗ್ಗೂಡುವಂತೆ ಮಾಡಿದ್ದಾರೆ. ಎಂಟನೆಯ ಸಂಪುಟವನ್ನು 'ಮಹಾಪ್ರಬಂಧ' ಎಂದಿದ್ದಾರೆ. ಅದು ಹರನ್‌ರವರು ಸಂಕೇತಿಸಮುದಾಯವನ್ನು ಕೈಗೆತ್ತಿಕೊಂಡು ಸಂಶೋಧನೆ ನಡೆಸಿ ಡಾಕ್ಟರೇಟ್ ಪದವಿಯನ್ನು ಪಡೆದುಕೊಂಡ ಉದ್ಗ್ರಂಥ. ಒಂಭತ್ತನೆಯದಾದ 'ಸಂಕೀರ್ಣ' ಎಂಬ ಸಂಪುಟದಲ್ಲಿ ಹರನ್‌ರವರ ಚಿಂತನ, ಭಾಷಣ, ಲೇಖನ, ಬಾನುಲಿ ಬರೆಹ, ಕತೆ, ಕಾದಂಬರಿಗಳು ಮುಂತಾದ ಉಳಿದೆಲ್ಲವೂ ಸೇರ್ಪಡೆಯಾಗಿವೆ. ಪ್ರತಿಯೊಂದು ಕೃತಿಯೂ ಇಲ್ಲಿ ಒಂದೊಂದು 'ರಸಘಟ್ಟಿ' ಎಂದರೆ ಉತ್ಪ್ರೇಕ್ಷೆಯಲ್ಲ.

ನವನವೋನ್ಮೇಷಿತ, ನವರಸಭರಿತ ಎಂದು ಏನೇನೇ ಕೊಂಡಾಟದ ಮಾತುಗಳನ್ನು ಹೇಳಿದರೂ ಹರನ್‌ರವರ ಈ ನವಸಂಪುಟಗಳಿಗೆ ಒಪ್ಪುತ್ತದೆ.

» ಕೆ.ಆರ್.ಉಮಾದೇವಿ ಉರಾಳ

ಸ್ತ್ರೀ ಚೈತನ್ಯದ ಅನಾವರಣ

ಕತೆಗಾರ್ತಿಯಾಗಿ, ಪ್ರಬಂಧ, ಪ್ರವಾಸ ಕಥನಗಳ ಮೂಲಕ ಗೀತಾ ಕುಂದಾಪುರರವರು ಓದುಗರಿಗೆ ಪರಿಚಿತರು. ಇದೀಗ ಅವರು ತಮ್ಮ ಪಾರ್ಲರ್ ಹುಡುಗಿಯೂ, ಮರಳುಗಾಡಿನ ಮಹಲು ಎಂಬ ಪ್ರಥಮ ಕಾದಂಬರಿ ರಚಿಸಿದ್ದಾರೆ.

ಹೆಸರಾಂತ ಮನೆತನದವರಾದರೂ ಆರ್ಥಿಕವಾಗಿ ಸಬಲರಲ್ಲದ ಕುಟುಂಬದ ಲಾವಣ್ಯ, ಎಸ್‌ಎಸ್‌ಎಲ್‌ಸಿ ಕೂಡ ಪಾಸು ಮಾಡಲಾಗದೇ ಉಳಿದವಳು. ಆದರೆ ಹಾಡು ಅಡಿಗೆ ರಂಗೋಲಿ ಹೊಲಿಗೆ ಎಂದು ಎಲ್ಲದರಲ್ಲಿಯೂ ಎಷ್ಟು ಚುರುಕೋ ಅಷ್ಟೇ ತಾಳ್ಮೆ, ವಿವೇಚನೆ ನಿಃಸ್ವಾರ್ಥತೆಯ ನಿರ್ಮಲವಾದ ಮನದವಳು. ಇವಳ ತಾಯಿ, ಕೂಡ ತನ್ನ ತಾಯಿ ಯಾರಿಗೂ ಬೇಡವಾಗಿ ಅನಾರೋಗ್ಯದಲ್ಲೂ ಒಂಟಿಯಾಗಿ ಬಾಳುತ್ತಿರುವುದನ್ನು ನೋಡಿ, ಕರುಣೆಯಿಂದ ತಾಯಿಯನ್ನು ತನ್ನ ಕುಟುಂಬದ ಯಾರ ಅನುಮತಿಗೂ ಕಾಯದೆ ಮನೆಗೆ ಕರೆತರುತ್ತಾಳೆ. ತಾಯಿಯ ಸೇವೆ ಮಾಡುವಾಗ ಮನೆಯವರೆಲ್ಲ ಅವಳಿಗೆ ಸಹಕರಿಸುವ ಮಾನವೀಯ ಸೆಲೆಯುಳ್ಳವರು. ಲಾವಣ್ಯಳ ವಿವಾಹ ಮಾಡುವ ಮನೆಯವರ ಪ್ರಯತ್ನಗಳೆಲ್ಲ ವಿದ್ಯಾಭ್ಯಾಸ, ಸಂಬಳ ತರುವ ಉದ್ಯೋಗವಿಲ್ಲದ ಕಾರಣಕ್ಕೆ ವ್ಯರ್ಥವಾಗುತ್ತಿರುತ್ತವೆ.

ಇವಳು ತನ್ನ ಕೈಲಾಗುವಂತಹ ಉದ್ಯೋಗ ಮಾಡಲು ಮುಂದಾಗುವಾಗ ಅವೆಲ್ಲಾ ತಮ್ಮ ಕುಟುಂಬದ ಪ್ರತಿಷ್ಠೆಗೆ ಕುಂದು ಎಂದು ಶ್ರೀಮಂತರಾಗಿ ಉನ್ನತ ಸ್ಥಾನದಲ್ಲಿರುವ ದೊಡ್ಡಪ್ಪ ದೊಡ್ಡಮ್ಮಂದಿರು ತಡೆಗಾಲು ಹಾಕುತ್ತಿರುತ್ತಾರೆ. ಅವರು ಇವಳನ್ನು, ಇವಳ ಕೆಳ ಮಟ್ಟದ ಆರ್ಥಿಕತೆಯ ಕುಟುಂಬದ ಸ್ಥಾನವನ್ನು ಹೀಗಳೆಯುತ್ತಿರುತ್ತಾರೆ. ಮದುವೆಯೂ ಆಗದೆ ಉದ್ಯೋಗವೂ ಸಿಗದೆ ಕುಟುಂಬದ ಹಿರಿಯರ ಅವಹೇಳನಕ್ಕೆ ಒಳಗಾದ ಲಾವಣ್ಯ ತನ್ನ ಕಾಲ ಮೇಲೆ ತಾನು ನಿಂತು ಬದುಕು ರೂಪಿಸಿಕೊಳ್ಳುವ ನಿಶ್ಚಯ ಮಾಡಿ, ಬ್ಯೂಟಿಶಿಯನ್ ಕೋರ್ಸ್ ತರಬೇತಿ ಪಡೆಯುತ್ತಾಳೆ. ಬ್ಯೂಟಿಶಿಯನ್ ಕೋರ್ಸ್ ಕಲಿಯಲು ಬಂದ ಹುಡುಗಿ ಯರು, ತಮ್ಮಿಂದ ಹೆಚ್ಚು ಫೀಸ್ ವಸೂಲಿ ಮಾಡುವ ಶೋಷಣೆಯನ್ನು ದಿಟ್ಟತನದಿಂದ ಎದುರಿಸಿ ಜಯಶಾಲಿ ಗಳಾಗುತ್ತಾರೆ. ಇದರಲ್ಲಿ ಲಾವಣ್ಯಳ ಪಾತ್ರ ಮುಖ್ಯವಾಗಿರುತ್ತದೆ.

ಮುಂದೆ ಲಾವಣ್ಯಳಿಗೆ ಅವಳ ಬ್ಯುಟಿಶಿಯನ್ ಕ್ಷೇತ್ರದ ಶ್ರದ್ಧೆಯ ಕಾರ್ಯ ನಿರ್ವಹಣೆಯೇ ಕಾರಣವಾಗಿ ಕತಾರ್‌ಗೆ ಹೋಗುವ ಅವಕಾಶ ಲಭಿಸುತ್ತದೆ. ಅಲ್ಲಿನ ಕೆಲಸದಿಂದ ಕೈತುಂಬ ಸಂಬಳ ಸಿಗುತ್ತದಾದರೂ, ಅಲ್ಲಿಯೂ ಶೋಷಣೆ, ಪಾರ್ಲರ್‌ನ ಸಹೋದ್ಯೋಗಿ ತರುಣಿಯರೇ ಕನ್ನಡ ಮಾತು ಬಾಯಿ ಬಿಡದಂತೆ ನಿರ್ಬಂಧ ಹೇರಿದ್ದು, ಲಾವಣ್ಯ ಮತ್ತು ಅವಳ ಸ್ನೇಹಿತೆ ಸೇರಿ ಅದನ್ನು ಪ್ರತಿಭಟಿಸಿ ಯಶಸ್ವಿಗಳಾದದ್ದು, ಭಾರತದಿಂದ ಪಾರ್ಲರ್‌ನಲ್ಲಿ ಕೆಲಸಕ್ಕಾಗಿ ಬರುವ ಹೆಣ್ಣುಮಕ್ಕಳ ವ್ಯಥೆಯ ಕತೆಗಳು, ಮರೆವ ಸಿರಿತನದಡಿಯಲ್ಲಿನ ಅಲ್ಲಿಯ ನರಳುವ ಬಡತನ ಮುಂತಾದವನ್ನೆಲ್ಲ ಲೇಖಕಿ ಕೌತುಕದ ನಿರೂಪಣೆಯಿಂದ ಮುಂದಿಡುತ್ತಾ, ಕಾದಂಬರಿ ಓದುಗರನ್ನು ಸೆರೆಹಿಡಿದಿಡುತ್ತದೆ. ಕತಾರಲ್ಲೇ ವಾಸವಿದ್ದ ಲೇಖಕಿ ಅಲ್ಲಿನ ಸನ್ನಿವೇಶ, ಜನಜೀವನವನ್ನು ಚಿತ್ರಕ ಶಕ್ತಿಯಿಂದ ಚಿತ್ರಿಸಿರುವುದು ಈ ಕಾದಂಬರಿಯ ಒಂದು ವೈಶಿಷ್ಟ್ಯ.



ಪಾರ್ಲರ್ ಹುಡುಗಿಯೂ, ಮರಳುಗಾಡಿನ ಮಹಲು
ಲೇ: ಗೀತಾ ಕುಂದಾಪುರ
ಪ್ರ: ತೇಜು ಪಬ್ಲಿಕೇಷನ್ಸ್
ಬೆಲೆ ರು.150/-

ಲಾವಣ್ಯ ಹಾಗೂ ಅವಳ ಕುಟುಂಬದ ಕೆಳ ಮಟ್ಟದ ಆರ್ಥಿಕತೆಗಾಗಿ ಅವರನ್ನು ಕೀಳಾಗಿ ಕಾಣುತ್ತಿದ್ದ ಅವಳ ದೊಡ್ಡಪ್ಪಂದಿರ ಎರಡು ಕುಟುಂಬಗಳೂ ಭ್ರಷ್ಟಾಚಾರದಿಂದ ಸಂಚಯಿಸಿದ ಮಿತಿ ಮೀರಿದ ಶ್ರೀಮಂತಿಕೆ, ಹುಸಿ ಸ್ಥಾನಮಾನಗಳಿಂದಾಗಿ ಕಣ್ಣು ನೆತ್ತಿಗೇರಿ ಬೀಗುತ್ತಿದ್ದವರು, ತಮ್ಮದೇ ಕುಟುಂಬಗಳ ಮಕ್ಕಳ ಸ್ವೇಚ್ಛೆಯ ವರ್ತನೆಗಳಿಂದಾಗಿ ಕಂಗೆಟ್ಟು ಬಾಗುವಂತಹ ಸ್ಥಿತಿ ಬರುತ್ತದೆ. ಲಾವಣ್ಯಳ ಕುಟುಂಬದವರು ನಿಧಾನವಾಗಿಯೇ ಆದರೂ ಕೊನೆಯಲ್ಲಿ ಬದುಕಲ್ಲಿ ದೃಢವಾದ ಹೆಜ್ಜೆಯೂರಿ ನಡೆಯಬಲ್ಲವರಾಗಿ ಶಾಂತಿ ನೆಮ್ಮದಿ ಕಂಡವರಾಗುತ್ತಾರೆ. ಕಾದಂಬರಿಯ ಕೊನೆಯ ಹಂತದ ದಿಢೀರ್ ತಿರುವೊಂದರಿಂದಾಗಿ ಲಾವಣ್ಯ ಯೋಗ್ಯ ವ್ಯಕ್ತಿಯೊಡನೆ ವೈವಾಹಿಕ ಜೀವನಕ್ಕೆ ಅಡಿಯಿಡುತ್ತಾಳೆ. ವಿಭಿನ್ನವಾದ ಕಾದಂಬರಿಯ ಶೀರ್ಷಿಕೆ, ಓದಲು ಪುಟ ತೆರೆವ ಮುನ್ನವೇ ಇದು ಇಂಗಿತಾರ್ಥವೋ ವಾಚ್ಯವೋ ಎಂಬ ಚಿಂತನೆಗೆಡೆಮಾಡಿಕೊಡುತ್ತದೆ. ಜೀವನಾಸಕ್ತಿಯಿದ್ದಲ್ಲಿ ಬದುಕಿನಲ್ಲಿ ಏನನ್ನು ಬೇಕಾದರೂ ಸಾಧಿಸಲು ಹೆಣ್ಣುಮಕ್ಕಳಿಗೆ ಬಡತನ ಅಡ್ಡಿಯಾಗದು ಎಂಬುದನ್ನು ಕಾದಂಬರಿಯಲ್ಲಿ ನಿರೂಪಿಸುವುದರ ಮೂಲಕ ಸ್ತ್ರೀ ಅನನ್ಯ ಚೈತನ್ಯದ ಆಕರ ಎಂದು ಸಾರಿದ್ದಾರೆ.

ಮಕ್ಕಳಿಗಾಗಿ ಚಟುವಟಿಕೆಗಳು

» ಬೇದ್ರೆ ಮಂಜುನಾಥ, ಮೈಸೂರು

ಒಂದು ಬಿಲಿಯನ್ ಜನರಿಗೆ ಒಂದು ಮಿಲಿಯನ್ ಪುಸ್ತಕಗಳು ಎಂಬ ಆಶಯದಲ್ಲಿ, ಸಹಸ್ರಾರು ಅಪರೂಪದ, ಉಪಯುಕ್ತ ಪುಸ್ತಕಗಳನ್ನು, ಆಟಿಕೆಗಳನ್ನು, ಚಲನಚಿತ್ರಗಳನ್ನು ತಮ್ಮ ಅಂತರಜಾಲ ತಾಣದಲ್ಲಿ ಪ್ರದರ್ಶಿಸಿ, ಉಚಿತವಾಗಿ ಪಡೆದುಕೊಳ್ಳುವಂತೆ ಮಾಡಿರುವ ಅರವಿಂದ ಗುಪ್ತರ ಹಲವು ಪುಸ್ತಕಗಳು ಇದುವರೆಗೆ ಕನ್ನಡ, ಇಂಗ್ಲಿಷ್, ಹಿಂದಿ, ಮರಾಠಿ ಮೊದಲಾದ 12 ಭಾಷೆಗಳಲ್ಲಿ ಲಕ್ಷಾಂತರ ಪ್ರತಿಗಳು ಮಾರಾಟವಾಗಿ ಮಕ್ಕಳ ಮನಸೆಳೆದಿದ್ದವು. ಅವರನ್ನು ವೈಜ್ಞಾನಿಕ ಚಟುವಟಿಕೆಗಳಿಗೆ ತೊಡಗಿಸಿ, ಕಸದಿಂದ ರಸ ತೆಗೆಯುವ ಅನುಭವ ದೊರಕಿಸಿಕೊ ಟ್ಟಿದ್ದವು. ಈಗ ರಜಾದಿನಗಳಲ್ಲಿ ಮಕ್ಕಳು ಚಟುವಟಿಕೆಗಳನ್ನು ನಡೆಸಲು ಅನುಕೂಲವಾಗುವಂತಹ ಅರವಿಂದ ಗುಪ್ತರ ಹತ್ತು ಕೃತಿಗಳನ್ನು ನವಕರ್ನಾಟಕ ಪ್ರಕಾಶನವು ಪ್ರಕಟಿಸಿದ್ದು ವಿ.ಎಸ್.ಎಸ್. ಶಾಸ್ತ್ರಿ ಮತ್ತು ಅವರ ತಂಡದವರು ಇವುಗಳನ್ನು ಕನ್ನಡಕ್ಕೆ ತಂದಿದ್ದಾರೆ.

ಅರವಿಂದ ಗುಪ್ತ ಅವರು ಕಾನ್ಪುರದ ಭಾರತೀಯ ತಂತ್ರಜ್ಞಾನ ಸಂಸ್ಥೆಯಿಂದ ಎಲೆಕ್ಟಿಕಲ್ ಎಂಜಿನಿಯರಿಂಗ್‌ನಲ್ಲಿ ಪದವಿ ಪಡೆದಿದ್ದಾರೆ (1975). ವಿಜ್ಞಾನ ಚಟುವಟಿಕೆಗಳ ಕುರಿತು 15 ಕೃತಿಗಳನ್ನು ರಚಿಸಿದ್ದಾರೆ. ಹಿಂದಿಯಲ್ಲಿ ಅವರ 140 ಕೃತಿಗಳು ಹೊರಬಂದಿವೆ. ದೂರದರ್ಶನಕ್ಕಾಗಿ ವಿಜ್ಞಾನ ಕುರಿತು 125 ಚಿತ್ರಗಳನ್ನು ನಿರ್ಮಿಸಿದ್ದಾರೆ. ಮಕ್ಕಳಲ್ಲಿ ವಿಜ್ಞಾನವನ್ನು ಜನಪ್ರಿಯಗೊಳಿಸಲು ಸ್ಥಾಪಿಸಿರುವ ರಾಷ್ಟ್ರೀಯ ಪ್ರಶಸ್ತಿಗೆ ಮೊದಲು ಭಾಜನರಾದವರು ಇವರು (1988), ಐ.ಐ.ಟಿ. ಕಾನ್ಪುರದ ಹಳೆಯ ವಿದ್ಯಾರ್ಥಿಗಳ ವಿಶೇಷ ಪ್ರಶಸ್ತಿ (2000), ಇಂದಿರಾಗಾಂಧಿ ಜನಪ್ರಿಯ ವಿಜ್ಞಾನ ಪ್ರಶಸ್ತಿ (2008), ಮಕ್ಕಳಲ್ಲಿ ವಿಜ್ಞಾನಾಸಕ್ತಿ ಮೂಡಿಸಲು ಸ್ಥಾಪಿಸಿದ 'ಥರ್ಡ್ ವರ್ಲ್ಡ್ ಅಕಾಡೆಮಿ ಆಫ್ ಸೈನ್ಸ್ ಪ್ರಶಸ್ತಿ' (2010), ಪ್ರೊ| ಸಿ. ಎನ್. ಆರ್. ರಾವ್ ಶ್ರೇಷ್ಠ ವಿಜ್ಞಾನ ಶಿಕ್ಷಕ ಪ್ರಶಸ್ತಿ (2011) ಹೀಗೆ ಹತ್ತು ಹಲವು ಪ್ರಶಸ್ತಿಗಳ ಜೊತೆ 2018ನೇ ಸಾಲಿನ 'ಪದ್ಮಶ್ರೀ' ಯಿಂದಲೂ ಸನ್ಮಾನಿತರಾಗಿದ್ದಾರೆ.

ಆಟಿಕೆಗಳ ಬುತ್ತಿ (ಕನ್ನಡಕ್ಕೆ : ಜಾಹ್ನವಿಧರನ್ ಎಂ.), ಆಟಿಕೆಗಳ ಖಜಾನೆ (ಕನ್ನಡಕ್ಕೆ : ಡಾ. ನಿಶಾ ಚೇತನ ಶಾಸ್ತ್ರಿ), ಎಲೆಗಳೊಂದಿಗೆ ವಿನೋದ (ಕನ್ನಡಕ್ಕೆ : ಸುಮೇದ್ ಎಸ್. ಆರ್.), ಹೆಬ್ಬೆರಳಿನ ಗುರುತುಗಳು (ಕನ್ನಡಕ್ಕೆ ಸುಮೇದ್ ಎಸ್. ಆರ್.), ಹೆಬ್ಬೆರಳು ಒತ್ತಿ ಚಿತ್ರ ಬರೆಯಿರಿ (ಕನ್ನಡಕ್ಕೆ : ಸುಮೇದ್ ಎಸ್. ಆರ್.), ಚಕ್ಕನೆ ಮಾಡುವ ಚಟುವಟಿಕೆಗಳು – ವಿಜ್ಞಾನ ಮತ್ತು ಕರಕುಶಲ ಕಲೆಗಳು (ಕನ್ನಡಕ್ಕೆ : ಯಮುನಾ ನಟರಾಜ್), ವಿಜ್ಞಾನದ ಸರಳ ಕುತೂಹಲಕರ ಪ್ರಯೋಗಗಳು (ಕನ್ನಡಕ್ಕೆ : ವಿ.ಎಸ್.ಎಸ್. ಶಾಸ್ತ್ರಿ), ಪುಟಾಣಿ ವಿಜ್ಞಾನ (ಕನ್ನಡಕ್ಕೆ : ಡಾ. ನಿಶಾ ಚೇತನ ಶಾಸ್ತ್ರಿ), ಚೂರು ಪಾರು – ವಿಜ್ಞಾನ ಮತ್ತು ಕರಕುಶಲ ಚಟುವಟಿಕೆಗಳು (ಕನ್ನಡಕ್ಕೆ : ಪ್ರವೀಣ್ ಎಸ್. ಕೋಲಾರ), ಅಲ್ಲದೆ ಸುರೇಶ್ ವೈದ್ಯರಾಜನ್ ಅವರೊಂದಿಗೆ ರಚಿಸಿದ ತ್ಯಾಜ್ಯದಿಂದ ಬಗೆ ಬಗೆಯ ಪಂಪ್‌ಗಳು (ಕನ್ನಡಕ್ಕೆ : ಎಂ.ಎಸ್. ಕೆ.ಎಂ. ಪ್ರಶಾಂತ) ಶೀರ್ಷಿಕೆಯ ಈ ಹತ್ತು ಪುಸ್ತಕಗಳು ಮಕ್ಕಳಿಗೆ ಚಟುವಟಿಕೆಗಳನ್ನು ಮಾಡಿಸುತ್ತಾ, ಆಟ ಆಡಿಸುತ್ತಾ, ಸಂತಸ ಕಲಿಕೆಯ ವಾತಾವರಣದಲ್ಲಿ ಪಾಠವನ್ನೂ ಮಾಡುತ್ತವೆ.

ಆಟಿಕೆಗಳ ಬುತ್ತಿ, ಆಟಿಕೆಗಳ ಖಜಾನೆ, ಎಲೆಗಳೊಂದಿಗೆ ವಿನೋದ, ಹೆಬ್ಬೆರಳಿನ ಗುರುತುಗಳು, ಹೆಬ್ಬೆರಳು ಒತ್ತಿ ಚಿತ್ರ ಬರೆಯಿರಿ, ಚಕ್ಕನೆ ಮಾಡುವ ಚಟುವಟಿಕೆಗಳು, ವಿಜ್ಞಾನ ಮತ್ತು ಕರಕುಶಲ ಕಲೆಗಳು, ವಿಜ್ಞಾನದ ಸರಳ ಕುತೂಹಲಕರ ಪ್ರಯೋಗಗಳು, ಪುಟಾಣಿ ವಿಜ್ಞಾನ, ಚೂರು ಪಾರು – ವಿಜ್ಞಾನ ಮತ್ತು ಕರಕುಶಲ ಚಟುವಟಿಕೆಗಳು, ತ್ಯಾಜ್ಯದಿಂದ ಬಗೆ ಬಗೆಯ ಪಂಪ್‌ಗಳು.

ಮೂಲ: ಅರವಿಂದ ಗುಪ್ತ
ಅನು: ವಿವಿಧ ಲೇಖಕರು
ಪುಟಗಳು: ತಲಾ 32 ರಿಂದ 60
ಪ್ರ:ನವಕರ್ನಾಟಕ ಪ್ರಕಾಶನ, ಬೆಂಗಳೂರು

ಆನಂದದಾಯಕ ಕಲಿಕೆಯ ಅನುಭವಕ್ಕಾಗಿ ಈ ಕೃತಿಗಳನ್ನು ನೋಡಲೇಬೇಕು.

ಕಾಗದವನ್ನು ಮಡಿಸಿ ಸಿದ್ಧಮಾಡುವ (ಒರಿಗಾಮಿ) ಸರಳ ಆಟಿಕೆಗಳಿಂದ ಹಿಡಿದು ಕಸವೆಂದು ಬಿಸಾಡುವ ನೂರಾರು ಸಣ್ಣ ಪುಟ್ಟ ವಸ್ತುಗಳಿಂದ ಹತ್ತು ಹಲವು ವೈಜ್ಞಾನಿಕ ಚಟುವಟಿಕೆಗಳನ್ನು ಮಾಡಿ, ಕಲಿತು, ಕಲಿಸುವ, ವಿಜ್ಞಾನದ ಕಲಿಕೆಯನ್ನು ಸರಳವಾಗಿ ಮಕ್ಕಳೇ ಮಾಡಿ, ವಿನ್ಯಾಸ, ಮಾದರಿಗಳನ್ನು ರಚಿಸಿ ತೋರಿಸುವ, ಗಣಿತ ಕಲಿಕೆಯ ರುಚಿ ಹತ್ತಿಸುವ ಈ ಕೃತಿಗಳಲ್ಲಿ ಆಟಿಕೆಗಳು ಮತ್ತು ಮಾದರಿಗಳು ಹೆಚ್ಚಾಗಿದ್ದು, ಇವುಗಳನ್ನು ಕಡಿಮೆ ವೆಚ್ಚ ಮತ್ತು ಸಮಯದಲ್ಲಿ ಮಾಡಿ ತೋರಿಸಿ ಆನಂದಿಸಬಹುದು ಎಂಬುದನ್ನು ಸಚಿತ್ರವಾಗಿ ವಿವರಿಸಲಾಗಿದೆ. ಈ ಹತ್ತು ಪುಸ್ತಕಗಳು ಶಿಕ್ಷಕರು ಹಾಗೂ ಮಗುವಿನ ಕೈಯಲ್ಲಿ ಇದ್ದಲ್ಲಿ ಸಮಯದ ಸದುಪಯೋಗ ಖಂಡಿತ! ಮಕ್ಕಳಿಗೆ ಉಡುಗೊರೆ ನೀಡಲು ಸೂಕ್ತವಾದ ಪುಸ್ತಕಗಳು ಇವು.



ಬಯಲು
ಲೇ: ಡಾ. ಶ್ರೀಧರ ಎಚ್.ಜಿ. ಮುಂಡಿಗೆಹಳ್ಳ
ಪ್ರ: ಅನ್ನಪೂರ್ಣ ಪಬ್ಲಿಷಿಂಗ್ ಹೌಸ್, ಬೆಂಗಳೂರು
9880802551 ಬೆಲೆ ರೂ. 450/-

» ಡಾ. ರವಿಶಂಕರ ಜಿ. ಕೆ., ಪಾಣಾಜೆ

ಇಲ್ಲಿದೆ ಅಲ್ಲಮನ ದರ್ಶನ

ಪ್ರಸ್ಥಾನ, ಚಪಡ ಕಾದಂಬರಿಗಳನ್ನು ರಚಿಸಿದ ಡಾ. ಶ್ರೀಧರ ಎಚ್. ಜಿ. ಅವರ ಮೂರನೆಯ ಕಾದಂಬರಿ 'ಬಯಲು'. ಇದು ಅಲ್ಲಮಪ್ರಭುವಿನ ಪಾತ್ರವನ್ನು ಕೇಂದ್ರೀಕರಿಸಿ ರಚಿತವಾಗಿರುವ ಕಾದಂಬರಿಯಾಗಿದ್ದು, ಹನ್ನೆರಡನೆ ಶತಮಾನದ ಶರಣ ಚಳುವಳಿಯ ಬಹುಮುಖಿ ಆಯಾಮಗಳನ್ನು ತೆರೆದಿಡುತ್ತದೆ.

ಬಳ್ಳಿಗಾವೆಯಲ್ಲಿ ಜನಿಸಿ ಕಲ್ಯಾಣಕ್ಕೆ ಬಂದು ಶರಣರ ಮಾರ್ಗ ದರ್ಶಕನಾಗಿ ನಿಂತ ಅಲ್ಲಮನ ವ್ಯಕ್ತಿತ್ವ ಮತ್ತು ವೈಚಾರಿಕ ಚಿಂತನೆಗಳು ಜಗತ್ತಿನ ಗಮನ ಸೆಳೆದಂಥದ್ದು. ಆತ ಏರಿದ್ದ ಜ್ಞಾನದ ಶಿಖರ ಬೆರಗು ಮೂಡಿಸುವಂಥದ್ದು. ಅಂತಹ ಅಲ್ಲಮನ ಕುರಿತಾಗಿ ನಡುಗನ್ನಡ ಕಾಲಘಟ್ಟದಲ್ಲಿ ಮಾತ್ರವಲ್ಲದೆ ಆಧುನಿಕ ಕನ್ನಡ ಸಾಹಿತ್ಯ ಸಂದರ್ಭದಲ್ಲಿಯೂ ನಿರಂತರವಾಗಿ ಅನ್ವೇಷಣೆಗಳು ನಡೆದಿದೆ. ಅದರ ಮುಂದುವರಿಕೆಯೆಂಬಂತೆ ಪ್ರಕಟಗೊಂಡಿರುವ ಬಯಲು ಕಾದಂಬರಿಯು ಕೇವಲ ಅಲ್ಲಮನ ಅಧ್ಯಾತ್ಮಿಕ ನೆಲೆಯ ಚಿತ್ರಣಕ್ಕೆ ಸೀಮಿತಗೊಳ್ಳುವುದಿಲ್ಲ. ಲೇಖಕರೇ ಹೇಳಿಕೊಂಡಿರುವಂತೆ ಕಾದಂಬರಿಯಲ್ಲಿ ಅಲ್ಲಮನ ಮನಸ್ಸಿನ ಒಳಪದರಗಳ ಸೂಕ್ಷ್ಮಗಳನ್ನು ಹಿಡಿದಿಡುವ ಪ್ರಯತ್ನ ಮಾಡಿದ್ದಾರೆ.

ಅಲ್ಲಮ ಶ್ರೀಶೈಲಕ್ಕೆ ಬರುವಲ್ಲಿಂದ ಆರಂಭವಾಗುವ ಕಾದಂಬರಿಯು ಹಿನ್ನೋಟ ತಂತ್ರದ ಮೂಲಕ ನಿರೂಪಣೆಗೊಳ್ಳುತ್ತದೆ. ಅಲ್ಲಮನ ಮನೋಭಿತ್ತಿಯಲ್ಲಿ ಮೂಡುವ ಚಿತ್ರಗಳಂತೆ ಆತನ ಬದುಕಿನ ಪುಟಗಳು ಒಂದೊಂದಾಗಿ ತೆರೆದುಕೊಳ್ಳುತ್ತದೆ. ಅಲ್ಲಮನ ಹುಟ್ಟು, ಬಾಲ್ಯ, ಶಿಕ್ಷಣ, ವಾದ್ಯ ನುಡಿಸುವುದರಲ್ಲಿ ಆತ ಪಡೆದುಕೊಂಡ ಪರಿಣತಿ, ಕಾಮಲತೆಯೊಂದಿಗಿನ ದಾಂಪತ್ಯ, ಆಕೆಯ ಆಕಸ್ಮಿಕ ಮರಣ, ಜ್ಞಾನೋದಯವಾಗಿ ಕಲ್ಯಾಣಕ್ಕೆ ಬಂದದ್ದು, ಮಹಾಮನೆಯ ಶೂನ್ಯ ಸಿಂಹಾ ಸನವೆ ೕರಿದ್ದು, ಕಲ್ಯಾಣವನ್ನು ತ್ಯಜಿಸಿ ಶ್ರೀಶೈಲಕ್ಕೆ ಬಂದು ಬಯ ಲಾಗುವವರೆಗಿನ ಸಂದರ್ಭಗಳ ಚಿತ್ರಣ ಕಾದಂಬರಿಯಲ್ಲಿದೆ.

ದಾರ್ಶನಿಕನಾದ ಅಲ್ಲಮನ ಬದುಕು ಮತ್ತು ತತ್ವಗಳೊಂದಿಗಿನ ಅನುಸಂಧಾನವನ್ನು ಪರಿಚಯಿಸಿಕೊಡುವ ಕಾದಂಬರಿ ಇದು.

ಕಾದಂಬರಿಯಲ್ಲಿ ಅಲ್ಲಮನ ಪಾತ್ರ ಊರ್ಧ್ವಮುಖಿಯಾಗಿ ಬೆಳೆಯುತ್ತಾ ಸಾಗುತ್ತದೆ. ಲೌಕಿಕದಿಂದ ಅಲೌಖಿಕಕ್ಕೆ, ಅಲೌಖಿಕದಿಂದ ದಾರ್ಶನಿಕನ ಔನ್ನತ್ಯಕ್ಕೆ ಏರುತ್ತದೆ. ಅಲ್ಲಮನ ಕಥನಕ್ಕೆ ಪೂರಕವಾಗಿ ಅಕ್ಕಮಹಾದೇವಿ, ಬಸವಣ್ಣ, ಸಿದ್ಧರಾಮರ ಬದುಕಿನ ವಿವರಣೆಗಳು ಬರುತ್ತವೆ. ಅಲ್ಲದೆ ಅಂಬಿಗರ ಚೌಡಯ್ಯ, ಚೆನ್ನಬಸವಣ್ಣ, ಹಡಪದ ಅಪ್ಪಣ್ಣ, ಮಡಿವಾಳ ಮಾಚಯ್ಯ, ಮಾದಾರ ಚೆನ್ನಯ್ಯ, ಕಿನ್ನರಿ ಬೊಮ್ಮಯ್ಯ, ಡೋಹರ ಕಕ್ಕಯ್ಯ, ನುಲಿಯ ಚಂದಯ್ಯ, ಅಜಗಣ್ಣ, ಮುಕ್ತಾಯಕ್ಕಾ ಮುಂತಾದ ಶರಣರು ಪಾತ್ರಗಳಾಗಿದ್ದಾರೆ.

ಅಲ್ಲಮನು ಶಿವಶರಣರಿಗೆ ಗುರುವಿನ ಸ್ಥಾನದಲ್ಲಿ ಇದ್ದವನು. ಅನುಭವ ಮಂಟಪದ ಅಧ್ಯಕ್ಷನ ಪದವಿಯಲ್ಲಿ ಕುಳಿತು ಎಲ್ಲಾ ಪ್ರಶ್ನೆ, ಸಂಶಯಗಳಿಗೆ ಉತ್ತರವನ್ನು ನೀಡುತ್ತಿದ್ದವನು. ಹಾಗಾಗಿ ಕಾದಂಬರಿಯಲ್ಲಿ ಮಾತು–ಮಥನಗಳು ಸುದೀರ್ಘವಾಗಿ ನಡೆದು ಅಲ್ಲಮನ ವೈಚಾರಿಕ ನಿಲುವುಗಳು ಒಂದೊಂದಾಗಿ ಸ್ಪಷ್ಟಗೊಳ್ಳುತ್ತದೆ. ಶರಣರು ಪ್ರತಿಪಾದಿಸಿದ ಶೂನ್ಯತ್ವ, ಗುರು– ಲಿಂಗ–ಜಂಗಮಗಳ ತತ್ವ ಮತ್ತು ಷಟ್‌ಸ್ಥಲ ಸಿದ್ಧಾಂತಗಳು ಸೋದಾಹರಣವಾಗಿ ಚರ್ಚಿತವಾಗುತ್ತದೆ.

ಅಲ್ಲಮನ ನಿಲುವುಗಳಲ್ಲಿದ್ದ ಖಚಿತತೆ, ಆತ ಸಾಧಿಸಿದ್ದ ಮಾನಸಿಕ ದೃಢತೆ, ವೈರಾಗ್ಯದ ಭಾವಗಳನ್ನು ಚಿತ್ರಿಸುತ್ತಲೇ ಅಲ್ಲಮನಿಗೆ ಹುಟ್ಟಿದ ಊರಿನ ಮೇಲಿದ್ದ ಪ್ರೀತಿ, ತಂದೆ–ತಾಯಿ–ಹೆಂಡತಿಯ ಜೊತೆಗೆ ಹೊಂದಿದ್ದ ಮಾನಸಿಕವಾದ ನಂಟು, ಅವನ ಇಷ್ಟಾನಿಷ್ಟಗಳು ಮುಂತಾಗಿ ಅಲ್ಲಮನ ವ್ಯಕ್ತಿತ್ವದ ಭಾವನಾತ್ಮಕ ಮುಖಗಳಲ್ಲಿಯೂ ಕಾದಂಬರಿಯು ತೆರೆದುಕೊಂಡಿದೆ.

ಕಾದಂಬರಿಯು 12ನೇ ಶತಮಾನದಲ್ಲಿ ವಚನ ಚಳವಳಿಯು ರೂಪುಗೊಂಡ ಬಗೆ, ಆ ಕಾಲದ ಜೀವನ ಕ್ರಮ, ಸಾಮಾಜಿಕ ಮತ್ತು ಕೌಟುಂಬಿಕ ವ್ಯವಸ್ಥೆ, ಜನಸಾಮಾನ್ಯರ ವ್ಯವಸಾಯದ ಬದುಕು, ಆಹಾರ ಕ್ರಮ, ಶಿಕ್ಷಣ ವ್ಯವಸ್ಥೆ, ಗುರು–ಶಿಷ್ಯ ಸಂಬಂಧ ಮುಂತಾದ ವಿವರಣೆಗಳ ಮೂಲಕ ಆಗಿನ ಸಾಮಾಜಿಕ ಚರಿತ್ರೆಯನ್ನು ವಸ್ತುನಿಷ್ಠವಾಗಿ ಕಂಡುಕೊಳ್ಳುವ ಪ್ರಯತ್ನ ಮಾಡುತ್ತದೆ. ಬಳ್ಳಿಗಾವೆ, ಉಡುತಡಿ, ಬನವಾಸಿ, ಕಲ್ಯಾಣ, ಸೊನ್ನಲಿಗೆ, ಶ್ರೀಶೈಲಗಳ ಸಾಂಸ್ಕೃತಿಕ ಇತಿಹಾಸವನ್ನು ದಾಖಲಿಸುತ್ತದೆ. ಈ ಪ್ರದೇಶಗಳ ಪ್ರಾಕೃತಿಕ ಸೊಬಗನ್ನು, ಭೌಗೋಳಿಕ ಸ್ವರೂಪವನ್ನು ಕಾವ್ಯಾತ್ಮಕವಾಗಿ ವರ್ಣಿಸುತ್ತಾ ಕಥನವನ್ನು ಕಟ್ಟಲಾಗಿದೆ. ವಚನಕಾರರು ಮಹಾಮನೆಯಲ್ಲಿ ಸೇರುತ್ತಿದ್ದ ಸಭೆ, ನಡೆಯುತ್ತಿದ್ದ ಗೋಷ್ಠಿಗಳನ್ನು ಕಣ್ಣಿಗೆ ಕಟ್ಟುವಂತೆ ನಿರೂಪಿ ಸಲಾಗಿದೆ. ಹಾಗಾಗಿ ಈ ಕಾದಂಬರಿಯು ಅಲ್ಲಮನ ಪಾತ್ರವನ್ನು ಸಮಗ್ರವಾಗಿ ತೆರೆದಿಡುವುದರ ಜೊತೆಜೊತೆಗೆ ವಚನ ಚಳುವಳಿಯ ಸಾಂಸ್ಕೃತಿಕ ಆಯಾಮಗಳನ್ನು ಖಚಿತವಾಗಿ ಕಟ್ಟಿಕೊಡುತ್ತದೆ.

ಕಾದಂಬರಿಯ ಕೊನೆಯಲ್ಲಿ ಅಲ್ಲಮನ ಸ್ವಗತದ ಮಾತುಗಳಂತೆ ಆತನ ಬದುಕಿನ ಮೌಲ್ಯಮಾಪನವಿದ್ದು ಕಥನಕ್ಕೆ ಒಂದು ಗಟ್ಟಿಯಾದ ಚೌಕಟ್ಟು ಸಿಕ್ಕಂತಾಗಿದೆ. ಅಲ್ಲಮನ ದೇಹಭಾವ ಶೂನ್ಯವಾಗಿ ಆತ ಮಹಾ ಅರಿವಿನಲ್ಲಿ ಲೀನವಾಗುವ ಚಿತ್ರಣ ಬಹಳ ಅದ್ಭುತವಾಗಿ ಮೂಡಿ ಬಂದಿದೆ. ಒಟ್ಟಿನಲ್ಲಿ ಪಾಂಡಿತ್ಯ ಮತ್ತು ಸೃಜನಶೀಲ ಪ್ರತಿಭೆಗಳ ಸಮ್ಮಿಳನದಿಂದ ಮೂಡಿ ಬಂದಿರುವ ಈ ಕಾದಂಬರಿಯು ಅಲ್ಲಮನ ಜೀವನ ಮತ್ತು ವೈಚಾರಿಕತೆಗಳ ದರ್ಶನವನ್ನು ಮಾಡಿಸುವ ವೈಶಿಷ್ಟ್ಯಪೂರ್ಣ ಕೃತಿಯಾಗಿ ಮೂಡಿಬಂದಿದೆ.

ವಿಶ್ವವಾಣಿ ಅಂಕಿತ ಟಾಪ್ ಟೆನ್



1
ಮಾರ್ಗಣ
(ಸಂಸ್ಕೃತಿ ಚಿಂತನಗಳು)
ಲೇ: ಶತಾವಧಾನಿ ಡಾ| ಆರ್. ಗಣೇಶ್
ಪ್ರ: ಸಾಹಿತ್ಯ ಪ್ರಕಾಶನ, ಹುಬ್ಬಳ್ಳಿ
ಬೆಲೆ : ರೂ 210/-



2
ದೇವನೂರ ಮಹಾದೇವ ಜೊತೆ ಮಾತುಕತೆ
(ಆಯ್ದ ಸಂದರ್ಶನಗಳ ಸಂಕಲನ)
ಸಂ : ಬನವಾಸಿಗರು
ಪ್ರ: ಅಭಿರುಚಿ ಪ್ರಕಾಶನ,ಮೈಸೂರು
ಬೆಲೆ : ರೂ 220/-



3
ಮಹಾಯೋಗಿನಿ
(ತಂತ್ರ, ಮಂತ್ರ ಕುರಿತ ರೋಚಕ ನೈಜ ಕಾದಂಬರಿ)
ಹಿಂದಿ : ಸುರೇ ಸೋಮಪುರ
ಅನು : ಎಂ.ವಿ. ನಾಗರಾಜರಾವ್
ಪ್ರ: ಅಂಕಿತ ಪುಸ್ತಕ, ಬೆಂಗಳೂರು
ಬೆಲೆ : ರೂ 180/-

4
ಸುದ್ದಿ ಸಂಗಾತಿಯ ಸ್ವಗತ
(ಆತ್ಮಕಥನ)
ಲೇ: ನಾಗಮಣಿ ಎಸ್.ರಾವ್
ಸಂಯೋಜನೆ : ಮಾಲತಿ ಭಟ್
ಪ್ರ: ವಿಕಾಸ ಪ್ರಕಾಶನ, ಬೆಂಗಳೂರು
ಬೆಲೆ : ರೂ 250/-



5
ಏಷ್ಯಾದ ಬೆಳಕು
(ಬುದ್ಧ ತೋರಿದ ಬೆಳಕು)
ಇಂಗ್ಲಿಷ್ ಮೂಲ : ಸರ್ ಎಡ್ವಿನ್ ಆರ್ನಾಲ್ಡ್
ಅನು : ಡಾ. ಮಹದೇವ
ಪ್ರ: ಡಾ. ಮಹದೇವ ಪ್ರಕಾಶನ, ಮೈಸೂರು, ಬೆಲೆ : ರೂ 260/-

6
ಕವಿರಾಜ್ ಮಾರ್ಗದಲ್ಲಿ
(ಅನುಭವಗಳು ಮತ್ತು ನೆನಪುಗಳು)
ಲೇ: ಕವಿರಾಜ್
ಪ್ರ: ಹರಿವು ಬುಕ್ಸ್, ಬೆಂಗಳೂರು
ಬೆಲೆ : ರೂ 250/-



7
ಬೀದಿ ಹೆಣ್ಣು
(ಮರಾಠಿ ಕತೆಗಳು)
ಲೇ: ಬಾಬುರಾವ್ ಬಾಗುಲ್
ಅನು : ದು. ಸರಸ್ವತಿ
ಪ್ರ: ಬಹುವಚನ ಪ್ರಕಾಶನ, ಬೆಂಗಳೂರು
ಬೆಲೆ : ರೂ 200/-



8
ನೇರಳೆ ಐಸ್‌ಕ್ರೀಂ
(ಕತೆಗಳು)
ಲೇ: ಪ್ರಸಾದ್ ಶೆಣೈ.ಆರ್. ಕೆ
ಪ್ರ: ವೀರಲೋಕ, ಬೆಂಗಳೂರು
ಬೆಲೆ : ರೂ 225/-

9
ನಿರೂಪಣೆಯಾಚೆಗೆ
(ಜನಪದ ಸಾಹಿತ್ಯ ಮತ್ತು ಮಹಿಳೆ)
ಲೇ: ಡಾ| ಶೈಲಜ ಇಂ. ಹಿರೇಮಠ
ಪ್ರ: ಸಂಗಾತ ಪುಸ್ತಕ, ರಾಜೂರ
ಬೆಲೆ : ರೂ 300/-



10
ಅಲೆಮಾರಿಗಳು, ಅರಸರು, ವರ್ತಕರು
(ಭಾಷೆಗಳ ಹಾದಿಗುಂಟ ಭಾರತದ ಕಥನ)
ಲೇ: ಪೆಗ್ಗಿ ಮೋಹನ್
ಅನು : ಸಂಕೇತ ಪಾಟೀಲ
ಪ್ರ: ಋತುಮಾನ ಪ್ರಕಾಶನ, ಬೆಂಗಳೂರು
ಬೆಲೆ : ರೂ 549/-

ಮಾಹಿತಿ: ಅಂಕಿತಪುಸ್ತಕ, 53, ಗಾಂಧಿಬಜಾರ್ ಮುಖ್ಯರಸ್ತೆ, ಬಸವನಗುಡಿ, ಬೆಂಗಳೂರು-560004.
ದೂರವಾಣಿ: 26617100/26617755
ಮೊಬೈಲ್ ನಂ: 9019190502

ಏಕಾಂಗಿಯಾಗಿ ಪಯಣಿಸುವ ಅಪರೂಪದ ಅನುಭವ ಹೊಂದಲೆಂದು 'ಸೋಲೋ ಟ್ರಿಪ್'ಗೆ ಎಂದು ಬಸ್ ಹತ್ತಿದ ಇವರಿಗೆ ಆದ ಅನುಭವವಾದರೂ ಎಂಥದ್ದು?

ನನ್ನ ಸೋಲೋ ಟ್ರಿಪ್

» ಗೌರಿ ಚಂದ್ರಕೇಸರಿ

ಸ್ನೇಹಿತೆಯರು ಯಾರಾದರೂ ಫೋನಾಯಿಸಿದಾಗ ಇನ್ನೇನು ಸಮಾಚಾರ? ಮತ್ತೇನು ವಿಶೇಷ? ಎಂದಾಗ ನನ್ನಿಂದ ಬರುವ ಉತ್ತರ ಒಂದೇ. ''ಅಯ್ಯೋ ವಿಶೇಷವೇನಿರುತ್ತದೆ? ಎಲ್ಲವೂ ಶೇಷವೇ. ನಿತ್ಯ ಅದೇ ತೊಳಿ, ಬಳಿ, ಗುಡಿಸು, ಒರೆಸುವುದನ್ನು ಬಿಟ್ಟರೆ ಇನ್ನೇನಿರುತ್ತದೆ?'' ಎಂಬ ನನ್ನ ಉತ್ತರವನ್ನು ಕೇಳಿ ಕೇಳಿ ಬೇಸತ್ತ ಮಗಳು ''ಅಮ್ಮ, ಜೀವನದಲ್ಲಿ ವಿಶೇಷಗಳು ಇರಬೇಕೆಂದರೆ ನಾವಾಗಿಯೇ ಸೃಷ್ಟಿಸಿಕೊಳ್ಳಬೇಕು, ಸದಾ ನಾಲ್ಕು ಗೋಡೆಗಳ ಮಧ್ಯದಲ್ಲಿ ಇರುವ ನೀನು ಅದರಿಂದ ಹೊರಬರಬೇಕು, ಇರುವುದೊಂದೇ ಬದುಕು. ನಿನಗೆ ಬೇಕೆಂದಲ್ಲಿಗೆ ಹೋಗಿ ತಿರುಗಾಡಿ ಬಾ. ಹೊಸ ಹೊಸ ಜಾಗಗಳಿಗೆ ಪ್ರವಾಸ ಹೋಗು'' ಎಂದಾಗ ಕೋಪ ನೆತ್ತಿಗೇರಿತ್ತು.

'ನಾನು ಒಂದು ದಿನ ಮನೆಯಲ್ಲಿ ಇರದೇ ಹೋದರೆ ಮನೆಯವರೆಲ್ಲ ಹೊಟ್ಟೆಗೆ ತಣ್ಣೀರು ಬಟ್ಟೆ ಹಾಕಿಕೊಳ್ಳ ಬೇಕಾಗುತ್ತದೆ. ನನ್ನನ್ನು ಹೊರಗೆ ಕರೆದುಕೊಂಡು ಹೋಗ ಬೇಕಾದವರು ಸದಾ ಕರೆಗಳಲ್ಲೇ ಕಳೆದು ಹೋಗಿರುತ್ತಾರೆ. ಯಾರ ಜೊತೆಗೆ ಹೋಗಬೇಕು ಹೇಳು'' ಎಂದಿದ್ದೆ. ಅದಕ್ಕೆ ಮಗಳು ''ಅಮ್ಮ, ಈಗ ಯಾರೂ ಯಾರಿಗಾಗಿಯೂ ಕಾಯುವುದಿಲ್ಲ. ಎಲ್ಲರೂ ಇಂಡಿಪೆಂಡೆಂಟ್ ಆಗಿ ಯೋಚಿಸುತ್ತಾರೆ. ಸೋಲೋ ಟ್ರಿಪ್ ಬಗ್ಗೆ ನೀನು ಕೇಳಿಲ್ಲವಾ? ಎಂದಳು. 'ಅದೇನು ಸೋಲೋ ಟ್ರಿಪ್ ಎಂದರೆ? ಟ್ರಿಪ್‌ಗೆ ಸೋಲಲು ಯಾಕಾಗಿ ಹೋಗಬೇಕು?' ಎಂದಿದ್ದೆ.

ಅದಕ್ಕೆ ಮಗಳು ಜೋರಾಗಿ ನಗುತ್ತ ''ಕನ್ನಡದ ಸೋಲೋ ಅಲ್ಲಮ್ಮ, ಇಂಗ್ಲೀಷ್ ಸೋಲೋ. ಅಂದರೆ ಏಕಾಂಗಿ ಯಾಗಿ ಪ್ರವಾಸ ಹೋಗುವುದು ಎಂದರ್ಥ. ನಿನ್ನ ವಯಸ್ಸಿನ ಲೇಡೀಸ್ ಎಲ್ಲ ಸೋಲೋ ಬೈಕ್ ರೈಡ್, ಕಾರ್ ರೈಡ್ ಹೋಗುತ್ತಾರೆ. ನಿನಗೆ ಎರಡೂ ಆಗುವುದಿಲ್ಲ. ನೀನೊಬ್ಬಳೇ ಬಸ್ ಇಲ್ಲಾ ರೈಲಿನಲ್ಲಿ ಪ್ರಯಾಣ ಮಾಡು. ಮನೆ-ಮಠ ಅಂತ ಯೋಚಿಸದೇ ಒಂದು ವಾರ ಎಲ್ಲಿಗಾದರೂ ಹೋಗಿ ಬಾ. ಆಗ ನಿನ್ನ ಮೈಂಡ್ ಎಷ್ಟು ಫ್ರೆಷ್ ಆಗಿರುತ್ತದೆ ನೋಡು. ಬಸ್ ಪ್ರಯಾಣ ಉಚಿತವಾದ ಮೇಲೆ ದಿನವೂ ಸಾವಿರಾರು ಹೆಣ್ಣು ಮಕ್ಕಳು ಸೋಲೋ ಆಗಿ ಪುಣ್ಯಕ್ಷೇತ್ರ, ಪ್ರವಾಸಕ್ಕೆಂದು ಹೋಗುತ್ತಿಲ್ಲವೆ? ಹಾಗೇ ನೀನೂ ಹೋಗು'' ಎಂದಾಗ ಥಟ್ಟನೇ ಬಸ್‌ಗಳಲ್ಲಿ ನಿತ್ಯ ನಡೆಯುವ ಹೆಣ್ಣು ಮಕ್ಕಳ ಜಟಾಪಟಿ ನೆನಪಾಗಿ ಕುಳಿತಲ್ಲಿಯೇ ಬೆವರಿದ್ದೆ. ನನ್ನಂತವರಿಗೆ ಇದು ಆಗದ ಹೋಗದ ಮಾತು ಎಂದುಕೊಂಡು ಸುಮ್ಮನಾಗಿದ್ದೆ.

ಕುಳಿತರೂ ನಿಂತರೂ ಈ ಸೋಲೋ ಟ್ರಿಪ್ ಗುಂಗೀ ಹುಳದಂತೆ ತಲೆಯಲ್ಲಿ ಸುತ್ತ ತೊಡಗಿತು. ಒಬ್ಬಳೇ ಹೋದರೆ ಉಳಿದುಕೊಳ್ಳುವುದು ಎಲ್ಲಿ? ಹೋದಲ್ಲೆಲ್ಲ ನೆಂಟರ ಮನೆಗಳು ಇರಬೇಕಲ್ಲ? ಒಬ್ಬಳೇ ಹೋದರೆ ಸಂಬಂಧಿಗಳು ಅಂದುಕೊಳ್ಳುವುದೇ ಬೇರೆ. ಆದರೆ ಇದೇ ಏಕತಾನತೆಯ ಜೀವನ ಬೇಸರವೆನಿಸಿದೆ. ಹೊಸದನ್ನೇನಾದರೂ ಮಾಡಲೇಬೇಕು ಎನ್ನಿಸುತ್ತಿತ್ತು. ಮೊದ ಮೊದಲು ಟ್ರಯಲ್ ಎನ್ನುವಂತೆ ಬೆಳಗ್ಗೆ ಹೋಗಿ ರಾತ್ರಿಯೊಳಗಡೆ ಬಂದು ಮನೆ ಸೇರುವಂತಹ ಸ್ಥಳಗಳಿಗೆ ಹೋಗಬೇಕು. ನಂತರ ಓಡಾಡಲು ಧೈರ್ಯ ಬಂದ ಮೇಲೆ ಎರಡು ಮೂರು ದಿನದ ಪ್ರವಾಸಕ್ಕೆ ಹೋಗುವುದೆಂದು ಮನದಲ್ಲಿಯೇ ಮಂಡಿಗೆ ತಿನ್ನತೊಡಗಿದೆ.

ನನ್ನ ಸೋಲೋ ಟ್ರಿಪ್‌ನ ಅಡಿಪಾಯ ನಿತ್ಯವೂ ಹಂತ ಹಂತವಾಗಿ ತಲೆ ಎತ್ತತೊಡಗಿತು.

ಸುನಿತಾ ವಿಲಿಯಮ್ಸ್ ನೋಡಿ!

ಮನೆಯವರೆಲ್ಲ ಒಟ್ಟಿಗೇ ತಿಂಡಿಗೆ ಕುಳಿತಾಗ ''ನೋಡಿದಿರಾ? ಸುನಿತಾ ವಿಲಿಯಮ್ಸ್ ಎಂಬ ಹೆಣ್ಣು ಮಗಳು ಮನೆ ಮಠ ಬಿಟ್ಟು ಒಂಟಿಯಾಗಿ ಬಾಹ್ಯಾಕಾಶಕ್ಕೆ ಹೋಗಿ ಹತ್ತು ತಿಂಗಳು ಇದ್ದು ವಾಪಸ್ ಬಂದಾಯಿತು. ನಾವೂ ಇದೀವಿ. ಒಂದರ್ಧ ದಿನ ಎಲ್ಲಿಯಾದರೂ ಹೋದೇವೆಂದರೂ ಈ ಅಡುಗೆ ಮನೆ ನಮ್ಮನ್ನು ಬಿಡಬೇಕಲ್ಲ' ಎಂದೋ, ಊಟಕ್ಕೆ ಬಡಿಸುವಾಗ, ''ನನ್ನ ಸ್ನೇಹಿತೆ ಹಿಮಾಲಯ ಪರ್ವತವನ್ನು ಏರಿ ಸಾಧನೆ ಮಾಡಿದಳಂತೆ. ನಾವು ನಿತ್ಯ ಬಟ್ಟೆ ಒಣ ಹಾಕಲು ಟೆರೇಸಿನ ಮೆಟ್ಟಿಲನ್ನು ಹತ್ತುವುದೇ ಆಯಿತು. ಮನೆಕೆಲಸಗಳಿಂದ ನಮಗೆ ಬಿಡುಗಡೆಯಂತೂ ಇಲ್ಲ'' ಎಂದು ಪೀಠಿಕೆ ಹಾಕತೊಡಗಿದೆ. ಹೊಸದಾಗಿ ಆರಂಭವಾದ ನನ್ನ ವರಾತವನ್ನು ಕೇಳಿ ಕೇಳಿ

ಸುಲಲಿತ ಪ್ರಬಂಧ

ಮನೆಯವರು ''ನೀನು ಎಲ್ಲಿಗಾದರೂ ಹೋಗಬೇಕೆಂದುಕೊಂಡಿದ್ದೀಯಾ? ಬೇಕಿದ್ದರೆ ನಾಲ್ಕು ದಿನ ನಿನ್ನ ತವರಿಗೆ ಹೋಗಿ ಬಾ. ನಾವಿಲ್ಲಿ ಹೇಗಾದರೂ ಸಂಭಾಳಿಸುತ್ತೇವೆ'' ಎಂದು, ನಾಲ್ಕು ದಿನವಾದರೂ ಇವಳ ಕಿರಿಕಿರಿಯಿಂದ ಮುಕ್ತಿ ಸಿಗುವ ಆಸೆಯಲ್ಲಿ ಹೇಳಿದ್ದರು. ''ಅಯ್ಯೋ ಹೆಣ್ಣು ಮಕ್ಕಳಿಗೆ ಅಡುಗೆ ಮನೆಯಿಂದ ಬಿಡುಗಡೆ ಎಂಬುದೇ ಇಲ್ಲ. ಎಲ್ಲಿ ಹೋದರೂ ಅಡುಗೆ ಮನೆಯಲ್ಲಿ ಬೇಯುವುದು

ಇದ್ದದ್ದೇ''ಎಂದೆ. ಹಾಗಾದರೆ ನಿನಗಿಷ್ಟ ಬಂದಲ್ಲಿ ಹೋಗಿ ಬಾ ಎಂದು ಮಾತು ಮುಗಿಸಿದ್ದರು.

ಒಂದು ದಿನ ಬೆಳಿಗ್ಗೆ ಜಿಟಿ ಜಿಟಿ ಮಳೆಯಲ್ಲಿ ಕಾಫೀ ಹೀರುತ್ತ ದಿನ ಪತ್ರಿಕೆಯನ್ನು ತಿರುಗಿಸುತ್ತಿದ್ದಾಗ ''ಮೈದುಂಬಿ ಭೋರ್ಗರೆಯುತ್ತಿರುವ ಜೋಗ ಜಲಪಾತ. ದಿನವೂ ಲಗ್ಗೆ ಇಡುತ್ತಿರುವ ಪ್ರವಾಸಿಗರು'' ಎಂಬ ವರದಿಯನ್ನು ಓದಿ ಛೇ! ಜೋಗದ ಜಿಲ್ಲೆಯಲ್ಲಿಯೇ ಇದ್ದರೂ ಒಂದು ಬಾರಿಯೂ ನೋಡಲು ಹೋಗಲಾರದ ನನ್ನ ಬಗ್ಗೆ ನನಗೇ ಮರುಕವೆನ್ನಿಸಿತ್ತು. ನಾಳೆ ಹೇಗೂ ಭಾನುವಾರ, ಹೋಗಿ ಬರಬಹುದು. ಮನೆಯವರನ್ನು ಕೇಳಬೇಕೆನ್ನು ವಷ್ಟರಲ್ಲಿಯೇ ''ನಾಳೆ ಬೆಳಿಗ್ಗೆ ನಾನು ಎರಡು ದಿನದ ಮಟ್ಟಿಗೆ ಬ್ಯುಸಿನೆಸ್ ಟ್ರಿಪ್‌ಗೆ ಹೊರಡಬೇಕು. ಬಟ್ಟೆ ಪ್ಯಾಕ್ ಮಾಡಿಟ್ಟಿರು' ಎಂದು ಹೇಳಿ ಹೊರ ನಡೆದು ಬಿಟ್ಟರು. ಇನ್ನು ಮಗಳು ಲ್ಯಾಪ್ ಟಾಪ್ ತೆರೆದು ಕುಳಿತರೆ ಭಾನುವಾರವೂ ಒಂದೇ ಸೋಮವಾರವೂ ಒಂದೇ ಅವಳಿಗೆ. ಇವರಿಬ್ಬರನ್ನು ನೆಚ್ಚಿ ಕುಳಿತರೆ ನನ್ನ ಕೈಗೆ ಕೋಲು ಹಿಡಿಯುವ ಕಾಲ ಬಂದರೂ ಜೋಗವನ್ನು ಕಾಣಲಾರೆ ಎನ್ನಿಸಿತ್ತು. ಹುಟ್ಟಿದ ಮೇಲೆ ನೋಡು ಒಮ್ಮೆ ಜೋಗದ ಗುಂಡಿ ಅಂತ ಹಾಡೇ ಇದೆ ಅಲ್ಲ. ಆಕಾಶ ಭೂಮಿ ಒಂದಾದರೂ ಸರಿ ನಾಳೆ ಬೆಳಿಗ್ಗೆ ನಾನು ಸೋಲೋ ಟ್ರಿಪ್ ಹೋಗುವುದು ಶತಸಿದ್ಧ ಎಂದು ನಿರ್ಧರಿಸಿದೆ.

ಮಗಳಿಗೆ ಎಲ್ಲ ಸಲಹೆ ಸೂಚನೆಗಳನ್ನು ನಾನು ನೀಡಿದರೆ ಅವಳು ನನಗೆ ಕೆಲವು ಎಚ್ಚರಿಕೆಗಳನ್ನು ಹೇಳಿದ್ದಳು. ಹಾಗೆಯೇ ಹೊರಟವಳನ್ನು ತಡೆದು ಛತ್ರಿ, ಶಾಲುಗಳನ್ನು ಕೊಟ್ಟು 'ಹ್ಯಾಪಿ ಜರ್ನಿ' ಎಂದು ಕೈ ಬೀಸಿದ್ದಳು. ದುಗುಡವೆನಿಸಿದರೂ ಜೇಬು ತುಂಬಾ ಹಣ, ಕೈಯ್ಯಲ್ಲೊಂದು ಜಂಗಮವಾಣಿ ಇದ್ದಲ್ಲಿ ಇನ್ನೇತರ ಭಯ ಎನ್ನಿಸಿತ್ತು.

ಮನೆಯ ಹತ್ತಿರದಲ್ಲಿಯೇ ಇದ್ದ ಆಟೋ ಹಿಡಿದು ಬಸ್ ನಿಲ್ದಾಣವನ್ನು ತಲುಪಿದಾಗ ''ಜೋಗ... ಜೋಗ...'' ಎಂದು ಕೂಗುತ್ತಿದ್ದವನ ಕಡೆ ನಡೆದು ಬಸ್ಸನ್ನೇರಿ ಕಿಟಕಿಯ ಪಕ್ಕದ ಆಸನದಲ್ಲಿ ಕುಳಿತೆ. ಏನೋ ಒಂದು ರೀತಿಯ ಹೆಮ್ಮೆ, ಉದ್ವೇಗ; ಜತೆಗೆ ಧನ್ಯತೆಯ ಭಾವದಲ್ಲಿ ತೇಲಾಡತೊಡಗಿದೆ. ಇಷ್ಟು ದಿನ ನನ್ನ ಬದುಕನ್ನು ವ್ಯರ್ಥವಾಗಿ ಕಳೆದು ಬಿಟ್ಟೆನಲ್ಲ ಎನ್ನಿಸಿ ವಿಷಾದವೆನ್ನಿಸಿತ್ತು. ಸೋಲೋ ಟ್ರಿಪ್ ಬಗ್ಗೆ ಹೇಳಿದ ಮಗಳಿಗೊಂದು ಮನದಲ್ಲಿಯೇ ಥ್ಯಾಂಕ್ಸ್ ಹೇಳಿದ್ದೆ.

ಬಸ್ ಹೊರಟಾಗ ದಾರಿಯುದ್ದಕ್ಕೂ ಕಿಟಕಿಯಿಂದ ಕಾಣುವ ಮಲೆನಾಡಿನ ಸೊಬಗನ್ನು ಕಣ್ತುಂಬಿಕೊಳ್ಳುತ್ತಿದ್ದೆ. ಸ್ವಲ್ಪ ಹೊತ್ತಿನಲ್ಲಿಯೇ ಧೋ...ಎಂದು ಮಳೆ ಹುಯ್ಯ ತೊಡಗಿತ್ತು. ಇಲ್ಲಿ ಮಳೆ ಇದ್ದರೆ ಜೋಗದಲ್ಲಿಯೂ ಇರಬೇಕೆಂದೇನಿಲ್ಲ ಎಂದು ನನಗೆ ನಾನೇ ಸಮಾಧಾನ ಹೇಳಿಕೊಂಡೆ. ಅರ್ಧ ಗಂಟೆ ಕಳೆದರೂ ಮಳೆ ರಭಸ ವಾಗಿಯೇ ಬೀಳುತ್ತಿತ್ತು. ಹೀಗೆಯೇ ಆದರೆ ನಾನು ಜೋಗ ಜಲಪಾತವನ್ನು ಕಣ್ತುಂಬಿಕೊಳ್ಳುವುದು ಹೇಗೆಂದು ಚಿಂತೆಯಾಯಿತು. ತಂಪಾದ ಗಾಳಿ, ಮಳೆಗೆ ಬೆಚ್ಚಗೆ ಕುಳಿತ ನನಗೆ ಜೊಂಪು ಹತ್ತಿ ಬಿಟ್ಟಿತು. ಕನಸಿನಲ್ಲಿಯೇ ರಭಸದಿಂದ ಭೋರ್ಗರೆಯುತ್ತಿರುವ ಜಲಪಾತವನ್ನು ಕನಸಲ್ಲಿ ಆಸ್ವಾದಿಸತೊಡಗಿದ್ದೆ.

''ಜೋಗ...ಜೋಗ...ಇಳಿದು ಕೊಳ್ಳಿ' ಎಂಬ ಕಂಡಕ್ಟರನ ಜೋರಾದ ಕೂಗಿಗೆ ಬೆಚ್ಚಿ ಬಿದ್ದ ನಾನು ಕನಸಿನಿಂದ ಹೊರ ಬಂದಿದ್ದೆ.

ಇಳಿದರೆ ತೊಪ್ಪೆ!

ಆಸನದಿಂದ ದಡಕ್ಕನೇ ಎದ್ದಷ್ಟೇ ವೇಗದಲ್ಲಿ ಮತ್ತೆ ಕುಳಿತುಕೊಂಡೆ. ಹೊರಗೆ ಮಳೆ ಮುಸಲಧಾರೆಯಂತೆ ಬೀಳುತ್ತಿದೆ. ಬಸ್ಸಿನ ಟಾಪ್ ತೂತು ಬೀಳುವಂತೆ ಸದ್ದಾಗುತ್ತಿದೆ. ಬಸ್‌ನಲ್ಲಿದ್ದ ಪ್ರಯಾಣಿಕರೆಲ್ಲ ಇಳಿದು ಹೋಗಿದ್ದಾರೆ. ಇಂಥ ಮಳೆಯಲ್ಲಿ ಕೆಳಗಿಳಿದರೆ ತೊಯ್ದು ತೊಪ್ಪೆಯಾಗುವುದಂತೂ ಸತ್ಯ. ನನ್ನ ಬಳಿಯಿರುವ ಛತ್ರಿಗೆ ಈ ಮಳೆಯನ್ನು ಎದುರಿಸುವ ತಾಕತ್ತು ಇಲ್ಲ ಎನ್ನಿಸಿತ್ತು. ನನ್ನ ದುರ್ದೈವವನ್ನು ಹಳಿಯುತ್ತ ಸುಮ್ಮನೇ ಕುಳಿತುಕೊಂಡೆ. ಕಂಡಕ್ಟರ್ ಮತ್ತೆ 'ಶಿವಮೊಗ್ಗ...ಶಿವಮೊಗ್ಗ...' ಎಂದು ಕೂಗತೊಡಗಿದಾಗ ಬದುಕಿದೆಯಾ ಬಡಜೀವವೇ ಎಂದುಕೊಂಡೆ. ಮಳೆಗೆ ನೆಂದು ನೀರು ಬಸಿಯುತ್ತಿದ್ದ ಹೊರಗಿನ ಜನರು ಬಸ್ಸಿನ ಒಳಗೆ ದಬದಬನೇ ಹತ್ತಿ ಕುಳಿತುಕೊಳ್ಳತೊಡಗಿದರು. ಜೋಗಕ್ಕೆ ಬಂದ ಬಸ್ಸು ಜಲಪಾತವನ್ನು ನೋಡದೇ ಹಾಗೆಯೇ ವಾಪಸ್ ಹೊರಟಂತೆ ನನ್ನ ಸ್ಥಿತಿಯಾಗಿತ್ತು. ''ಪ್ರಥಮ ಚುಂಬನಂ ದಂತ ಭಗ್ನಂ'' ಎಂಬಂತೆ ನನ್ನ ಮೊದಲ ಸೋಲೋ ಟ್ರಿಪ್ ಕನ್ನಡದ ''ಸೋಲೋ'' ಟ್ರಿಪ್ ಆಗಿತ್ತು. ''ಟಿಕೆಟ್ ಟಿಕೆಟ್' ಎನ್ನುತ್ತ ಬಂದ ಕಂಡಕ್ಟರ್‌ಗೆ ಶಿವಮೊಗ್ಗ ಒಂದು ಕೊಡಿ ಎಂದಾಗ, ಅವನು ನನ್ನ ಮುಖವನ್ನು ಹುಳ್ಳಗೆ ನೋಡಿ ಮನಸಿನಲ್ಲಿಯೇ ನಗುತ್ತ ಟಿಕೆಟ್ ಕೊಟ್ಟು ಮುಂದೆ ನಡೆದ. ಮನೆಗೆ ಹೋಗಿ ನನ್ನ ಸೋಲೋ ಟ್ರಿಪ್‌ನ್ನು ಹೇಗೆ ವರ್ಣಿಸುವುದೆಂದುಕೊಳ್ಳುತ್ತ ಮತ್ತೆ ಕೂತಲ್ಲೇ ನಿದ್ದೆಗೆ ಜಾರಿದೆ.

ಯಾರ ಮನೆಗಾದರೂ ಹೋಗುವುದಾದರೆ, ಒಂದು ಕಾಲ್ ಮಾಡಿಯೇ ಹೋಗಬೇಕಂತೆ! ಏಕೆ?

ಒಂದ್ ಕಾಲ್ ಮಾಡ್ತೀರಾ?

» ಬಿ.ಕೆ.ಮೀನಾಕ್ಷಿ, ಮೈಸೂರು

ಇದೇನು ಬೆಳಗ್ಗೆಯಿಂದ ಒಂದೇ ಸಮನೆ ಮೊಬೈಲ್ ಹೊಡೆದುಕೊಳ್ಳುತ್ತಲೇ ಇದೆ? ಒಬ್ಬರು ತಪ್ಪಿದರೆ ಒಬ್ಬರು ಮೇಲಿಂದ ಮೇಲೆ ಕಾಲ್ ಮಾಡ್ತಾನೇ ಇದ್ದಾರೆ. ನನಗೂ ಉತ್ತರ ಹೇಳೀ ಹೇಳೀ ಸಾಕಾಗಿಹೋಯ್ತು. ಈ ಮದುವೆ ಸೀಸನ್ ಬಂದ್ರೆ ಸಾಕು ಇದೇ ಫಜೀತಿ! 'ಇವತ್ತು ಮನೇಲಿರ್ತೀರಾ ತಾನೇ? 'ಇವತ್ತು ಬರೋಣಾ ಅಂತಿದ್ವಿ, ಎಲ್ಲೂ ಹೋಗಲ್ಲಾ ಅಲ್ವಾ? 'ಹಾಗೇ ನಿಮ್ಮನೆ ಕಡೆನೇ ಬರ್ತಿದ್ದೆ. ಬಂದು ಹೋಗೋಣಾ ಅಂತ. ಬರ್‍ಲಾ? 'ಇವತ್ತು ಪತ್ರಿಕೆ ಕೊಡೋಕೆ, ಇವರನ್ನು ಕರೆದುಕೊಂಡು ಬರ್ತಿದೀನಿ. ಇರ್ತೀರಿ ತಾನೇ?'

ಅಯ್ಯೋ ಕರ್ಮಾನೇ! ಇಲ್ದೆ ಎಲ್ಲಿಗೆ ಹೋಗಲಿ? ಅಲ್ಲಾ ಮಾತೆತ್ತಿದರೆ ಹೀಗೆ ಇರ್ತೀರಾ ತಾನೇ ಇರ್ತೀರಾ ತಾನೇ ಅಂತ ಕೇಳುತ್ತಾರಲ್ಲಾ ಮನೇಲಿರೋರೇನು ಯಾವಾಗಲೂ ಊರೂರು ಸುತ್ತುತ್ತಿರುತ್ತಾರಾ? ಮನೆ ಕೆಲಸ ಬಿಟ್ಟು ಹೊರಗಡೆ ಸುತ್ತಾಡೋದಕ್ಕೆ ಹೋಗಿರುತ್ತಾರೆ ಅಂತಾನಾ ಇವರ ಲೆಕ್ಕಾಚಾರ? ಇತ್ತೀಚೆಗಂತೂ ಇದರ ಹಾವಳಿ ಹೆಚ್ಚಾಗಿ ಹೊಗಿದೆ. 'ಬರ್ತಿದಿವಿ ಇರ್ತೀರಾ?'

ಸರಿಯಾಗಿ ಯೋಚಿಸಿದರೆ ಇದರಲ್ಲಿ ಅವರ ತಪ್ಪೇನೂ ಇಲ್ಲ ಬಿಡಿ. ನಾವೇ ಪ್ರತಿಯೊಬ್ಬರಿಗೂ ಹೇಳಿರುತ್ತೇವೆ, 'ನೀವೇನಾದ್ರೂ ನಮ್ಮನೆಗೆ ಬರೋದಿದ್ರೆ ಒಂದು ಕಾಲ್ ಮಾಡಿ ಬನ್ನೀಪ್ಪಾ. ತಪ್ಪ್ ತಿಳೀಬೇಡಿ, ಅಕಸ್ಮಾತ್ ಎಲ್ಲಾದ್ರೂ ಹೋಗಿದ್ರೆ ಅಂತ ಅಷ್ಟೆ' ಎಂದು ನಯವಾಗಿ ಎಚ್ಚರಿಕೆ ಕೊಟ್ಟಿರುತ್ತೇವೆ, ಹೇಳದೆ ಕೇಳದೆ ಬಂದರೆ ಮನೆ ಬೀಗ ನೋಡಿಕೊಂಡು ಹೋಗುವ ದೌರ್ಭಾಗ್ಯ ನಿಮ್ಮದು, ಅದಕ್ಕೆ ನಾನು ಹೊಣೆಯಲ್ಲ ಅಂತ ಮನಸ್ಸಿನಲ್ಲಿ ಅಂದು ಕೊಳ್ಳುತ್ತಿರುತ್ತೇವೆ. ಅದಕ್ಕೆ ಹೇಳಿಬಿಟ್ಟು ಬಂದ್ರೆ ನಿಮಗೂ ಮರ್ಯಾದೆ, ನಮಗೂ ಒಂಥರಾ ಲೆಕ್ಕಾಚಾರ ಸರಿಹೋಗುತ್ತದೆ ಅಂತ ಯೋಚಿಸಿರುತ್ತೇವೆ. ಲೆಕ್ಕಾಚಾರ ಅಂದ್ರೆ, ಯಾರು ಬರುತ್ತಾರೆ, ಅವರಿಗೆ ತಕ್ಕಂತೆ ಏನು ಕೊಡಬಹುದು? ಎಷ್ಟೊತ್ತು ಕೂರಬಹುದು ಅಥವಾ ಎಷ್ಟೊತ್ತು ಕೂರಿಸಿ ಕೊಳ್ಳಬಹುದು? ಏನಾದರೂ ಕೊಟ್ಟು ಕಳಿಸುವುದಿದೆಯಾ? ಬರಿಗೈಲಿ ಕಳಿಸಿದರೆ ನಡೆಯುತ್ತದಾ? ಹೀಗೇ ಏನೇನೋ ಲೆಕ್ಕಾಚಾರ ಇರುತ್ತವೆ. ಅದನ್ನೆಲ್ಲ ನಾನೂ ಹೇಳೋದಲ್ಲ ನೀವೂ ಕೇಳೋದಲ್ಲ ಬಿಡಿ. ನಿಮಗೂ ಗೊತ್ತು ನನಗೂ ಗೊತ್ತು ಅವೆಲ್ಲ ಮಾತಾಡದಿರುವ ರಹಸ್ಯಗಳು ಅಂತ. ಎಲ್ಲಕ್ಕಿಂತ ಹೆಚ್ಚಾಗಿ ಮೊದಲು ನಾವು ವಿಚಾರಿಸಿಕೊಳ್ಳಬೇಕಾದ ಮುಖ್ಯ ವಿಚಾರವಿದೆ, ಏನು ಗೊತ್ತೇ? ಮಕ್ಕಳೂ ಬರುತ್ತಿವೆಯೇ? ಅನ್ನುವುದು.

ಚಿಕ್ಕ ಮಕ್ಕಳನ್ನು ಕರೆತರುತ್ತಾರೆಂದರೆ ನಾವು ಬೇಗ ಎಚ್ಚೆತ್ತುಕೊಳ್ಳಬೇಕು. ಕಾರಣ ಮಕ್ಕಳ ಆಕರ್ಷಣೆಗೊಳಪಡುವ ಅಥವಾ ಗಾಜಿನ ಗೊಂಬೆಗಳೋ ವಸ್ತುಗಳೋ ಮುಂತಾದವನ್ನೆಲ್ಲ ಸರಸರನೆ ಎತ್ತಿ ಬಚ್ಚಿಟ್ಟುಬಿಡಬೇಕು. ಬರುವ ಮಕ್ಕಳಿಗೆ ಏನೂ ಸಿಗಬಾರದು. ನೋಡಿದ್ರಾ, ಕರೆ ಮಾಡಿ ಬರೋದ್ರಿಂದ ಎಂಥಹ ಮಹಾನ್ ಉಪಯೋಗವಿದೆ! ಅವರನ್ನು ಸತ್ಕರಿಸ ಬೇಕಾದ ರೀತಿ, ಅವರಿಗೆ ಕೊಡಬೇಕಾದ ಉಪಾಹಾರ ಎಲ್ಲವನ್ನೂ ಬೇಗನೇ ತಯಾರಿಸಿಟ್ಟುಕೊಂಡು ಅವರು ಬರುತ್ತಿದ್ದಂತೆಯೇ ತಟ್ಟೆಗೆ ಹಾಕಿಕೊಟ್ಟು, ಇನ್ನೇನ್ ಸಮಾಚಾರ? ಇನ್ನೊಂದುಸಾರಿ ಕಾಫಿ ಮಾಡ್ಲಾ? ಅಂತ ಕೇಳಿದರೆ ಸಾಕು, ಅವರನ್ನು ಹೊರಡಿಸುವ ಮಾರ್ಗೋಪಾಯ ಸುಲಭವಾದಂತೆ. ಇಲ್ಲದಿದ್ದರೆ, ಯಾವುದೋ ಕರೆ ಬಂದು, 'ಓಹೋ, ಐದು ಗಂಟೆಗಾ? ಹೌದಾ ಬರ್ತಿದೀರಾ?' ಅಂತ ಬಾರದಿದ್ದ ಫೋನಿನಲ್ಲಿ ಮಾತಾಡಿದರೆ ಸಾಕು, ಇನ್ನೂ ಕುಳಿತು ಮಾತಾಡೋಣ ಎಂದುಕೊಂಡಿದ್ದ ಅತಿಥಿಗಳು ವಿಧಿಯಿಲ್ಲದೆ ಹೊರಡಲೇ ಬೇಕಲ್ಲವೇ?

ಕುಂತ್ರೆ ನಿಂತ್ರೆ ಅದೇ ಧ್ಯಾನ

ಈಗಂತೂ ಎಲ್ಲದಕ್ಕೂ ಕಾಲ್ ಮಾಡಿದ್ದೇ ಮಾಡಿದ್ದು! ಎಲ್ಲಿದ್ದೀರಾ? ಎಲ್ ಬರ್ತಿದೀರಾ? ತಿಂಡಿ ತಿಂದ್ರಾ? ಏನ್ ತಿಂದ್ರಿ? ಅಂತ ಪ್ರತಿಯೊಂದನ್ನೂ

ಲಹರಿ

ವಿಚಾರಿಸಿದ್ದೇ ವಿಚಾರಿಸಿದ್ದು. ಯಾವ ಸೀರೆ ಉಡಬೇಕು ಎನ್ನುವುದರಿಂದ, ನೀವು ಆ ಶರ್ಟ್ ಹಾಕ್ಕೋಳಿ ಅನ್ನುವವರೆಗೂ ಫೋನಿನಲ್ಲೇ ಮಾತುಕತೆ. ಕುಂತ್ರೆ ಫೋನು ನಿಂತ್ರೆ ಫೋನು! ಅದೀಗ ನಮ್ಮ ಹೃದಯವೇ ಆಗಿಹೋಗಿದೆ. ಅಥವಾ ಹೃದಯಕ್ಕಿಂತ ಮಿಗಿಲೇ! ಹೃದಯವಿಲ್ಲದಿದ್ದರೆ ಬದುಕಬಹುದೇನೋ, ಫೋನಿಲ್ಲದೆ

ಬದುಕಲು ಸಾಧ್ಯವೇ ಇಲ್ಲ. ಮೊದಲಾಗಿದ್ದರೆ ಫೋನ್ ನಂಬರ್‌ಗಳನ್ನು ಒಂದು ಪುಟ್ಟ ಡೈರಿಯಲ್ಲಿ ಬರೆದಿಟ್ಟುಕೊಂಡೋ ಅಥವಾ ಬಾಯಲ್ಲೇ ಇಟ್ಟುಕೊಂಡೋ ಫೋನ್ ನಂಬರ್‌ಗಳನ್ನು ಒತ್ತುತ್ತಿದ್ದೆವು ಈಗ ಹಾಗಲ್ಲ. ಯಾರ ಫೋನ್ ನಂಬರ್ರೂ ಬಾಯಲ್ಲಿಲ್ಲ, ತಲೆಯಲ್ಲಂತೂ ಮೊದಲೇ ಇಲ್ಲ. ಕಾಂಟ್ಯಾಕ್ಟ್ ತೆರೆಯಲೇ ಬೇಕು. ಅದೆಲ್ಲ ಏನು ಮಹಾ ಕೆಲಸ?! ಬೆರಳ ತುದಿಯಲ್ಲೇ! ಯಾವ ಮಾಹಿತಿಗಾಗಲೀ, ಏನು ತಿನ್ನಬೇಕು, ಯಾವ ಖಾಯಿಲೆಗೆ ಯಾವ ಮಾತ್ರೆ ಅನ್ನುವುದರಿಂದ ಹಿಡಿದು ರಾತ್ರಿ ಮಲಗುವವರೆಗೂ ರೀಲ್ಸ್ ನೋಡುತ್ತಾ, ರೋಗ ರುಜಿನಗಳಿಗೆ ಬಿ.ಪಿ ಶುಗರುಗಳಿಗೆ, ಕಾಲು ನೋವಿಗೆ, ತಲೆ ನೋವಿಗೆ, ಹೊಟ್ಟೆ ನೋವಿಗೆ ಕಾರಣಗಳನ್ನು ಅದಕ್ಕೆ ಪರಿಹಾರಗಳನ್ನು ನೋಡುತ್ತಲೇ ನಿದ್ದೆ ಹೋಗುವುದು.

ಇದರ ಮಧ್ಯೆ, ಬರು ಹೋಗುವವರೇನಾದರೂ ಫೋನ್ ಮಾಡಿದರೆ ಅಯ್ಯೋ ಮನೇಲಿಲ್ಲ. ಮನೇಗೆ ಹೋಗಿದ್ ತಕ್ಷಣ ಫೋನ್ ಮಾಡ್ತೀನಿ ಅಂತ ಸುಳ್ಳು ಭರವಸೆ ಕೊಟ್ಟು ಅವರನ್ನು ಕಾಯಿಸುವುದು. ಇದೆಲ್ಲ ಮೊಬೈಲ್‌ನ ಕಾರಣದಿಂದಲೇ ಸೃಷ್ಟಿಯಾಗುತ್ತಿರುವ ಸುಳ್ಳುಗಳು.

ಈಗ್ಗೆ ಒಂದು ಹದಿನೈದು ಇಪ್ಪತ್ತು ವರ್ಷಗಳ ಹಿಂದೆ, ನಮ್ಮ ನೆಂಟರೋ ಇಷ್ಟರೋ ಬರುತ್ತೇವೆಂದು ಪತ್ರದ ಮೂಲಕ ತಿಳಿಸಿದರೆ ಮುಗೀತು, ನಾವು ಅವರ ದಾರಿ ಕಾಯುತ್ತಿದ್ದೆವು. ಬರಬೇಡಿ ನಾವೇ ಬರುತ್ತೇವೆಂದರೂ ಬಿಡದೆ ಬಸ್ ಸ್ಟ್ಯಾಂಡಿಗೆ ಹೋಗಿ ಕರೆದುಕೊಂಡು ಬರುತ್ತಿದ್ದೆವು. ಟ್ರೈನು ಬರುವುದನ್ನೇ ಎದುರು ನೋಡುತ್ತಾ ಕಾದು ನಿಲ್ಲುತ್ತಿದ್ದೆವು. ಯಾವ ಬೋಗಿಯಲ್ಲಿದ್ದಾರೆಂದು ಹುಡುಕಿ, ಸಿಕ್ಕ ಕೂಡಲೇ ಅವರ ಲಗ್ಗೇಜುಗಳನ್ನೆಲ್ಲ ಇಳಿಸಿಕೊಂಡು, ಆರಾಮಾಗಿ ಬಂದ್ರಿ ತಾನೇ ಅಂತ ವಿಚಾರಿಸಿಕೊಂಡು ಜೊತೆಯಲ್ಲಿ ಕರೆತರುತ್ತಿದ್ದೆವು. ಅವರಿರುವವರೆಗೂ ಮನೆಯಲ್ಲಿ ಹಬ್ಬವೋ ಹಬ್ಬ! ಊಟ, ಉಪಾಹಾರ, ಮಾತು ಮಾತು ಮಾತು! ಇಡೀ ರಾತ್ರಿಯೆಲ್ಲಾ ಮಾತನಾಡಿದರೂ ಮಾತು ಮುಗಿಯುತ್ತಲೇ ಇರಲಿಲ್ಲ. ಯಾವ ಟಿವಿಯೂ ಬೇಡ, ಏನೂ ಬೇಡ. ನಮ್ಮ ಮಾತುಗಳೇ ಮನರಂಜನೆಯಾಗಿರುತ್ತಿದ್ದವು. ಇದರ ಮಧ್ಯೆ ನುಸುಳಿ ಬಂದದ್ದೇ ಧಾರಾವಾಹಿಗಳು. ಬ್ರೇಕಿನಲ್ಲಿ ಮಾತಾಡೋ ಪರಿಸ್ಥಿತಿ ತಂದವು. ಸದ್ಯ! ಆಗ ಬ್ರೇಕಿನಲ್ಲಾದರೂ ಮಾತಾಡುವಂತಿತ್ತು. ಈಗಂತೂ ಜನಗಳಿಗೆ ಮೊಬೈಲ್‌ನಿಂದ ಮುಖ ಕೀಳಿಸಬೇಕು. ಕತ್ತೆತ್ತಿ ಯಾರು ಬಂದರು, ಹೋದರೆಂದು ನೋಡುವ ತಾಳ್ಮೆಯೋ ಕುತೂಹಲವೋ ಒಂದೂ ಇಲ್ಲ.

ಕೆಲವೊಮ್ಮೆ ವಿಷಯಗಳನ್ನು ಫೋನಿನಲ್ಲೇ ತಿಳಿಸಿಬಿಡಬಹುದಾದರೂ, ಕೆಲವು ವಿಷಯಗಳನ್ನು ಮುಖತಃ ಮಾತಾಡಲೇ ಬೇಕಾಗಿರುತ್ತದೆ. ಆಗ ಫೋನ್ ಮಾಡಿ ಹೋದರೆ ಒಳಿತಲ್ಲವೇ? ನಾವು ಕೆಲವೊಮ್ಮೆ ಅಯ್ಯೋ! ಅವರಿಗಾಗಿ ಕಾದು ಕೂರುವವರು ಯಾರು ಅಂತ, ಆಹ್ವಾನ ಪತ್ರಿಕೆಯನ್ನು 'ವಾಟ್ಸಾಪ್‌ಲಿ ಕಳಿಸಿಬಿಡಿ ಪರವಾಗಿಲ್ಲ ಅನ್ನುತ್ತೇವೆ. ವಾಟ್ಸಾಪ್‌ಲಿ ಇನ್ವಿಟೇಷನ್ ಬಂದರೆ, ಬೆರಳ್ ತುದೀಲಿ ಈ ಹಾಳ್ ವಾಟ್ಸಾಪಲ್ಲಿ ಹಿಂಗಂದ್ ಕಳಿಸಿ ಬಿಡ್ತಾರೆ. ವಾಟ್ಸಾಪಲ್ಲಿ ಕಳಿಸಿದ್ರೆ ನಾನಂತೂ ಹೋಗಲ್ಲಪ್ಪ. ಬಂದು ಕರೆದ್ರೆ ಮಾತ್ರ ಹೋಗೋದು ಅಂತ ಈ ವರಾತವನ್ನೂ ತೆಗೆಯುತ್ತೇವೆ.

ಹೆಸರು ಮನದಲ್ಲಿದೆ!

ಜನ ಈಗ ಇನ್ನೂ ಸುಲಭದ ಮಾರ್ಗ ಕಂಡುಹಿಡಿದುಕೊಂಡಿದ್ದಾರೆ. ಪತ್ರಿಕೆಯ ಮೇಲೆ ಇವರಿಗೆ; ಇರುತ್ತಲ್ಲ ಅಲ್ಲಿ 'ನಿಮ್ಮ ಹೆಸರು ನಮ್ಮ ಮನದಲ್ಲಿದೆ. ಬಂದು ವಧೂವರರನ್ನು ಆಶೀರ್ವದಿಸಿ' ಎಂದು ಪ್ರಿಂಟ್ ಹಾಕಿಸಿಬಿಡುತ್ತಾರೆ. ಹೆಸರೂ ಬರೆಯೋ ಗೋಜಿಲ್ಲ, ಇನ್ನೂ ಆರಾಮು. ಹಿಂದಿನ ಕಾಲದಲ್ಲಿ ಪತ್ರಿಕೆ ಕೊಟ್ಟು ಮನೆ ಮಂದಿಯೆಲ್ಲಾ ಬನ್ನಿ, ನಿಮ್ಮ ನೆಂಟರಿಷ್ಟರನ್ನೂ ಕರೆತನ್ನಿ, ಮನೆಗೆ ಬಂದವರನ್ನೂ ಕರೆತನ್ನಿ, ತಪ್ಪಿಸದೆ ಬನ್ನಿ ಎಂದು ಬಂಧು ಬಳಗದವರನ್ನೆಲ್ಲ ಬಾಯ್ತುಂಬ ಆಪ್ತವಾಗಿ ಕರೆಯುತ್ತಿದ್ದರು. ಈಗ ನೋಡಿದ್ದೀರಾ? ಯಾವುದಾದರೊಂದು ಸಮಾರಂಭವೇರ್ಪಡಿಸಿದರೆ, ನಿಮ್ಮ ಬರವನ್ನು ಖಚಿತಗೊಳಿಸಿ ಅಂತ ಮೆಸೇಜ್ ಹಾಕುತ್ತಾರೆ. ನಿಮ್ಮ ಮನೇಲಿ ಎಷ್ಟು ಜನ ಬರ್ತೀರಿ? ಖಂಡಿತ ಬರ್ತೀರಿ ತಾನೇ ಎಂದು ಕೇಳುವ ಪರಿಸ್ಥಿತಿ ಈಗ ಬಂದಿರುವುದು ದುರಂತವೇ ಸರಿ.

ಒಂದು ಕಾಲ್ ಮಾಡಿ ಬನ್ನಿ ಪ್ಲೀಸ್ ಎಂದಿದ್ದಕ್ಕೆ ಅದೆಷ್ಟು ವಿಷಯಗಳನ್ನು ಬರೀಬೇಕಾಯ್ತು! ಈಗ ಕಾಲ್ ಮಾಡಿ ಅನ್ನುತ್ತಾರೆ. ಮುಂದಕ್ಕೆ ಇನ್ನೂ ಏನೋ ಯಾರಿಗೆ ಗೊತ್ತು?

ನಂದೆಲ್ಲಿಡ್ಲಿ ನಂದೆಲ್ಲಿಡ್ಲಿ!

ಕೆಲವು ಉತ್ಸಾಹಿಗಳಿರುತ್ತಾರೆ. ಮದುವೆ ನಡೆದರೆ ಅಲ್ಲಿ ಹಾಜರ್! ರಾಜಕೀಯ ಕಾರ್ಯಕ್ರಮಗಳಲ್ಲೂ ಮಿಂಚುವರು; ಬೀದಿ ಜಗಳದಲ್ಲೂ ಮೂಗು ತೂರಿಸಿ, ತದಕಿಸಿಕೊಳ್ಳುವ ಹಂತಕ್ಕೆ ಹೋಗುತ್ತಾರೆ! ಇಂಥವರನ್ನು ನೀವೂ ನೋಡಿದ್ದೀರಾ?

» ಶ್ರೀನಿವಾಸರಾವ್ ಹರಪನಹಳ್ಳಿ

ಕೆಲವರಿರುತ್ತಾರೆ. ತಮಗೆಲ್ಲ ಗೊತ್ತು ಎಂಬ ಭ್ರಮೆ ಹೊತ್ತು ತಿರುಗುತ್ತಿರುತ್ತಾರೆ! ಆದರೆ ಏನೂ ಗೊತ್ತಿರುವುದಿಲ್ಲ. ಎಲ್ಲ ಕಡೆ ಇವರು ಮೂಗು ತೂರಿಸಿಕೊಂಡು ಹೋಗಿ 'ಮೂಗೂರು ಮನ್ಮಥ' ಎಂದು ಹೆಸರಾಗಿರುತ್ತಾರೆ. ಇವರಿಗೆ ಜನ ಪ್ರಿಯತೆಯ ಹುಚ್ಚು. ಹೊಗಳಿಕೆಯ ಹಪಾಹಪಿ ನಿರುದ್ಯೋಗ. ಬೇರೆ ಕೆಲಸವಿಲ್ಲ.. ಇವರ ಒಂದೇ ಗುರಿ ಅಂದಿನ ಊಟ ತಿಂಡಿಯ ಸಮಸ್ಯೆಯ ಪರಿಹಾರ ಹಾಗೂ ಟೈಮ್ ಪಾಸ್! ಹೇಗಾದರೂ ಮಾಡಿ ತುಂಬು ಸಭೆ, ಕಾರ್ಯಕ್ರಮ, ಪುಸ್ತಕ ಬಿಡುಗಡೆ, ಟಿವಿ ಶೋ, ಮದುವೆ ಸಮಾರಂಭಗಳಲ್ಲಿ ಎಲ್ಲರ ಕೇಂದ್ರ ಬಿಂದುವೆನಿಸಿ ಮಿಂಚುವುದು.

ಬೆಳಗಾಗೆದ್ದು ಪ್ರಾತರ್ವಿಧಿಗಳನ್ನು ಮುಗಿಸಿ ಬಾಣಲೆ ತಲೆಯಲ್ಲಿನ ಬಿಳಿಕೂದಲನ್ನು ಮುಂದಕ್ಕೆಳೆದು

ಹಹ್ಹಾಸ್ಯ

ಬಾಚಿ ಇಸ್ತ್ರಿ ಮಾಡಿದ ಪೈಜಾಮ ಕುರ್ತಾ ಮೇಲೊಂದು ಶಾಲು ಧರಿಸುತ್ತಾರೆ; ಮದುವೆ ಮೊದಲಾದ ಶುಭ ಕಾರ್ಯಕ್ರಮ, ದೇಗುಲದ ಉತ್ಸವಗಳಿಗೆ ಹೊರಟಿದ್ದರೆ, ಹಣೆಗೆ ದೊಡ್ಡ ರೂಪಾಯಿ ಗಾತ್ರದ ಕುಂಕುಮದ ಬೊಟ್ಟನ್ನಿಟ್ಟು ಹೊರಡುತ್ತಾರೆ. ಗೊತ್ತು ಗುರಿಯಿಲ್ಲ, ಕಾಲು ಸಾಗಿದ ಕಡೆ ಪಯಣ. ಎದುರಿಗೆ ಯಾವುದಾದರೂ ಮದುವೆಮನೆ ಸಿಕ್ಕರೆ ಒಳಗೆ ನುಗ್ಗಿದ್ದೇ. ದೇಶಾವರಿ ನಗೆ ಮೊಗದಲ್ಲಿ, ಇವರಾರ ಕಡೆಯವರೆಂದು ಆ ಬ್ರಹ್ಮನಿಗೂ ಅರಿವಾಗದಂತೆ ಎಲ್ಲರನ್ನೂ ಮಾತಾಡಿಸುತ್ತ ಹಿರಿಯರಿಗೆ ನಮಸ್ಕರಿಸುತ್ತ ಸಾಗುತ್ತಾರೆ.

ಕೆಲ ಯುವಕರು ಹರಟುವ ಕಡೆ ಹೋಗಿ ಮಧ್ಯೆ ಕುಳಿತು ನಂದೆಲ್ಲಿಡ್ಲಿ..' ಎಂದು ತಮ್ಮ ಅಭಿಪ್ರಾಯ ಹೇಳುತ್ತಾರೆ. ಮತ್ತೊಂದೆಡೆ ಹರೆಯದ ತರುಣಿಯರ ಕಿಲಕಿಲ! ಅಲ್ಲಿಗೂ ಹೋಗಿ ಮೂಗು ತೂರಿಸಿ ಏನೇನೋ ವಾದ ಮಂಡಿಸುತ್ತಾರೆ. ಪಾಪ! ಆ ಹುಡುಗಿಯರು ಇವರ ಬಿಳಿತಲೆಗೆ ಗೌರವ ಕೊಟ್ಟು ಸುಮ್ಮನಿರುತ್ತಾರೆ. ವರನ ಕಡೆಯವರು ವಧುವಿನ ಕಡೆಯವರಿರಬೇಕೆಂದು ಭಾವಿಸಿದರೆ ಹೆಣ್ಣಿನ ಕಡೆಯವರು ವರನ ಕಡೆಯವರೆಂದು ಭಾವಿಸುತ್ತಾರೆ.

ಹಸೆಮಣೆಯಲ್ಲಿ ಕುಳಿತ ಇಬ್ಬರಿಗೂ ಹಾಯ್ ಹೇಳಿ ಸೀದಾ ಅಡುಗೆಮನೆಗೆ ದಾಳಿಯಿಡುತ್ತಾರೆ. ಭಟ್ಟರಿಗೆ ಬಡಿಸುವ ಬಗ್ಗೆ ಹೇಳಿಕೊಡುತ್ತಾರೆ. ವಾದ್ಯ ಬಾರಿಸುವವರಿಗೆ ಇಂತಹ ಹಾಡು ಬಾರಿಸಿ ಎಂದು ಸೂಚನೆ ಕೊಡುತ್ತಾರೆ. ಒಟ್ಟಾರೆ ಇಡೀ ಮದುವೆ ಮನೆಯಲ್ಲಿ ಗಲಗಲ ಎಂದು ಓಡಾಡಿ ಎಲ್ಲಕಡೆ ನಂದೆಲ್ಲಿಡ್ಲಿ ಎಂದು ಅಭಿಪ್ರಾಯ ಹೇಳುತ್ತಾರೆ. ಮಾಂಗಲ್ಯ ಧಾರಣೆಯ ನಂತರ ವೇದಿಕೆಯೇರಿ ವಧುವರರಿಗೆ ಶುಭ ಹಾರೈಸಿ ಊಟದ ಹಾಲಿಗೆ ಓಡುತ್ತಾರೆ. ಬೆಳಗಿನ ತಿಂಡಿ, ರಾತ್ರಿಯ ಊಟದ ಬಾಬತ್ತನ್ನೂ ಹೊಟ್ಟೆಗಿಳಿಸಿ, ಬಾಳೆಹಣ್ಣು, ಬೀಡಾ, ಐಸ್ ಕ್ರೀಂ ತಲಾ ಎರಡೆರಡು ತಿಂದು ಥರ್.. ಎಂದು ತೇಗಿ ರಸ್ತೆಗಿಳಿಯುತ್ತಾರೆ.

ರಾಜಕೀಯ ಸಮಾರಂಭಗಳಲ್ಲಿ ಇವರಿಗೆ ಕೈತುಂಬಾ ಕೆಲಸ. ಗಾಂಧಿ ಟೋಪಿ ಧರಿಸಿ ಜೈಕಾರ ಹಾಕಿದ್ದೇ, ಭೀಷಣ ಭಾಷಣ ಕುಟ್ಟಿದ್ದೇ ಕುಟ್ಟಿದ್ದು! ಹೊಟ್ಟೆಗೆ ಹಿಟ್ಟು, ಖರ್ಚಿಗೆ ಹಣ ಸಿಕ್ಕಿತಲ್ಲ. ಯಾವುದೋ ಶಾಲೆ ಹೊಕ್ಕು ತಾನು ಇದೇ ಶಾಲೆಯಲ್ಲಿ ವ್ಯಾಸಂಗ ಮಾಡಿದ್ದು, ಇಲ್ಲಿ ಆಡಿದ್ದು, ಅಲ್ಲಿ ಹೊರಳಾಡಿದ್ದು ಎಂದೆಲ್ಲ ಬುರುಡೆ ಬಿಟ್ಟು ಮುಖ್ಯೋಪಾಧ್ಯಾಯರ ಲೆಕ್ಕದಲ್ಲಿ ಬಿಟ್ಟಿ ಕಾಫಿ ಕುಡಿಯುತ್ತಾರೆ. ಅಕ್ಕ ಪಕ್ಕದ ಮನೆಯವರ ಜಗಳಗಳಲ್ಲಿ ಪಂಚಾಯತಿ ಮಾಡಲು ಹೋಗಿ ನಿನ್ನ ಕೆಲಸ ನೋಡಿಕೋ ಸೋಂಭೇರಿ ಎಂದು ಉಗಿಸಿಕೊಂಡು ಕರವಸ್ತ್ರದಿಂದ ಒರೆಸಿಕೊಳ್ಳುತ್ತಾರೆ. ರಸ್ತೆಯಲ್ಲಿ ಯಾರೋ ಯಾರಿಗೋ ಹೊಡೆಯುತ್ತಿರುವ ಸಂದರ್ಭದಲ್ಲಿ ನಂದೆಲ್ಲಿಡ್ಲಿ ಎಂದು ನುಗ್ಗಿ ಬಿಡಿಸಲು ಹೋಗುತ್ತಾರೆ. ಪರಿಸ್ಥಿತಿ ವಿಕೋಪಕ್ಕೆ ಹೋಗಿ ಎರಡೂ ಕಡೆಯವರು ಇವರಿಗೇ ತದಕಲು ಮುಂದಾದಾಗ, ನಾನು ಅಲ್ಲ, ಸುಮ್ಮನೆ ಬಂದೆ ಎಂದು ಕಾಲಿಗೆ ಬುದ್ಧಿ ಹೇಳುತ್ತಾರೆ! ಒಮ್ಮೊಮ್ಮೆ ಇಂತಹ ಎಡವಟ್ಟು ಮಾಡಿಕೊಂಡು, ಈ ನಂದಗೋಪಾಲರು ಮೈಕೈ ಗಾಯ ಮಾಡಿಕೊಂಡು ಮನೆ ಸೇರುತ್ತಾರೆ. ಗೆಳೆಯರ ಗುಂಪಿನಲ್ಲಿ ಈ ನಂದೆಲ್ಲಿಡ್ಲಿ ನಂದಗೋಪಾಲ ತಾನು ಕಾಫಿ ಕುಡಿಸುವುದಾಗಿ ಹೇಳಿ ಕರೆದೊಯ್ದು ಎಲ್ಲರೂ ಕುಡಿದು ಎದ್ದ ನಂತರ ಕುರ್ಚಿ ಬಿಟ್ಟೇಳುವುದೇ ಇಲ್ಲ! ಅಷ್ಟರಲ್ಲಾಗಲೇ ಇವನ ಸ್ವಭಾವ ಗೊತ್ತಿದ್ದವನೊಬ್ಬ ಬಿಲ್ ಪಾವತಿಸಲು ಕೌಂಟರ್ ಬಳಿ ಹಣ ಕೊಟ್ಟಿರುತ್ತಾನೆ. ಇವ ದಿಢೀರನೆ ಎದ್ದು ತಗೊಬೇಡಿ ಸಾವ್ಕಾರ್ರೇ.. ಎಂದು ಕೂಗಿ ಹಣ ಕೊಟ್ಟಿರುವುದನ್ನು ಖಾತ್ರಿ ಮಾಡಿಕೊಂಡು ಅಲ್ಲಯ್ಯ, ನಾನು ಕರೆದುಕೊಂಡು ಬಂದು ನೀನು ಬಿಲ್ ಕೊಡೋದಾ ? ನನಗೂ ಒಂದು ಛಾನ್ಸ್ ಕೊಡ್ರಪ್ಪಾ.. ಎಂದು ಮುಖದಲ್ಲಿ ದೈನ್ಯತೆ ತೋರುತ್ತಾರೆ.

ಅಂದಹಾಗೆ, ಇಂತಹ ಜನರ ಸಂಖ್ಯೆ ಇತ್ತೀಚೆಗೆ ಅಧಿಕವಾಗುತ್ತಿದೆಯಂತೆ! ಹೌದೆ?

ಕವಿಕಣ

ಸುರತಕೆ ಸುಪ್ತತ್ತಿಗೆ

» ಬೆಂಶ್ರೀ ರವೀಂದ್ರ

ಮನುಷ್ಯರನೆಸದು ಮಸಣದಲ್ಲಿ
ರಕ್ಕಸರು ಸುಖವಾಗಿಹರು ಅರಮನೆಯಲ್ಲಿ
ಹೆಣವಾದವರು ಅರೆಸತ್ತವರು ಸೆರೆಮನೆಯಲ್ಲಿ
ಧೂಳು ತುಂಬಿದೆ ಎಲ್ಲೆಡೆಯಲ್ಲಿ
ಮೈದಾನಕೆ ರಸ್ತೆಯೆಲ್ಲಿ
ಕಿರಿಯುವ ಹಲ್ಲುಗಳು ಬಾಚಿವೆ ತುಟಿಗಳಾಚೆ
ಕುಲಕುವ ಕೈಗಳಿಂದ ಧುಮುಕುತಿದೆ ಕೆನ್ನೀರು
ಹೊಳೆವ ಪಾಪಾಸುಗಳು
ಪಿಪಾಸುಗಳ ಕಣ್ಣಲ್ಲಿ ಪ್ರತಿಫಲಿಸುತ್ತಿವೆ
ಅಲ್ಲೇನು.. ಅಲ್ಲೇನು... ಪಾಪೆಯೊಳಗೆ
ತಕ್ಷಕನ ಸೀಳು ನಾಲಗೆಯ ಬೆಂಕಿಯುಗುಳು
ಭಸ್ಮವೆಲ್ಲೆಡೆ
ಅಗ್ನಿಪರ್ವತದಡಿಯಪಾಂಪೆ
ಹಿರೋಷಿಮಾ ನಾಗಸಾಕಿ
ಕಾದ ಬಾಂಡಲೆಯಲ್ಲಿ ಅಂಡಲೆಯವರು
ಸಿಡಿದು ಬೀಳುತ್ತಿದ್ದಾರೆ ಅರಳುಗಳಂತೆ
ಚೆಲ್ಲಾಡಿದೆ ಉಂಡೆಸೆದ ಎಲೆಗಳು
ಆಹಾ... ಇವರಿಬ್ಬರದೆಂಥಾ ಗೆಳೆತನ
ಕರಗಿತೇ ಶತಮಾನದ ಹಗೆತನ
ತಣ್ಣಗಿನ ತಿಸರಾಟ ಕೊಸರಾಟ
ಕದ್ದ ಕಂಬಳಿ ಹೊಡೆದ ಉಂಬಳಿ
ಇವರ ಉಗ್ರಾಣದಲಿ ದಾಸ್ತಾನು
ಆಹಾ.... ಏನಪ್ಪುಗೆ
ನಾಚುತ್ತಾನೆ ಧೃತರಾಷ್ಟ್ರ
ಕಂಚಿನ ಬೊಂಬೆಗಳಿಲ್ಲ
ಎಲ್ಲಾ ಸಜೀವ ಜೀವಗಳು
ಮಡಿಯೆಲ್ಲ ಹುಡಿಯಾಗಿ ವಿಲವಿಲಿಸಿದೆ
ಜಗದಂಗಳವೆ ಸುರತಕೆ ಸುಪ್ಪತ್ತಿಗೆಯಾಗಿದೆ
ಧೋ... ಎಂದು ಗುಟರಿಟ್ಟು ಗಗನದಿಂ ಬರುವ
ಗಂಗೆಯೂ ತೊಳೆಯಳು ಇವರ ಸ್ವಾರ್ಥರಂಜಿತ
ಲೊಟ್ಟೆ ಲೊಳಲೊಟ್ಟೆ ಲೋಳೆಯಾಟ
ಕೊಪ್ಪರಿಗೆ ಬಳಸಿದ ಕಾಳನಾಗನ ಪರಿ
ಪರಿತಪಿಸುವವರ ಗದರಿ
ಜಾಗಾ ಬಿಡೋ ನಾನಲ್ಲೇ ಇರುವೆ
ಕಾಯುವೆ ಕಾದದಂತೆ ಕಾದಲನಾಗಿ
ನಿನ್ನದೆಂದು ನೀ ನುಡಿವ ನೆಲ
ಎತ್ತಿದರೆ ಉಸಿರು
ಹೊಸಕುವೆ ಕರಿ ಇರುವೆಯಂತೆ
ಈ ಭೂಮಿ ಆ ಕಡಲು ಮೇಲಾಕಾಶ
ಒಳಗಿರುವ ಖನಿಜ ಕಣಜವೆನ್ನ ಗುಕ್ಕು
ಮರು ನುಡಿಯದೆ ಕಕ್ಕು
ಅಗೋ ಅಲ್ಲಿ ಹಳದಿ ಬೆಟ್ಟದ ಮೇಲೆ
ನಾವಿಬ್ಬರೂ ಕೂಡಿ
ಹಾರಿಸುವೆವು ಬಿಳಿಯ ಬಾವುಟ
ಹಂಚಿಕೊಳ್ಳುವೆವು ನೊಬಲ್ ಶಾಂತಿ ಪಾರಿತೋಷಕ
ಇಂದ್ರನಂತೆ ಕಳ್ಳುಡಿಗೆಯಲಿ ರಮಿಸುವುದಿಲ್ಲ
ಮುಖವಾಡವಿಲ್ಲ
ಬಿಡುಬೀಸಾಗಿ ತೋಳಿಗೆ ತೋಳ ಕೂಡಿಸಿ
ಅಪ್ಪುವೆವು ಜಗವನ್ನು ನಿಮಗೆ ಕೋಳವ ತೊಡಿಸಿ
ಇದು ಇಪ್ಪತ್ತೊಂದನೆಯ ಶತಮಾನ
ಹಳೆಯ ಕಂಪನಿ ವಸಾಹತುಗಳು ಮುಚ್ಚಿವೆ
ರೆಕ್ಕೆ ಬಿಚ್ಚಿವೆ ಸ್ವಾತಂತ್ರ್ಯವೆಂಬ ಭಾವದ ಬಂಟರೆ
ಬಗ್ಗಿ ನೋಡಿಕೊಳ್ಳಿ
ದಬ್ಬೆ ಕಟ್ಟಿದ ನಿಮ್ಮ ಕುಂಟು ಕಾಲುಗಳ
ನಿಮ್ಮ ಮಾತುಗಳನ್ನು ನಾವೇ ಆಡುತ್ತೇವೆ
ತೊಂದರೆ ಬೇಡ ನೆನಪಿಟ್ಟುಕೊಳ್ಳಿ
ಆಗಲೂ ಈಗಲೂ ರಕ್ಕಸ ಸಿಡಿತಲೆಗಳ
ಮೀಸೆಯ ಮೇಲಿಟ್ಟುಕೊಂಡವನೇ ಗಂಡಸು.

ಛಾಯಾಕಿರಣಕ್ಕೆ ಹತ್ತು ವರ್ಷ

» ಪ್ರೊ. ಜಿ. ಎನ್. ಉಪಾಧ್ಯ, ಮುಂಬೈ

ಮುಂಬೈ ಕನ್ನಡ ಪತ್ರಿಕೋದ್ಯಮಕ್ಕೆ ನಾಂದಿ ಹಾಡಿದವರು ಕರ್ಕಿ ವೆಂಕಟರಮಣ ಶಾಸ್ತ್ರಿ ಅವರು. ಈ ಪರಂಪರೆಯ ಕೊಂಡಿಯಾಗಿ ಪ್ರಕಾಶ್ ಕುಂಠಿನಿ ಅವರ 'ಛಾಯಾ ಕಿರಣ' ಕನ್ನಡ ಮಾಸಿಕ ನಮ್ಮ ಮುಂದಿರುವುದು ಮುಂಬೈನ ತುಳು ಕನ್ನಡಿಗರ ಭಾಗ್ಯ. ಛಾಯಾ ಕಿರಣಕ್ಕೆ ಈಗ ದಶಕದ ಸಂಭ್ರಮ. ಕರ್ಕಿ ಅವರು ಸ್ವತಂತ್ರ ಪತ್ರಿಕೋದ್ಯಮಿಯಾಗಿ ಈ ಮಯಾ ನಗರಿಯಲ್ಲಿ ಕನ್ನಡವನ್ನು ಕಟ್ಟಿ ಬೆಳೆಸಿದವರು. ಪ್ರಸಕ್ತ ಈ ದಾರಿಯಲ್ಲಿ ಎದ್ದು ಕಾಣುವ ಇನ್ನೊಂದು ಹೆಸರು ಪ್ರಕಾಶ್ ಅವರದು.

ಹೆಚ್ಚಾಗಿ ಬೃಹನ್ ಮುಂಬೈ ಪತ್ರಿಕೋದ್ಯಮದ ನೆಲೆವೀಡು. ಈಗೀಗ ಇಲ್ಲಿನ ಉಪನಗರಗಳಲ್ಲೂ ಪತ್ರಿಕೆಗಳು ಸುರುವಾಗಿವೆ. ಉತ್ತರ ಧ್ರುವದಿಂ ದಕ್ಷಿಣ ಧ್ರುವಕೂ ಚುಂಬಕ ಗಾಳಿಯು ಬೀಸುತ್ತಿದೆ ಎಂಬ ಕವಿವಾಣಿಯಂತೆ ಪ್ರಕಾಶ ಕುಂಠಿನಿ ಅವರ ನೇತೃತ್ವದಲ್ಲಿ 'ಛಾಯಾ ಕಿರಣ' ಮಾಸಿಕ ದೂರದ ಥಾಣೆ ಜಿಲ್ಲೆಯ ಕಲ್ಯಾಣದಿಂದ ಪ್ರಕಟವಾಗುತ್ತಾ ಬಂದು ಮುಂಬೈ

ಮುಂಬೈನ ಸದಭಿರುಚಿ ಕನ್ನಡ ಮಾಸ ಪತ್ರಿಕೆ 'ಛಾಯಾ ಕಿರಣ'ಕ್ಕೆ ಈಗ ದಶಕದ ಸಂಭ್ರಮ ಎಂಬುದು ಎಲ್ಲಾ ಕನ್ನಡಿಗರು ಸಂಭ್ರಮಿಸಬೇಕಾದ ಸುದ್ದಿ!

ಕನ್ನಡಿಗರ ಮೆಚ್ಚುಗೆಗೆ ಪಾತ್ರವಾಗಿದೆ. ತುಳು ಕನ್ನಡ ಮನಸ್ಸುಗಳನ್ನು ಕಟ್ಟುವ ಬೆಸೆಯುವ ಕಾಯಕ ದಲ್ಲಿ ಛಾಯಾ ಕಿರಣ ಯಶಸ್ವಿಯಾಗಿದೆ. ನಿಷ್ಠಾವಂತ ಪತ್ರಕರ್ತನಿಗೆ ಇರಬೇಕಾದ ಸಂಯಮ, ಸಮತೋಲನವನ್ನು ಸಂಪಾದಕ, ಪ್ರಕಾಶಕ ಕುಂಠಿನಿ ಅವರು ಕಾಯ್ದುಕೊಂಡು ಬಂದಿದ್ದಾರೆ.

ಈಗ 'ಛಾಯಾ ಕಿರಣ'ಕ್ಕೆ ಹತ್ತರ ಸಂಭ್ರಮ. ಹತ್ತು ವರ್ಷದ ಸಾಧನೆ ಸಣ್ಣದೇನಲ್ಲ. ಈ ಮಾಸಿಕ ಮುಂಬೈನ ಇತರ ಕನ್ನಡ ಮಾಸಿಕಕ್ಕಿಂತಲೂ ತೀರಾ ವಿಭಿನ್ನವಾಗಿ ಬೆಳಕು ಕಾಣುತ್ತ ಸುಂದರವಾಗಿ ಮೂಡಿ ಬರುತ್ತಿದೆ. ಮುಂಬೈನ 'ಮಿಡ್ ಡೇ' ಮಾದರಿಯ ಈ ಮಾಸಿಕ ಟ್ಯಾಬ್ಲಾಯಿಡ್ ವಿನ್ಯಾಸಹೊಂದಿರುವುದು ವಿಶೇಷ. ಪ್ರಕಾಶ ಅವರೇ ಈ ಪತ್ರಿಕೆಯ ಮಾಲಕರೂ ಸಂಪಾದಕರೂ ಆಗಿದ್ದಾರೆ. ಛಲ, ಗುರಿಗಳನ್ನು ಹೊಂದಿರುವ ಅವರು ಮಹತ್ವಾಕಾಂಕ್ಷೆಯ ವ್ಯಕ್ತಿ.

'ಕರ್ನಾಟಕ ಮಲ್ಲ' ಮೊದಲಾದ ಪತ್ರಿಕೆಗಳಲ್ಲಿ ಫೋಟೋಗ್ರಾಫರ್ ಆಗಿ ಬಹುಕಾಲ ದುಡಿದ ಅವರು ಈ ಕ್ಷೇತ್ರದ ಆಗುಹೋಗುಗಳನ್ನು ಚೆನ್ನಾಗಿ ಬಲ್ಲವರು. ಮುದ್ರಣಾಲಯದ ಕಷ್ಟ ಸುಖ ಸಹ ಅವರಿಗೆ ಗೊತ್ತಿದೆ. ಹಣ ಬಲಕ್ಕಿಂತ ಅವರು ಜನ ಬಲವನ್ನು ನೆಚ್ಚಿ ನಂಬಿಕೊಂಡವರು. ಅದು ಅವರ ಯಶಸ್ಸಿನ ಗುಟ್ಟು. ಪತ್ರಿಕೋದ್ಯಮವನ್ನು ಅವರು ಸಾಮಾಜಿಕ ಬದ್ಧತೆ, ಸೇವೆ ಎಂದೇ ಪರಿಗಣಿಸಿದವರು. ಪ್ರಕಾಶ್ ಕುಂಠಿನಿ ಅವರು ಒಳ್ಳೆಯ ಲೇಖಕರು. ಸ್ವತ: ಅವರೇ ಬರೆಯುತ್ತಿರುವ ಸಂಪಾದಕೀಯ ಲೇಖನಗಳು ಅನೇಕ ದೃಷ್ಟಿಯಿಂದ ನಮ್ಮ ಗಮನವನ್ನು ಸೆಳೆಯುವಲ್ಲಿ ಯಶಸ್ವಿಯಾಗಿವೆ.

'ಛಾಯಾ ಕಿರಣ' ಒಳ್ಳೆಯ ಸಂಪಾದಕ ಮಂಡಳಿಯನ್ನು ಹೊಂದಿದೆ. ಉಪ ಸಂಪಾದಕರಾಗಿ ಕಾರ್ಯ ನಿರ್ವಹಿಸುತ್ತಿರುವ ಪ್ರಕಾಶ್ ಅವರ ಮಡದಿ ಜ್ಯೋತಿ ಹಾಗೂ ಶಾಲಿನಿ ಶೆಟ್ಟಿ ಅಜೆಕಾರು ಮೊದಲಾದವರ ಪರಿಶ್ರಮ ಈ ಪತ್ರಿಕೆಯ ಬೆನ್ನೆಲುಬು. ಎಲ್ಲರ ಪ್ರೀತಿ ವಿಶ್ವಾಸಕ್ಕೆ ಪಾತ್ರವಾಗಿರುವ ಛಾಯಾ ಕಿರಣ ಮಾಸಿಕದ ಪೋಷಕ ಸದಸ್ಯರ ಬಳಗ ಸಹ ದೊಡ್ಡದೇ. ಇದೆಲ್ಲ ಸಾಧ್ಯವಾದುದು ಸಂಪಾದಕ ಪ್ರಕಾಶ್ ಕುಂಠಿನಿಯವರ ಅಹರ್ನಿಶಿ ಪ್ರಯತ್ನ ಪರಿಶ್ರಮದಿಂದ.

ಸರಳ ಸಜ್ಜನಿಕೆಗೆ ಹೆಸರಾಗಿರುವ ಪ್ರಕಾಶ್ ಅವರು ಸ್ವಾಭಿಮಾನಿಯೂ ಹೌದು. ಪತ್ರಿಕೋದ್ಯಮವನ್ನು ಅವರು ವ್ಯಾಪಾರವಾಗಿ ಮಾಡಿಕೊಂಡಿಲ್ಲ. ಲಾಭದ ಉದ್ದೇಶದಿಂದ ಅವರು ಈ ಪತ್ರಿಕೆಯನ್ನು ನಡೆಸುತ್ತಿಲ್ಲ. ಇದೊಂದು ಅರಿವಿನ ವೇದಿಕೆಯಾಗಿ ಅನೇಕ ಯುವ ಲೇಖಕರ ಪ್ರತಿಭೆಯನ್ನು ಲೋಕಸಮ್ಮುಖಗೊಳಿಸಿದೆ ಎಂಬುದು ಹೇಳಲೇ ಬೇಕಾದ ಮಾತು. ಇದು ಒಂದು ರಚನಾತ್ಮಕವಾದ ಕನ್ನಡ ಕೆಲಸವೂ ಹೌದು.

'ಕನ್ನಡಕ್ಕಾಗಿ ಮಾಡುವ ಕೆಲಸ ಬರೇ ಕನ್ನಡದ ಕೆಲಸವಲ್ಲ. ಅದು ನಾಡಿನ ಕೆಲಸ. ನಾಡಿನ ಕೆಲಸ ಲೋಕದ ಕೆಲಸವೂ ಹೌದು' ಎಂಬ ಹಿರಿಯ ಸಾಹಿತಿ ಹಾ. ಮಾ. ನಾಯಕ ಅವರ ಮಾತು ನಿಜವೇ ಆಗಿದೆ. ದೂರದ ಥಾಣೆ ಜಿಲ್ಲೆಯ ಕಲ್ಯಾಣ ಭಾಗದಲ್ಲಿ ಕನ್ನಡ ಪರಿಸರವನ್ನು ನಿರ್ಮಾಣ ಮಾಡುವಲ್ಲಿ ಅವರು ಕಟಿಬದ್ಧರಾಗಿದ್ದಾರೆ. ಎಲ್ಲ ಕೆಲಸವನ್ನು ಲಾಭ ನಷ್ಟಗಳ ಲೆಕ್ಕಾಚಾರದಲ್ಲಿ ಮಾಡಲಾಗದು. ಕೆಲವು ಕೆಲಸಗಳು ಅಗತ್ಯದ, ಸೇವೆಯ ಕೆಲಸಗಳು. ಪ್ರಕಾಶ್ ಕುಂಠಿನಿ ಅವರು ಮಾಡುತ್ತಿರುವುದು ಸಹ ಇದೇ ಬಗೆಯ ಕನ್ನಡ ಕಾಯಕ. ಒಂದು ದಶಕದ ಅವಧಿಯಲ್ಲಿ ಛಾಯಾ ಕಿರಣ ಇತಿಹಾಸವನ್ನು ನಿರ್ಮಾಣ ಮಾಡಿದೆ. ಅದರ ಕರ್ಣಧಾರತ್ವವನ್ನು ವಹಿಸಿ ಕೊಂಡಿರುವ ಪ್ರಕಾಶ ಅವರಿಗೆ, 'ಛಾಯಾ ಕಿರಣ'ಕ್ಕೆ ಎಲ್ಲ ಬಗೆಯ ಶುಭಗಳಿರಲಿ.

ತಲೆಕೂದಲಿನಲ್ಲಿ ದಾಖಲೆ!

» ಸುರೇಶ ಗುದಗನವರ

ಹವ್ಯಾಸಗಳು ನಾನಾ ಬಗೆಯ ಮುಖಗಳನ್ನು ಹೊಂದಿವೆ. ಅದು ವಯೋಮಾನ, ಕಾಲ-ಪರಿಸರ, ಸಂದರ್ಭ, ಸನ್ನಿವೇಶಗಳಿಗೆ ಅನುಗುಣವಾಗಿ ಮೇಳೈಸಿರುತ್ತದೆ ಎಂದು ಹೇಳಬುದೇನೊ! ಬಹುತೇಕ ಜನರಲ್ಲಿ ಹಲವಾರು ಹವ್ಯಾಸಗಳಿರುತ್ತವೆ. ಕೆಲವರಿಗೆ ಓದುವುದು ಸಾಹಿತ್ಯ ರಚನೆಯಲ್ಲಿ ತೊಡಗುವುದು, ಮೊಬೈಲ್ ವಿಡಿಯೋ ನೋಡುವುದು, ಪ್ರವಾಸದಲ್ಲಿ ತೊಡಗುವುದು, ಹರಟೆ ಹೊಡೆಯುವುದು, ಗಾಯನ, ಚಿತ್ರಕಲೆ, ಫೋಟೋಗ್ರಾಫಿ, ಈಜುವುದು ಇತ್ಯಾದಿಯಾಗಿ ಹಲವಾರು ಬಗೆಯ ಹವ್ಯಾಸಗಳು ಒಳಗೊಂಡಿವೆ. ಆದರೆ ಉತ್ತರಪ್ರದೇಶದ 47 ವರ್ಷದ ಸ್ಮಿತಾ ಶ್ರೀವಾಸ್ತವ ಅವರು ಉದ್ದನೆಯ ಕೂದಲು ಬೆಳೆಸುವ ಹವ್ಯಾಸವನ್ನು ಹೊಂದಿದ್ದಾರೆ. ಅಚ್ಚರಿಯಲ್ಲವೇ! ಹೀಗಾಗಿ ಅವರು ಅತಿ ಉದ್ದನೆಯ ಕೂದಲನ್ನು ಹೊಂದಿರುವ ಗಿನ್ನೆಸ್ ವಿಶ್ವದಾಖಲೆಯನ್ನು ಪಡೆಯುವ ಮೂಲಕ ಗಮನಾರ್ಹ ಸಾಧನೆ ಮಾಡಿದ್ದಾರೆ.

ಉತ್ತರಪ್ರದೇಶದ ಪ್ರಯಾಗರಾಜದ ಅಲ್ಲಾಪುರ ಪ್ರದೇಶದ ಸ್ಮಿತಾ ಅವರು ತಾಯಿ ಸುಶೀಲಾ ಶ್ರೀವಾಸ್ತವ ಅವರಿಂದ 75ನೇ ವಯಸ್ಸಿನಲ್ಲಿಯೂ ಮೂರು ಅಡಿ ಉದ್ದ ಕೂದಲನ್ನು ಕಾಪಾಡಿಕೊಳ್ಳುವ ಸಮರ್ಪಣೆಯಿಂದ ಪ್ರೇರಿತರಾಗಿದ್ದರು. ಸ್ಮಿತಾ 14ನೇ ವಯಸ್ಸಿನವರೆಗೆ ಬಾಬ್ ಕಟ್ ಶೈಲಿಯನ್ನು ಹೊಂದಿದ್ದರೂ, 2012ರಲ್ಲಿ ತನ್ನ ಎರಡನೇ ಮಗನಿಗೆ ಜನ್ಮ ನೀಡಿದ ನಂತರ

ನಿಸರ್ಗದಲ್ಲಿ ದೊರೆಯುವ ಸಸ್ಯೋತ್ಪನ್ನ ಮತ್ತು ಇತರ ವಿಧಾನ ಬಳಸಿ, ಜಗತ್ತಿನ ಅತಿ ಉದ್ದದ ತಲೆಕೂದಲನ್ನು ಬೆಳೆಸಿದ ದಾಖಲೆ ಈ ಮಹಿಳೆಯದ್ದು!

ಕೂದಲನ್ನು ಬೆಳೆಯಲು ಬಿಡಲು ನಿರ್ಧರಿಸಿದರು. ಸ್ಮಿತಾ ಸಾಮಾನ್ಯವಾಗಿ ವಾರಕ್ಕೆ ಎರಡು ಬಾರಿ ತನ್ನ ಕೂದಲನ್ನು ತೊಳೆಯುತ್ತಾರೆ. ಅವರು ಕೂದಲನ್ನು ತೊಳೆದು ಒಣಗಿಸುವ ಮೊದಲು 40-45 ನಿಮಿಷಗಳನ್ನು ಕಳೆಯುತ್ತಾರೆ. ''ನಾನು ಒಂದು ಹಾಳೆಯನ್ನು ಕೆಳಗೆ ಇಡುತ್ತೇನೆ. ಅದರ ಮೇಲೆ ತನ್ನ ಹಾಸಿಗೆಯ ಮೇಲೆ ನಿಂತು ಕೂದಲನ್ನು ಉದ್ದವಾಗಿ ಬಿಡುತ್ತೇನೆ'' ಎಂದು ಅವರು ಹೇಳುತ್ತಾರೆ.

ಅವರ ಕೂದಲು ಜಡೆಯಾಗಿ ಒಣಗಿದ ನಂತರ ಅದನ್ನು ಜಡೆ ಮಾಡಿ ಬನ್ ಆಗಿ ಕಟ್ಟುತ್ತಾರೆ. ''ಜನರು ನನ್ನ ಬಳಿಗೆ ಬರುತ್ತಾರೆ, ನನ್ನ ಕೂದಲನ್ನು ಮುಟ್ಟುತ್ತಾರೆ. ಫೋಟೋಗಳನ್ನು ತೆಗೆದುಕೊಳ್ಳುತ್ತಾರೆ ಮತ್ತು ನನ್ನೊಂದಿಗೆ ಸೆಲ್ಫಿ ತೆಗೆದುಕೊಳ್ಳುತ್ತಾರೆ. ನಾನು ಬಳಸುವ ಉತ್ಪನ್ನಗಳ ಬಗ್ಗೆ ವಿಚಾರಿಸುತ್ತಾರೆ. ಆರೋಗ್ಯಕರ ಕೂದಲನ್ನು ಹೊಂದಲು ಅದೇ ರೀತಿ ಮಾಡುವ ಉದ್ದೇಶವನ್ನು ವ್ಯಕ್ತಪಡಿಸುತ್ತಾರೆ'' ಎಂದು ಸ್ಮಿತಾ ತಿಳಿಸುತ್ತಾರೆ.

ಶಾಂಪೂ ಬಳಸುವುದಿಲ್ಲ!

ಅವರು ಕೃತಕ ಶಾಂಪೂಗಳು ಮತ್ತು ಉತ್ಪನ್ನಗಳನ್ನು ಕೂದಲಿನ ಆರೈಕೆಗೆ ಬಳಸುವುದಿಲ್ಲ ಅವುಗಳ ಬದಲಾಗಿ ಸೀಗೆಕಾಯಿ, ಬೆಟ್ಟದ ನೆಲ್ಲಿಕಾಯಿ ಹಾಗೂ ರೀತಾ (ಸಪಿಂಡಸ್ ಮುಕೊರೊಸ್ಸಿ) ಮಿಶ್ರಣವನ್ನು ಬಳಸುತ್ತಾರೆ. ಅಲ್ಲದೇ ಮೊಟ್ಟೆ, ಈರುಳ್ಳಿ ರಸ ಅಥವಾ ಅಲೋವೆರಾ ಮತ್ತು ಮ್ಯಾಂಗ್ರೇಲ್ ಜೊತೆಗೆ ಸೇರಿಸುತ್ತಾರೆ. ಕಳೆದ 20 ವರ್ಷಗಳಿಂದ ಅವರು ಎಂದಿಗೂ ಕೂದಲನ್ನು ಕತ್ತರಿಸಿಲ್ಲ.

ಅವರ ಕೂದಲಿನ ಉದ್ದ 236.22 ಸೆಂ.ಮೀ (7 ಅಡಿ 9 ಇಂಚು) ಆಗಿದ್ದು, ಸ್ಮಿತಾ ಶ್ರೀವಾಸ್ತವ ಹಲವು ದಾಖಲೆ ಪುಸ್ತಕದಲ್ಲಿ ಮನ್ನಣೆ ಗಳಿಸಿದ್ದಾರೆ. 2012ರಿಂದ ತನ್ನ ಅಸಾಧಾರಣ ಕೂದಲಿನ ಉದ್ದಕ್ಕಾಗಿ ಲಿಮ್ಕಾ ಬುಕ್ ಆಪ್ ವರ್ಲ್ಡ್ ರೆಕಾರ್ಡ್ಸ್ ಹೊಂದಿರುವ ಅವರು 2023ರ ನವೆಂಬರ್ 29ರಂದು ಗಿನ್ನೆಸ್ ವಿಶ್ವ ದಾಖಲೆ ಪಡೆಯುವ ಮೂಲಕ ಗಮನಾರ್ಹ ಸಾಧನೆ ಮಾಡುವಲ್ಲಿ ಯಶಸ್ವಿಯಾಗಿದ್ದಾರೆ. ಅಲ್ಲದೇ ಮಾರ್ಚ್6, 2024ರಂದು ಏಶಿಯಾ ಬುಕ್ ಆಫ್ ರೆಕಾರ್ಡ್ಸ್‌ನಲ್ಲಿಯೂ ಸಹ ಮನ್ನಣೆ ಗಳಿಸಿದ್ದಾರೆ. ''ಉದ್ದ ಕೂದಲು ಮಹಿಳೆಯರ ಸೌಂದರ್ಯವನ್ನು ಹೆಚ್ಚಿಸುತ್ತದೆ. ಭಾರತೀಯ ಸಂಸ್ಕೃತಿಯಲ್ಲಿ, ಸಾಂಪ್ರದಾಯಿಕವಾಗಿ ದೇವತೆಗಳು ಬಹಳ ಉದ್ದ ಕೂದಲನ್ನು ಹೊಂದಿದ್ದರು. ನಮ್ಮ ಸಮಾಜದಲ್ಲಿ ಕೂದಲು ಕತ್ತರಿಸುವುದನ್ನು ಅಶುಭವೆಂದು ಪರಿಗಣಿಸಲಾಗುತ್ತದೆ. ಅದಕ್ಕಾಗಿಯೇ ಮಹಿಳೆಯರು ಕೂದಲು ಬೆಳೆಸುತ್ತಿದ್ದರು'' ಎಂಬುದು ಅವರ ಅಭಿಪ್ರಾಯ.

ಈ ನಿಯಮ ಅನುಸರಿಸಿದರೆ ಪ್ರವಾಸಗಳು ಸುಲಭ

Ask the Editor

● ವಿಶ್ವೇಶ್ವರ ಭಟ್

ಸತಾಯಿಸುವ ಪ್ರಶ್ನೆಗಳಿಗೆ ಸಂತೈಸುವ ಉತ್ತರ

ಯಾವುದೇ ವಿಷಯದ ಬಗ್ಗೆ ಏನು ಪ್ರಶ್ನೆಯನ್ನಾದರೂ ಕೇಳಿ
asktheeditorvv@gmail.com

ಅಂಜಲಿ, ಚಾಮರಾಜನಗರ

● **ಸಂಪಾದಕರೇ, ನನಗೆ ಪ್ರವಾಸ ಅಂದರೆ ಬಹಳ ಇಷ್ಟ. ನೀವೂ ಬಹಳ ಪ್ರವಾಸ ಮಾಡುತ್ತೀರಿ. ನಾನು ಹೆಣ್ಣಾಗಿರುವುದರಿಂದ ನಿಮ್ಮಷ್ಟು ಪ್ರವಾಸ ಮಾಡಲು ಸಾಧ್ಯವಾಗದಿರುವುದಕ್ಕೆ ನನಗೆ ವಿಷಾದವಿದೆ. ಅಷ್ಟೇ ಅಲ್ಲ, ಆಗಾಗ ಪ್ರವಾಸ ಮಾಡುವುದು ನನಗೆ ಕಷ್ಟ. ಅದಕ್ಕೆ ನನ್ನ ಉದ್ಯೋಗ ಮತ್ತು ಗಳಿಕೆ ಸಹಕರಿಸುತ್ತಿಲ್ಲ. ನಾನು ಸಹ ಆಗಾಗ ಪ್ರವಾಸ ಮಾಡಲು ನಿಮ್ಮ ಸಲಹೆಗಳೇನು?**

– ಅಂಜಲಿ ಅವರೇ, ನಿಮಗೆ ಪ್ರವಾಸದಲ್ಲಿ ಆಸಕ್ತಿ ಇದೆ ಎಂಬ ವಿಷಯ ತಿಳಿದು ಸಂತೋಷವಾಯಿತು. ಮನುಷ್ಯ ಸ್ವಭಾವತಃ ಸಂಚಾರಿ ಮತ್ತು ಪ್ರವಾಸಪ್ರಿಯ. ಆತನಿಗೆ ಒಂದು ಜಾಗದಲ್ಲಿ ಕುಳಿತು ಅಭ್ಯಾಸವಿಲ್ಲ. ಪ್ರವಾಸ ಕೊಡುವಷ್ಟು ಜ್ಞಾನ, ಧೈರ್ಯ, ಆತ್ಮವಿಶ್ವಾಸವನ್ನು ಬೇರಾವುದೂ ಕೊಡುವುದಿಲ್ಲ. ಕನ್ನಡದಲ್ಲಿ ಒಂದು ಗಾದೆ ಇದೆ – ಮನೆಯಲ್ಲಿ ಕುಳಿತು ಕೆಟ್ಟಿರಬಹುದು, ಆದರೆ ಇಲ್ಲಿ ತನಕ ಯಾರೂ ತಿರುಗಿ ಕೆಟ್ಟಿಲ್ಲ. ನನಗೆ ಈ ಗಾದೆ ಮಾತಿನಲ್ಲಿ ಅಚಲ ನಂಬಿಕೆ. I follow my heart ...and it leads me to the airport.

ನಾನು ಪ್ರವಾಸ ಮಾಡಲು ನನ್ನ ವೃತ್ತಿ ಪ್ರಮುಖವಾದ ಕಾರಣ. ನಾನು ಆಗಾಗ ನನ್ನ ವೃತ್ತಿ ಸಂಬಂಧಿ ಕೆಲಸಗಳನ್ನು ಜೋಡಿಸಿಕೊಂಡು ಪ್ರವಾಸ ಹೋಗುತ್ತೇನೆ. ಜತೆಗೆ ನನ್ನನ್ನು ಸಭೆ-ಸಮಾರಂಭಗಳಿಗೆ ಆಹ್ವಾನಿಸುತ್ತಾರೆ. ಆ ನಿಮಿತ್ತ ನಾನು ಆಗಾಗ ವಿದೇಶ ಪ್ರವಾಸವನ್ನು ಕೈಗೊಳ್ಳುತ್ತೇನೆ. ಇವೆಲ್ಲವನ್ನೂ ಬಿಟ್ಟು ದೇಶವನ್ನು ನೋಡಲೇಬೇಕು ಎಂಬ ಕಾರಣದಿಂದ ನನ್ನ ಪಾಡಿಗೆ ನಾನು ಸುಮ್ಮನೆ ಹೊರಟು ಬಿಡುತ್ತೇನೆ. ನಾನು ಯಾವತ್ತೂ ವಿದೇಶ ಪ್ರವಾಸವನ್ನೇ ಪಡುತ್ತೇನೆ ಎಂದು ಭಾವಿಸಬೇಕಿಲ್ಲ. ನನ್ನ ಪಕ್ಕದ ಊರು, ಪಕ್ಕದ ಜಿಲ್ಲೆ, ನೆರೆಹೊರೆಯ ರಾಜ್ಯ ...ಹೀಗೆ ಯಾವುದೇ ಊರಾದರೂ ನಾನು ತಿರುಗಾಲತಿಪ್ಪನೇ ! ಆದರೆ ವಿದೇಶಗಳಿಗೆ ಹೋಗಿದ್ದು ಹೆಚ್ಚು ಸುದ್ದಿಯಾಗುತ್ತದೆ, ಇರಲಿ.

ಈ ದಿನಗಳಲ್ಲಿ ಪ್ರವಾಸಕ್ಕೆ ಹೋಗಲು ಲಕ್ಷಗಟ್ಟಲೆ ಹಣ ಬೇಕಾಗಿಲ್ಲ. 75 ಸಾವಿರ ರುಪಾಯಿಯಲ್ಲಿ ಒಂದು ವಾರ ಶ್ರೀಲಂಕಾ, ಮಾಲ್ಡೀವ್ಸ್, ಸಿಂಗಾಪುರ, ಕೌಲಾಲಂಪುರ್, ಬ್ಯಾಂಕಾಕ್, ದುಬೈ, ಮಸ್ಕತ್, ಅಬು ಧಾಬಿ, ಕತಾರ್... ದೇಶಗಳ ಪೈಕಿ ಯಾವುದಾದರೂ ಒಂದಕ್ಕೆ ಹೋಗಿ ಅಲ್ಲಿನ ಉತ್ತಮ ಹೋಟೆಲ್‌ನಲ್ಲಿ ಉಳಿದು ಬರಬಹುದು. ವಿಮಾನ ಟಿಕೆಟ್, ವಸತಿ ಮತ್ತು ಊಟಕ್ಕೆ ಅಷ್ಟು ಹಣ ಸಾಕು. ಈ ರೀತಿ ಒಂದು ವರ್ಷದಲ್ಲಿ ಒಂದು ಅಥವಾ ಎರಡು ದೇಶಗಳಿಗೆ ಹೋಗುವುದು ಕಷ್ಟವಾಗಲಿಕ್ಕಿಲ್ಲ. ವಿದೇಶಗಳಿಗೆ ಹೋಗಿ ಶಾಪಿಂಗ್ ಮಾಡುವುದಾದರೆ ಹೆಚ್ಚು ಹಣ ಬೇಕಾಗುತ್ತದೆ. ಊರನ್ನು ನೋಡಿ ಬರಲು ನಾವು ನಿರೀಕ್ಷಿಸಿದಷ್ಟು ಹಣ ಬೇಕಾಗಿಲ್ಲ. ಬೇರೆ ದೇಶಗಳಲ್ಲಿ ಸಿಗುವ ಎಲ್ಲ ಸಾಮಾನುಗಳು ಈ ದಿನಗಳಲ್ಲಿ ನಮ್ಮ ನಮ್ಮ ಊರುಗಳಲ್ಲೂ ಸಿಗುತ್ತವೆ. ತಿಂಗಳಿಗೆ ಏಳೆಂಟು ಸಾವಿರ ರುಪಾಯಿ ಉಳಿತಾಯ ಮಾಡಿದರೆ ಖಂಡಿತವಾಗಿಯೂ ನೀವು ಒಂದು ವರ್ಷದಲ್ಲಿ ಒಂದು ದೇಶವನ್ನಾದರೂ ನೋಡಿ ಬರಬಹುದು.

ಹಣವಿದ್ದವರೆಲ್ಲ ವಿದೇಶ ಪ್ರವಾಸ ಮಾಡುತ್ತಾರೆ ಎಂದು ಭಾವಿಸಬೇಡಿ. ಕೋಟಿಗಟ್ಟಲೆ ಹಣವಿರುವ ಕೆಲವರು ಒಂದೆರಡು ದೇಶಗಳನ್ನೂ ನೋಡಿರುವುದಿಲ್ಲ. ಅವರಿಗೆ ಹಣ ಮಾಡುವುದರಲ್ಲಿ ಆಸಕ್ತಿ ಇರುತ್ತದೆಯೇ ಹೊರತು ಊರು ನೋಡುವುದರಲ್ಲಿ ಇರುವುದಿಲ್ಲ. ಇನ್ನು ಕೆಲವರು ವಿದೇಶಗಳಿಗೆ ಹೋಗಿ ಐಷಾರಾಮಿ ಹೋಟೆಲ್ ನಲ್ಲಿ ವಾಸ ಮಾಡಿ, ಕುಡಿದು-ತಿಂದು ಊರನ್ನೇ ನೋಡದೇ ವಾಪಸ್ ಬಂದಿರುತ್ತಾರೆ. ಅವರ ದೃಷ್ಟಿಯಲ್ಲಿ ಪ್ರವಾಸ ಅಂದರೆ ಅಷ್ಟೇ. ದೇವೇಗೌಡರಿಗೆ, ಸಿದ್ದರಾಮಯ್ಯನವರಿಗೆ, ಯಡಿಯೂರಪ್ಪನವರಿಗೆ ವಿದೇಶಕ್ಕೆ ಹೋಗೋಣ ಅನ್ನಿ, ಅವರು ಬರುವುದಿಲ್ಲ. ಪ್ರವಾಸಕ್ಕೆ ಹೋಗಲು ಮನಸ್ಥಿತಿ ಬಹಳ ಮುಖ್ಯ. ಅಷ್ಟಕ್ಕೂ ಪ್ರವಾಸವೆಂದರೆ ಶೋಧಿಸುವುದು, ನಮ್ಮ ಮಿತಿಯನ್ನು ಮೀರುವುದು, ನಮ್ಮನ್ನು ಹೊಸ ಅವಕಾಶಗಳಿಗೆ, ಅನುಭವಗಳಿಗೆ ತೆರೆದುಕೊಳ್ಳುವುದು. ಇವೆಲ್ಲವೂ ಹಣದಿಂದಲೇ ಆಗುತ್ತದೆ ಎಂದು ಭಾವಿಸಬೇಡಿ.

ನನ್ನ ದೃಷ್ಟಿಯಲ್ಲಿ, the only trip you will regret is the one you did not take. ಹಾಗೆಯೇ ನನ್ನ ಪ್ರಕಾರ, ಪ್ರವಾಸ ಮತ್ತು ಜೀವನ ಬೇರೆ ಬೇರೆ ಅಲ್ಲ. ಪ್ರವಾಸ ನಮ್ಮ ಬದುಕಿನ ಅಂಗ. ಈ ವಿಷಯದಲ್ಲಿ ನಾನು ಒಂದು ನಿಯಮವನ್ನು ಅನುಸರಿಸುತ್ತೇನೆ – Work, Travel, Save, Repeat. ಇದನ್ನು ನಾನು ಅತ್ಯಂತ ಪ್ರೀತಿಯಿಂದ ಮಾಡುತ್ತೇನೆ. ಅದಕ್ಕೆ ನನಗೆ ಇಷ್ಟೆಲ್ಲ ದೇಶಗಳನ್ನು ನೋಡಲು ಸಾಧ್ಯವಾಗಿದೆ. ನೀವು ಈ ನಿಟ್ಟಿನಲ್ಲಿ ಕಾರ್ಯ ಪ್ರವೃತ್ತರಾಗಬಹುದು.

★★★

ಎ.ಬಿ. ಉಮರ್ಜಿ, ಮುದ್ದೇಬಿಹಾಳ

● **ಭಟ್ರೇ, ನೀವು ಅನೇಕ ದೇಶಗಳನ್ನು ಸುತ್ತಿದ್ದೀರಿ. ಆದರೆ ಯಾವ ದೇಶದ ಮೇಲೂ ಇಲ್ಲದ ಪ್ರೀತಿ ಜಪಾನಿನ ಮೇಲೆ ಏಕೆ? ಜಪಾನಿನಿಂದ ಬಂದಾಗಿನಿಂದ ಆ ದೇಶದ ಕುರಿತು ನಿರಂತರವಾಗಿ ಬರೆಯುತ್ತಲೇ ಇದ್ದೀರಿ. ಈ ಸಂಗತಿಯನ್ನು ನಿಮ್ಮಿಂದ ತಿಳಿಯುವ ಆಸೆ.**

– ಉಮರ್ಜಿ ಅವರೇ, ನನಗೆ ಯಾವುದೋ ಒಂದು ದೇಶ ಅತಿ ಹೆಚ್ಚು ಪ್ರೀತಿ ಹಾಗೂ ಇನ್ನೊಂದು ದೇಶ ಕಡಿಮೆ ಪ್ರೀತಿ ಎಂದೇನೂ ಇಲ್ಲ. ಒಬ್ಬ ಪ್ರವಾಸಿಗನಾಗಿ ನಾನು ಎಲ್ಲ ದೇಶಗಳನ್ನು ಸಮಭಾವದಿಂದ ನೋಡುತ್ತೇನೆ. ಅನೇಕರು 'ನೀವು ಇಲ್ಲಿ ತನಕ ನೋಡಿದ ದೇಶಗಳ ಪೈಕಿ ನಿಮಗೆ ಇಷ್ಟವಾದ ದೇಶ ಯಾವುದು?' ಎಂದು ಕೇಳುತ್ತಾರೆ. ನಾನು ಅವರಿಗೆ ಹೇಳುವುದು ನನಗೆ ಎಲ್ಲ ದೇಶಗಳೂ ಇಷ್ಟವೇ ಅಂತ.

ಸಾಮಾನ್ಯವಾಗಿ ನಾನು ಯಾವುದೇ ದೇಶದಿಂದ ಬಂದ ನಂತರ ಪಟ್ಟಾಗಿ ಕುಳಿತು ಬರೆಯುವುದು ಕಡಿಮೆ. ಕಾರಣ ಒಂದು ದೇಶವನ್ನು ಅರ್ಥ ಮಾಡಿಕೊಳ್ಳುವುದು ಅಷ್ಟು ಸುಲಭವಲ್ಲ. ಆದರೆ ನೀವು ಹೇಳಿದಂತೆ ನಾನು ಜಪಾನಿನಿಂದ ಬಂದಾಗಿನಿಂದ ನಿರಂತರವಾಗಿ ಬರೆಯುತ್ತಲೇ ಇದ್ದೇನೆ. ಇದಕ್ಕೆ ಕಾರಣ ಇಷ್ಟೇ, ಆ ದೇಶ ಮತ್ತು ಅಲ್ಲಿನ ಜನ ಉಳಿದೆಲ್ಲ ದೇಶ ಮತ್ತು ದೇಶವಾಸಿಗಳಿಗಿಂತ ನನಗೆ ವಿಶೇಷವಾಗಿ, ವಿಭಿನ್ನವಾಗಿ ಕಂಡಿದ್ದು.

ಜಪಾನಿಯರಲ್ಲಿ ಢಾಳಾಗಿ ಎದ್ದು ಕಾಣುವ ಅಂಶವೆಂದರೆ ಅವರ ಅಪ್ರತಿಮ ದೇಶಭಕ್ತಿ, ಸಮಯಪಾಲನೆ, ಪ್ರಾಮಾಣಿಕತೆ ಹಾಗೂ ಸ್ವಚ್ಛತೆ. ಅದು ತಂತ್ರಜ್ಞಾನದಲ್ಲಿ ಮುಂದುವರಿದ, ಆಧುನಿಕ ದೇಶವಾದರೂ ತನ್ನ ಸಂಪ್ರದಾಯಗಳನ್ನು ಬಿಟ್ಟುಕೊಟ್ಟಿಲ್ಲ. ಜಪಾನಿಯರು ಅಪ್ಪಟ ಧರ್ಮಬೀರುಗಳು. ಅವರು ತಮ್ಮ ದೇಶವನ್ನು ತಮ್ಮ ಮನೆಯ ಹಾಗೆ ಅಚ್ಚುಕಟ್ಟಾಗಿ ಇಟ್ಟುಕೊಂಡಿದ್ದಾರೆ. ಜಪಾನಿಯರ ಸಮಯ ಪಾಲನೆಯನ್ನು ಮೀರಿಸುವವರಿಲ್ಲ. ಮೀಟಿಂಗ್‌ಗೆ ನಿಗದಿತ ಸಮಯಕ್ಕಿಂತ ಯಾರೂ ತಡವಾಗಿ ಆಗಮಿಸುವುದಿಲ್ಲ. ಅಲ್ಲಿನ ರೈಲು 20 ಸೆಕೆಂಡ್ ತಡವಾಗಿ ಆಗಮಿಸಿದರೆ ಸಾರ್ವಜನಿಕವಾಗಿ ರೈಲ್ವೆ ಇಲಾಖೆ ಕ್ಷಮೆ ಕೇಳುತ್ತದೆ. ಜಪಾನಿನಂಥ ಉತ್ತರದಾಯಿತ್ವ ಮತ್ತು ಕಠಿಣ ಶಿಸ್ತನ್ನು ಅಳವಡಿಸಿಕೊಂಡಿರುವ ಬೇರೊಂದು ದೇಶವನ್ನು ನಾನು ನೋಡಿಲ್ಲ.

ಜಪಾನಿಯರ ಬದುಕಿನ ಪ್ರತಿ ಹಂತವೂ ಒಂದಲ್ಲ ಒಂದು ವಿಶೇಷ ಸಂಗತಿಯನ್ನು ಒಳಗೊಂಡಿದೆ. ಇವು ನನ್ನನ್ನು ಬಹುವಾಗಿ ಕಾಡಿದ್ದು ಸುಳ್ಳಲ್ಲ. ನಾವು ಜಪಾನಿಯರಿಂದ ಕಲಿಯುವ ಹಾಗೂ ನಮ್ಮ ಜೀವನದಲ್ಲಿ ಅಳವಡಿಸಿಕೊಳ್ಳುವ ಅನೇಕ ಅಂಶಗಳಿವೆ. ಕೆಲವು ವಿಷಯಗಳಲ್ಲಿ ಜಪಾನ್ 'ವಿಶ್ವಗುರು'. ಅಮೆರಿಕ ಕೂಡ ಜಪಾನ್‌ನಿಂದ ಕಲಿಯುವಂಥದ್ದು ಸಾಕಷ್ಟಿವೆ. ಜಪಾನ್ ಬಗ್ಗೆ ಬರೆಯುತ್ತಾ ಹೋದಂತೆಲ್ಲ ಹೊಸ ಹೊಸ ವಿಷಯಗಳು ಅನಾವರಣಗೊಳ್ಳುತ್ತಿವೆ. ಇವನ್ನೆಲ್ಲ ನಮ್ಮ ಪತ್ರಿಕೆಯ ಓದುಗರಿಗೆ ಹೇಳಬೇಡವೇ?!

★★★

ಡಾ.ವಿಶ್ವನಾಥ ಎನ್. ನೇರಳಕಟ್ಟೆ, ಬಂಟ್ವಾಳ

● **ಭಟ್ರೇ, ಕೋವಿಡ್ ಬಳಿಕ ಕನ್ನಡ ಪತ್ರಿಕೋದ್ಯಮ ತುಸು ಇಳಿಮುಖವಾಗಿದೆ ಎಂಬ ಸಾಮಾನ್ಯ ಅಭಿಪ್ರಾಯವಿದೆ. ಇದು ಎಷ್ಟರಮಟ್ಟಿಗೆ ನಿಜ? ಕನ್ನಡ ಪತ್ರಿಕೆಗಳಿಗೆ ಉಜ್ವಲ ಭವಿಷ್ಯ ಇದೆಯಾ? ಇನ್ನು ಹತ್ತು-ಇಪ್ಪತ್ತು ವರ್ಷಗಳ ನಂತರವೂ ಕನ್ನಡದಲ್ಲಿ ಪತ್ರಿಕೆಗಳ ಅಸ್ತಿತ್ವ ಇರುತ್ತದೆ ಎಂಬ ನಿರೀಕ್ಷೆಯನ್ನು ನಾವು ಇರಿಸಿಕೊಳ್ಳಬಹುದಾ?**

– ಡಾ.ವಿಶ್ವನಾಥ ಅವರೇ, ಓದುಗರಿಲ್ಲದೇ ಪತ್ರಿಕೆಗಳಿಲ್ಲ, ಓದುಗರು ಇರುವ ತನಕ ಪತ್ರಿಕೆಗಳು ಇದ್ದೇ ಇರುತ್ತವೆ. ಕೋವಿಡ್‌ಗೂ, ಪತ್ರಿಕೆಗೂ ಯಾವುದೇ ಸಂಬಂಧ ಇಲ್ಲ. ಕೋವಿಡ್‌ಗಿಂತ ಮುನ್ನ ನೂರಾರು ಪತ್ರಿಕೆಗಳು ಬಾಗಿಲು ಮುಚ್ಚಿಲ್ಲವೇ?. ಕನ್ನಡದಲ್ಲಿ 'ನೂತನ' ಹಾಗೂ 'ಭಾವನಾ' ಎಂಬ ಪತ್ರಿಕೆಗಳಿದ್ದವು. ಅವು ವಾಣಿಜ್ಯ ಕಾರಣಗಳಿಂದಾಗಿ ಪ್ರಕಟಣೆಗಳನ್ನು ಸ್ಥಗಿತಗೊಳಿಸಿದವು. ಅದಕ್ಕೆ ಕೋವಿಡ್ ಕಾರಣ ಆಗಿರಲಿಲ್ಲ. ಕನ್ನಡದ ನೂರಾರು ಟ್ಯಾಬ್ಲಾಯಿಡ್‌ಗಳು ಕೋವಿಡ್‌ಗಿಂತ ಮುನ್ನವೇ ನಿಂತು ಹೋಗಿದ್ದನ್ನು ನೆನಪು ಮಾಡಿಕೊಳ್ಳಿ.

ಕೋವಿಡ್ ನಂತರ ನಮ್ಮ ಜನಜೀವನದಲ್ಲಿ ಸಾಕಷ್ಟು ಸ್ಥಿತ್ಯಂತರಗಳು, ಬದಲಾವಣೆಗಳು ಆಗಿರುವುದು ನಿಜ. ಎಲ್ಲ ಕ್ಷೇತ್ರಗಳಂತೆ ಈ ಪಲ್ಲಟಗಳು ಪತ್ರಿಕೋದ್ಯಮದ ಮೇಲೆ ಹಾಗೂ ಕನ್ನಡ ಪತ್ರಿಕೆಗಳ ಮೇಲೆ ಆಗಿದ್ದು ಸಹಜವೇ. ಅದರಿಂದ ಕನ್ನಡ ಪತ್ರಿಕೆಗಳ ಪ್ರಸಾರಕ್ಕೂ ಕೊಂಚಮಟ್ಟಿಗಿನ ಹೊಡೆತ ಬಿದ್ದಿದೆ. ಹಾಗಂತ ಅದು ಕನ್ನಡ ಪತ್ರಿಕೆಗಳ ಅಸ್ತಿತ್ವಕ್ಕೆ ಮಾರಕವಾಗಿದೆ ಎಂಬ ನಿರ್ಧಾರಕ್ಕೆ ಬರುವುದು ಸರಿಯಲ್ಲ. ಕನ್ನಡಿಗರು ಇರುವ ತನಕ, ಕನ್ನಡ ಓದುಗರು ಇರುವ ತನಕ, ಪತ್ರಿಕೆಗಳು ಇದ್ದೇ ಇರುತ್ತವೆ. ಪತ್ರಕರ್ತರೂ ಇದ್ದೇ ಇರುತ್ತಾರೆ. ಅವರ ಕಾರ್ಯವೈಖರಿ ಬದಲಾಗಬಹುದು. ಆದರೆ ಸುದ್ದಿ ವಿನಿಮಯ, ವಹಿವಾಟು ಇದ್ದೇ ಇರುತ್ತದೆ. ಮುಂದಿನ 10-20 ವರ್ಷಗಳ ನಂತರವೂ ಕನ್ನಡ ಪತ್ರಿಕೆಗಳು ತಮ್ಮ ಅಸ್ತಿತ್ವವನ್ನು ಕಾಪಾಡಿಕೊಳ್ಳುತ್ತವೆ. ಈ ಬಗ್ಗೆ ಯಾವ ಸಂದೇಹವೂ ಬೇಡ. ರೀಲ್ಸ್, ಯೂಟ್ಯೂಬ್ ನೋಡಿಕೊಂಡು ಸುದ್ದಿದಾಹವನ್ನು ತಣಿಸಿಕೊಳ್ಳಲು ಸಾಧ್ಯವಾ?

★★★

ವಿನೋದ ಮನಗುಂಡಿ, ಬೆಳಗಾವಿ

● **ಸಂಪಾದಕರೇ, ಇಪ್ಪತ್ತು ವರ್ಷಗಳ ಹಿಂದೆ ನನಗೆ ಪುಸ್ತಕ ಮತ್ತು ಪತ್ರಿಕೆಗಳನ್ನು ಓದಲು ಸಾಕಷ್ಟು ಸಮಯ ಸಿಗುತ್ತಿತ್ತು. ಆದರೆ ಈ ಹಾಳಾದ್ದು ಮೊಬೈಲ್ ಬಂದ ನಂತರ ಪುಸ್ತಕ ಮತ್ತು ಪತ್ರಿಕೆಗಳನ್ನು ಓದಲು ಸಾಧ್ಯವಾಗುತ್ತಿಲ್ಲ. ಕೆಲವೊಮ್ಮೆ ಪುಸ್ತಕ ಹಿಡಿದರೆ ಎರಡು ಪುಟಗಳನ್ನು ನೆಟ್ಟಗೆ ಓದಲು ಆಗುವುದಿಲ್ಲ. ಪತ್ರಿಕೆಯನ್ನು ಇಡಿಯಾಗಿ ಓದಿದ್ದು ಕಮ್ಮಿಯೇ. ನಾನು ಮೊದಲಿನಂತೆ ಪತ್ರಿಕೆ ಹಾಗೂ ಪುಸ್ತಕಗಳನ್ನು ಓದಲು ಏನು ಮಾಡಬೇಕು?**

– ವಿನೋದ ಅವರೇ, ನಿಮ್ಮ ಪ್ರಶ್ನೆಯಲ್ಲಿಯೇ ಉತ್ತರವಿದೆ. ದಿನದಲ್ಲಿ ನಿಮ್ಮ ಸಮಯವನ್ನು ಕಿತ್ತುಕೊಳ್ಳುವ ಚಟುವಟಿಕೆಗಳಾವುವು ಎಂಬುದನ್ನು ನಿಮ್ಮಿಂದಾದರೂ ಯೋಚಿಸಿದ್ದೀರಾ? ಈ ಪ್ರಶ್ನೆಗೆ ಬಹುತೇಕರ ಉತ್ತರ – ಮೊಬೈಲ್ ಫೋನ್! ನಿಸ್ಸಂದೇಹವಾಗಿ, ನಿಮ್ಮ ಬಹುಪಾಲು ಸಮಯವನ್ನು ಮೊಬೈಲ್ ಕಸಿದುಕೊಳ್ಳುತ್ತಿದೆ. ನೀವು ಮೊಬೈಲ್ ಬಳಕೆಯನ್ನು ಕಡಿಮೆ ಮಾಡಿದಷ್ಟೂ ಪುಸ್ತಕ ಮತ್ತು ಪತ್ರಿಕೆಗಳಿಗೆ ಹತ್ತಿರವಾಗುತ್ತೀರಿ. ಹಾಗಂತ ನಾನೇನು ಮೊಬೈಲ್ ವಿರೋಧಿಯೇನೂ ಅಲ್ಲ. ಆದರೆ ಮೊಬೈಲ್ ನಮ್ಮ ಬಹುಪಾಲು ಸಮಯವನ್ನು ನಿರರ್ಥಕಗೊಳಿಸುವುದಂತೂ ಹೌದು.

ನಿಮಗೆ ಗೊತ್ತಿರಲಿ, ನನಗೆ ಆತ್ಮೀಯರಾದ ಯೋಗಿ ದುರ್ಲಭಜೀಯವರು ಕಳೆದ ಹತ್ತು ವರ್ಷಗಳಿಂದ ಮೊಬೈಲ್ ಅನ್ನು ಇಟ್ಟುಕೊಂಡಿಲ್ಲ. ಆದರೆ ತಮಗೆ ಬೇಕಾದ ಎಲ್ಲ ಮಾಹಿತಿಯನ್ನು ಪಡೆದುಕೊಳ್ಳಲು ಅವರು ಶಕ್ತರು. ಒಂದು ವೇಳೆ ಯಾವುದೋ ಮಾಹಿತಿ ಅವರಿಗೆ ಗೊತ್ತಾಗಲಿಲ್ಲವೆನ್ನಿ, ಅವರು ಕಳೆದುಕೊಳ್ಳುವುದೇನೂ ಇಲ್ಲ. ಮೊಬೈಲ್ ಬಳಸುವುದನ್ನು ಬಿಟ್ಟರೆ ನಿಮಗೆ ದಿನದಲ್ಲಿ ಸಾಕಷ್ಟು ಸಮಯ ಹೆಚ್ಚುವರಿಯಾಗಿ ಸಿಗುತ್ತದೆ ಎಂಬುದು ನನ್ನ ಅನುಭವವೂ ಹೌದು. ದಿನದಲ್ಲಿ ಒಂದೆರಡು ಗಂಟೆ ಮೊಬೈಲನ್ನು ಸ್ವಿಚ್ ಆಫ್ ಮಾಡಿಡಿ. ಅದರಿಂದ ಏನೂ ಆಗುವುದಿಲ್ಲ. ಆಗಬಾರದ್ದೇನೂ ಘಟಿಸುವುದಿಲ್ಲ. ಇದನ್ನು ರೂಢಿಸಿಕೊಂಡರೆ, ನಿಮಗೆ ತನ್ನಷ್ಟಕ್ಕೆ ಒಂದೆರಡು ಗಂಟೆ ಸಿಗುತ್ತದೆ.

ಕೆಲವು ಸಲ ನಾನು ಉದ್ದೇಶಪೂರ್ವಕವಾಗಿ ಮೊಬೈಲ್ ಅನ್ನು ಚಾರ್ಜ್ ಮಾಡುವುದಿಲ್ಲ. ಒಂದೆರಡು ಗಂಟೆಗಳ ಕಾಲ ಮೊಬೈಲ್ ಬ್ಯಾಟರಿಯಿಲ್ಲದೇ ಉಪವಾಸ ಬಿದ್ದಿರುತ್ತದೆ. ಬಳಿಕ ಆ ಸಮಯ ಎಷ್ಟೊಂದು ಅಮೂಲ್ಯ ಎಂದು ನನಗೆ ಅನೇಕ ಸಲ ಅನಿಸಿದ್ದು ಉಂಟು. ನೀವೂ ನಿಮ್ಮ ಮೊಬೈಲ್ ಬಳಕೆಯನ್ನು ಕಡಿಮೆ ಮಾಡಿದರೆ ಅಥವಾ ಮಿತಗೊಳಿಸಿದರೆ ತನ್ನಿಂದ ತಾನೇ ನಿಮಗೆ ಸಮಯ ಮಿಗುತ್ತದೆ. ಆಗ ನಿಮಗೆ ಇಷ್ಟವಾದ ಪತ್ರಿಕೆ ಮತ್ತು ಪುಸ್ತಕಗಳನ್ನು ಓದಲು ಸಾಧ್ಯವಾಗುತ್ತದೆ.

★★★

ಕೆ.ಎನ್.ರಂಗನಾಥ್, ಉಜಿರೆ

● **ಭಟ್ರೇ, ಚಿಕ್ಕವನಿದ್ದಾಗಿಂದಲೂ ರಾಜಕೀಯ ವಿಷಯಗಳೆಂದರೆ ನನಗೆ ತುಂಬಾ ಆಸಕ್ತಿ. ಅಂದಿನ ರಾಜಕಾರಣದ ಸ್ಥಿತಿ-ಗತಿ ನನ್ನಲ್ಲಿ ಆಸಕ್ತಿಯನ್ನು ಮೂಡಿಸಿತು. ಆದರೆ ಇಂದು ನಾನು ಪತ್ರಿಕೋದ್ಯಮದಲ್ಲಿ ವ್ಯಾಸಂಗ ಮಾಡುತ್ತಿದ್ದು, ಪ್ರಸ್ತುತ ದಿನಮಾನಗಳ ರಾಜಕೀಯವನ್ನು ನೋಡಿದರೆ ಅದರಲ್ಲೂ ವಿಶೇಷವಾಗಿ ಹನಿಟ್ರ್ಯಾಪ್‌ನಂತಹ ಘಟನೆಗಳು ನಡೆದ ಮೇಲೆ ರಾಜಕೀಯ ವರದಿಗಾರನೇ ಆಗಬಾರದು ಅನಿಸುತ್ತದೆ. ನೀವು ಒಂದು ಪತ್ರಿಕೆಯ ಸಂಪಾದಕರಾಗಿ ಹತ್ತು-ಹದಿನೈದು ವರ್ಷಗಳ ಹಿಂದಿನ ರಾಜಕೀಯ ಸ್ಥಿತಿಗತಿ ಮತ್ತು ಇಂದಿನ ರಾಜಕೀಯದ ಪರಿಸ್ಥಿತಿಯನ್ನ ಹೇಗೆ ವ್ಯಾಖ್ಯಾನಿಸುತ್ತೀರಿ?**

– ರಂಗನಾಥ ಅವರೇ, ರಾಜಕಾರಣವೆನ್ನುವುದು ಅತ್ಯಂತ ಆಸಕ್ತಿದಾಯಕ ಹಾಗೂ ಚಲನಶೀಲ ವಿಷಯ. ನಮ್ಮ ಸಮಗ್ರ ಸಮಾಜದ ಚಿತ್ರಣ ರಾಜಕಾರಣದಲ್ಲಿ ನಿರಂತರವಾಗಿ ಪ್ರತಿಫಲಿತವಾಗುತ್ತಿರುತ್ತದೆ. ಸಮಾಜ ಬೇರೆಯಲ್ಲ, ರಾಜಕಾರಣ ಬೇರೆಯಲ್ಲ. ಪತ್ರಕರ್ತನಾದವನು ರಾಜಕಾರಣದ ಒಳಸುಳಿಗಳನ್ನು ಅತ್ಯಂತ ಕುತೂಹಲದಿಂದ ಸೂಕ್ಷ್ಮವಾಗಿ ಗಮನಿಸಬೇಕು. ರಾಜಕಾರಣಿಗಳೆಲ್ಲರೂ ಕೆಟ್ಟವರಲ್ಲ. ಅವರಲ್ಲೂ ಅಪರೂಪದ ಅನೇಕ ಅಂಶಗಳಿರುತ್ತವೆ. ಪ್ರತಿಕ್ಷೇತ್ರದಲ್ಲೂ ಕೆಟ್ಟವರು ಇರುವ ಹಾಗೆ ರಾಜಕಾರಣದಲ್ಲೂ ಅಂಥವರಿದ್ದಾರೆ. ಇಂಥವರು 50 ವರ್ಷಗಳ ಹಿಂದೆಯೂ ಇದ್ದರು, ಈಗಲೂ ಇದ್ದಾರೆ. ಮುಂದಿನ ದಿನಗಳಲ್ಲೂ ಇದು ಪುನರಾವರ್ತನೆಯಾಗಬಹುದು.

ಒಬ್ಬ ರಾಜಕೀಯ ವರದಿಗಾರರಾಗಿ ನಿಮಗೆ ಇವೆಲ್ಲ ಆಸಕ್ತಿಯುತ ನೋಟಗಳಾಗಬೇಕು, ಪಾಠಗಳಾಗಬೇಕು. ರಾಜಕಾರಣಿಗಳು ಹಾಕುವ ಪಟ್ಟುಗಳು, ಬದಲಿಸುವ ಬಣ್ಣಗಳು, ಜಿಗಿಯುವ ಪಕ್ಷಗಳು, ಹೇಳುವ ಸುಳ್ಳುಗಳು, ನುಂಗುವ ಆಶ್ವಾಸನೆಗಳು... ರಾಜಕೀಯ ವರದಿಗಾರರಿಗೆ ಯಾವತ್ತೂ ಆಸಕ್ತಿಯ ವಿಷಯವೇ. ಒಳ್ಳೆಯವರು, ಪ್ರಾಮಾಣಿಕರು ಮಾತ್ರ ತುಂಬಿರುವ ಜಾಗ ಅಥವಾ ಸಂಘಟನೆ ಅಥವಾ ರಾಜಕೀಯ ಪಕ್ಷ ಇಲ್ಲವೇ ಇಲ್ಲ. ರಾಜಕಾರಣ ಅಂದ್ರೆ ಅದು ಒಳಿತು-ಕೆಡಕುಗಳ ಸಂಗಮ. ಎಲ್ಲ ಕಡೆ ಎಲ್ಲ ರೀತಿಯ ಜನರೂ ಇರುತ್ತಾರೆ.

ಈ ಮೂಲಭೂತ ಸಂಗತಿಗಳನ್ನು ರಾಜಕೀಯ ವರದಿಗಾರನಾದವನು ತಿಳಿದುಕೊಳ್ಳಬೇಕು. ಹನಿ ಟ್ರ್ಯಾಪ್ ಎನ್ನುವುದು ರಾಜಕಾರಣದ ಅಧಃಪತನವಲ್ಲ, ಅದು ಕೆಲವು ರಾಜಕಾರಣಿಗಳಿಗೆ ಮಾತ್ರ ಸಂಬಂಧಿಸಿದ್ದು. ಕೆಲವೇ ಕೆಲವು ಜನರ ತಪ್ಪಿಗಾಗಿ ನೀವು ಇಡೀ ರಾಜಕಾರಣವನ್ನೇ ಯಾಕೆ ತಪ್ಪಾಗಿ ಭಾವಿಸುತ್ತೀರಿ? ಸಮಾಜ ಜೀವನದಲ್ಲಿ ಇವೆಲ್ಲ ಇರುವಂಥದ್ದೇ. ಪತ್ರಕರ್ತರಾದವರು ಇವನ್ನೆಲ್ಲ ಸಹಜ ಘಟನಾವಳಿಗಳಂತೆ ಸ್ವೀಕರಿಸಬೇಕು. ನಮ್ಮ ಮುಂದೆ ನಡೆಯುವ ವಿದ್ಯಮಾನಗಳು ನಮ್ಮಲ್ಲಿ ದಿಗ್ಭ್ರಮೆ ಮೂಡಿಸಬಾರದು. ಅಷ್ಟಕ್ಕೂ ಪತ್ರಕರ್ತರೆಂದರೆ ಘಟನೆಗಳನ್ನು ವರದಿ ಮಾಡುವವರೇ ಹೊರತು, ಘಟನೆಯ ಪಾತ್ರಧಾರಿಗಳಲ್ಲ. ರಾಜಕಾರಣಿಗಳನ್ನು ದೂಷಿಸುವ ಮುನ್ನ ಅವರನ್ನು ಆಯ್ಕೆ ಮಾಡಿದ ಮತದಾರರನ್ನು ಎಂದಾದರೂ ನಾವು ಪ್ರಶ್ನೆ ಮಾಡಿದ್ದೇವಾ? ಇಂಥ ಅಯೋಗ್ಯರನ್ನು ಏಕೆ ಆಯ್ಕೆ ಮಾಡಿದಿರಿ ಎಂದು ಕೇಳಿದ್ದೇವಾ? ಉಹುಂ.. ಇಲ್ಲವೇ ಇಲ್ಲ. ಹಣ ತೆಗೆದುಕೊಂಡು ಮತ ಹಾಕುವ ಮತದಾರರು ಇರುವ ತನಕ, ಅವರಿಗೆ ಚುನಾವಣೆಯಲ್ಲಿ ಕೊಡಲೆಂದು ಹಣ ಮಾಡುವ ರಾಜಕಾರಣಿಗಳು ಇದ್ದೇ ಇರುತ್ತಾರೆ.

ಸ್ಮಶಾನದಲ್ಲಿ ಹೆಣ ಸುಡುವ ಕಾಯಕ ಮಾಡಲು ಬರುವವರು, ಕಣ್ಣೀರಿಗೆ ಕರಗಬಾರದು. ಸ್ಮಶಾನಕ್ಕೆ ಯಾರೂ ಸಂತೋಷದಿಂದ ಬರುವುದಿಲ್ಲ. ಬರುವಾಗ ಮತ್ತು ಹೋಗುವಾಗ ಅಳುತ್ತಲೇ ಬರುತ್ತಾರೆ. ರಕ್ತಕ್ಕೆ ಹೆದರುವವರು ಡಾಕ್ಟರ್ ಆಗುವುದಿಲ್ಲ. ರಾಜಕಾರಣದ ನೆಗೆಟಿವ್ ಸಂಗತಿಗಳು ವರದಿಗಾರರಿಗೆ ಬರೆಯಲು ಒಳ್ಳೆಯ ಸರಕಾಗಬಲ್ಲವು. 'ಈ ಸಮಾಜದಲ್ಲಿ ಎಲ್ಲರೂ ಒಳ್ಳೆಯವರು, ಸತ್ಯವಂತರು, ಪ್ರಾಮಾಣಿಕರು, ಸಜ್ಜನರೇ ತುಂಬಿದ್ದಾರೆ' ಎಂದು ದಿನವೂ ವರದಿ ಮಾಡಿದರೆ ಯಾರೂ ಓದುವುದಿಲ್ಲ. ಅದು Boring reporting ಆದೀತು. ರಾಜಕಾರಣದ ಬಗ್ಗೆ ಇರುವ ನಿಮ್ಮ ಧೋರಣೆಯನ್ನು ಬದಲಿಸಿಕೊಳ್ಳಿ, ಆಗ ಆ ಕ್ಷೇತ್ರ ಇನ್ನಷ್ಟು ಅರ್ಥವಾಗುತ್ತಾ ಹೋಗುತ್ತದೆ.